## 01-06-2021

### ಚೀನಾದಲ್ಲಿ'ನ ದಂಪತಿಗಳಿಗೆ ಇನ್ನು 3 ಮಕ್ಕಳನ್ನು ಹೊಂದಲು ಅನುಮತಿ



* ಪ್ರಸ್ತುತ ಜಗತ್ತಿನಲ್ಲಿ ಅತೀ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರ ಚೀನಾ, ಇದೀಗ ಚೀನಾ ದೇಶದಲ್ಲಿ ಇನ್ನು ಮುಂದೆ ಅಲ್ಲಿನ ದಂಪತಿಗಳು ಮೂರು ಮಕ್ಕಳನ್ನು ಹೊಂದಬಹುದುದಾಗಿದೆ ಎಂದು ಚೀನಾ ಅಧ್ಯಕ್ಷ ಜಿನ್‌ಪಿಂಗ್ ಅವರ ಸಮ್ಮುಖದಲ್ಲಿ ನಡೆದ ಚೀನಾ ಕಮ್ಯೂನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಸಭೆಯಲ್ಲಿ ಈ ನಿರ್ಧಾರವನ್ನು ತಗೆದುಕೊಳ್ಳಲಾಗಿದೆ.

* ಚೀನಾ ದೇಶದ ಸರಕಾರಿ ಮಾಧ್ಯಮ ಸಂಸ್ಥೆ ಕ್ಸಿನ್‌ಹುವಾ' ಸುದ್ದಿವಾಹಿನಿ ವರದಿ ನೀಡಿರುವ ಪ್ರಕಾರ, ಪ್ರಸ್ತುತ ದೇಶದ ಜನಸಂಖ್ಯೆಯನ್ನು ಪುನರ್ ವ್ಯವಸ್ಥೆಗೊಳಿಸಲು ಹಲವು ಬೆಂಬಲ ಕ್ರಮಗಳನ್ನು ಜಾರಿ ಮಾಡಲಾಗುತ್ತಿದೆ, ಇದರೊಂದಿಗೆ ಇಲ್ಲಿನ ಹಿರಿಯ ನಾಗರಿಕರ ಯೋಗಕ್ಷೇಮ ಮತ್ತು ಜನರಲ್ಲಿ ಮಕ್ಕಳನ್ನು ಪಡೆಯುವ ಸಾಮರ್ಥ್ಯ ಕುಗ್ಗುತ್ತಿರುವ ಹಿನ್ನಲೆಯಲ್ಲಿಯಿಂದಾಗಿ ಈ ನಿರ್ಧಾರವನ್ನು ಕೈಗೊಳ್ಳಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

* ಪ್ರಸ್ತುತ ಚೀನಾ ದೇಶವು ಇದೀಗ 1.4 ಶತಕೋಟಿ ಜನಸಂಖ್ಯೆ ಹೊಂದಿದೆ.

* ಚೀನಾ ದೇಶವು 1980ರ ನಂತರ ಹೆಚ್ಚುತ್ತಿರುವ ಜನಸಂಖ್ಯೆ ನಿಯಂತ್ರಿಸಲು ಚೀನಾ ಸರಕಾರವು ಇನ್ನು ಒಂದು ದಂಪತಿಗೆ ಒಂದೇ ಮಗು ಹೊಂದಿರಬೇಕು ಎಂಬ ನಿಯಮ ಜಾರಿಗೆ ತಂದಿತ್ತು, ಪ್ರಸ್ತುತ 2020ನೇ ವರ್ಷದ ಜನಗಣತಿ ಮಾಹಿತಿಯ ಪ್ರಕಾರ ಚೀನಾ ಜನಸಂಖ್ಯೆ ಶೇ.0.59ರಷ್ಟು ಮಾತ್ರ ಬೆಳವಣಿಗೆ ಕಂಡಿದೆ ಇದರಿಂದಾಗಿ ಇಲ್ಲಿನ ಜನರಿಗೆ ಮೂರು ಮಕ್ಕಳನ್ನು ಹೊಂದಲು ಚೀನಾ ಸರಕಾರವು ಅವಕಾಶ ನೀಡಿದೆ.

### ಭಾರತದಲ್ಲಿನ ಕೊರೋನಾ ರೂಪಾಂತರ ವೈರಸ್'ಗೆ 'ಡೆಲ್ಟಾ' ಎಂದು ಹೆಸರಿಸಿದ ವಿಶ್ವ ಅರೋಗ್ಯ ಸಂಸ್ಥೆ




* ಭಾರತದಲ್ಲಿ ಮೊದಲ ಬಾರಿಗೆ ಬಿ.1.617.2 ಕೋವಿಡ್ 19 ರೂಪಾಂತರ ವೈರಸ್'ನ್ನು 2020ರ ಅಕ್ಟೋಬರ್'ನಲ್ಲಿ ಪತ್ತೆಮಾಡಲಾಯಿತು, ಈ ಭಾರತೀಯ ವೈರಸ್'ಗೆ ವಿಶ್ವ ಸಂಸ್ಥೆಯು 'ಡೆಲ್ಟಾ' ಎಂಬ ಹೆಸರನ್ನು ನಿಯೋಜನೆ ಮಾಡಿದೆ, ಪ್ರಸ್ತುತ ಇದನ್ನು ಭಾರತದಲ್ಲಿನ ರೂಪಾಂತರವನ್ನು ಈಗ ಕೊರೊನಾ ವೈರಸ್ ನ 'ಡೆಲ್ಟಾ' ತಳಿ ಎಂದು ಕರೆಯಲಾಗುತ್ತದೆ.

* ವಿಶ್ವ ಸಂಸ್ಥೆಯು ಕಳೆದ ವರ್ಷ 2020ರ ಸೆಪ್ಟೆಂಬರ್'ನಲ್ಲಿ ಯುಕೆಯಲ್ಲಿ ಪತ್ತೆಯಾಗಿರುವ ತಳಿಯನ್ನು 'ಆಲ್ಫಾ' ಎಂದು ಲೇಬಲ್ ಮಾಡಿದೆ, ಹಾಗೂ ಮತ್ತು ಅದೇ ವರ್ಷ ಮೇ ತಿಂಗಳಿನಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಪತ್ತೆಯಾಗಿರುವ ತಳಿಯನ್ನು ಬೀಟಾ ಎಂದು ಹೆಸರಿಸಿದೆ, ಮತ್ತೇ 2020ರ ನವೆಂಬರ್'ನಲ್ಲಿ ಬ್ರೆಜಿಲ್'ನಲ್ಲಿ ಪತ್ತೆಯಾಗಿರುವ ತಳಿಯನ್ನು ಗಾಮಾ ಎಂದು WHO ಲೇಬಲ್ ಮಾಡಿದೆ, ಮತ್ತೇ ಇದಾದ ನಂತರ ಅದೇ ವರ್ಷ ಮಾರ್ಚ ತಿಂಗಳಿನಲ್ಲಿ ಯುಎಸ್'ನಲ್ಲಿ ಪತ್ತೆಯಾಗಿರುವ ತಳಿಯನ್ನು ಎಪ್ಸಿಲಾನ್ ಎಂದು ಹೆಸರಿಸದೆ.

### ಏಷ್ಯನ್ ಬಾಕ್ಸಿಂಗ್ ಚಾಂಪಿಯನಶಿಪ್'ನಲ್ಲಿ ಚಿನ್ನ, ಬೆಳ್ಳಿ ಸಾಧನೆ



* ಭಾರತದ ಬಾಕ್ಸರ್ ಸಂಜೀತ್ ಅವರು ಏಷ್ಯನ್ ಬಾಕ್ಸಿಂಗ್ ಚಾಂಪಿಯನಶಿಪ್'ನ 91 KG ವಿಭಾಗದಲ್ಲಿ ಫೈನಲ್ ಪಂದ್ಯದಲ್ಲಿ ಕಜಕಿಸ್ತಾನದ ವ್ಯಾಸಿಲಿ ಲೆವಿತ್ ಅವರ ವಿರುದ್ಧ ಗೆದ್ದು ಜಯಸಿದ್ದಾರೆ.

* ಏಶ್ಯನ್ ಬಾಕ್ಸಿಂಗ್ ಕೂಟದ ಪುರುಷರ ಫೈನಲ್ ಪಂದ್ಯಗಳಲ್ಲಿ ಅಮಿತ್ ಪಂಘಲ್ ಮತ್ತು ಶಿವ ಥಾಪ ಸೋಲನುಭವಿಸಿದರು ನಂತರದ ಬೆಳ್ಳಿ ಪದಕವನ್ನು ಪಡೆದುಕೊಡರು.

* 52 KG ಸ್ಪರ್ಧೆಯಲ್ಲಿ ಉಜ್ಬೆಕಿಸ್ಥಾನದ ಶಖೋಬಿದಿನ್ ಜೊರೋವ್ ಅವರು ಹಾಲಿ ಚಾಂಪಿಯನ್ ಆಗಿರುವ ಅಮಿತ್ ಪಂಘಲ್ ಅವರನ್ನು ಸೋಲಿಸಿದರು.

* 64 ಕೆ.ಜಿ. ವಿಭಾಗದಲ್ಲಿ ಫೈನಲ್ ಸ್ಪರ್ಧೆಯಲ್ಲಿ ಮಂಗೋಲಿಯದ ಬಾತಸುರ್ಖ್ ಚಿಂಜೋರಿಂಗ್ ಅವರು ಶಿವ ಥಾಪ ಅವರನ್ನು ಸೋಲಿಸಿದರು.

### ಉತ್ತರ ಪ್ರದೇಶದಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕಗಳ ಸ್ಥಾಪನೆ



* ಉತ್ತರ ಪ್ರದೇಶ ರಾಜ್ಯಾದಲ್ಲಿ ಇರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಒಟ್ಟು 350 ಆಮ್ಲಜನಕ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವ ಪ್ರಕ್ರಿಯೆ ಆರಂಭವಾಗಿದೆ, ಪ್ರಸ್ತುತ ಈ ಆಮ್ಲಜನಕ ಘಟಕಗಳು ಕೋವಿಡ್ 19'ನ 3ನೇ ಅಲೆಗೇ ಸಿದ್ಧವಾಗಲಿವೆ, ಈ ಆಮ್ಲಜನಕ ಪ್ಲಾಂಟ್ ಒಟ್ಟಾಗಿ ಪ್ರತಿ ನಿಮಿಷಕ್ಕೆ 3ಲಕ್ಷ ಲೀಟರ್ ಆಮ್ಲಜನಕವನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿವೆ ಎನ್ನಲಾಗಿದೆ.

### ಕೋವಿಡ್ 19 ನಿಂದ ಮೃತಪಟ್ಟ ಪತ್ರಕರ್ತರ ಕುಟುಂಬಕ್ಕೆ 10 ಲಕ್ಷ ಪರಿಹಾರ



* ಉತ್ತರ ಪ್ರದೇಶ ರಾಜ್ಯದಲ್ಲಿನ ಪತ್ರಕರ್ತರು ಕೋವಿಡ್ 19 ಸಾಂಕ್ರಾಮಿಕ ರೋಗದಿಂದಾಗಿ ಮೃತಪಟ್ಟ ಆ ಪತ್ರಕರ್ತರ ಕುಟುಂಬಗಳಿಗೆ 10 ಲಕ್ಷ ರೂ. ಪರಿಹಾರವನ್ನು ನೀಡಲಾಗುವದು ಎಂದು ರಾಜ್ಯ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಪ್ರಕಟಣೆಯಲ್ಲಿ ಮಾಹಿತಿಯನ್ನು ನೀಡಿದ್ದಾರೆ.

* ಪ್ರಸ್ತುತ ರಾಜ್ಯದಲ್ಲಿ ಪತ್ರಕರ್ತರಿಗೆ ಎಲ್ಲ ರೀತಿಯ ಸಹಕಾರ ನೀಡಲು ಸರ್ಕಾರ ಸಿದ್ಧವಾಗಿದೆ ಹಾಗೂ ಅವರಿಗೆ ಪ್ರೋತ್ಸಾಹವನ್ನು ನೀಡಲಾಗುತ್ತದೆ ಎಂದು ತಿಳಿಸಿದರು.

### ಸೌದಿ ಅರೇಬಿಯಾದ ಮಸೀದಿಗಳಲ್ಲಿ ಧ್ವನಿವರ್ಧಕ ಬಳಕೆಗೆ ನಿರ್ಬಂಧ



* ಪ್ರಸ್ತುತ ಮುಸ್ಲಿಂ ದೇಶವಾಗಿರುವ ಸೌದಿ ಅರೇಬಿಯಾ ಇದೀಗ ಮಸೀದಿಗಳಲ್ಲಿ ಧ್ವನಿವರ್ಧಕ ಬಳಕೆಗೆ ಕಠಿಣ ನಿಯಮವನ್ನು ಜಾರಿಗೊಳಿಸಿದೆ.

* ಕೇವಲ ದಿನಕ್ಕೆ 2 ಬಾರಿ ಧ್ವನಿವರ್ಧಕ ಬಳಕೆ ಮಾಡಬೇಕು ಮತ್ತು ಅದು ಅತೀ ಕಡಿಮೆ ಪ್ರಮಾಣದ ಶಬ್ದವನ್ನು ಬಳಸಿ ಬಳಕೆ ಮಾಡಬೇಕು ಎಂದು ತಿಳಿಸಿದೆ ಒಂದು ಪಕ್ಷ ಈ ನಿಯಮವನ್ನು ಉಲ್ಲಂಘಿಸಿದರೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸೌದಿ ಅರೇಬಿಯಾ ಆದೇಶ ಹೊರಡಿಸಿದೆ.

* ಮಸೀದಿಗಳಲ್ಲಿ ಅಜಾನ್ ಮತ್ತು ಪ್ರಾರ್ಥನೆ ಸಲ್ಲಿಸುವ ಮಾತ್ರ ಧ್ವನಿವರ್ಧಕ ಬಳಕೆ ಮಾಡಬೇಕು ಎಂದು ಸೂಚಿಸಿ ಸೌದಿ ಸರ್ಕಾರವು ಗೆಜೆಟ್‌ನಲ್ಲಿ ಉಲ್ಲೇಖ ಮಾಡಿದ್ದಾರೆ ಇದನ್ನು ಸೌದಿ ಇಸ್ಲಾಮಿಕ್ ವ್ಯವಹಾರಗಳ ಸಚಿವ ಅಬ್ದುಲ್ ಲತೀಫ್ ಅಲ್ ಶೇಖ್ ಅವರು ಸುತ್ತೋಲೆಯನ್ನು ಹೊರಡಿಸಿದ್ದಾರೆ, ಮತ್ತು ಎಲ್ಲಾ ಮಸೀದಿಗಳು ಈ ಸುತ್ತೋಲೆಯಲ್ಲಿ ಇರುವ ಮಾರ್ಗಸೂಚಿಗಳನ್ನು ಕಡ್ಡಾಯ ಮತ್ತು ನಿಯಮಿತವಾಗಿ ಅನುಸರಿಸಬೇಕು ಎಂದು ಹೇಳಿದ್ದಾರೆ.

## 02-06-2021

### ಪ್ರತಿಷ್ಠಿತ ಗೋಲ್ಡನ್ ಪೀಸ್ ಮೇಕರ್ ಸ್ಟಾರ್' ಪ್ರಶಸ್ತಿ ಎಸ್.ಆರ್ ವಿಶ್ವನಾಥ್ ಅವರಿಗೆ



* ಪ್ರಸ್ತುತ ರಷ್ಯಾ ಸರ್ಕಾರದ ಪ್ರತಿಷ್ಠಿತ "ಗೋಲ್ಡನ್ ಪೀಸ್ ಮೇಕರ್ ಸ್ಟಾರ್" ಪ್ರಶಸ್ತಿಗೆ ಬೆಂಗಳೂರು ಯಲಹಂಕ ಶಾಸಕ ಮತ್ತು ಬಿಡಿಎ ಅಧ್ಯಕ್ಷರಾಗಿರುವ ಎಸ್.ಆರ್.ವಿಶ್ವನಾಥ್ ಅವರನ್ನುಆಯ್ಕೆ ಮಾಡಲಾಗಿದೆ.

* ಮಾರಿಷಸ್'ನ ಮಿನಿಸ್ಟರ್ ಕೌನ್ಸೆಲರ್ ಜೆ.ಬಿಸ್ಸೊಂಡೊಯಾಲ್ ಅವರು ಯಲಹಂಕ ಶಾಸಕ ವಿಶ್ವನಾಥ್ ಅವರೊಂದಿಗೆ ವರ್ಚುವಲ್ ಸಭೆ ನಡೆಸಿದರು ಅದೇ ಸಭೆಯಲ್ಲಿ ಈ ಪ್ರಶಸ್ತಿಯನ್ನು ಘೋಷಣೆ ಮಾಡಿದರು.

* ಶಾಸಕ ವಿಶ್ವನಾಥ್ ಅವರು ಪ್ರಸ್ತುತ ಸಮಾಜಸೇವೆ ಹಾಗೂ ಸಮಾಜದಲ್ಲಿ ಶಾಂತಿ ಕಾಪಾಡುವಲ್ಲಿ ಉತ್ತಮವಾದ ಸೇವೆ ಸಲ್ಲಿಸುತ್ತಿರುವದನ್ನು ಗುರುತಿಸಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಇವರಿಗೆ ನೀಡಿ ಗೌರವವನ್ನು ಒದಗಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

### ಸಿಬಿಎಸ್‌ಇ, ಐಎಸ್‌ಇ ಪರೀಕ್ಷೆ ಹಾಗೂ CISCE 12ನೇ ತರಗತಿ ಪರೀಕ್ಷೆ ರದ್ದು



* ಭಾರತದಲ್ಲಿ ಕೋವಿಡ್ 19 ಎರಡನೇ ಅಲೆಯ ವ್ಯಾಪಕವಾಗಿ ಹರಡಿದ್ದು ಇದೆ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಉನ್ನತ ಮಟ್ಟದ ಅಧಿಕಾರಿಗಳ ಸಭೆಯನ್ನು ನಡೆಸಿದರು ಈ ಸಭೆಯಲ್ಲಿ ಸಿಬಿಎಸ್‌ಇ, ಐಎಸ್‌ಇ ಪರೀಕ್ಷೆ ಹಾಗೂ CISCE 12ನೇ ತರಗತಿ ಪರೀಕ್ಷೆ ರದ್ದು ಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಈ ಮೇಲೆ ತಿಳಿಸಿರುವ 12ನೇ ತರಗತಿ ವಿದ್ಯಾರ್ಥಿಗಳಿಗೆ ಈ ವರ್ಷ ಯಾವುದೇ ಪರೀಕ್ಷೆಗಳನ್ನು ನಡೆಸುವದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಸಮ್ಮುಖದ ಸಮಿತಿಯು ತಿಳಿಸಿದೆ,

ಈ ಪರೀಕ್ಷೆಗಳನ್ನು ವಿದ್ಯಾರ್ಥಿಗಳ ಆರೋಗ್ಯದ ದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

* ಒಟ್ಟಾರೆ ಈ ವರ್ಷ ಸಿಬಿಎಸ್ಇ 12ನೇ ತರಗತಿ, ಮತ್ತು ಐಎಸ್ಇ 12ನೇ ತರಗತಿ ಬೋರ್ಡ್ ಪರೀಕ್ಷೆಯನ್ನು ರದ್ದು ಹಾಗೂ CISCE 12ನೇ ತರಗತಿ ಪರೀಕ್ಷೆ ರದ್ದು ಗೊಳಿಸಲಾಗಿದೆ ಎಂದು ಮಾಹಿತಿ ತಿಳಿದು ಬಂದಿದೆ.

## ಪಾಕಿಸ್ತಾನ ಸ್ವದೇಶಿ ನಿರ್ಮಿತ "ಪಾಕ್‌ವಾಕ್" ಕೋವಿಡ್ 19 ಲಸಿಕೆ ಬಿಡುಗಡೆ




* ಪಾಕಿಸ್ತಾನ ರಾಷ್ಟ್ರವು ಚೀನಾ ದೇಶದ ಸಹಾಯದೊಂದಿಗೆ ಸ್ವದೇಶಿ ಕೊರೋನಾ ಲಸಿಕೆ "ಪಾಕ್‌ವಾಕ್" ಅನ್ನು ಅಭಿವೃದ್ಧಿಪಡಿಸಿದೆ, ಪಾಕಿಸ್ತಾನದ ಈ ಲಸಿಕೆಯು ನಮ್ಮ ದೇಶದ ಜನರಿಗೆ ಲಸಿಕೆ ಹಾಕಲು ಮತ್ತು ಕೋವಿಡ್ 19 ರೋಗ ಹರಡುವದನ್ನು ನಿಯಂತ್ರಿಸಲು ಈ ಲಸಿಕೆ ಸಹಾಯಕಾರಿಯಾಗಲಿದೆ ಎಂದು ತಿಳಿಸಿದೆ.

* ಪಾಕಿಸ್ತಾನದ ಆರೋಗ್ಯ ವಿಶೇಷ ಸಹಾಯಕ ಡಾ. ಫೈಸಲ್ ಸುಲ್ತಾನ್ ಅವರು ನಮ್ಮ ದೇಶದಲ್ಲಿನ ಕೋವಿಡ್ 19 ಸೋಂಕಿನ ಸವಾಲನ್ನು ಎದುರಿಸುವಲ್ಲಿ ನಮಗೆ ಮಿತ್ರ ರಾಷ್ಟ್ರ ಚೀನಾ ಸಹಾಯಮಾಡಿದೆ ಎಂದು ಸಭೆಯಲ್ಲಿ ಹೇಳಿದ್ದಾರೆ.

## ಇಫ್ಕೊ ವಿಶ್ವದ ಮೊದಲ, ನ್ಯಾನೊ ಯೂರಿಯಾ ಅಭಿವೃದ್ಧಿಪಡಿಸಿದೆ




* ವಿಶ್ವದ ಮೊದಲ ನ್ಯಾನೊ ಯೂರಿಯಾ ಗೊಬ್ಬರವನ್ನು ಸಹಕಾರಿ ಕಂಪನಿಯಾಗಿರುವ ಇಫ್ಕೊ ಅಭಿವೃದ್ಧಿಪಡಿಸಿದೆ ಹಾಗೂ ಈ ನ್ಯಾನೊ ಯೂರಿಯಾ ಉತ್ಪಾದನೆಯು ಜೂನ್ ತಿಂಗಳಿನಿಂದ ಆರಂಭವಾಗಲಿದೆ, ಮತ್ತು ವಿಶ್ವದಾದ್ಯಂತ ರೈತರಿಗೆ ಒದಗಿಸಲಾಗುವದು ಎಂದು ತಿಳಿಸಲಾಗಿದೆ.

* ಸ್ಥಳೀಯವಾಗಿ ಅಭಿವೃದ್ಧಿಪಡಿಸಿರುವ ಈ ನ್ಯಾನೊ ಯೂರಿಯಾ ದ್ರವ ರೂಪದಲ್ಲಿದೆ ಲಭ್ಯವಿದೆ, ಇದು 500ಮಿಲಿಗೆ (ML) 240 ರೂ. ಆಗಿದೆ ಇದು ಯೂರಿಯಾದ ಪ್ರತಿ ಚೀಲ ಬೆಲೆಗಿಂತ ಇದು ಶೇಕಡಾ 10ರಷ್ಟು ಕಡಿಮೆಯಾಗಿದೆ.

* ಪ್ರಸ್ತುತ ಗುಜರಾತ್‌ನ ಕಲೋಲ್‌ನಲ್ಲಿರುವ ಇಫ್ಕೊದ ನ್ಯಾನೋ ಬಯೋಟೆಕ್ನಾಲಜಿ ಸಂಶೋಧನಾ ಕೇಂದ್ರದಲ್ಲಿ ಈ ನ್ಯಾನೊ ಯೂರಿಯಾ ಲಿಕ್ವಿಡ್ ಅಭಿವೃದ್ಧಿಪಡಿಸಲಾಗಿದೆ, ಹಾಗೂ ಈ ನ್ಯಾನೊ ಯೂರಿಯಾವನ್ನು ಇಫ್ಕೊದ ಇ ಕಾಮರ್ಸ್ ಪೋರ್ಟಲ್ ಮೂಲಕ ಮತ್ತು ಸಹಕಾರಿ ಮಾರಾಟ ಹಾಗೂ ಮಾರುಕಟ್ಟೆ ವ್ಯವಸ್ಥೆಗಳ ಮೂಲಕ ರೈತರು ಪಡೆಯಬಹುದಾಗಿದೆ.

* ಇಫ್ಕೊ ಸಂಸ್ಥೆಯು ತನ್ನ 50ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿಯ ಮೂಲಕ ಈ ನ್ಯಾನೊ ತಂತ್ರಜ್ಞಾನ ಆಧಾರಿತ ಯೂರಿಯಾವನ್ನ ಆರಂಭಿಸಿದೆ, ಪ್ರಸ್ತುತ ವಿಜ್ಞಾನಿ ಡಾ. ರಮೇಶ್ ರಾಲಿಯಾ ಅವರ ಹೆಸರಿನಲ್ಲಿ ಇದರ ಪೇಟೆಂಟ್ ಇದೆ, ಈ ನ್ಯಾನೋ ಯೂರಿಯಾವನ್ನು ಕಲೋಲ್‌ನ ನ್ಯಾನೋ ಜೈವಿಕ ತಂತ್ರಜ್ಞಾನ ಸಂಶೋಧನಾ ಕೇಂದ್ರದಲ್ಲಿ ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

* ಅಭಿವೃದ್ಧಿ ಪಡಿಸಿರುವ ಈ ನ್ಯಾನೊ ಯೂರಿಯಾ ರೈತರ ವೆಚ್ಚವನ್ನ ಕಡಿಮೆ ಮಾಡುತ್ತದೆ ಮತ್ತು ಈ ಗೊಬ್ಬರದ ಕಾರ್ಯವನ್ನು ಪರಿಶೀಲಿಸಲು ದೇಶದ 98ಕ್ಕೂ ಹೆಚ್ಚು ಬೆಳೆಗಳ ಮೇಲೆ ಸುಮಾರು 11,000 ಕೃಷಿ ವಲಯದ ಪರೀಕ್ಷೆಗಳನ್ನು ನಡೆಸಿದ್ದಾರೆ ಇದರಿಂದಾಗಿ ಬೆಳೆಗಳಲ್ಲಿ ಇಳುವರಿಯ ಸರಾಸರಿ ಶೇಕಡಾ 4ರಷ್ಟು ಹೆಚ್ಚಾಗಿದೆ ಎಂದು ತಿಳಿದು ಬಂದಿದೆ.

## WHO'ದಿಂದ ಚೀನಾದ "ಸಿನೊವ್ಯಾಕ್" ಕೋವಿಡ್ ಲಸಿಕೆಗೆ ಅನುಮೋದನೆ




* ಚೀನಾ ದೇಶದ ಕೋವಿಡ್ 19 ಲಸಿಕೆಯಾಗಿರುವ ಈ "ಸಿನೊವ್ಯಾಕ್" ಅನ್ನು ತುರ್ತು ಪರಿಸ್ಥಿತಿಯಲ್ಲಿ ಬಳಕೆಗೆ ವಿಶ್ವ ಆರೋಗ್ಯ ಸಂಸ್ಥೆಯು ಅನುಮೋದನೆ ನೀಡಿದೆ.

* ಈಗಾಗಲೇ ಈ ಚೀನಾದ ಈ ಸಿನೊವ್ಯಾಕ್ ಲಸಿಕೆ ಹಲವು ರಾಷ್ಟ್ರಗಳು ಬಳಕೆ ಮಾಡುತ್ತಿವೆ, ಅವುಗಳೆಂದರೆ ಚೀನಾ, ಚಿಲಿ, ಇಂಡೊನೇಷ್ಯಾ, ಮೆಕ್ಸಿಕೊ, ಬ್ರೆಜಿಲ್, ಥಾಯ್ಲೆಂಡ್ ಮತ್ತು ಟರ್ಕಿ ಸೇರಿದಂತೆ ಒಟ್ಟಾರೆ 22 ರಾಷ್ಟ್ರಗಳಲ್ಲಿ ಈ ಸಿನೊವ್ಯಾಕ್ ಲಸಿಕೆಯನ್ನು ಬಳಕೆ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

## ಚೀನಾ ರಾಷ್ಟ್ರದಲ್ಲಿ ಮಾನವನಲ್ಲಿ ಎಚ್10ಎನ್3 ಹಕ್ಕಿ ಜ್ವರ ಪತ್ತೆ



* ಪ್ರಸ್ತುತ ಎಚ್10ಎನ್3 ತಳಿಯ ಹಕ್ಕಿ ಜ್ವರ ಇದೀಗ ಚೀನಾ ದೇಶದ ಪಶ್ಚಿಮ ಪ್ರಾಂತ್ಯದ ಜಿಯಾಂಗ್ಸುನ ಎಂಬ 41ವರ್ಷದ ವ್ಯಕ್ತಿಯಲ್ಲಿ ಕಾಣಿಸಿಕೊಂಡಿದೆ, ಇದು ಎಚ್10ಎನ್3 ತಳಿಯ ಮೊದಲ ಮಾನವ ಪ್ರಕರಣವಾಗಿದೆ ಎಂದು ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗ ಮಾಹಿತಿಯನ್ನು ನೀಡಿದೆ.

* ಕೋಳಿಗಳಲ್ಲಿ ಕಂಡು ಬರುವ ಎಚ್10ಎನ್3 ಕಡಿಮೆ ರೋಗಕಾರಕ ವೈರಸ್ ತಳಿ ಇದಾಗಿದೆ ಹಾಗೂ ಇದು ವ್ಯಾಪಕವಾಗಿ ಹರಡುವ ಸಾಧ್ಯತೆ ತೀರ ಕಡಿಮೆ ಇದೆ ಎಂದು ಚೀನಾ ರಾಷ್ಟ್ರೀಯ ಆರೋಗ್ಯ ಆಯೋಗ ವಿವರಣೆಯನ್ನು ನೀಡಿದೆ.

## ಲೆಫ್ಟಿನೆಂಟ್ ಜನರಲ್ ಪ್ರದೀಪ್ ಚಂದ್ರನ್ ನಾಯರ್ ಅಸ್ಸಾಂ ರೈಫಲ್ಸ್ ಮಹಾ ನಿರ್ದೇಶಕ



* ಲೆಫ್ಟಿನೆಂಟ್ ಜನರಲ್ ಪ್ರದೀಪ್ ಚಂದ್ರನ್ ನಾಯರ್ ಅವರು ಅಸ್ಸಾಂ ರೈಫಲ್ಸ್'ನ ಮಹಾ ನಿರ್ದೇಶಕರಾಗಿ ಅಧಿಕಾರ ಸ್ವೀಕಾರ ಮಾಡಿದರು, ಪ್ರಸ್ತುತ ಇದು ಭಾರತದ ಅತ್ಯಂತ ಹಳೆಯ ಅರೆ ಸೇನಾಪಡೆಯಾಗಿದೆ.

* ಈ ಮೊದಲು ಪ್ರದೀಪ್ ಚಂದ್ರನ್ ನಾಯರ್ ಅವರು ಭಾರತೀಯ ಸೇನೆಯ ಸಿಬ್ಬಂದಿ ನೇಮಕ ವಿಭಾಗದಲ್ಲಿ ಮಹಾ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು ಇದೀಗ ಅಸ್ಸಾಂ ರೈಫಲ್ಸ್‌ನ 21ನೇ ಮಹಾ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ, ಈ ಅಧಿಕಾರ ಸ್ವೀಕಾರ ಸಮಾರಂಭವು ಮೇಘಾಲಯದ ಶಿಲ್ಲಾಂಗ್'ನ ಮುಖ್ಯ ಕಚೇರಿಯಲ್ಲಿ ನಡೆಯಿತು.

# 03-06-2021

## KSRTC ಟ್ರೇಡ್ ಮಾರ್ಕ್ ಕೇರಳ ರಾಜ್ಯದ ಪಾಲು




* ಸತತ ವರ್ಷಗಳಿಂದ KSRTC ಬ್ರಾಂಡ್ ಕರ್ನಾಟಕ ಮತ್ತು ಕೇರಳ ರಾಜ್ಯಗಳು ಕಾನೂನು ಹೋರಾಟವನ್ನು ನಡೆಸುತಿದ್ದವು, ಇದೀಗ ಈ KSRTC ಬ್ರಾಂಡ್ ಕೇರಳ ರಾಜ್ಯದ ಪಾಲಾಗಿದೆ, ಇನ್ನು ಮುಂದೆ ಕರ್ನಾಟಕವು KSRTC ಹೆಸರು ಬಳಕೆ ಮಾಡದಂತೆ ಆದೇಶ ಹೊರಡಿಸಿದೆ.

* ಪ್ರಸ್ತುತ ಟ್ರೇಡ್ ಮಾರ್ಕ್ ರಿಜಿಸ್ಟ್ರಿ ಬೌದ್ಧಿಕ ಆಸ್ತಿ ಹಕ್ಕುಗಳ ಆಧಾರದ ಮೇಲೆ ಈ ವಿಷಯದ ಬಗ್ಗೆ ಅಂತಿಮ ತೀರ್ಪು ನೀಡಲಾಗಿದೆ, ಈ ತೀರ್ಪಿನಿಂದಾಗಿ ಇನ್ನು ಮುಂದೆ ಕರ್ನಾಟಕವು KSRTC ಬ್ರಾಂಡ್'ನ್ನು ಬಳಕೆ ಮಾಡಬಾರದೆಂದು ಆದೇಶ ಹೊರಡಿಸಲಾಗಿದೆ.

* ಈ ಹಿಂದೆ 2013ರಲ್ಲಿ ಕೇರಳ ಮತ್ತು ಕರ್ನಾಟಕ ರಾಜ್ಯಗಳು KSRTC ವಿಸ್ತೃತ ರೂಪಕ್ಕಾಗಿ ಕಾನೂನು ಹೋರಾಟವನ್ನು ಆರಂಭಿಸಿದ್ದವು, ಕರ್ನಾಟಕ ರಾಜ್ಯವು 1973ರಲ್ಲಿ ಕೆಎಸ್ಆರ್‌ಟಿಸಿ ಎಂಬ ಹೆಸರನ್ನು ನೋಂದಣಿ ಮಾಡಿಸಿದೆ, ಆದರೆ ಕೇರಳ ರಾಜ್ಯವು ಅದಕ್ಕೂ ಮುನ್ನವೇ ಅಂದರೆ 1965ರಲ್ಲೇ ಕೆಎಸ್ಆರ್‌ಟಿಸಿ ಎಂಬ ಹೆಸರನ್ನು ನೋಂದಣಿ ಮಾಡಿಸಿದೆ ಈ ಅಂಶವನ್ನು ಪರಿಗಣಿಸಿ ತೀರ್ಪು ನೀಡಲಾಗಿದೆ ಎಂದು ತಿಳಿಸಿದ್ದಾರೆ.

## ಮಕ್ಕಳ ಮೇಲೆ ಕೋವ್ಯಾಕ್ಸಿನ್ ಲಸಿಕೆ ಪ್ರಯೋಗ ಪಾಟ್ನಾ ಏಮ್ಸ್ ನಲ್ಲಿ ಆರಂಭ




* ಇದೇ ಮೊದಲ ಬಾರಿಗೆ ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸಿರುವ ಕೋವ್ಯಾಕ್ಸಿನ್ ಲಸಿಕೆಯನ್ನು (ಬಿಹಾರ್) ಪಾಟ್ನಾದ ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ (AIIMS) ಮಕ್ಕಳ ಮೇಲೆ ಪ್ರಯೋಗವನ್ನು ಪ್ರಾಂಭಿಸಿದೆ.

* ಇದೇ ಮೇ.11 ರಂದು 2 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಭಾರತ್ ಬಯೋಟೆಕ್'ನ ಕೋವ್ಯಾಕ್ಸಿನ್ ಲಸಿಕೆ ಬಳಕೆಗೆ ಭಾರತೀಯ ಪ್ರಧಾನ ಔಷಧ ನಿಯಂತ್ರಕವು 2 ಮತ್ತು 3ನೇ ಹಂತದ ಪ್ರಯೋಗಕ್ಕೆ ಅನುಮತಿ ನೀಡಿದೆ ರಾಷ್ಟ್ರೀಯ ಕೋವಿಡ್ ಕಾರ್ಯಪಡೆ ಅಧ್ಯಕ್ಷ ವಿಕೆ ಪೌಲ್ ಅವರು ತಿಳಿಸಿದ್ದಾರೆ.

* ಪ್ರಸ್ತುತ ಕೇಂದ್ರ ಸರ್ಕಾರವು ನೀಡಿರುವ ಮಾಹಿತಿ ಪ್ರಕಾರ ಇಲ್ಲಿಯವರೆಗೆ ಕೋವಿಡ್ 19 ಲಸಿಕೆಯನ್ನು ಒಟ್ಟು 21,85,46,667 ಜನರಿಗೆ ನೀಡಲಾಗಿದೆ ಎಂದು ವಿವರಣೆಯನ್ನು ನೀಡಿದ್ದಾರೆ.

## ಕೇಂದ್ರದ ಮಾದರಿ ಬಾಡಿಗೆ ಕಾಯ್ದೆಗೆ ಸಚಿವ ಸಂಪುಟ ಅನುಮೋದನೆ



* ಕೇಂದ್ರ ಸರ್ಕಾರವು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯವಾಗುವಂತೆ ಮಾದರಿ ಬಾಡಿಗೆ ಕಾಯ್ದೆಯನ್ನುರೂಪಿಸಿದೆ ಈ ಕಾಯ್ದೆಗೆ ಕೇಂದ್ರ ಸಚಿವ ಸಂಪುಟವು ಅನುಮೋದನೆಯನ್ನು ನೀಡಿದೆ.

* ಬಾಡಿಗೆಗೆ ಮನೆ ನೀಡುವ ಮಾಲೀಕರು ಇನ್ನು ಮುಂದೆ ಕೇವಲ ಎರಡು ತಿಂಗಳ ಬಾಡಿಗೆಯನ್ನು ಮಾತ್ರ ಮುಂಗಡವಾಗಿ (ಅಡ್ವಾನ್ಸ್) ಪಡೆಯಬೇಕು, ಪ್ರಸ್ತುತ ಮನೆ ಮತ್ತು ವಾಣಿಜ್ಯ ಕಟ್ಟಡ ಬಾಡಿಗೆ ಒಪ್ಪಂದಗಳ ಮಾಹಿತಿಯನ್ನು ಪ್ರಾಧಿಕಾರಕ್ಕೆ ನೀಡಬೇಕು ಎಂದು ತಿಳಿಸಿದೆ.

* ಮಾಸಿಕ(ತಿಂಗಳ) ಮನೆ ಬಾಡಿಗೆ ಮೊತ್ತದ ಎರಡು ತಿಂಗಳ ಹಣವನ್ನು ಮಾತ್ರ ಭದ್ರತಾ ಠೇವಣಿಯಾಗಿ(ಡಿಪಾಜಿಟ್) ಮುಂಗಡವಾಗಿ ಪಡೆಯಬಹುದು, ಹಾಗೂ ವಾಣಿಜ್ಯ ಕಟ್ಟಡಗಳಿಗೆ ಬಾಡಿಗೆ ಮೊತ್ತದ 6 ತಿಂಗಳ ಹಣ ಮಾತ್ರ ಮುಂಗಡವಾಗಿ ಪಡೆಯಬಹುದು ಎಂದು ತಿಳಿಸಲಾಗಿದೆ, ಒಂದು ವೇಳೆ ಬಾಡಿಗೆ ಒಪ್ಪಂದ ಮುಕ್ತಾಯವಾದ ನಂತರ ದಿನಗಳಲ್ಲಿ ಬಾಡಿಗೆದಾರ ಮನೆ ಖಾಲಿ ಮಾಡದಿದ್ದರೆ ಮನೆ ಮಾಲೀಕರು 2 ತಿಂಗಳ ಅವಧಿಗೆ ಬಾಡಿಗೆಯನ್ನು ಹೆಚ್ಚಿಗೆ ಮಾಡಬಹುದು ಮತ್ತೆ ಇದಾದ ನಂತರ ಎರಡು ತಿಂಗಳ ನಂತರ ಮನೆ ಖಾಲಿ ಮಾಡದಿದ್ದರೆ 4ಪಟ್ಟು ಬಾಡಿಗೆ ಹೆಚ್ಚಿಗೆ ಮಾಡಬಹುದು ಎಂದು ತಳಿಸಿದೆ ಆದರೆ ಯಾವುದೇ ಕಾರಣಕ್ಕೂ ಮಾಲೀಕರು ಏಕಾಏಕಿ ಬಾಡಿಗೆದಾರನ ಮನೆಗೆ ತೆರಳುವಂತಿಲ್ಲ ಎಂದು ತಿಳಿಸಿದೆ.

## ಹಾವೇರಿ ಜಿಲ್ಲೆ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಗೆ ಪ್ರಾಯೋಗಿಕ ಜಿಲ್ಲೆಯಾಗಿ ಆಯ್ಕೆ



* ಪ್ರಸ್ತುತ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಅಡಿಯಲ್ಲಿ ಮಿಶ್ರ ಬೆಳೆ ಪದ್ಧತಿಯನ್ನು ಪ್ರೋತ್ಸಾಹಿಸಿ ರೈತರ ಆದಾಯವನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಲಾಗಿದೆ, ಪ್ರಸ್ತುತ ಈ ಯೋಜನೆಗೆ ಕರ್ನಾಟಕ ರಾಜ್ಯದ ಹಾವೇರಿ ಜಿಲ್ಲೆಯನ್ನು "ಪ್ರಾಯೋಗಿಕ ಜಿಲ್ಲೆ"ಯಾಗಿ ಆಯ್ಕೆ ಮಾಡಲಾಗಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಅವರು ತಿಳಿಸಿದ್ದಾರೆ.

* ಪ್ರಸ್ತುತ ರಾಜ್ಯದಲ್ಲಿನ ರೈತರು ಏಕ ಬೆಳೆ ಬೆಳೆಯುವ ಪದ್ಧತಿಯಿಂದ ರೈತರು ನಷ್ಟ ಅನುಭವಿಸುತ್ತಿದ್ದಾರೆ, ಈ ನಷ್ಟವನ್ನು ತಪ್ಪಿಸಲು ಮತ್ತು ಆದಾಯವನ್ನು ಹೆಚ್ಚಿಸಲು ಈ ಜಿಲ್ಲೆಯನ್ನು ಆಯ್ಕೆ ಮಾಡಲಾಗಿದೆ, ಪ್ರಸ್ತುತ ಹಾವೇರಿ ಜಿಲ್ಲೆಯಲ್ಲಿ 6 ಸಾವಿರ ಹೆಕ್ಟೇರ್‌ನಲ್ಲಿ ಮಿಶ್ರ ಬೆಳೆಗೆ ಪ್ರೋತ್ಸಾಹವನ್ನು ನೀಡಲಾಗುತ್ತದೆ ಎಂದು ಕೃಷಿ ಸಚಿವರು ತಿಳಿಸಿದ್ದಾರೆ.

* ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಅಡಿಯಲ್ಲಿ ರೈತರಿಗೆ ಬಿತ್ತನೆ ಮಾಡಲು 401 ಕ್ವಿಂಟಲ್ ತೊಗರಿ, 240 ಕ್ವಿಂಟಲ್ ಶೇಂಗಾ, 2,800 ಕ್ವಿಂಟಲ್ ಸೋಯಾ ಅವರೆ ಬಿತ್ತನೆ ಬೀಜ, ಒಟ್ಟಾರೆ 2,441 ಕ್ವಿಂಟಲ್ ಬಿತ್ತನೆ ಬೀಜಗಳನ್ನೂ ಉಚಿತವಾಗಿ ನೀಡಲಾಗುವದು ಎಂದು ತಿಳಿಸಿದ್ದಾರೆ.

## 2021ರ ಏಷ್ಯಾ ಯೂನಿವರ್ಸಿಟಿ ರ್ಯಾಂಕಿಂಗ್ ಪಟ್ಟಿ ಪ್ರಕಟ




* ಟೈಮ್ಸ್ ಹೈಯರ್ ಎಜುಕೇಷನ್, ಏಷ್ಯಾ ಯೂನಿವರ್ಸಿಟಿ ರ್ಯಾಂಕಿಂಗ್ 2021ರ ಪಟ್ಟಿ ಪ್ರಕಟವಾಗಿದೆ, ಈ ಪಟ್ಟಿಯಲ್ಲಿನ 200 ಅತ್ಯುತ್ತಮ ವಿಶ್ವವಿದ್ಯಾಲಯಗಳಲ್ಲಿ 18 ಭಾರತೀಯ ವಿಶ್ವವಿದ್ಯಾಲಯಗಳು ಅಗ್ರ ಸ್ಥಾನ ಪಡೆದಿವೆ.

* ಪ್ರಸ್ತುತ ಏಷ್ಯಾದಲ್ಲಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ (IIC) 37ನೇ ಕ್ರಮದಲ್ಲಿದ್ದೆ, ಇದು ಭಾರತದ ಅತ್ಯುತ್ತಮ ಸಂಸ್ಥೆಯಾಗಿ ಮುನ್ನಡೆದಿದೆ, ಇಂದೋರ್'ನಲ್ಲಿನ ಭಾರತೀಯ ತಂತ್ರಜ್ಞಾನ ಸಂಸ್ಥೆಗಳು (IIT) ನಂತರದ ಸ್ಥಾನದಲ್ಲಿದೆ.

* ಕಿಂಗ್ ಜಾರ್ಜ್ ವೈದ್ಯಕೀಯ ವಿಶ್ವವಿದ್ಯಾಲಯ ಲಕ್ನೋ ಮತ್ತು ದೆಹಲಿಯ ಇಂದ್ರಪ್ರಸ್ಥ ಮಾಹಿತಿ ತಂತ್ರಜ್ಞಾನ ಸಂಸ್ಥೆ (IIT) ಹಾಗೂ ಕೇರಳದ ಮಹಾತ್ಮಾ ಗಾಂಧಿ ವಿಶ್ವವಿದ್ಯಾಲಯ ಎಂಬ 3 ಹೊಸ ಹೆಸರುಗಳು ಏಷ್ಯಾ ಯೂನಿವರ್ಸಿಟಿ ರ್ಯಾಂಕಿಂಗ್ ಪಟ್ಟಿಯಲ್ಲಿವೆ ಎಂದು ಬ್ರಿಟಿಷ್ ಶ್ರೇಯಾಂಕ ಸಂಸ್ಥೆಯು ಮಾಹಿತಿಯನ್ನು ನೀಡಿದೆ ಎಂದು ದಿ ಮುಖ್ಯ ಜ್ಞಾನ ಅಧಿಕಾರಿ ಫಿಲ್ ಬ್ಯಾಟಿ ಅವರು ತಿಳಿಸಿದರು.

## ಹಿರಿಯ ರಾಜಕಾರಣಿ ಐಸಾಕ್ ಹರ್ಜಾಗ್ ಇಸ್ರೇಲ್ ಅಧ್ಯಕ್ಷರಾಗಿ ಆಯ್ಕೆ



* ಇಸ್ರೇಲ್‌ನ ಅಧ್ಯಕ್ಷರಾಗಿ ಐಸಾಕ್ ಹರ್ಜಾಗ್ ಅವರು ಆಯ್ಕೆಯಾಗಿದ್ದಾರೆ, ಮತ್ತು ಇವರು ಇಸ್ರೇಲ್'ನ ಹಿರಿಯ ರಾಜಕಾರಣಿ ಕೂಡ ಆಗಿದ್ದಾರೆ, ಇವರು ವಿಶ್ವಸಂಸ್ಥೆಯಲ್ಲಿ ಇಸ್ರೇಲ್‌ನ ರಾಯಭಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

* ಇಸ್ರೇಲ್'ನ ಸಂಸತ್ 120 ಸದಸ್ಯರ ಬಲವನ್ನು ಹೊಂದಿದೆ ಇಸ್ರೇಲ್'ನ ಅಧ್ಯಕ್ಷ ಸ್ಥಾನಕ್ಕೆ ಗುಪ್ತ ಮತದಾನ ಮಾಡುವ ಮೂಲಕ ಈ ಆಯ್ಕೆ ನಡೆದಿದೆ ಎಂದು ತಿಳಿಸಿದ್ದಾರೆ, ಪ್ರಸ್ತುತ ಈಗಿನ ಅಧ್ಯಕ್ಷ ರೆವೆನ್ ರಿವ್‌ಲಿನ್ ಅವರ ಅಧಿಕಾರಾವಧಿ ಮುಂಬರುವ ತಿಂಗಳಿನಲ್ಲಿ ಮುಕ್ತಾಯವಾಗಲಿದೆ ಎಂದು ತಿಳಿಸಿದ್ದಾರೆ.

# ಪ್ರತಿ ದಿನದ ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ KPSC VAANI APP ಡೌನ್ಲೋಡ್ ಮಾಡಿಕೊಳ್ಳಿ

KPSC Vaani



**ರಿಯಾಯಿತಿ ದರದಲ್ಲಿ ಸ್ಪರ್ಧಾತ್ಮಕ ಪುಸ್ತಕಗಳನ್ನು ಖರೀದಿಸಲು ಖರೀದಿಸಲು ಇಲ್ಲಿ ಕ್ಲಿಕ್ ಮಾಡಿ**

**ಪ್ರತಿದಿನದ ಉದ್ಯೋಗ ಮಾಹಿತಿ, ಪ್ರಚಲಿತ ಘಟನೆಗಳು, ಪ್ರಶ್ನೆ ಪತ್ರಿಕೆಗಳು, ಕಟ್ ಆಫ್ ಅಂಕಗಳು, Daily Quiz ಸೇರಿ ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಳು ಒಂದೇ ವೇದಿಕೆಯಲ್ಲಿ ನಿಮಗಾಗಿ**

**ನಮ್ಮ ಗುಂಪುಗಳನ್ನು ಸೇರಿಕೊಳ್ಳಿ**

Click here To Join

To Download Our App

Follow Us on Facebook

Follow Us on Instagram

Scan QR Code To Download KPSC Vaani App

### ಇರಾನ್‌ನ "ಖಾರ್ಗ್" ಯುದ್ದನೌಕೆ ಬೆಂಕಿಗೆ ಆಹುತಿ



* ಇರಾನ್ ರಾಷ್ಟ್ರದ ಬೃಹತ್ ಯುದ್ದನೌಕೆ "ಖಾರ್ಗ್" ಬೆಂಕಿಗೆ ಆಹಿತಿಯಾಗಿ ಒಮಾನ್ ಗಲ್ಫ್ ಕೊಲ್ಲಿಯಲ್ಲಿ ಮುಳುಗಿದೆ ಎಂದು ಸುದ್ದಿವಾಹಿನಿಗಳು ತಿಳಿಸಿವೆ ಆದರೆ ನಿಖರವಾದ ಕಾರಣ ನೀಡಿಲ್ಲ.

* ಈ ಖಾರ್ಗ್ ಯುದ್ದನೌಕೆ ಪರ್ಷಿಯನ್ ಕೊಲ್ಲಿಯ ಹಾರ್ಮುಜ್ ಜಲಸಂಧಿಯ ಬಳಿ ಒಮಾನ್ ಕೊಲ್ಲಿಯಲ್ಲಿ ಜಾಸ್ಕ್ ಬಂದರಿನ ಸಮೀಪ ಈ ಹಡಗು ಮುಳುಗಿದೆ ಎಂದು ಸುದ್ದಿವಾಹಿನಿಗಳು ತಿಳಿಸಿವೆ.

* ಪ್ರಸ್ತುತ ಈ ಖಾರ್ಗ್ ಯುದ್ದನೌಕೆಯನ್ನು ಸರಕು ಸಾಗಣೆ ಮತ್ತು ಹೆಲಿಕಾಪ್ಟರ್‌ಗಳ ಚಿಮ್ಮು ಹಲಗೆಯಾಗಿ ಬಳಕೆ ಮಾಡಲಾಗುತಿತ್ತು, ಈ ಯುದ್ದನೌಕೆಯನ್ನು 1977ರಲ್ಲಿ ಬ್ರಿಟನ್‌ನಲ್ಲಿ ನಿರ್ಮಾಣ ಮಾಡಲಾಗಿತ್ತು ನಂತರ 1984ರಲ್ಲಿ ಇರಾನ್‌ಗೆ ಈ ಯುದ್ದ ನೌಕೆಯನ್ನು ಹಸ್ತಾಂತರಮಾಡಲಾಗಿತ್ತು.

### ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿ ನ್ಯಾಯಾಧೀಶ ಅರುಣ್ ಮಿಶ್ರಾ ಆಯ್ಕೆ



* ಪ್ರಸ್ತುತ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿ ಸುಪ್ರೀಂ ಕೋರ್ಟ್'ನ ನಿವೃತ್ತ ನ್ಯಾಯಾಧೀಶ ಅರುಣ್ ಮಿಶ್ರಾ ಅಧಿಕಾರ ಸ್ವೀಕರಿಸಿದರು.

* ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಈ ಹಿಂದಿನ ಅಧ್ಯಕ್ಷರಾಗಿದ್ದ ಮಾಜಿ ಸಿಜೆಐ ಎಚ್.ಎಲ್. ದತ್ತು ಅವರು 2020ರ ಡಿಸೆಂಬರ್'ನಲ್ಲಿ ನಿವೃತ್ತಿ ಹೊಂದಿದ ನಂತರ ಈ ಹುದ್ದೆಯನ್ನು ಬೇರೆಯರನ್ನು ಆಯ್ಕೆ ಮಾಡಿರಲಿಲ್ಲ, ಇದೀಗ ನಿವೃತ್ತ ನ್ಯಾಯಾಧೀಶ ಅರುಣ್ ಮಿಶ್ರಾ ಅವರನ್ನು ಆಯ್ಕೆ ಮಾಡಲಾಗಿದೆ.

## 04-06-2021

### ಪತ್ರಕರ್ತ ತೇಜಿಂದರ್ ಸಿಂಗ್ ವಿಧಿವಶ



* ಶ್ವೇತಭವನದ ಹಿರಿಯ ವರದಿಗಾರ ಮತ್ತು ಇಂಡಿಯಾ ಅಮೇರಿಕಾ ಟುಡೆ ನ್ಯೂಸ್‌ವೈರ್‌ನ ಸ್ಥಾಪಕ ಹಾಗೂ ಸಂಪಾದಕ ಭಾರತೀಯ ಮೂಲದ ತೇಜಿಂದರ್ ಸಿಂಗ್ ಯುಎಸ್'ನಲ್ಲಿ ವಿಧಿವಶರಾಗಿದ್ದಾರೆ.

* ತೇಜಿಂದರ್ ಸಿಂಗ್ ಅವರು ವಾಷಿಂಗ್ಟನ್ ಡಿ.ಸಿ ಮೂಲದ ಸ್ವತಂತ್ರ ಮಾಧ್ಯಮ (News) ಸಂಸ್ಥೆ ಇಂಡಿಯಾ ಅಮೇರಿಕಾ ಟುಡೆ ಸಂಸ್ಥೆಯನ್ನು ಸ್ಥಾಪನೆ ಮಾಡಿದರು.

* ಪ್ರಸ್ತುತ ತೇಜಿಂದರ್ ಸಿಂಗ್ ಅವರು 2011ರಿಂದ ಪೆಂಟಗನ್ ವರದಿಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದರು, ಮತ್ತು ಇವರು 2011 12ರಲ್ಲಿ ಏಷ್ಯನ್ ಅಮೇರಿಕನ್ ಜರ್ನಲಿಸ್ಟ್ಸ್ ಅಸೋಸಿಯೇಶನ್ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

### ಚೀನಾ ದೇಶದಿಂದ ಹವಾಮಾನ ಉಪಗ್ರಹವನ್ನು ಯಶಸ್ವಿ ಉಡಾವಣೆ



* ಪ್ರಸ್ತುತ ಚೀನಾ ದೇಶವು ಹೊಸ ತಲೆಮಾರಿನ ಹವಾಮಾನ ಉಪಗ್ರಹವನ್ನು ಯಶಸ್ವಿಯಾಗಿ ಉಡಾವಣೆ ಮಾಡಿದೆ, ಪ್ರಸ್ತುತ ಹವಾಮಾನ ವಿಶ್ಲೇಷಣೆ ಜೊತೆಗೆ ಪರಿಸರ ವಿಪತ್ತುಗಳ ಮೇಲ್ವಿಚಾರಣೆಗಾಗಿ ಈ ಉಪಗ್ರಹವನ್ನು ಉಪಯೋಗಿಸಲಾಗುತ್ತದೆ ಎಂದು ತಿಳಿಸಿದೆ.

* ಚೀನಾ ದೇಶದ ಸಿಚುವಾನ್ ಪ್ರಾಂತ್ಯದ ಕ್ಸಿಚಾಂಗ್ ಉಪಗ್ರಹ ಉಡಾವಣಾ ಕೇಂದ್ರದಿಂದ ಬೆಳಗಿನಜಾವ ಲಾಂಗ್ ಮಾರ್ಚ್ 3 ಬಿ ರಾಕೆಟ್ ಬಳಸಿ ಫೆಂಗ್ಯುನ್ 4 ಬಿ (Fengyun 4B) ಉಪಗ್ರಹ ಉಡಾವಣೆ ಮಾಡಲಾಗಿದೆ ಎಂದು ಅಲ್ಲಿನ ಸರ್ಕಾರಿ ಸಿನ್ಹುವಾ ಸುದ್ದಿವಾಹಿನಿ ಮಾಹಿತಿಯನ್ನು ನೀಡಿದೆ.

* ಈ ಹವಾಮಾನ 'Fengyun 4B' ಉಪಗ್ರಹವು ಕೃಷಿ, ಪರಿಸರ ಸಂರಕ್ಷಣೆ, ಸಾಗರ ನಿರ್ವಹಣೆ ಹೀಗೆ ಹಲವು ಪ್ರದೇಶಗಳ ಮಾಹಿತಿ ಮತ್ತು ಭದ್ರತಾ ಸೇವೆಯನ್ನು ನೀಡಲು ಈ ಉಪಗ್ರಹ ಸಹಾಯಕಾರಿಯಾಗಲಿದೆ ಎಂದು ಚೀನಾ ರಾಷ್ಟ್ರೀಯ ಬಾಹ್ಯಾಕಾಶ ಆಡಳಿತ ಪತ್ರಿಕಾ ಪ್ರಕಟಣೆಯಲ್ಲಿ ವರದಿಯನ್ನು ನೀಡಿದೆ.

* ಪ್ರಸ್ತುತ ಏಷ್ಯಾ, ಮಧ್ಯ ಪೆಸಿಫಿಕ್ ಮಹಾಸಾಗರ ಮತ್ತು ಹಿಂದೂ ಮಹಾಸಾಗರ ಪ್ರದೇಶಗಳ ವೀಕ್ಷಣಾ ವ್ಯಾಪ್ತಿಯನ್ನುಈ 'Fengyun 4B' ಉಪಗ್ರಹವು ಹೊಂದಿದೆ, ಇದರಿಂದಾಗಿ ಚೀನಾ ದೇಶಕ್ಕೆ

ಚಂಡಮಾರುತ ಹಾಗೂ ಪರಿಸರ ವಿಪತ್ತುಗಳ ಮಾಹಿತಿ ಲಭಿಸಲಿದೆ ಎಂದು ಚೀನಾ ತಿಳಿಸಿದೆ.

## ಭಾರತದಲ್ಲಿ ಹೊಸ ಫ್ಲೈಯಿಂಗ್ ಟ್ರೈನಿಂಗ್ ಅಕಾಡೆಮಿಗಳು ಪ್ರಾರಂಭ



* ಭಾರತವು ಹೊಸ ಫ್ಲೈಯಿಂಗ್ ಟ್ರೈನಿಂಗ್ ಅಕಾಡೆಮಿಗಳನ್ನೂ ವಿಮಾನ ನಿಲ್ದಾಣ ಪ್ರಾಧಿಕಾರದ (AAI) ಉದಾರೀಕೃತ ವೈಮಾನಿಕ ತರಬೇತಿ ಸಂಸ್ಥೆಯ, ಫ್ಲೈಯಿಂಗ್ ಟ್ರೈನಿಂಗ್ ಆರ್ಗನೈಸೇಶನ್ (FTO) ನೀತಿ ಅಡಿಯಲ್ಲಿ ಪ್ರಾರಂಭಿಸಲಿದೆ.

* ಪ್ರಸ್ತುತ ಭಾರತವು ಹೊಸ ಫ್ಲೈಯಿಂಗ್ ಟ್ರೈನಿಂಗ್ ಅಕಾಡೆಮಿಗಳನ್ನು ಬೆಳಗಾವಿ, ಜಲಗಾಂವ್, ಕಲಬುರಗಿ, ಖಜುರಾಹೊ ಮತ್ತು ಲೀಲಬರಿ ಎಂಬಲ್ಲಿ ಸ್ಥಾಪನೆ ಮಾಡಲಿದೆ.

* ಭಾರತವನ್ನು ಜಾಗತಿಕ ವೈಮಾನಿಕ ತರಬೇತಿ ಕೇಂದ್ರವನ್ನಾಗಿ ಮಾಡುವ ಉದ್ದೇಶವನ್ನು ಈ ಫ್ಲೈಯಿಂಗ್ ಟ್ರೈನಿಂಗ್ ಅಕಾಡೆಮಿಗಳು ಹೊಂದಿವೆ, ಇದರ ಜೊತೆಗೆ ಭಾರತೀಯ ವಿದ್ಯಾರ್ಥಿಗಳು ಕಲಿಕೆಗೆ ವಿದೇಶಿ ವೈಮಾನಿಕ ತರಬೇತಿ ಅಕಾಡೆಮಿಗಳಿಗೆ ಹೋಗುವುದನ್ನು ತಡೆಯಲು ಈ ಅಕಾಡೆಮಿಗಳು ಸಹಾಯಕಾರಿಯಾಗಲಿವೆ.

* 2020ರ ನವೆಂಬರ್‌ನಲ್ಲಿ ವಿಮಾನ ನಿಲ್ದಾಣ ಪ್ರಾಧಿಕಾರವು (AAI) ಬಿಡ್‌ಗಳಿಗೆ ಆಹ್ವಾನನೀಡಿತ್ತು, ಪ್ರಸ್ತುತ ವಿಜೇತ ಬಿಡ್ದುದಾರರಿಗೆ ಆದೇಶ ಪ್ರಮಾಣ ಪತ್ರಗಳನ್ನು ಇದೇ 2021ರ ಮೇ. 20ರಂದು ಹಸ್ತಾಂತರಿಸಲಾಗಿದೆ ಎಂದು AAI ತಿಳಿಸಿದೆ.

## ಪೊಲೀಸರಿಗೆ 5,000 ರೂಪಾಯಿ ಪ್ರೋತ್ಸಾಹ ಧನ ನೀಡಿದ ತಮಿಳುನಾಡು ಸರ್ಕಾರ



* ತಮಿಳುನಾಡು ಸರ್ಕಾರವು ಕೋವಿಡ್ 19 ಸಾಂಕ್ರಾಮಿಕ ರೋಗದ ವಿರುದ್ಧ ಜನರ ಸೇವೆ ಮಾಡುವಲ್ಲಿ ನಿರತರಾಗಿರುವ ಪೊಲೀಸ್ ಸಿಬ್ಬಂದಿಗಳಿಗೆ 5,000 ರೂ. ಪ್ರೋತ್ಸಾಹ ಧನ ನೀಡಲಾಗುತ್ತದೆ ಎಂದು ಘೋಷಣೆ ಮಾಡಿದೆ.

* ಈಗಿನ ಮುಖ್ಯಮಂತ್ರಿ ಎಂ ಕೆ ಸ್ಟಾಲಿನ್ ಈ ವಿಷಯದ ಬಗ್ಗೆ ಅಧಿಕೃತವಾಗಿ ಘೋಷಣೆ ಮಾಡಿದ್ದಾರೆ.

* ಪ್ರಸ್ತುತ ತಮಿಳುನಾಡು ರಾಜ್ಯದಲ್ಲಿ ಇಲ್ಲಿಯತನಕ 21,48,346 ಕೊವಿಡ್ 19 ಪ್ರಕರಣಗಳು ದಾಖಲಾಗಿವೆ, ಇವುಗಳಲ್ಲಿ 18,34,439 ಕೊವಿಡ್ 19 ಸೋಂಕಿತರು ಗುಣಮುಖರಾಗಿದ್ದಾರೆ ಎಂದು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾಹಿತಿಯನ್ನು ಬಹಿರಂಗಪಡಿಸಿದೆ.

## ಟಿಇಟಿ (TET) ಪರೀಕ್ಷೆಯ ಪ್ರಮಾಣಪತ್ರದ ಮಾನ್ಯತೆಯ ಅವಧಿ 7 ವರ್ಷದಿಂದ ಜೀವಿತಾವಧಿಯವರೆಗೆ ವಿಸ್ತರಣೆ



* ಪ್ರಸ್ತುತ 7 ವರ್ಷಗಳ ಮಾನ್ಯತೆಯ ಅವಧಿಯನ್ನು ಹೊಂದಿರುವ ಶಿಕ್ಷಕರ ರಾಷ್ಟ್ರೀಯ ಅರ್ಹತಾ ಪರೀಕ್ಷೆಯ (TET) ಪ್ರಮಾಣಪತ್ರವು ಇದೀಗ ಜೀವಿತಾ ಅವಧಿಯವರೆಗೆ ವಿಸ್ತರಣೆ ಮಾಡಿ ಕೇಂದ್ರ ಶಿಕ್ಷಣ ಇಲಾಖೆಯು ಆದೇಶವನ್ನು ಹೊರಡಿಸಿದೆ, ಎಂದು ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಕ್ರಿಯಾಲ್ ಅವರು ಟ್ವೀಟ ಮೂಲಕ ಮಾಹಿತಿಯನ್ನು ನೀಡಿದ್ದಾರೆ.

* ಈ TET ಪರೀಕ್ಷೆಯು ದೇಶದಲ್ಲಿನ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿಗೆ ಶಿಕ್ಷಕರಾಗಲು ಕನಿಷ್ಠ ಮಟ್ಟದ ಅಹರ್ತಾ ಪರೀಕ್ಷೆ ಇದಾಗಿದೆ.

* ಈ TET ನಿಯಮ 2011ರಿಂದ ಅನ್ವಯ ವಾಗಲಿದೆ, ಅಂದರೆ 2011ಕ್ಕೆ ಯಾರೆಲ್ಲ ಟಿಇಟಿ ಮಾನ್ಯತೆಯನ್ನು ಕಳೆದುಕೊಂಡಿದ್ದಾರೆ ಅಂಥವರಿಗೂ ಇನ್ನು ಮುಂದೆ ಶಿಕ್ಷಕ ಕೆಲಸಕ್ಕೆ ಅರ್ಹ (Eligible) ಆಗಿರುತ್ತಾರೆ ಎಂದು ಕೇಂದ್ರ ಶಿಕ್ಷಣ ಸಚಿವರು ಹೇಳಿದ್ದಾರೆ.

* ಎಲ್ಲಾರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಶಿಕ್ಷಣ ಇಲಾಖೆಯು ಸೂಚನೆ ನೀಡಿದೆ, ಮತ್ತು ಹೊಸದಾಗಿ TET ಮಾನ್ಯತೆಯ ಪ್ರಮಾಣಪತ್ರ ನೀಡಲು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದೆ.

## 2020 21ನೇ ಸಾಲಿನ ಸುಸ್ಥಿರ ಅಭಿವೃದ್ಧಿ ಸೂಚ್ಯಂಕ ಪ್ರಕಟ



* ನೀತಿ ಆಯೋಗವು 2020 21ನೇ ಸಾಲಿನ ಸುಸ್ಥಿರ ಅಭಿವೃದ್ಧಿ ಸೂಚ್ಯಂಕದ ವರದಿಯನ್ನು ಪ್ರಕಟಿಸಿದೆ, ಈ ಸೂಚ್ಯಂಕದಲ್ಲಿ ಕೇರಳ ರಾಜ್ಯವು ಅಗ್ರ ಸ್ಥಾನ ಪಡೆದಿದೆ.

* ಪ್ರಸ್ತುತ ನೀತಿ ಆಯೋಗದ ಉಪಾಧ್ಯಕ್ಷ ರಾಜೀವ್ ಕುಮಾರ್ ಅವರು ಭಾರತದ ಸುಸ್ಥಿರ ಅಭಿವೃದ್ಧಿ ಗುರಿಗಳು (sustainable development goals SDG) ಸೂಚ್ಯಂಕದ 3ನೇ ಆವೃತ್ತಿಯನ್ನು ಘೋಷಣೆ ಮಾಡಿದ್ದಾರೆ.

* ಈ ಸುಸ್ಥಿರ ಅಭಿವೃದ್ಧಿ ಸೂಚ್ಯಂಕ ಗುರಿಯನ್ನು 2018ರ ಡಿಸೆಂಬರ್ ತಿಂಗಳಿಂದ ಪ್ರಾರಂಭಿಸಲಾಗಿದೆ, ಈ ಸೂಚ್ಯಂಕದಿಂದ ದೇಶದಲ್ಲಿನ ಪ್ರಗತಿಯ ಮೂಲಕ ಮೌಲ್ಯಮಾಪನ ಮಾಡಲಾಗುತ್ತದೆ ಎಂದು ನೀತಿ ಆಯೋಗ ತಿಳಿಸಿದೆ.

* ದೇಶದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆ ಕೇರಳ ರಾಜ್ಯವು 75 ಅಂಕಗಳನ್ನು ಪಡೆದು ಪ್ರಥಮ ಸ್ಥಾನದಲ್ಲಿದೆ.

* ಹಿಮಾಚಲ ಪ್ರದೇಶ ಮತ್ತು ತಮಿಳುನಾಡು ರಾಜ್ಯಗಳು 74 ಅಂಕಗಳನ್ನು ಪಡೆದು 2ನೇ ಸ್ಥಾನವನ್ನು ಪಡೆದುಕೊಂಡಿವೆ.

* ಆಂಧ್ರ ಪ್ರದೇಶ, ಗೋವಾ, ಕರ್ನಾಟಕ ಮತ್ತು ಉತ್ತರಖಾಂಡ ರಾಜ್ಯಗಳು 72 ಅಂಕಗಳನ್ನು ಪಡೆದು 3ನೇ ಸ್ಥಾನವನ್ನು ಪಡೆದುಕೊಂಡಿವೆ.

* ಬಿಹಾರ, ಜಾರ್ಖಂಡ್ ಹಾಗೂ ಅಸ್ಸಾಂ ರಾಜ್ಯಗಳು ಅತಿ ಕಳಪೆ ಸ್ಥಾನ ಪಡೆದುಕೊಂಡಿವೆ.

* 2020 21ನೇ ಸಾಲಿನ ಸುಸ್ಥಿರ ಅಭಿವೃದ್ಧಿ ಸೂಚ್ಯಂಕದಲ್ಲಿ ಕೇಂದ್ರಾಡಳಿತ ಪ್ರದೇಶಗಳಲ್ಲಿ ಚಂಡೀಗಢ 79 ಅಂಕ ಪಡೆದು ಮೊದಲ ಸ್ಥಾನದಲ್ಲಿದೆ, ನಂತರ ದೆಹಲಿ 68 ಅಂಕ ಪಡೆದು 2ನೇ ಸ್ಥಾನದಲ್ಲಿದೆ.

### 2025ನೇ ವರ್ಷಕ್ಕೆ 90 ಕೋಟಿ ಇಂಟರ್‌ನೆಟ್ ಬಳಕೆದಾರರು



* ಭಾರತದಲ್ಲಿ 2025ರ ವೇಳೆಗೆ ಇಂಟರ್‌ನೆಟ್‌ನ ಸಕ್ರಿಯ ಬಳಕೆದಾರರ ಪ್ರಮಾಣ ಶೇ 45ರಷ್ಟು ಹೆಚ್ಚಳವಾಗಿ 90 ಕೋಟಿ ತಲುಪಲಿದೆ ಎಂದು ಐಎಎಂಎಐ ಕಾಂಟರ್ ಕ್ಯೂಬ್ ವರದಿ ತಿಳಿಸಿದೆ.

* 2025ನೇ ವರ್ಷಕ್ಕೆ ಹೋಲಿಸಿದರೆ ನಗರ ಪ್ರದೇಶಗಳಿಗಿಂತ ಅತೀ ಹೆಚ್ಚು ಇಂಟರ್‌ನೆಟ್ ಬಳಕೆದಾರರು ಗ್ರಾಮೀಣ ಪ್ರದೇಶಗಳಲ್ಲಿ ಇರಲಿದ್ದಾರೆ.

* ಭಾರತೀಯ ಅಂತರ್ಜಾಲ ಮತ್ತು ಮೊಬೈಲ್ ಸಂಘಟನೆಯು ನೀಡಿರುವ ವರದಿಯ ಪ್ರಕಾರ ದೇಶದಲ್ಲಿ ಡಿಜಿಟಲ್ ಮೂಲಸೌಕರ್ಯ ಬಲಪಡಿಸುವ ಅಗತ್ಯ ಮತ್ತು ದತ್ತಾಂಶಗಳುನ್ನು ಸೂಚಿಸಲಿವೆ ಎಂದು ತಿಳಿಸಿದೆ.

* ಇಂಟರ್‌ನೆಟ್ ಬಳಕೆದಾರರ ಬೆಳವಣಿಗೆಯು 2020ನೇ ವರ್ಷದ ಪ್ರಕಾರ ನಗರ ಪ್ರದೇಶದಲ್ಲಿ ಶೇ.4ರಷ್ಟು ಹಾಗೂ ಗ್ರಾಮೀಣ ಭಾಗಗಳಲ್ಲಿ ಶೇ.13ರಷ್ಟಿದೆ ಎಂದು ತಿಳಿದಿದೆ.

* ಪ್ರಸ್ತುತ ಶೇ.67ರಷ್ಟು ನಗರದ ಜನಸಂಖ್ಯೆಯ ಮತ್ತು ಶೇ.31ರಷ್ಟು ಗ್ರಾಮೀಣ ಭಾಗದ ಜನರು ಇಂಟರ್‌ನೆಟ್ ಬಳಸುತ್ತಿದ್ದಾರೆ ಎಂದು ಮಾಹಿತಿ ಬಂದಿದೆ.

## 05-06-2021

### ಕೇಂದ್ರ ಸರ್ಕಾರ ಭಾರತದಲ್ಲಿ 'ಸ್ಪುಟ್ನಿಕ್ ವಿ ಲಸಿಕೆ' ಉತ್ಪಾದನೆಗೆ ಹಸಿರು ನಿಶಾನೆ




* ಪ್ರಸ್ತುತ ಕೇಂದ್ರ ಸರ್ಕಾರವು ಸ್ಪುಟ್ನಿಕ್ ವಿ ಲಸಿಕೆ ಉತ್ಪಾದಿಸಲು ಮಹಾರಾಷ್ಟ್ರ ರಾಜ್ಯದ ಪುಣೆಯಲ್ಲಿರುವ ಸಿರಂ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾಗೆ ಒಪ್ಪಿಗೆಯನ್ನು ನೀಡಿದೆ.

* ಪ್ರಸ್ತುತ ಸಿರಂ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಕೋವಿಶೀಲ್ಡ್ ಲಸಿಕೆಯನ್ನು ಉತ್ಪಾದಿಸುತ್ತಿದೆ, ಇದೀಗ ಸ್ಪುಟ್ನಿಕ್ ವಿ ಲಸಿಕೆಯನ್ನು ಕೂಡ ಉತ್ಪಾದಣೆ ಮಾಡಲು ಸಿದ್ಧವಾಗಿದೆ ಎಂದು ತಿಳಿದು ಬಂದಿದೆ.

* ಸಿರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಸಂಸ್ಥೆಯು ರಷ್ಯಾದ ದೇಶದ ಕೋವಿಡ್ 19 ಲಸಿಕೆಯಾಗಿರುವ ಸ್ಪುಟ್ನಿಕ್ ವಿ ಲಸಿಕೆ ತಯಾರಿಸಲು ಭಾರತೀಯ ಔಷಧ ನಿಯಂತ್ರಣ ಮಹಾ ನಿರ್ದೇಶನಾಲಯಕ್ಕೆ ಅರ್ಜಿ ಸಲ್ಲಿಸಿತ್ತು, ಇದೀಗ ಈ ಅರ್ಜಿಗೆ ಹಸಿರು ನಿಶಾನೆಯನ್ನು ತೋರಿದೆ ಎನ್ನಲಾಗಿದೆ.

### ಭಾರತ ಹಾಕಿ ತಂಡದ ಮಾಜಿ ಆಟಗಾರ ಉಸ್ಮಾನ್ ಖಾನ್ ವಿಧಿವಶ



* ಭಾರತ ಹಾಕಿ ತಂಡದ ಮಾಜಿ ಆಟಗಾರ ಉಸ್ಮಾನ್ ಖಾನ್ ಅವರು ತಮ್ಮ 76ನೇ ವಯಸ್ಸಿನಲ್ಲಿ ಅನಾರೋಗ್ಯದ ಕಾರಣದಿಂದಾಗಿ ಆಂಧ್ರ ಪ್ರದೇಶದ ಮದನಪಲ್ಲಿಯಲ್ಲಿ ವಿಧಿವಶರಾಗಿದ್ದಾರೆ.

* ಪ್ರಸ್ತುತ ಹಾಕಿ ಇಂಡಿಯಾ ಅಧ್ಯಕ್ಷರಾಗಿರುವ ಗ್ಯಾನೆಂದ್ರೊ ನಿಂಗೊಂಬಮ್ ಅವರು ಹಾಕಿ ತಂಡದ ಮಾಜಿ ಆಟಗಾರ ಉಸ್ಮಾನ್ ಖಾನ್ ಅವರು ನಿಧನಕ್ಕೆ ಸಂತಾಪವನ್ನು ಸೂಚಿಸಿದ್ದಾರೆ.

* ಉಸ್ಮಾನ್ ಖಾನ್ ಅವರು ಚೆನ್ನೈನಲ್ಲಿ ಕಸ್ಟಮ್ಸ್ ಆಯುಕ್ತರಾಗಿದ್ದರು, ಮತ್ತೆ ಅಲ್ಲಿಂದ ಕೋಲ್ಕತ್ತಕ್ಕೆ ತೆರಳಿ ಅದೇ ಕಸ್ಟಮ್ಸ್ ತಂಡವನ್ನು ಪ್ರತಿನಿಧಿಸಿದ್ದರು.

* ಪ್ರಸ್ತುತ ಉಸ್ಮಾನ್ ಖಾನ್ ಅವರು ರಾಷ್ಟ್ರೀಯ ಚಾಂಪಿಯನ್‌ಷಿಪ್ ಗಳಲ್ಲಿ ಬಂಗಾಳ ತಂಡದ ಪರ ಹಲವು ವರ್ಷಗಳ ವರೆಗೆ ಆಟವಾಡಿದ್ದರು.

## ದೇಶಿಯ ಜಲಂತರ್ಗಾಮಿಗಳನ್ನು ನಿರ್ಮಿಸಲು ನೌಕಾಪಡೆಗೆ ರಕ್ಷಣಾ ಇಲಾಖೆ ಒಪ್ಪಿಗೆ



* ಕೇಂದ್ರ ರಕ್ಷಣಾ ಇಲಾಖೆ ದೇಶೀಯವಾಗಿ 6 ಅತ್ಯಾಧುನಿಕ ಜಲಂತರ್ಗಾಮಿಗಳನ್ನು ನಿರ್ಮಿಸಲು ಭಾರತೀಯ ನೌಕಾಪಡೆಗೆ 43,000 ಕೋಟಿ ರೂ. ಬಿಡುಗಡೆ ಮಾಡಲು ಒಪ್ಪಿಗೆ ನೀಡಿದೆ.

* ಪ್ರಸ್ತುತ ಚೀನಾ ರಾಷ್ಟ್ರವು ತನ್ನ ನೌಕಾ ಬಲವನ್ನು ಕ್ರಮೇಣ ಹೆಚ್ಚಿಸುತ್ತಿರುವ ಹಿನ್ನಲೆಯಿಂದಾಗಿ, ಭಾರತೀಯ ಕೇಂದ್ರ ರಕ್ಷಣಾ ಸ್ವಾದೀನ ಸಮಿತಿಯು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ನೇತೃತ್ವದಲ್ಲಿ ಸಭೆಯನ್ನು ನಡೆಸಿತು ಆ ಸಭೆಯಲ್ಲಿ ಸಬ್ಮರಿನ್ ತಯಾರಿಸಲು ತೀರ್ಮಾನ ತೆಗೆದುಕೊಂಡಿದೆ.

* ಕೇಂದ್ರ ರಕ್ಷಣಾ ಇಲಾಖೆಯ ಈ ತೀರ್ಮಾನವು ನೌಕಾಪಡೆಯ ಬೃಹತ್ ಯೋಜನೆಯಾಗಿದೆ ಅತ್ಯಂತ ದಕ್ಷವಾದ ಮತ್ತು ಉತ್ತಮ ಕ್ಷೇಮತೆಯನ್ನು ಹೊಂದಿರುವ ಸಬ್ ಮರಿನ್'ಗಳನ್ನೂ ದೇಶಿಯವಾಗಿ ನಿರ್ಮಾಣ ಮಾಡಲಾಗುತ್ತದೆ ಇದರ ಜೊತೆಯಲ್ಲಿ ಭಾರತೀಯ ನೌಕಾಪಡೆಯ ಸಲಕರಣೆಗಳಿಗೆ ವಿದೇಶಗಳ ಮೇಲೆ ಅವಲಂಬವಾಗುವುದನ್ನು ತಪ್ಪಿಸಲಿದೆ ಎಂದು ತಿಳಿದು ಬಂದಿದೆ.

* ಮೇಕ್ ಇನ್ ಇಂಡಿಯಾ ಅಡಿಯಲ್ಲಿ ದೇಶೀಯವಾಗಿ 6 ಅತ್ಯಾಧುನಿಕ ಜಲಂತರ್ಗಾಮಿಗಳನ್ನು ನಿರ್ಮಿಸುವ ಯೋಜನೆಗೆ ಪಿ 75 ಎಂದು ಹೆಸರಿಸಲಾಗಿದೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ತಿಳಿಸಿದ್ದಾರೆ.

* ಪ್ರಸ್ತುತ ಜಲಂತರ್ಗಾಮಿಗಳ ನಿರ್ಮಾಣದ ಜೊತೆಯಲ್ಲಿ 6,800 ಕೋಟಿ ರೂ. ಮೌಲ್ಯದ ಮಿಲಟರಿ ಶಸ್ತ್ರಾಸ್ತ್ರಗಳು ಮತ್ತು ಸಲಕರಣೆಗಳ ಸ್ವಾದೀನ ಪ್ರಸ್ತಾವನೆಗೆ ಕೇಂದ್ರ ರಕ್ಷಣಾ ಇಲಾಖೆ ಅನುಮೋದನೆ ನೀಡಿದೆ.

## KSRTC ಟ್ರೇಡ್ ಮಾರ್ಕ್ ಬಳಕೆಗೆ ಕರ್ನಾಟಕ ಸ್ವತಂತ್ರ, ಸಚಿವ ಲಕ್ಷ್ಮಣ ಸವದಿ



* KSRTC ಟ್ರೇಡ್ ಮಾರ್ಕ್ (ಹೆಸರು) ಬಳಕೆಗೆ ಕರ್ನಾಟಕ ರಾಜ್ಯವು ಸ್ವತಂತ್ರವಾಗಿದೆ ಎಂದು ಡಿಸಿಎಂ ಮತ್ತು ಸಾರಿಗೆ ಸಚಿವರಾಗಿರುವ ಲಕ್ಷ್ಮಣ ಸವದಿ ಅವರು ತಿಳಿಸಿದ್ದಾರೆ, ಜೊತೆಗೆ ಕರ್ನಾಟಕ ರಾಜ್ಯ ಈ ಹೆಸರು ಬಳಸಲು ಕೇರಳ ಸರ್ಕಾರದ ಅನುಮತಿ ಬೇಕಿಲ್ಲ ಎಂದಿದ್ದಾರೆ, ಒಂದು ವೇಳೆ ಅಗತ್ಯ ಬಿದ್ದರೆ ನ್ಯಾಯಾಲಯದಲ್ಲಿ ಕಾನೂನಾತ್ಮಕ ಹೋರಾಟಗಳನ್ನು ನಡೆಸಲು ಕರ್ನಾಟಕ ರಾಜ್ಯವು ಸಿದ್ಧವಾಗಿದೆ ಎಂದು ಅವರು ತಿಳಿಸಿದ್ದಾರೆ.

* ಇತ್ತೀಚಿಗೆ ಸುದ್ದಿಯಾಗಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಇನ್ನು ಮುಂದಿನ ದಿನಗಳಲ್ಲಿ ಕೆಎಸ್‌ಆರ್‌ಟಿಸಿ ಎಂದು ಹೆಸರನ್ನು ಬಳಸಲು ಅನುಮತಿ ಇಲ್ಲವೆಂದು ಕೇಂದ್ರದ ಟ್ರೇಡ್ ಮಾರ್ಕ್ ರಿಜಿಸ್ಟರಿ ತನ್ನ ಅಂತಿಮ ತೀರ್ಪನ್ನು ಪ್ರಕಟಿಸಿದೆ ಎಂದು ಸುದ್ದಿಯಾಗಿತ್ತು.

* ಪ್ರಸ್ತುತ ಮಾಧ್ಯಮಗಳು ವರದಿ ಮಾಡಿರುವ ಈ ವಿಷಯವನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಿದ್ದಾರೆ, ಇದು ವಾಸ್ತವಕ್ಕೆ ದೂರವಾಗಿರುವ ವಿಷಯವಾಗಿದೆ ಎಂದು ದೃಢಪಟ್ಟಿದೆ, ಪ್ರಸ್ತುತ ಕೇರಳ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು KSRTC ಗೆ ನೀಡಲಾದ ಟ್ರೇಡ್ ಮಾರ್ಕ್ ಪ್ರಮಾಣಪತ್ರದ ವಿರುದ್ಧ ಬೌದ್ಧಿಕ ಆಸ್ತಿ ಮೇಲ್ಮನವಿ ಮಂಡಳಿಯ ಮುಂದೆ ಸಲ್ಲಿಸಿದ ಮೇಲ್ಮನವಿಗಳಲ್ಲಿ ಯಾವುದೇ ಅಂತಿಮ ಆದೇಶಗಳನ್ನು ಹೊರಡಿಸಲಾಗಿಲ್ಲ ಎಂದು ತಿಳಿದು ಬಂದಿದೆ ಎಂದು ರಾಜ್ಯ ಸಾರಿಗೆ ಸಚಿವ ಲಕ್ಷ್ಮಣ ಸವದಿ ಅವರು ಹೇಳಿದ್ದಾರೆ.

* ಪ್ರಸ್ತುತ ಕರ್ನಾಟಕದಲ್ಲಿ ಕೆಎಸ್‌ಆರ್‌ಟಿಸಿಯ ಟ್ರೇಡ್ ಮಾರ್ಕ್ ನೋಂದಣಿಯು ಪ್ರಕ್ರಿಯೆಯು ಜಾರಿಯಲ್ಲಿದೆ ಮತ್ತು ಕೆಎಸ್‌ಆರ್‌ಟಿಸಿಯು ತನಗೆ ನೀಡಲಾಗಿರುವ ಟ್ರೇಡ್‌ಮಾರ್ಕ್‌ಗಳನ್ನು ಬಳಸಲಾಗುವುದಿಲ್ಲ ಎಂಬ ವರದಿಗಳನ್ನು ಕಾನೂನಾತ್ಮಕವಾಗಿ ಒಪ್ಪಲಾಗುವದಿಲ್ಲ ಎಂದು ತಿಳಿಸಿದ್ದಾರೆ, ಒಂದು ಪಕ್ಷ ಈ ತರಹದ ತೀರ್ಪಿನ ನೋಟಿಸ್ ನೀಡಿದರೆ ಸಂಸ್ಥೆಯಿಂದ ಸೂಕ್ತವಾದ ಉತ್ತರವನ್ನು ನೀಡುತ್ತೇವೆ ರಾಜ್ಯ ಸಾರಿಗೆ ಸಚಿವ ಲಕ್ಷ್ಮಣ ಸವದಿ ಅವರು ತಿಳಿಸಿದ್ದಾರೆ.

## ಅಮೇರಿಕ ಮಾಜಿ ಅಧ್ಯಕ್ಷ ಟ್ರಂಪ್ ಫೇಸ್‌ಬುಕ್ ಖಾತೆ 2 ವರ್ಷ ಅಮಾನತು



* ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈ ಹಿಂದೆ ಜನವರಿ 6ರ ಕ್ಯಾಪಿಟಲ್ ಭವನದ ಮೇಲಿನ ದಾಳಿ ಮತ್ತು ಹಿಂಸಾಚಾರಕ್ಕೆ ಪ್ರಚೋದನೆ ನೀಡಿದ ಕಾರಣದಿಂದಾಗಿ ಇವರ ಫೇಸ್ಬುಕ್ ಖಾತೆಯನ್ನು 2 ವರ್ಷಗಳ ಕಾಲ ಅಮಾನತು ಮಾಡಲಾಗುವದು ಎಂದು ಫೇಸ್‌ಬುಕ್ ತಿಳಿಸಿದೆ.

* ಫೇಸ್‌ಬುಕ್‌ನ ಜಾಗತಿಕ ವ್ಯವಹಾರಗಳ ಉಪಾಧ್ಯಕ್ಷ ನಿಕ್ ಕ್ಲೆಗ್ ಬ್ಲಾಗ್ ಅವರು ನೀಡಿರುವ ಮಾಹಿತಿಯ ಪ್ರಕಾರ ಈ ಅಮಾನತು ಅವಧಿ ಕೊನೆಗೊಂಡ ನಂತರ ಇವರಿಂದ ಸಾರ್ವಜನಿಕ ಸುರಕ್ಷತೆಗೆ ಅಪಾಯವು ಕಡಿಮೆಯಾಗಿದೆಯೇ ಎಂದು ತಜ್ಞರು ಪರಿಶೀಲಿಸುತ್ತಾರೆ, ಮತ್ತು ಇನ್ನಿತರ ಬಾಹ್ಯ ಅಂಶಗಳನ್ನು ಮೌಲ್ಯಮಾಪನ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

* ಅಮೇರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಫೇಸ್‌ಬುಕ್ ಖಾತೆಯ 2ವರ್ಷಗಳ ಅಮಾನತು ನಿರ್ಣಯ ಜನವರಿ 7ರಿಂದ ಜಾರಿಯಲ್ಲಿದೆ ಎಂದು ತಿಳಿಸಿದ್ದಾರೆ.

* ಪ್ರಸ್ತುತ ಟ್ರಂಪ್ ಅವರ ಅಮಾನತಾದ ಖಾತೆಯು ಈ ಹಿಂದಿನ ಪೋಸ್ಟ್ ಗಳನ್ನು ಇತರರು ಓದಬಹುದು ಹಾಗೂ ಕಾಮೆಂಟ್ ಮಾಡಬಹುದು, ಆದರೆ ಯಾವುದೇ ಹೊಸ ಪೋಸ್ಟ್‌ಗಳನ್ನು ಮಾಡಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದ್ದಾರೆ.

* ಟ್ವಿಟರ್ ಸಂಸ್ಥೆಯು ಅಮೇರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಟ್ವಿಟರ್ ಖಾತೆಯನ್ನು ಶಾಶ್ವತವಾಗಿ ನಿಷೇಧಿಸಿದೆ.

## ಚೀನಾ ವಿಜ್ಞಾನಿಗಳ ಹೊಸ ದಾಖಲೆ ಕೃತಕ ಸೂರ್ಯ ಪ್ರಯೋಗ



* ಪ್ರಸ್ತುತ ಚೀನಾ ವಿಜ್ಞಾನಿಗಳು ಕೃತಕ ಸೂರ್ಯನನ್ನು ಸೃಷ್ಟಿಸಲು ಹಲವು ದಶಕಗಳಿಂದ ಪ್ರಯೋಗವನ್ನು ನಡೆಸುತಿದ್ದರು ಇದೀಗ ಆ ಪ್ರಯೋಗದಲ್ಲಿ ಆಶಾಕಿರಣವೊಂದು ಕಂಡುಕೊಂಡಿದ್ದಾರೆ, ಅದು ಕೃತಕ ಸೂರ್ಯನ ಸೃಷ್ಟಿಗೆ ಎಕ್ಸ್ ಪೆರಿಮೆಂಟಲ್ ಅಡ್ವಾನ್ಸ್‌ಡ್ ಸೂಪರ್ ಕಂಡಕ್ಟಿಂಗ್ ಟೋಕಮ್ಯಾಕ್ ಎಂಬ ಪ್ರಯೋಗವನ್ನು ಚೀನಾ ವಿಜ್ಞಾನಿಗಳು ಕೈಗೊಂಡಿದ್ದಾರೆ.

* ಚೀನಾ ದೇಶದ ವಿಜ್ಞಾನಿಗಳು ಪರಮಾಣು ಸಮ್ಮಿಲನ ಪ್ರಯೋಗ ನಡೆಸುತ್ತಿದ್ದಾರೆ, ಈ ಪ್ರಯೋಗದಲ್ಲಿ ಬಳಸಿರುವ ಪ್ಲಾಸ್ಮಾ 101 ಸೆಕೆಂಡ್‌ಗಳ ಕಾಲ ಉರಿದು 120 ಮಿಲಿಯನ್ ಡಿಗ್ರಿ ಸೆಲ್ಸಿಯಸ್‌ನಷ್ಟು ಶಾಖವನ್ನು ಉತ್ಪಾದಿಸಿದೆ, ಮತ್ತೆ ತದನಂತರ ಪ್ಲಾಸ್ಮಾ 20 ಸೆಕೆಂಡ್ ಹೆಚ್ಚುವರಿಯಾಗಿ ಉರಿದಿದೆ ಇದರಿಂದ ಸೂರ್ಯನಿಗಿಂತ 10 ಪಟ್ಟು ಶಾಖ ಅಂದರೆ ಸರಿ ಸುಮಾರು 160 ಮಿಲಿಯನ್ ಡಿಗ್ರಿ ಸೆಲ್ಸಿಯಸ್‌ನಷ್ಟು ಶಾಖ ಉತ್ಪಾದಣೆ ಮಾಡಿದೆ.

* ಈ ಹಿಂದೆ ಕೃತಕ ಸೂರ್ಯನನ್ನು ಸೃಷ್ಟಿಸಲು 2017ರಲ್ಲಿ ದೊಡ್ಡ ಮಟ್ಟದಲ್ಲಿ ಪ್ಲಾಸ್ಮಾವನ್ನು ಉರಿಸಲಾಗಿತ್ತು ಆದರೆ ಆ ಸಮಯದಲ್ಲಿ ಪ್ಲಾಸ್ಮಾ ಕೇವಲ 50 ಡಿಗ್ರಿ ಸೆಲ್ಸಿಯಸ್‌ನಷ್ಟು ಶಾಖವನ್ನು ಉತ್ಪಾದಣೆ ಮಾಡಿತ್ತು, ಇದರ ನಂತರ ವಿಜ್ಞಾನಿಗಳು 2018ರಲ್ಲಿ 101 ಡಿಗ್ರಿ ಸೆಲ್ಸಿಯಸ್ ನಷ್ಟು ಶಾಖ ಉತ್ಪಾದಿಣೆ ಮಾಡುವಲ್ಲಿ ಯಶಸ್ವಿಯಾಗಿದ್ದರು, ಆದರೆ ಇದೇ ಮೊದಲ ಬಾರಿಗೆ 101 ಸೆಕೆಂಡ್‌ಗಳತನಕ ಪ್ಲಾಸ್ಮಾ ನಿಧಾನಗತಿಯಲ್ಲಿ ಉರಿಯಿತು ಅಲ್ಲದೆ ಸೂರ್ಯನಿಗಿಂತ 10 ಪಟ್ಟು ಹೆಚ್ಚು ಶಾಖವನ್ನು ಉತ್ಪಾದಣೆ ಮಾಡಿತು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

* ಈ ಕೃತಕ ಸೂರ್ಯನ ಪ್ರಯೋಗದಿಂದ ಚೀನಾ ವಿಜ್ಞಾನಿಗಳು ಸೀಮಿತವಾದ ಪರಮಾಣು ತ್ಯಾಜ್ಯಗಳನ್ನು ಬಳಸಿ ಸೂರ್ಯನಿಂದ ಹೆಚ್ಚು ಬೆಳಕು, ಶಾಖವನ್ನು ದೀರ್ಘಕಾಲ ಪಡೆಯುವಂತೆ ಮಾಡುವ ವಿಧಾನ ಆವಿಷ್ಕರಿಸಲು ಮುಂದಾಗಿದ್ದಾರೆ, ಪ್ರಸ್ತುತ ಈ ಪ್ರಯೋಗವನ್ನು ಸದರ್ನ್ ಯೂನಿವರ್ಸಿಟಿ ಆಫ್ ಸೈನ್ಸ್ ಆಯಂಡ್ ಟೆಕ್ನಾಲಜಿಯ ತಜ್ಞರು ನಡೆಸುತ್ತಿದ್ದಾರೆ.

# 07-06-2021

## ವಿಶ್ವದಾಖಲೆ ಮಹಿಳೆಯರ 10,000 ಮೀ. ಓಟ




* ಮಹಿಳೆಯರ 10,000 ಮೀ. ಓಟವನ್ನು ನೆದರ್ಲೆಂಡ್ಸ್‌ನ ಓಟಗಾರ್ತಿ ಸಿಫಾನ್ ಹಸನ್ ಅವರು ಓಡಿ ವಿಶ್ವದಾಖಲೆ ಬರೆದಿದ್ದಾರೆ, ಹಾಗು ಇದನ್ನು ಸಿಫಾನ್ ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಮುರಿದಿದ್ದಾರೆ.

* 28 ವರ್ಷ ವಯಸ್ಸಿನ ಸಿಫಾನ್ ಹಸನ್ ಅವರು 10,000 ಮೀ. ನಿಗದಿತ ದೂರವನ್ನು ಕೇವಲ 29 ನಿಮಿಷ 06.82 ಸೆಕೆಂಡುಗಳಲ್ಲಿ ಕ್ರಮಿಸಿ ದಾಖಲೆಯನ್ನು ಬರೆದಿದ್ದಾರೆ, ಪ್ರಸ್ತುತ ಇವರು 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಇಥಿಯೋಪಿಯಾದ ಅಲಮಾರ್ಡ್ ಅಯಾನಾ ಅವರು ದಾಖಲೆಯನ್ನು (29ನಿ.17.45ಸೆ.) ಮುರಿದಿದ್ದಾರೆ.

## ನಾಸಾ(NASA)ದಿಂದ ಶುಕ್ರ ಗ್ರಹದ ಅಧ್ಯಯನಕ್ಕೆ ಎರಡು ಯೋಜನೆ ಅನುಮೋದನೆ



* ಪ್ರಸ್ತುತ 2028 ರಿಂದ 2030ರೊಳಗಾಗಿ ಅಮೆರಿಕ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (NASA)ಯು ಶುಕ್ರ ಗ್ರಹದ ಅಧ್ಯಯನಕ್ಕಾಗಿ ಎರಡು ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗುತ್ತದೆ ಎಂದು ಘೋಷಣೆ ಮಾಡಿದೆ.

* ಪ್ರಸ್ತುತ ಮೊದಲನೇ ಅನುಷ್ಠಾನ ಯೋಜನೆಯಾಗಿರುವ ಡಾವಿನ್ಸಿ (ಡೀಪ್ ಅಟ್ಮಾಸ್ಫಿಯರ್ ಆಫ್ ವೀನಸ್ ಇನ್ವೆಸ್ಟಿಗೇಷನ್ ಆಫ್ ನೋಬಲ್ ಗ್ಯಾಸಸ್) ಇದು ಬುಧಗ್ರಹದತ್ತ ತೆರಳಿ ಆ ಶುಕ್ರ ಗ್ರಹದಲ್ಲಿನ ರಾಸಾಯನಿಕಗಳ ಮಾಹಿತಿಯನ್ನು ಸಂಗ್ರಹಿಸಿ ಭೂಮಿಗೆ ಕಳಿಹಿಸಲಿದೆ ಎಂದು ತಿಳಿಸಿದೆ.

* ಪ್ರಸ್ತುತ 1990ರ ನಂತರ ದಿನಗಳಿಂದ ಶುಕ್ರ ಗ್ರಹದ ಅಧ್ಯಯನ ಮಾಡಲಾಗಿಲ್ಲ ಎಂದು ತಿಳಿದು ಬಂದಿದೆ.

* ಪ್ರಸ್ತುತ ಈ ಶುಕ್ರ ಗ್ರಹದ ವಾತಾವರಣ ಭಾರೀ ಭಯಂಕರವಾಗಿದೆ ಮತ್ತು ಉಷ್ಣಾಂಶ ಸೀಸವನ್ನೂ ಕರಗಿಸುವಷ್ಟು ಇದೇ, ಇದರ ಜೊತೆಗೆ ಅಲ್ಲಿನ ವಾತಾವರಣವು ಗಂಧಕಾಮ್ಲದಿಂದ ಕೊಡಿಕೊಂಡಿದೆ, ಪ್ರಸ್ತುತ ಅಲ್ಲಿನ ಉಷ್ಣಾಂಶವು 325 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚಿದೆ, ಕೆಲವೊಮ್ಮೆ ಇಲ್ಲಿನ ಗರಿಷ್ಠ ತಾಪಮಾನ 470 ಡಿಗ್ರಿ ಸೆಲ್ಸಿಯಸ್‌ನಿಂದ 900 ಡಿಗ್ರಿ ಸೆಲ್ಸಿಯಸ್‌ವರೆಗೆ ಏರಿಕೆಯಾಗುತ್ತದೆ, ಹಾಗೂ ಅಲ್ಲಿಯ ಗಾಳಿಯಲ್ಲಿ ಸುಮಾರು ಶೇ. 96ರಷ್ಟು ಭಾಗ ಇಂಗಾಲದಿಂದ ಕೂಡಿದೆ ಎಂದು ತಿಳಿಸಿದ್ದಾರೆ, ಮತ್ತು ಈ ಗ್ರಹದ ಅಧ್ಯಯನ ಕುತೂಹಲಕಾರಿಯಾಗಿದೆ ಎಂದು ನಾಸಾ ವಿಜ್ಞಾನಿಗಳು ತಿಳಿಸಿದ್ದಾರೆ.

## ಲಕ್ಷದ್ವೀಪ ಆಡಳಿತದ ಹೊಸ ಆದೇಶ, ಮೀನುಗಾರಿಕೆ ಬೋಟ್'ಗಳಲ್ಲಿ ಅಧಿಕಾರಿಗಳ ನಿಯೋಜನೆ



* ಇತ್ತೀಚಿಗೆ ಲಕ್ಷದ್ವೀಪದಲ್ಲಿನ ಆಡಳಿತ ಭಾರಿ ವಿರೋಧದ ನಡುವೆಯೂ ಹೊಸ ನಿರ್ಧಾರಗಳನ್ನು ಹಮ್ಮಿಕೊಳ್ಳುತ್ತಿದ್ದು, ಅದುವೇ ಮೀನುಗಾರಿಕೆ ಬೋಟ್'ಗಳಲ್ಲಿ ಅಧಿಕಾರಿಗಳನ್ನು ನಿಯೋಜನೆ ಮಾಡುವ ಹೊಸ ಕಾನೂನುಗಳನ್ನು ಜಾರಿಗೆತರಲು ಮುಂದಾಗುತಿದೆ.

* ಪ್ರಸ್ತುತ ಲಕ್ಷ ದ್ವೀಪದಲ್ಲಿನ ಸ್ಥಳೀಯರು ಇದಕ್ಕೆ ಅತಿಯಾದ ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ.

* ಪ್ರಸ್ತುತ ಮೀನುಗಾರಿಕೆ ಬೋಟ್'ಗಳಲ್ಲಿ ಜವಾಬ್ದಾರಿಯುತ ಸರ್ಕಾರಿ ನೌಕರರನ್ನು ನೇಮಕ ಮಾಡುವ ಹೊಸ ಕಾನೂನು ಮತ್ತು ಕೆಲ ಕಠಿಣ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತಿದ್ದು, ಈ ನಿರ್ಧಾರಗಳಿಂದ ಗುಪ್ತಚರ ಮಾಹಿತಿ ಸಂಗ್ರಹ ಮತ್ತು ಭದ್ರತಾ ಮೇಲ್ವಿಚಾರಣೆಗೆ ಸಹಕಾರಿಯಾಗುವ ನಿಟ್ಟಿನಲ್ಲಿ ಹೊಸ ಆದೇಶ ಜಾರಿಗೆ ತರಲಾಗುತ್ತಿದ್ದು ಎಂದು ತಿಳಿಸಲಾಗಿದೆ.

* ಲಕ್ಷದ್ವೀಪದ ಆಡಳಿತವು ಜೂ.04ರಂದು, ಸ್ವಚ್ಛತೆ ಹಾಗೂ ಶುಚಿತ್ವಕ್ಕೆ ಸಂಬಂಧಿಸಿದ ಮಹತ್ವದ ನಿರ್ಧಾರಗಳನ್ನು ತೆಗೆದುಕೊಂಡಿದೆ, ಮತ್ತು ಅಲ್ಲಿನ ತೆಂಗಿನ ಚಿಪ್ಪು, ಮರದ ಎಲೆ, ಎಳನೀರಿನ ಚಿಪ್ಪುಗಳನ್ನು ಸಾರ್ವಜನಿಕ ವಲಯಗಳಿಂದ ಹೊರ ತೆಗೆದು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಹೆಚ್ಚಿನ ಒತ್ತು ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

* ಸ್ಥಳೀಯ ಭದ್ರತೆ ಕಾಪಾಡಲು ಜೊತೆಗೆ ಬಿಗಿಗೊಳಿಸಲು ಸ್ಥಳೀಯ ಮೀನುಗಾರಿಕೆ ಬೋಟ್ ಮತ್ತು ಸಿಬ್ಬಂದಿಗಳ ಮೇಲೆ ಭದ್ರತಾ ದೃಷ್ಟಿಯಿಂದ ನಿಗಾವಹಿಸುವದು ಮತ್ತು ದ್ವೀಪಕ್ಕೆ ಭೇಟಿ ನೀಡುವ ಪ್ರಯಾಣಿಕರ ಮೇಲೆ ನಿಗಾವಹಿಸಲು ಈ ಹೊಸ ಆದೇಶವನ್ನು ಹೊರಡಿಸಲಾಗಿದೆ ಎಂದು ತಿಳಿಸಿದ್ದಾರೆ.

## ಕೇಂದ್ರ ಸರ್ಕಾರದಿಂದ 2020ರ 'ಈಸಿ ಆಫ್ ಲಿವಿಂಗ್ ಇಂಡೆಕ್ಸ್' ಬಿಡುಗಡೆ



* ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು 111 ನಗರಗಳ ಪಟ್ಟಿಯ "ಈಸ್ ಆಫ್ ಲಿವಿಂಗ್ ಇಂಡೆಕ್ಸ್ 2020 (Ease of Living Index 2020)"ನ್ನು ಬಿಡುಗಡೆ ಮಾಡಿದೆ, ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವರಾಗಿರುವ ಹರ್ದೀಪ್ ಸಿಂಗ್ ಪುರಿ ಅವರು ಇದನ್ನು ಇತ್ತೀಚಿಗೆ ಬಿಡುಗಡೆ ಮಾಡಿದರು.

* ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ 'ಈಸಿ ಆಫ್ ಲಿವಿಂಗ್ ಇಂಡೆಕ್ಸ್'ನಲ್ಲಿ (Ease of Living Index 2020) ರ ಈ ಪಟ್ಟಿಯಲ್ಲಿ ಸಿಲಿಕಾನ್ ಸಿಟಿ ಎಂದೇ ಪ್ರಖ್ಯಾತಿ ಪಡೆದಿರುವ ಬೆಂಗಳೂರು ನಗರವು ಅಗ್ರಸ್ಥಾನ ಪಡೆದಿದೆ.

* ಪ್ರಸ್ತುತ ಭಾರತ ದೇಶದಲ್ಲಿ ಜೀವನ ನಡೆಸಲು ಕರ್ನಾಟಕದ ರಾಜ್ಯದ ರಾಜಧಾನಿ ಬೆಂಗಳೂರು ಉತ್ತಮವಾಗಿದೆ ಎಂದು ತಿಳಿಸಿದೆ, ಪ್ರಸ್ತುತ 1ಮಿಲಿಯನ್‌ಗಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳಲ್ಲಿ ವಾಸಿಸಲು ದೇಶದ ಅತ್ಯುತ್ತಮ ನಗರವಾಗಿ ಬೆಂಗಳೂರು ಹೊರಹೊಮ್ಮಿದೆ.

* ಬೆಂಗಳೂರು ಪ್ರಥಮ ಸ್ಥಾನ, ಪುಣೆಗೆ 2ನೇ ಸ್ಥಾನ, ಅಹಮದಾಬಾದ್ 3ನೇ ಸ್ಥಾನ, ಚೆನ್ನೈ 4ನೇ ಸ್ಥಾನ, ಹಾಗೂ ರಾಷ್ಟ್ರ ರಾಜಧಾನಿ ದೆಹಲಿಗೆ 13ನೇ ಸ್ಥಾನ ಪಡೆದಿದೆ.

* ಅಲ್ಲದೆ 10 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ವಾಸಿಸುತ್ತಿರುವ ನಗರಗಳಲ್ಲಿ ಶಿಮ್ಲಾ ಅಗ್ರಸ್ಥಾನದಲ್ಲಿದೆ, ಆದರೆ ಕರ್ನಾಟಕದ ರಾಜ್ಯದ ದಾವಣಗೆರೆ ನಗರವು 9ನೇ ಸ್ಥಾನ ಪಡೆದಿದೆ.

## ಅಂತರಾಷ್ಟ್ರೀಯ ಸ್ಯಾಕ್ಸೋಫೋನ್ ವಾದಕ "ಮಚ್ಚೇಂದ್ರನಾಥ್ ಜೋಗಿ" ವಿಧಿವಶ



* ಅಂತರಾಷ್ಟ್ರೀಯ ಖ್ಯಾತ ಸ್ಯಾಕ್ಸೋಫೋನ್ ವಾದಕರಾಗಿದ್ದ 'ಮಚ್ಚೇಂದ್ರನಾಥ್ ಜೋಗಿ' ಅವರು ಕೋವಿಡ್ 19 ಸಾಂಕ್ರಾಮಿಕ ರೋಗದಿಂದ ನಿಧನರಾಗಿದ್ದಾರೆ.

* ಪ್ರಸ್ತುತ 'ಮಚ್ಚೇಂದ್ರನಾಥ್ ಜೋಗಿ' ಅವರಿಗೆ ಆರ್ಯಭಟ ಪ್ರಶಸ್ತಿ, ಸಮಾಜ ರತ್ನ ಪ್ರಶಸ್ತಿ, ದೇವರ ದಾಸಿಮಯ್ಯ ರಾಷ್ಟ್ರೀಯ ರತ್ನ ಪ್ರಶಸ್ತಿ, ಹೀಗೆ ಹಲವಾರು ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ.

* 'ಮಚ್ಚೇಂದ್ರನಾಥ್ ಜೋಗಿ' ಅವರು ಸುಮಾರು 34 ವರ್ಷಗಳಿಂದ ಮಂಗಳೂರಿನ ಮಂಗಳಾದೇವಿ ದೇವಸ್ಥಾನದಲ್ಲಿ ಸ್ಯಾಕ್ಸೊಫೋನ್ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದರು ಜೊತೆಗೆ ಇವರು ಅನೇಕ ದೇಶಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ.

## ಜೂ.5 ವಿಶ್ವ ಪರಿಸರ ದಿನ ಆಚರಣೆ




* ಪ್ರತಿ ವರ್ಷವೂ ಜೂನ್. 5ರಂದು ವಿಶ್ವ ಪರಿಸರ ದಿನ ಆಚರಣೆ ಮಾಡಲಾಗುತ್ತದೆ ಪ್ರಸ್ತುತ ಈ ವರ್ಷದ ಧ್ಯೇಯವಾಕ್ಯ 'ಪರಿಸರ ವ್ಯವಸ್ಥೆ ಪುನರ್ ಸ್ಥಾಪನೆ' ಎಂಬುವದಾಗಿದೆ.

* ಪ್ರಸ್ತುತ 2021ರ ಥೀಮ್ 'ಪರಿಸರ ವ್ಯವಸ್ಥೆ ಪುನಃಸ್ಥಾಪನೆ' ಇದನ್ನು ಪಾಕಿಸ್ತಾನ ಆಯೋಜಿಸುತ್ತದೆ, ಹಾಗೂ ಯುಎನ್ ದಶಕದ ಪರಿಸರ ವ್ಯವಸ್ಥೆಯ ಪುನಃಸ್ಥಾಪನೆಯನ್ನೂ ಆರಂಭಿಸಲಾಗುವದು ಎಂದು ತಿಳಿಸಿದೆ.

* ವಿಶ್ವ ಪರಿಸರ ದಿನವನ್ನು ವಾರ್ಷಿಕವಾಗಿ ಜೂನ್ 5 ರಂದು ಆಚರಿಸಲಾಗುತ್ತದೆ ಮತ್ತು ಪರಿಸರ ಸಂರಕ್ಷಣೆಗಾಗಿ ಜಾಗೃತಿ ಮತ್ತು ಕ್ರಮವನ್ನು ಉತ್ತೇಜಿಸುವ ವಿಶ್ವಸಂಸ್ಥೆಯ ಪ್ರಮುಖ ವಾಹನವಾಗಿದೆ, ಮೊದಲ ಬಾರಿಗೆ ಅಂದರೆ 1974ರಲ್ಲಿ ನಡೆದ ಪರಿಸರ ಮಾಲಿನ್ಯ, ಮಾನವ ಜನಸಂಖ್ಯೆ, ಜಾಗತಿಕ ತಾಪಮಾನ ಏರಿಕೆ, ಸುಸ್ಥಿರ ಬಳಕೆ ಮತ್ತು ವನ್ಯಜೀವಿ ಅಪರಾಧಗಳಂತಹ ಪರಿಸರ ವಿಷಯದ ಬಗ್ಗೆ ಜಾಗೃತಿ ಮೂಡಿಸುವ ವೇದಿಕೆಯಾಗಿದೆ.

* 1972ರಲ್ಲಿ ವಿಶ್ವ ಪರಿಸರ ದಿನವನ್ನು ವಿಶ್ವಸಂಸ್ಥೆಯು ಮಾನವ ಪರಿಸರ ಕುರಿತ ಸ್ಟಾಕ್ಹೋಮ್ ಸಮ್ಮೇಳನದಲ್ಲಿ ಸ್ಥಾಪನೆ ಮಾಡಿತು, 2 ವರ್ಷಗಳ ನಂತರ 1974ರಲ್ಲಿ 'ಕೇವಲ ಒಂದು ಭೂಮಿ ಎಂಬ ವಿಷಯದೊಂದಿಗೆ ಮೊದಲ ವಿಶ್ವ ಪರಿಸರ ದಿನ ನಡೆಯಿತು.

* ಪ್ರಸ್ತುತ ವಿಶ್ವಸಂಸ್ಥೆಯ ಪ್ರಕಾರ ಕಾಡುಗಳಿಂದ ಕೃಷಿ ಭೂಮಿಗಳವರೆಗೆ ಮತ್ತು ಪರ್ವತಗಳ ಮೇಲ್ಭಾಗದಿಂದ ಸಮುದ್ರದ ಆಳದವರೆಗೆ ಶತಕೋಟಿ ಹೆಕ್ಟೇರ್ ಪ್ರದೇಶವನ್ನು ಮುಂಬರುವ 10 ವರ್ಷಗಳವರೆಗೆ ಪರಿಸರ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವ ಜಾಗತಿಕ ಕಾರ್ಯಾಚರಣೆಯಾಗಿದೆ ಎಂದು ತಿಳಿಸಿದೆ.

* ಜಾಗತಿಕ ತಾಪಮಾನ ಏರಿಕೆಯು 1.5 ಡಿಗ್ರಿ ಸೆಲ್ಸಿಯಸ್‌ನ ಹೆಚ್ಚಳಕ್ಕೆ ಸೀಮಿತವಾಗಿದೆ, ಜಾಗತಿಕ ಹಸಿರುಮನೆ ಅನಿಲ ಹೊರಸೂಸುವಿಕೆಯು ಸತತ ಮೂರು ವರ್ಷಗಳಿಂದ ಬೇಯುತ್ತಿದೆ ಮತ್ತು ಹವಾಮಾನ ವೈಪರೀತ್ಯಕ್ಕೆ ಭೂಮಿಯು ಒಂದು ಪ್ರದೇಶವಾಗಿದೆ.

## ಬಿಜೆಪಿ ಶಾಸಕ ನರೇಂದರ್ ಬರಾಗಟಾ ವಿಧಿವಶ



* ಪ್ರಸ್ತುತ ಹಿಮಾಚಲ ಪ್ರದೇಶ ವಿಧಾನಸಭೆಯ ಬಿಜೆಪಿ ಶಾಸಕ ನರೇಂದರ್ ಬರಾಗಟಾ ಅವರು ತಮ್ಮ 68ನೇ ವಯಸ್ಸಿನಲ್ಲಿ ಕೋವಿಡ್ 19 ರೋಗದಿಂದಾಗಿ ವಿಧಿವಶರಾಗಿದ್ದಾರೆ.

* ಹಿಮಾಚಲ ಪ್ರದೇಶ ಜುಬ್ಬಲ್ ಕೊಟ್ಕಾಯಿ ವಿಧಾನಸಭೆಯ ಕ್ಷೇತ್ರದಿಂದ ಮೂರು ಬಾರಿ ಶಾಸಕರಾಗಿ ನರೇಂದರ್ ಬರಾಗಟಾ ಅವರು ಆಯ್ಕೆಯಾಗಿದ್ದರು.

* ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಜಯರಾಮ್ ಠಾಕೂರ್ ಅವರು ನರೇಂದರ್ ಅವರ ನಿಧನಕ್ಕೆ ಸಂತಾಪವನ್ನು ಸೂಚಿಸಿದ್ದಾರೆ.

## ಅಸ್ಸಾಂನ ಆರನೇ ರಾಷ್ಟ್ರೀಯ ಉದ್ಯಾನವನ 'ರೈಮೋನಾ'



* ಅಸ್ಸಾಂನ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಕೊಕ್ರಜಾರ್ ಜಿಲ್ಲೆಯ ರೈಮೋನಾ ಮೀಸಲು ಅರಣ್ಯ ಪ್ರದೇಶವನ್ನು

ಅಸ್ಸಾಂನ ಆರನೇ ರಾಷ್ಟ್ರೀಯ ಉದ್ಯಾನವನವಾಗಿ ನವೀಕರಿಸಲಾಗಿದೆ ಎಂದು ತಿಳಿಸಿದ್ದಾರೆ.

* ಈ ಅರಣ್ಯವು ಭೂತಾನ್ ಗಡಿಯುದ್ದಕ್ಕೂ ಬೋಡೋಲ್ಯಾಂಡ್ ಪ್ರಾದೇಶಿಕ ಪ್ರದೇಶದ ಅಡಿಯಲ್ಲಿ ಬರುತ್ತದೆ.

* ಅಸ್ಸಾಂ'ನ 6 ರಾಷ್ಟ್ರೀಯ ಉದ್ಯಾನವನಗಳು:

ಕಾಜಿರಂಗಾ ರಾಷ್ಟ್ರೀಯ ಉದ್ಯಾನ ಮನಸ್ ರಾಷ್ಟ್ರೀಯ ಉದ್ಯಾನ ನಮೆರಿ ರಾಷ್ಟ್ರೀಯ ಉದ್ಯಾನ ಒರಾಂಗ್ ರಾಷ್ಟ್ರೀಯ ಉದ್ಯಾನ ಡಿಬ್ರು ಸೈಖೋವಾ ರಾಷ್ಟ್ರೀಯ ಉದ್ಯಾನ ರೈಮೋನಾ ರಾಷ್ಟ್ರೀಯ ಉದ್ಯಾನ

* ಈ ರಾಷ್ಟ್ರೀಯ ಉದ್ಯಾನವು ಬಿಟಿಆರ್ ಅಡಿಯಲ್ಲಿ ಕೊಕ್ರಜಾರ್ ಜಿಲ್ಲೆಯ ಗೊಸ್ಸೈಗಾಂವ್ ಉಪವಿಭಾಗದಲ್ಲಿದೆ, ಪಾರ್ಕ್ 422 ಕೀ. ಮೀ'ನ 2 ವಿಸ್ತೀರ್ಣವನ್ನು ಹೊಂದಿದೆ, ಮತ್ತು ಅಧಿಸೂಚಿತ ರಿಪು ರಿಸರ್ವ್ ಫಾರೆಸ್ಟ್‌ನ ಉತ್ತರ ಭಾಗವನ್ನು ಒಳಗೊಂಡಿದೆ, ಈ ಉದ್ಯಾನವನವು ಗೋಲ್ಡನ್ ಲಂಗೂರ್, ಹುಲಿಗಳು, ಏಷ್ಯನ್ ಆನೆಗಳು, ಮೋಡದ ಚಿರತೆಗಳು, ಕಾಡು ಎಮ್ಮೆ, ಭಾರತೀಯ ಗೌರ್, ಹಾರ್ನ್ ಬಿಲ್, ಮಚ್ಚೆಯುಳ್ಳ ಜಿಂಕೆ, 170 ಜಾತಿಯ ಪಕ್ಷಿಗಳು, 150 ಜಾತಿಯ ಚಿಟ್ಟೆಗಳು ಮತ್ತು 380 ಬಗೆಯ ಸಸ್ಯಗಳು ಮತ್ತು ಆರ್ಕಿಡ್‌ಗಳಿಗೆ ನೆಲೆಯಾಗಿದೆ ಎಂದು ಮುಖ್ಯಮಂತ್ರಿಯವರು ತಿಳಿಸಿದ್ದಾರೆ.

## BIMSTEC (ಬಿಮ್ಸ್ಟೆಕ್ನ)ಗೆ 24 ವರ್ಷಗಳು

* ಪ್ರಧಾನಿ ನರೇಂದ್ರ ಮೋದಿ ಅವರು 24ನೇ ಬಿಮ್ಸ್ಟೆಕ್ ದಿನದ ಶುಭಾಶಯಗಳನ್ನು ತಿಳಿಸಿದರು.

* ಬಿಮ್ಸ್ಟೆಕ್ (BIMSTEC) ಎಂಬುವದು 'ಬೇ ಬಂಗಾಳ ಉಪಕ್ರಮಕ್ಕಾಗಿ ಬಹು ವಲಯ ತಾಂತ್ರಿಕ ಮತ್ತು ಆರ್ಥಿಕ ಸಹಕಾರದ' ಸಂಕ್ಷಿಪ್ತ ರೂಪವಾಗಿದೆ, ಇದು1997ರ ಜೂನ್. 6ರಂದು ಬ್ಯಾಂಕಾಕ್‌ನಲ್ಲಿ BIST EC (ಬಾಂಗ್ಲಾದೇಶ, ಭಾರತ, ಶ್ರೀಲಂಕಾ ಮತ್ತು ಥೈಲ್ಯಾಂಡ್ ಆರ್ಥಿಕ ಸಹಕಾರ) ಹೆಸರಿನಲ್ಲಿ ಸ್ಥಾಪಿಸಲಾದ ಪ್ರಾದೇಶಿಕ ಬಹುಪಕ್ಷೀಯ ಸಂಘಟನೆಯಾಗಿದೆ, ಮತ್ತೇ 1997ರಲ್ಲಿ ಈ ಸಂಘಟಣೆಗೆ ಮ್ಯಾನ್ಮಾರ್'ನ್ನು ಸೇರಿಸಲಾಗಿದೆ, ನಂತರದ ದಿನಗಳಲ್ಲಿ ಈ ಗುಂಪನ್ನು BIMST EC (ಬಾಂಗ್ಲಾದೇಶ, ಭಾರತ, ಮ್ಯಾನ್ಮಾರ್, ಶ್ರೀಲಂಕಾ ಮತ್ತು ಥೈಲ್ಯಾಂಡ್ ಆರ್ಥಿಕ ಸಹಕಾರ) ಎಂದು ಮರುನಾಮಕರಣ ಮಾಡಲಾಯಿತು, ನಂತರ 2004ರಲ್ಲಿ ನೇಪಾಳ ಮತ್ತು ಭೂತಾನ್ ಪೂರ್ಣ ಸದಸ್ಯರಾದ ನಂತರ, ಬಿಮ್ಸ್ಟೆಕ್'ನ್ನು ಅದರ ಪ್ರಸ್ತುತ ಸ್ವರೂಪಕ್ಕೆ ಮರುನಾಮಕರಣ ಮಾಡಲಾಯಿತು.

* ಪ್ರಸ್ತುತ BIMSTEC 7ಸದಸ್ಯರು ಬಂಗಾಳಕೊಲ್ಲಿಯ ಕರಾವಳಿಯ ಸುತ್ತಮುತ್ತಲಿನ ಪ್ರದೇಶಗಳಾಗಿವೆ, ಪ್ರಸ್ತುತ ದಕ್ಷಿಣ ಏಷ್ಯಾದ 5ರಾಷ್ಟ್ರಗಳಾಗಿರುವ ಬಾಂಗ್ಲಾದೇಶ, ಭೂತಾನ್, ಭಾರತ, ನೇಪಾಳ ಮತ್ತು ಶ್ರೀಲಂಕಾ, ಹಾಗೂ ಆಗ್ನೇಯ ಏಷ್ಯಾದ 2 ದೇಶಗಳು ಮ್ಯಾನ್ಮಾರ್ ಮತ್ತು ಥೈಲ್ಯಾಂಡ್ ರಾಷ್ಟ್ರಗಳು ಕೂಡಿವೆ.

* ಪ್ರಸ್ತುತ ಗ್ರೇಟ್ ಹಿಮಾಲಯ ಹಾಗೂ ಬಂಗಾಳಕೊಲ್ಲಿಯ ಪರಿಸರ ವಿಜ್ಞಾನ ಇದರ ಹೊರತಾಗಿ ಬಿಮ್ಸ್ಟೆಕ್ ದಕ್ಷಿಣ ಮತ್ತು ಆಗ್ನೇಯ ಏಷ್ಯಾವನ್ನು ಸಂಪರ್ಕಿಸುವದು ಬಿಮ್ಸ್ಟೆಕ್ ಗುರಿಯಾಗಿದೆ, ಇದರ ಜೊತೆಗೆ ತ್ವರಿತ ಆರ್ಥಿಕ ಅಭಿವೃದ್ಧಿಗೆ ಅನುವು ಮಾಡಿಕೊಡುವ ವಾತಾವರಣವನ್ನು ಸೃಷ್ಟಿಸುವ ಮತ್ತು ಸಾಮಾಜಿಕ ಪ್ರಗತಿಯನ್ನು ಉತ್ತಮಗೊಳಿಸುವ ಉದ್ದೇಶದಿಂದಾಗಿ ಇದನ್ನು ಸ್ಥಾಪನೆ ಮಾಡಲಾಗಿದೆ.

# 08-06-2021

## ಪ್ರಧಾನಿ ನರೇಂದ್ರ ಮೋದಿ ಮಹತ್ವದ ಹೆಜ್ಜೆ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಕರೊನಾ ಲಸಿಕೆ ಉಚಿತ



* ಭಾರತೀಯ ಪ್ರಧಾನಿ ನರೇಂದ್ರ ಮೋದಿ ಅವರು ಇದೀಗ ಲಸಿಕೆ ವಿತರಣೆಗಾಗಿ ಮಹತ್ವದ ಹೆಜ್ಜೆಯನ್ನು ಇಟ್ಟಿದ್ದಾರೆ, ಅದುವೇ 18 ವರ್ಷ ಮೇಲ್ಪಟ್ಟ ಎಲ್ಲ ಜನರಿಗೆ ಜೂನ್ 21ರ ನಂತರ ಉಚಿತವಾಗಿ ಲಸಿಕೆ ನೀಡಲಾಗುವುದು ಎಂದು ತಿಳಿಸಿದ್ದಾರೆ.

* ಪ್ರಸ್ತುತ ದೇಶದಲ್ಲಿನ ಎಲ್ಲ ರಾಜ್ಯಗಳಿಗೆ ಕೇಂದ್ರ ಸರ್ಕಾರವೇ ಉಚಿತವಾಗಿ ಲಸಿಕೆಯನ್ನು ವಿತರಿಸಲಿದೆ, ಮತ್ತು ಯಾವುದೇ ರಾಜ್ಯಗಳು ಲಸಿಕೆಗಾಗಿ ಕೇಂದ್ರಕ್ಕೆ ಹಣ ನೀಡಬೇಕಿಲ್ಲ ಎಂದು ತಿಳಿಸಿದ್ದಾರೆ.

* ಜೂನ್ 21 ಅಂತಾರಾಷ್ಟ್ರೀಯ ಯೋಗ ದಿನ, ಈ ದಿನದಿಂದ 18 ವರ್ಷ ಮೇಲ್ಪಟ್ಟ ಎಲ್ಲ ಜನರಿಗೆ ಉಚಿತವಾಗಿಯೇ ಲಸಿಕೆಯನ್ನು ಕೇಂದ್ರ ಸರ್ಕಾರ ನೀಡಲಿದೆ ಎಂದಿದ್ದಾರೆ.

* ಪ್ರಸ್ತುತ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಸಿಕೆ ಪಡೆಯಲು ಬಯಸಿದವರಿಗೆ ಲಸಿಕೆ ಲಭ್ಯವಾಗಲಿದೆ, ಆದರೆ ಖಾಸಗಿ ಆಸ್ಪತ್ರೆಗಳಿಗೆ ಲಸಿಕೆ ಸೇವಾಶುಲ್ಕ150 ರೂ. ನೀಡಬೇಕು ಇದರ ಜೊತೆಯಲ್ಲಿ ಬಡಜನರಿಗೆ ನೀಡುತ್ತಿದ್ದ ಉಚಿತ ಪಡಿತರವನ್ನು ದೀಪಾವಳಿವರೆಗೂ ನೀಡಲಾಗುತ್ತದೆ ಎಂದು ಪ್ರಧಾನಿ ಮೋದಿ ಅವರು ಭಾರತೀಯ ಜನತೆಗೆ ತಿಳಿಸಿದ್ದಾರೆ.

## ವಿಶ್ವದ ಶ್ರೀಮಂತ ವ್ಯಕ್ತಿ ಜೆಫ್ ಬೇಜೋಸ್ ಬಾಹ್ಯಾಕಾಶಕ್ಕೆ



* ಪ್ರಸ್ತುತ ವಿಶ್ವದ ಶ್ರೀಮಂತ ವ್ಯಕ್ತಿಯಾಗಿರುವ ಅಮೆಜಾನ್ ಸಂಸ್ಥಾಪಕ ಹಾಗೂ CEO ಜೆಫ್ ಬೇಜೋಸ್ ಮುಂಬರುವ ಜುಲೈ 20ರಂದು ಬಾಹ್ಯಾಕಾಶಕ್ಕೆ ಹಾರಲಿದ್ದಾರೆ ಎಂದು ತಿಳಿದು ಬಂದಿದೆ.

* "ಬ್ಲೂ ಒರಿಜಿನ್"ನ ಶೆಪರ್ಡ್ ಬಾಹ್ಯಾಕಾಶ ನೌಕೆಯ ಮೂಲಕ ಮೊದಲ ಮಾನವ ಬಾಹ್ಯಾಕಾಶ ಹಾರಾಟದ ಮಿಷನ್‌ನಲ್ಲಿ ಜೆಫ್ ಬೇಜೋಸ್ ಬಾಹ್ಯಾಕಾಶಕ್ಕೆ ಪ್ರಯಾಣ ಬೆಳಸಲಿದ್ದಾರೆ, ಪ್ರಸ್ತುತ ಈ ಬ್ಲೂ ಒರಿಜಿನ್' ಬಾಹ್ಯಾಕಾಶ ಪರಿಶೋಧನಾ ಸಂಸ್ಥೆಯಾಗಿದೆ.

* ಅಮೆಜಾನ್ ಸಂಸ್ಥಾಪಕ ಜೆಫ್ ಬೇಜೋಸ್ ಅವರು 5 ವರ್ಷದ ವಯಸ್ಸಿನ ಬಾಲ್ಯದಲ್ಲಿಯೆೇ ಬಾಹ್ಯಾಕಾಶಕ್ಕೆ ಪ್ರಯಾಣಿಸುವ ಕನಸು ಕಂಡಿದ್ದ ಇದೀಗ ಈ ಕನಸು ಜುಲೈ 20 ರಂದು ಈಡೇರಲಿದೆ ಎಂದು ತಿಳಿಸಿದ್ದಾರೆ, ಸದ್ಯ ನಾನು ನನ್ನ ಸಹೋದರನ ಜೊತೆಗೆ ಪ್ರಯಾಣ ಬೆಳಸಲಿದ್ದೇನೆ ಎಂದು ಜೆಫ್ ಬೇಜೋಸ್ ಅವರು ಇನ್‌ಸ್ಟಾಗ್ರಾಮ್'ನಲ್ಲಿ ಪೋಸ್ಟ್ ಮಾಡುವ ಮೂಲಕ ವಿಷಯವನ್ನು ಹಂಚಿಕೊಂಡಿದ್ದಾರೆ.

* ಜುಲೈ. 20ರಂದು ಟೆಕ್ಸಾಸ್'ನಿಂದ ಬಾಹ್ಯಾಕಾಶಕ್ಕೆ ನೌಕೆ ಉಡಾವಣೆ ಆಗಲಿದೆ ಎಂದು ತಿಳಿದು ಬಂದಿದೆ.

## ದಕ್ಷಿಣ ಆಫ್ರಿಕಾ : ಗಾಂಧೀಜಿ ಅವರ ಮೊಮ್ಮಗಳಿಗೆ 7 ವರ್ಷ ಜೈಲು ಶಿಕ್ಷೆ



* ಪ್ರಸ್ತುತ ದಕ್ಷಿಣ ಆಫ್ರಿಕಾ ನ್ಯಾಯಾಲಯವು ಮಹಾತ್ಮ ಗಾಂಧೀಜಿ ಅವರ ಮರಿ ಮೊಮ್ಮಗಳಾಗಿರುವ 'ಆಶಿಲ್ ಲತಾ ರಾಮ್‌ಗೋಬಿನ್' ಅವರಿಗೆ ಹಣಕಾಸು ವಂಚನೆ ಮತ್ತು ನಕಲಿ ದಾಖಲೆ ಸೃಷ್ಟಿ ಪ್ರಕರಣಕ್ಕೆ ಸಂಬಂಧಿಸಿದಂತೆ 7 ವರ್ಷ ಜೈಲು ಶಿಕ್ಷೆ ವಿಧಿಸಿದೆ.

* ದಕ್ಷಿಣ ಆಫ್ರಿಕಾದ ಡರ್ಬನ್ ವಾಣಿಜ್ಯ ವ್ಯಾಜ್ಯಗಳ ವಿಶೇಷ ನ್ಯಾಯಾಲಯ ಆಶಿಲ್ ಲತಾ ಅವರಿಗೆ ಶಿಕ್ಷೆ ವಿಧಿಸಿ ತೀರ್ಪನ್ನು ಪ್ರಕಟಿಸಿದೆ, ಇದರಜೊತೆಗೆ ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಕಾಲಾವಕಾಶವನ್ನುಕೂಡ ದಕ್ಷಿಣ ಆಫ್ರಿಕಾ ನ್ಯಾಯಾಲಯವು ನಿರಾಕರಿಸಿದೆ.

* ಗಾಂಧೀಜಿ ಅವರ ಮರಿ ಮೊಮ್ಮಗಳಾಗಿರುವ 'ಆಶಿಲ್ ಲತಾ ರಾಮ್‌ಗೋಬಿನ್' ಅವರ ಮೇಲೆ 2015ರಲ್ಲಿ ಕೇಸ್ ದಾಖಲಾಗಿತ್ತು, ಪ್ರಸ್ತುತ ಲತಾ ಅವರು ಭಾರತದಿಂದ ದಕ್ಷಿಣ ಆಫ್ರಿಕಾಗೆ ಆಮದು ಮಾಡಿಕೊಳ್ಳುತ್ತಿರುವ ವಸ್ತುಗಳ ಕಸ್ಟಂ ಸುಂಕಕ್ಕಾಗಿ ದಕ್ಷಿಣ ಆಫ್ರಿಕಾದ ಉದ್ಯಮಿ ಹಾಗೂ ನ್ಯೂ ಆಫ್ರಿಕಾ ಅಲೈಯನ್ಸ್ ಕಂಪನಿ ನಿರ್ದೇಶಕರಾಗಿದ್ದ ಎಸ್.ಆರ್.ಮಹಾರಾಜ್ ಅವರಿಗೆ 6 ದಶಲಕ್ಷ ಆಫ್ರಿಕನ್ ರಾಂಡ್ (ಸುಮಾರು 3.22 ಕೋಟಿ ರೂ.) ಹಣ ಕೊಡದೆ ವಂಚಿಸಿದಕ್ಕಾಗಿ ಕೇಸ್ ದಾಖಲಾಗಿತ್ತು.

* ರಾಷ್ಟ್ರೀಯ ಪ್ರಾಸಿಕ್ಯೂಟಿಂಗ್ ಪ್ರಾಧಿಕಾರ ಬ್ರಿಗೇಡಿಯರ್ ಹಂಗ್ವಾನಿ ಮುಲ್ವಾಡಿ ಅವರು ನೀಡಿರುವ ಮಾಹಿತಿಯ ಪ್ರಕಾರ ಈ ಹಿಂದೆ ಲತಾ ಅವರು 2015ರ ಆಗಸ್ಟ್‌ನಲ್ಲಿ ಭಾರತದಿಂದ 3 ಕಂಟೇನರ್ ಲೆನಿನ್ ಬಟ್ಟೆಯನ್ನು ದ.ಆ. ನೆಟ್‌ಕೇರ್ ಆಸ್ಪತ್ರೆಯ ಸಮೂಹ ಸಂಸ್ಥೆಗಳಿಗೆ ನೀಡುವ ಸಲುವಾಗಿ ಆಮದು ಮಾಡಿಕೊಳ್ಳುತ್ತಿದ್ದೇನೆ ಎಂದು ತೋರಿಸಲು ನಕಲಿ ದಾಖಲೆ ಸೃಷ್ಟಿಸಿ ನ್ಯೂ ಅಲೈಯನ್ಸ್ ಕಂಪನಿಯಿಂದ 6.2 ದಶಲಕ್ಷ ರಾಂಡ್ (ಹಣ) ಪಡೆದಿದ್ದರು ಎಂದು ತಿಳಿಸಿದ್ದಾರೆ.

## ಮಾಲ್ಡೀವ್ಸ್ ವಿದೇಶಾಂಗ ಸಚಿವ ಅಬ್ದುಲ್ಲಾ ಶಹೀದ್ ವಿಶ್ವಸಂಸ್ಥೆ ಸಾಮಾನ್ಯಸಭೆ ಅಧ್ಯಕ್ಷರಾಗಿ ಆಯ್ಕೆ



* ವಿಶ್ವಸಂಸ್ಥೆಯ ಸಾಮಾನ್ಯಸಭೆಯ 76ನೇ ಅಧಿವೇಶನದ ಅಧ್ಯಕ್ಷರಾಗಿ ಮಾಲ್ಡೀವ್ಸ್ ವಿದೇಶಾಂಗ ಸಚಿವ ಅಬ್ದುಲ್ಲಾ ಶಹೀದ್ ಅವರು ಆಯ್ಕೆಯಾಗಿದ್ದಾರೆ, ಈ ಅಧ್ಯಕ ಚುನಾವಣೆಯಲ್ಲಿ 191 ಮತಗಳ ಪೈಕಿ ಅಬ್ದುಲ್ಲಾ 143 ಮತಗಳನ್ನು ಪಡೆದುಕೊಂಡು ವಿಶ್ವಸಂಸ್ಥೆ ಸಾಮಾನ್ಯಸಭೆ ಅಧ್ಯಕ್ಷರಾಗಿದ್ದಾರೆ.

* ಈ ವಿಶ್ವಸಂಸ್ಥೆ ಸಾಮಾನ್ಯಸಭೆ ಅಧ್ಯಕ್ಷ ಸ್ಥಾನಕ್ಕೆ ಅಫ್ಘಾನಿಸ್ತಾನದ ಮಾಜಿ ವಿದೇಶಾಂಗ ಸಚಿವ ಡಾ.ಝುಲ್ಮಾಯ್ ರಸೂಲ್ ಕೂಡ ಸ್ಪರ್ಧಿಸಿದ್ದರು ಆದರೆ ಅವರು 48 ಮತಗಳನ್ನು ಪಡೆದು ಕೊಡು ಈ ಅಧ್ಯಕ್ಷ ಸ್ಥಾನದಿಂದ ಹಿಂದೆಸರಿದಿದ್ದಾರೆ, ಈ ವಿಶ್ವಸಂಸ್ಥೆ ಸಾಮಾನ್ಯಸಭೆಯ ಅಧಿವೇಶನ ಸೆಪ್ಟಂಬರ್‌ನಲ್ಲಿ ನಡೆಯಲಿದೆ ಎಂದು ತಿಳಿಸಲಾಗಿದೆ.

## ಇಂಗ್ಲೆಂಡ್ ತಂಡದ ವೇಗದ ಬೌಲರ್ ಒಲಿ ರಾಬಿನ್ಸನ್ ಜನಾಂಗೀಯ ನಿಂದನೆ ಆರೋಪದ ಮೇಲೆ ಅಮಾನತು



* ಪ್ರಸ್ತುತ ಇಂಗ್ಲೆಂಡ್ ತಂಡದ ವೇಗದ ಬೌಲರ್'ಆಗಿರುವ ಒಲಿ ರಾಬಿನ್ಸನ್ ಅವರನ್ನು ಲಿಂಗ ತಾರತಮ್ಯ ಮತ್ತು ಜನಾಂಗೀಯ ನಿಂದನೆ ಆರೋಪದ ಮೇಲೆ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ಅಂತಾರಾಷ್ಟ್ರೀಯ ಕ್ರಿಕೆಟ್'ನಿಂದ ಅಮಾನತು ಮಾಡಲಾಗಿದೆ.

* ಇಂಗ್ಲೆಂಡ್ ಬೌಲರ್ ಒಲಿ ರಾಬಿನ್ಸನ್ ಅವರು ನ್ಯೂಜಿಲೆಂಡ್ ವಿರುದ್ಧ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ 7 ವಿಕೆಟ್ ಪಡೆದು ಉತ್ತಮ ಪ್ರದರ್ಶನ ನೀಡಿದ್ದರು.

* ಈ ಹಿಂದೆ 2012 13 ರಲ್ಲಿ ಬೌಲರ್ ಒಲಿ ರಾಬಿನ್ಸನ್ ಅವರು ಲಿಂಗ ತಾರತಮ್ಯ ಹಾಗೂ ಜನಾಂಗೀಯ ನಿಂದನೆಯ ಬಗ್ಗೆ ಅಂದರೆ ಮುಸ್ಲಿಮರನ್ನು ಭಯೋತ್ಪಾದಕರು ಅಲ್ಲದೇ ಮಹಿಳೆಯರು ಮತ್ತು ಏಷ್ಯಾ ಜನರ ಬಗ್ಗೆ ಅವಹೇಳನಕಾರಿಯಾಗಿ ಟ್ವೀಟ್ ಮಾಡಿದ್ದರು, ಸದ್ಯ ಇದೀಗ ಆ ಟ್ವೀಟ್'ಗಳು ಸುದ್ದಿಯಾಗಿರುವ ಕಾರಣದಿಂದಾಗಿ ಇವರನ್ನು ಅಮಾನತು ಮಾಡಲಾಗಿದೆ.

## ಫ್ರಾನ್ಸ್ ರಾಷ್ಟ್ರದಿಂದ ಗೂಗಲ್ ಸಂಸ್ಥೆಗೆ 220 ಮಿಲಿಯ ಯುರೋ ದಂಡ




* ಗೂಗಲ್ ಸಂಸ್ಥೆಯು ಇಂಟರ್ನೆಟ್'ನಲ್ಲಿ ಜಾಹೀರಾತುಗಳನ್ನು ಹಾಕುವ ಸಂಧರ್ಭಗಳಲ್ಲಿ ತನ್ನ ಮಾರುಕಟ್ಟೆ ಪ್ರಭಾವವನ್ನು ದುರುಪಯೋಗ ಮಾಡಿಕೊಂಡಿದೆ ಎಂದು ಆರೋಪಿಸಿ ಫ್ರಾನ್ಸ್ ರಾಷ್ಟ್ರವು ಗೂಗಲ್ ಕಂಪನಿಗೆ 220 ಮಿಲಿಯ ಯುರೋ (1,945 ಕೋಟಿ ರೂ.) ದಂಡ ವಿಧಿಸಿದೆ.

* ಪ್ರಸ್ತುತ ನ್ಯೂಸ್ ಕಾರ್ಪ್, ಫ್ರೆಂಚ್ ದಿನಪತ್ರಿಕೆ ಲೆ ಫಿಗರೊ ಹಾಗೂ ಬೆಲ್ಜಿಯಮ್'ನ ಗ್ರೂಪ್ ರೊಸೆಲ್ ಎಂಬ ಮಾಧ್ಯಮ ಸಂಘಟನೆಗಳು, ಗೂಗಲ್ ಸಂಸ್ಥೆಯು ಆನ್ ಲೈನ್ ಜಾಹೀರಾತುಗಳ ಮಾರಾಟದಲ್ಲಿ ಏಕಸ್ವಾಮ್ಯವನ್ನು ಹೊಂದಿದೆ ಎಂದು ಆರೋಪವನ್ನು ಮಾಡಿದ್ದವು, ನಂತರ ಫ್ರಾನ್ಸ್ ಗೂಗಲ್ ಕಂಪನಿಗೆಈ ದಂಡವನ್ನು ವಿಧಿಸಿದೆ.

* ಪ್ರಸ್ತುತ ಫ್ರಾನ್ಸ್'ನ ಏಕಸ್ವಾಮ್ಯ ನಿಗ್ರಹ ಸಂಸ್ಥೆಯು ಗೂಗಲ್ ಸಂಸ್ಥೆಯು ತನ್ನ ಜಾಹೀರಾತು ಹರಾಜು ವೇದಿಕೆಗಳಾದ ಎಡಿಎಕ್ಸ್ ಮತ್ತು ಡಬಲ್ ಕ್ಲಿಕ್ ಆಯಡ್ ಎಕ್ಸ್ ಚೇಂಜ್'ಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತದೆ ಎಂದು ತಿಳಿಸಿದೆ.

## ಪಾಕಿಸ್ತಾನದಲ್ಲಿ ರೈಲು ದುರಂತ



* ಪಾಕಿಸ್ತಾನದ ಉತ್ತರ ಸಿಂಧ್ ಪ್ರಾಂತ್ಯದಲ್ಲಿ ಎರಡು ರೈಲುಗಳ ನಡುವೆ ಅಪಘಾತ(ಡಿಕ್ಕಿ) ಸಂಭವಿಸಿ ಕನಿಷ್ಠ 50 ಮಂದಿ ಮೃತಪಟ್ಟಿದ್ದಾರೆ.

* ಪಾಕಿಸ್ತಾನದ ಕರಾಚಿಯ ಮಾರ್ಗವಾಗಿ ಸರಗೋವಾಗೆ ಚಿಸುತ್ತಿದ್ದ ರೈಲು ಮಿಲ್ಲತ್ ಎಕ್ಸ್ ಪ್ರೆಸ್ ರೈಲು ಹಳಿ ತಪ್ಪಿ ಅದರ ಪಕ್ಕದ ಟ್ರ್ಯಾಕ್ ಮೇಲೆ ಬಿದ್ದಿದೆ, ಇದೇ ಸಂಧರ್ಭದಲ್ಲಿ ರಾವಲ್ಪಿಂಡಿಯ ಮಾರ್ಗವಾಗಿ ಕರಾಚಿಗೆ ಚಲಿಸುತ್ತಿದ್ದ ಸರ್ ಸೈಯ್ಯದ್ ಎಕ್ಸ್ ಪ್ರೆಸ್ ರೈಲುಗಳು ಪರಸ್ಪರ ಡಿಕ್ಕಿ ಹೊಡೆದಿವೆ ಎಂದು ಮಾಹಿತಿ ನೀಡಿದ್ದಾರೆ.

## ವೆಯಾನ್ ಗ್ರಾಮವು ತನ್ನ ಎಲ್ಲ ವಯಸ್ಕ ಜನಸಂಖ್ಯೆಗೆ ಲಸಿಕೆ ಹಾಕಿದ ಭಾರತದ ಮೊದಲ ಗ್ರಾಮ




* ಪ್ರಸ್ತುತ ಭಾರತದ ಜಮ್ಮು ಮತ್ತು ಕಾಶ್ಮೀರದ ಬಂಡಿಪೋರಾ ಜಿಲ್ಲೆಯ ವೆಯಾನ್ ಎಂಬ ಹಳ್ಳಿಯು ತನ್ನ ಎಲ್ಲಾ ವಯಸ್ಕ ಜನಸಂಖ್ಯೆಗೆ ಕೋವಿಡ್ 19ರ ಲಸಿಕೆ ಹಾಕಿದ ಭಾರತದ ಮೊದಲ ಗ್ರಾಮವಾಗಿದೆ.

* ಈ ವೆಯಾನ್ ಹಳ್ಳಿಯ ಬಂಡಿಪೋರಾ ಜಿಲ್ಲೆಯಿಂದ 28 ಕೀ.ಮೀ ದೂರದ ಗ್ರಾಮ ಇದೀಗ ಇಲ್ಲಿ ಯಶಸ್ವಿಯಾಗಿ ವ್ಯಾಕ್ಸಿನೇಷನ್ ಡ್ರೈವ್ ಆರೋಗ್ಯ ಕಾರ್ಯಕರ್ತರ ಪರಿಣಾಮವಾಗಿದೆ ಈ ಗ್ರಾಮದಲ್ಲಿ 362 ವಯಸ್ಕ ಜನಸಂಖ್ಯೆಯನ್ನು ಹೊಂದಿದೆ, ಜನರಿಗೆ ಲಸಿಕೆ ಹಾಕಲು 'ಲಸಿಕೆ ಆನ್ ವೀಲ್ಸ್'ನ ಅಡಿಯಲ್ಲಿ ಆರೋಗ್ಯ ಅಧಿಕಾರಿಗಳು ದೂರದ ಪ್ರದೇಶಗಳಲ್ಲಿನ ಜನರಿಗೆ ಲಸಿಕೆ ಹಾಕಲು ತಲುಪುತ್ತಾರೆ.

* ಪ್ರಸ್ತುತ ಜಮ್ಮು ಮತ್ತು ಕಾಶ್ಮೀರದಲ್ಲಿನ 45 ಕಿಂತ ಹೆಚ್ಚಿನ ವಯಸ್ಸಿನ ಜನರಿಗೆ ಲಸಿಕೆ ನೀಡುವಲ್ಲಿ ಸುಮಾರು 70 ಪ್ರತಿಶತದಷ್ಟು ಸಾಧನೆ ಮಾಡಿದೆ.

## ಇಸ್ರೋದಿಂದ 3 ವೆಚ್ಚ ಪರಿಣಾಮಕಾರಿ ವೆಂಟಿಲೇಟರ್'ಗಳ ಅಭಿವೃದ್ಧಿ



* ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ISRO) ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರವು 3 ವಿಧದ ರೀತಿಯ ವೆಚ್ಚ ಪರಿಣಾಮಕಾರಿ (Cost Effective) ವೆಂಟಿಲೇಟರ್ ಮತ್ತು ಆಮ್ಲಜನಕ ಸಾಂದ್ರತೆಯನ್ನು ಅಭಿವೃದ್ಧಿಪಡಿಸಿದೆ.

* ಇಸ್ರೋ ಅಭಿವೃದ್ಧಿಪಡಿಸಿದ ಈ 3 ವೆಂಟಿಲೇಟರ್‌ಗಳನ್ನು ಪ್ರಾಣ, ವಾಯು ಮತ್ತು ಸ್ವಸ್ತಾ ಎಂದು ಹೆಸರಿಸಿದೆ ಮತ್ತು ಆಮ್ಲಜನಕದ ಸಿಲಿಂಡರ್'ನ್ನು ಶ್ವಾಸ್ ಎಂದು ಹೆಸರಿಸಿದೆ.

* ಪ್ರಾಣ ಎಂಬ ವೆಂಟಿಲೇಟರ್ ಅಂಬು ಚೀಲದ ಸ್ವಯಂಚಾಲಿತವಾಗಿ ರೋಗಿಗೆ ಬೇಕಾಗಿರುವ ಉಸಿರಾಟದ ಅನಿಲವನ್ನು ನೀಡುತ್ತದೆ.

* ಸ್ವಾಸ್ತಾ ಎಂಬ ವೆಂಟಿಲೇಟರ್ ವಿದ್ಯುತ್ ಶಕ್ತಿ ಇಲ್ಲದೆ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿದೆ.

* ಶ್ವಾಸ್ ಎಂಬ ಆಮ್ಲಜನಕ ಸಿಲಿಂಡರ್ ನಿಮಿಷಕ್ಕೆ 10 ಲೀಟರ್'ನಷ್ಟು ಆಮ್ಲಜನಕವನ್ನು ಪೂರೈಸುವ ಸಾಮರ್ಥ್ಯವನ್ನು ಇದು ಹೊಂದಿದೆ ಹಾಗೂ ಇದು ಒಂದೇ ಸಮಯದಲ್ಲಿ ಇಬ್ಬರು ರೋಗಿಗಳಿಗೆ ಆಮ್ಲಜನಕ ನೀಡುತ್ತದೆ.

* ಪ್ರಸ್ತುತ ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರವು ಕೇರಳ ಜಿಲ್ಲೆಯ ತಿರುವನಂತಪುರದಲ್ಲಿದೆ, ಭಾರತದ ಉಪಗ್ರಹ ರಾಕೆಟ್ ಹಾಗೂ ಬಾಹ್ಯಾಕಾಶ ವಾಹನಗಳ ಮೇಲೆ ನಿಯಂತ್ರಿಸುವ ಮುಖ್ಯವಾದ ಬಾಹ್ಯಾಕಾಶ ಸಂಶೋಧನಾ ಕೇಂದ್ರವಾಗಿದೆ, ಹಾಗೂ ಇದಕ್ಕೆ ಡಾ. ವಿಕ್ರಮ್ ಸಾರಾಭಾಯ್ ಅವರ ಹೆಸರು ನಾಮಕರಣ ಮಾಡಲಾಗಿದೆ.

## 09-06-2021

### ಅನೂಪ್ ಚಂದ್ರ ಪಾಂಡೆ ಚುನಾವಣಾ ಆಯೋಗದ ನೂತನ ಆಯುಕ್ತರಾಗಿ ನೇಮಕ



* ಉತ್ತರ ಪ್ರದೇಶದ ರಾಜ್ಯದ ಮಾಜಿ ಮುಖ್ಯ ಕಾರ್ಯದರ್ಶಿಯಾಗಿರುವ ಅನೂಪ್ ಚಂದ್ರ ಪಾಂಡೆ ಅವರನ್ನು ಚುನಾವಣಾ ಆಯೋಗದ ನೂತನ ಆಯುಕ್ತರನ್ನಾಗಿ ನೇಮಕ ಮಾಡಲಾಗಿದೆ.

* ಪ್ರಸ್ತುತ ಈಗಿನ ಚುನಾವಣಾ ಆಯೋಗದ ಮುಖ್ಯ ಆಯುಕ್ತರಾಗಿ ಕಾರ್ಯ ನಿರ್ವಹಿಸುತ್ತಿರುವ ಸುನಿಲ್ ಅರೋರಾ ಅವರು ಏಪ್ರಿಲ್ 12ರಂದು ನಿವೃತ್ತರಾಗಿದ್ದಾರೆ ಈ ಸ್ಥಾನಕ್ಕೆ ಇದೀಗ ಉತ್ತರ ಪ್ರದೇಶ ಕೇಡರ್'ನ ನಿವೃತ್ತ ಐಎಎಸ್ ಅಧಿಕಾರಿಯಾದ ಅನೂಪ್ ಚಂದ್ ಪಾಂಡೆ ಅವರನ್ನು ನೇಮಕ ಮಾಡಿದ್ದಾರೆ.

* ಪ್ರಸ್ತುತ ಚುನಾವಣೆ ಆಯೋಗದ ಮೂರು ಸದಸ್ಯರಲ್ಲಿ ಕೇವಲ ಇಬ್ಬರು ಸುಶೀಲ್ ಚಂದ್ರ ಮತ್ತು ರಾಜೀವ್ ಕುಮಾರ್ ಅವರು ಕಾರ್ಯವನ್ನು ನಿರ್ವಹಿಸುತ್ತಿದ್ದರು, ಇದೀಗ ಆ ಇನ್ನೊಂದು ಆಯುಕ್ತರ ಸ್ಥಾನಕ್ಕೆ ಮಾಜಿ ಮುಖ್ಯ ಕಾರ್ಯದರ್ಶಿ ಅನೂಪ್ ಚಂದ್ರ ಪಾಂಡೆ ಅವರನ್ನು ನೇಮಿಸಿದ್ದಾರೆ.

* ಅನೂಪ್ ಚಂದ್ರ ಪಾಂಡೆ ಅವರು ಉತ್ತರ ಪ್ರದೇಶ ಕೇಡರ್'ನ 1984ನೇ ಬ್ಯಾಚ್ ಐಎಎಸ್ ಅಧಿಕಾರಿಯಾಗಿದ್ದರು ಇವರು ಈ ಮೊದಲು ಭಾರತೀಯ ರಕ್ಷಣಾ ಇಲಾಖೆಯಲ್ಲಿ ಹೆಚ್ಚುವರಿ ಕಾರ್ಯದರ್ಶಿಯಾಗಿ ಮತ್ತು ಕೇಂದ್ರದ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದಲ್ಲಿ ಜಂಟಿ ಕಾರ್ಯದರ್ಶಿಯಾಗಿ ಸೇವೆಯನ್ನು ಸಲ್ಲಿಸಿದ್ದಾರೆ, ಮತ್ತೆ ಇವರು ಉತ್ತರ ಪ್ರದೇಶ ಸರ್ಕಾರ ಮುಖ್ಯ ಕಾರ್ಯದರ್ಶಿಯಾಗಿ 2019ರ ಆಗಸ್ಟ್‌ನಲ್ಲಿ ನಿವೃತ್ತರಾಗಿದ್ದರು.

### ಬಾಂಗ್ಲಾ ವಿರುದ್ಧ ಫುಟ್‌ಬಾಲ್ ಆಟದಲ್ಲಿ ಭಾರತಕ್ಕೆ ಜಯ



* ಭಾರತ ಫುಟ್‌ಬಾಲ್ ತಂಡವು ವಿಶ್ವಕಪ್ ಮತ್ತು ಏಷ್ಯಾಕಪ್ ಫುಟ್‌ಬಾಲ್ ಅರ್ಹತಾ ಟೂರ್ನಿಯಲ್ಲಿ ಸತತವಾಗಿ 6ಪಂದ್ಯಗಳಲ್ಲಿ ಸೋಲನ್ನು ಕಂಡಿದೆ ಇದಾದ ನಂತರ ಭಾರತ ಪುಟ್ಬಾಲ್ ತಂಡವು ಬಾಂಗ್ಲಾ ವಿರುದ್ಧ ಮೊದಲ ಜಯ ಕಂಡಿದೆ.

* ಪ್ರಸ್ತುತ ಈ ಭಾರತ ಮತ್ತು ಬಾಂಗ್ಲಾ ತಂಡಗಳ ಪಂದ್ಯವು ಅಲ್ ಸದ್ ಕ್ರೀಡಾಂಗಣದಲ್ಲಿ ನಡೆಯಿತು, ಭಾರತ ತಂಡದ ನಾಯಕ ಸುನಿಲ್ ಚೆಟ್ರಿ ಅವರು 2 ಗೋಲುಗಳನ್ನು ಗಳಿಸಿದರು, ಭಾರತ ತಂಡವು 2 0 ಅಂತರದಲ್ಲಿ ಜಯ ಸಾಧಿಸಿತು.

* ಪ್ರಸ್ತುತ ಭಾರತ ಪುಟ್ಬಾಲ್ ತಂಡವು ವಿಶ್ವ ರ್ಯಾಂಕಿಂಗ್'ನಲ್ಲಿ 105ನೇ ಸ್ಥಾನದಲ್ಲಿದೆ ಅದೇ ರೀತಿ ಬಾಂಗ್ಲಾ ತಂಡವು 184ನೇ ಸ್ಥಾನದಲ್ಲಿದೆ.

* ಭಾರತ ತಂಡವು ಈಗಾಗಲೇ ವಿಶ್ವಕಪ್ ಅರ್ಹತೆಯಿಂದ ಹೊರ ನಡೆದಿದೆ, ಸದ್ಯ ಈ ಗೆಲುವಿನಿಂದ ಏಷ್ಯಾಕಪ್ ಟೂರ್ನಿಗೆ ಅರ್ಹತೆಯನ್ನು'ಗಳಿಸುವ 3ನೇ ಸುತ್ತಿನ ಪಂದ್ಯಗಳಲ್ಲಿ ಸ್ಪರ್ಧಿಸುವ ಅವಕಾಶವನ್ನು ಪಡೆದುಕೊಂಡಿದೆ.

* ಭಾರತ ಪುಟ್ಬಾಲ್ ತಂಡವು ವಿಶ್ವಕಪ್ ಅರ್ಹತಾ ಟೂರ್ನಿಯಲ್ಲಿ ಆರು ವರ್ಷಗಳ ನಂತರ ಮೊದಲ ಜಯ ಸಾಧಿಸಿದೆ, ಭಾರತ ತಂಡವು ವಿದೇಶದಲ್ಲಿ ಸುಮಾರು 20 ವರ್ಷಗಳ ನಂತರದ ಮೊದಲ ಜಯವಾಗಿದೆ, ಈ ಹಿಂದೆ 2015ರ ನವೆಂಬರ್'ನಲ್ಲಿ ಬೆಂಗಳೂರಿನಲ್ಲಿ ನಡೆದ ಪಂದ್ಯದಲ್ಲಿ ಗುವಾಮ್ ಎದುರು 1 0 ಅಂತರದಲ್ಲಿ ಭಾರತ ಜಯ ಗಳಿಸಿತ್ತು.

* ಅತೀ ಹೆಚ್ಚು ಗೋಲು ಗಳಿಸಿರುವವರ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಪೋರ್ಚುಗಲ್'ನ ಕ್ರಿಸ್ಟಿಯಾನೊ ರೊನಾಲ್ಡೊ 103 ಗೋಲುಗಳನ್ನೂ ಗಳಿಸಿದ್ದಾರೆ

* ಭಾರತದ ಸುನಿಲ್ ಚೆಟ್ರಿ ಅವರು 74 ಗೋಲುಗಳನ್ನೂಗಳಿಸಿ 2ನೇ

ಸ್ಥಾನವನ್ನು ಪಡೆದಿದ್ದಾರೆ.

* ಯುನೈಟೆಡ್ ಅರಬ್ ಎಮಿರೇಟ್ಸ್‌ನ ಅಲಿ ಮಬ್‌ಖೌತ್ 73 ಗೋಲುಗಳನ್ನೂ ಗಳಿಸಿ 3ನೇ ಸ್ಥಾನದಲ್ಲಿದ್ದಾರೆ.

## ಯುಎಸ್'ನಿಂದ ಭಾರತೀಯ ನೌಕಾಪಡೆಗೆ MH 60 ರೋಮಿಯೋ ಹೆಲಿಕಾಪ್ಟರ್ಸ್



* ಭಾರತೀಯ ನೌಕಾಪಡೆಯು ಯುನೈಟೆಡ್ ಸ್ಟೇಟ್ಸ್ (US)ನಿಂದ ಮೂರು 24 MH 60 ರೋಮಿಯೋ ಮಲ್ಟಿರೋಲ್ ಹೆಲಿಕಾಪ್ಟರ್'ಗಳನ್ನೂ 2021ರ ಜುಲೈನಲ್ಲಿ ಸ್ವೀಕರಿಸಲು ಸಿದ್ದವಾಗಿದೆ.

* ಭಾರತವು 2020ರ ಫೆಬ್ರವರಿಯಲ್ಲಿ ಲಾಕ್ಹೀಡ್ ಮಾರ್ಟಿನ್'ನಿಂದ 24 MH 60 ರೋಮಿಯೋ ಹೆಲಿಕಾಪ್ಟರ್ಗಳನ್ನು ಖರೀದಿ ಮಾಡಲು ಯುಎಸ್ ಜೊತೆಗೆ 2.4 ಬಿಲಿಯನ್ ಮೌಲ್ಯದ ಒಪ್ಪಂದಕ್ಕೆ ಸಹಿ ಹಾಕಿದೆ.

* ಪ್ರಸ್ತುತ ಈ MH 60 ರೋಮಿಯೋ ಹೆಲಿಕಾಪ್ಟರ್'ಗಳನ್ನೂ ವಿಮಾನವಾಹಕ ನೌಕೆಗಳು, ಕ್ರೂಸರ್‌ಗಳು, ಫ್ರಿಗೇಟ್‌ಗಳು ಹಾಗೂ ವಿಧ್ವಂಸಕಗಳಿಂದ ಕಾರ್ಯನಿರ್ವಹಿಸಲು ಇವುಗಳನ್ನು ಅಭಿವೃದ್ಧಿಪಡಿಸಲಾಗಿದೆ, ಇವುಗಳು ಮಲ್ಟಿ ಮೋಡ್ ರಾಡಾರ್ ಹಾಗೂ ರಾತ್ರಿ ದೃಷ್ಟಿ ಸಾಧನಗಳನ್ನು ಒಳಗೊಂಡಿವೆ, ಹಡಗುಗಳು, ಜಲಾಂತರ್ಗಾಮಿ ನೌಕೆಗಳನ್ನು ಗುರಿಯಾಗಿಸಲು ಮತ್ತು ಸಮುದ್ರದಲ್ಲಿ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ನಡೆಸಲು ಈ MH 60 ಹೆಲಿಕಾಪ್ಟರ್‌ಗಳನ್ನು ನಿರ್ಮಾಣ ಮಾಡಿದ್ದಾರೆ.

* ಭಾರತೀಯ ನೌಕಾಪಡೆಯು ರೋಮಿಯೋ MH 60 ಹೊರತಾಗಿಯು ALH MK 3 ಎಂದು ಕರೆಯುವ 3 ಸ್ಥಳೀಯವಾಗಿ ನಿರ್ಮಿಸಲಾದ ಸುಧಾರಿತ ಬೆಳಕಿನ ಹೆಲಿಕಾಪ್ಟರ್‌ಗಳನ್ನು ಸಹ ಸೇರಿಸಿವೆ ಮತ್ತು ಈ ಹೆಲಿಕಾಪ್ಟರ್‌ಗಳನ್ನು ಕರಾವಳಿ ಭದ್ರತೆ ಮತ್ತು ಕಡಲ ವಿಚಕ್ಷಣೆಗಾಗಿ ಬಳಸಿಕೊಳ್ಳಾಗುತ್ತದೆ.

## ಅಸ್ಸಾಂ ರಾಜ್ಯವು ಭಾರತ್ ರತ್ನ ಮತ್ತು ಪದ್ಮಾ ಪ್ರಶಸ್ತಿಗಳನ್ನು ನೀಡಲಿದೆ



* ಪ್ರಸ್ತುತ ಅಸ್ಸಾಂ ರಾಜ್ಯದ ಕ್ಯಾಬಿನೆಟ್ ಅಸೋಮ್ ರತ್ನ ಪ್ರಶಸ್ತಿಯನ್ನು ಸ್ಥಾಪಿಸಲು ನಿರ್ಧಾರವನ್ನು ಕೈಗೊಂಡಿದೆ.

* ಅಸ್ಸಾಂ'ನ ಈ ಅಸೋಮ್ ರತ್ನ ಪ್ರಶಸ್ತಿ ಪ್ರಶಸ್ತಿಯನ್ನು ಪ್ರತಿವರ್ಷ ಒಬ್ಬ ವ್ಯಕ್ತಿಗೆ ನೀಡಲಾಗುತ್ತದೆ, ಅದು ಆ ವ್ಯಕ್ತಿಯು ಸಮಾಜಕ್ಕೆ ನೀಡಿದ ಮಹತ್ವದ ಕೊಡುಗೆಗಳನ್ನೂ ಪರಿಗಣಿಸಿ ನೀಡಲಾಗಿತ್ತದೆ ಎಂದು ತಿಳಿಸಲಾಗಿದೆ.

* ಇದೇ ರೀತಿ ಅಸ್ಸಾಂ ರಾಜ್ಯವು ಅಸೋಮ್ ಬಿಭೂಷಣ್ ಪ್ರಶಸ್ತಿಯನ್ನು 3 ಜನರಿಗೆ, ಅಸ್ಸಾಂ ಭೂಷಣ್ ಪ್ರಶಸ್ತಿ 5 ಜನರಿಗೆ ಹಾಗೂ ಅಸೋಮ್ ಶ್ರೀ ಪ್ರಶಸ್ತಿ 10 ಜನರಿಗೆ ಪ್ರತಿ ವರ್ಷವು ಕ್ರಮವಾಗಿ ನೀಡಲಾಗುವುದು ಎಂದು ಅಸ್ಸಾಂ ಕ್ಯಾಬಿನೆಟ್ ತಿಳಿಸಿದೆ.

* ಪ್ರಶಸ್ತಿಗಳು ಮತ್ತು ನಗದು ಬಹುಮಾನ: ಅಸೋಮ್ ರತ್ನ ಪ್ರಶಸ್ತಿಗಾಗಿ 5 ಲಕ್ಷ ರೂ. ಅಸೋಮ್ ಬಿಭೂಷಣ್ ಪ್ರಶಸ್ತಿಗೆ 3 ಲಕ್ಷ ರೂ. ಅಸ್ಸಾಂ ಭೂಷಣ್ ಪ್ರಶಸ್ತಿಗೆ 2 ಲಕ್ಷ ರೂ ಅಸೋಮ್ ಶ್ರೀ ಪ್ರಶಸ್ತಿಗೆ 1 ಲಕ್ಷ ರೂ. ಈ ಪ್ರಶಸ್ತಿಯನ್ನು ಪಡೆದಿರುವ ವ್ಯಕ್ತಿಗಳಿಗೆ ಉಚಿತ ವೈದ್ಯಕೀಯ ಚಿಕಿತ್ಸೆ, ಅಸ್ಸಾಂ ರಾಜ್ಯದ ಬಸ್‌ಗಳಲ್ಲಿ ಉಚಿತ ಪ್ರಯಾಣ, ಅಸ್ಸಾಂ ಭವನದಲ್ಲಿ ಉಚಿತ ವಾಸ್ತವ್ಯ ಹಾಗೂ ಇತರೆ ಪ್ರಯೋಜನಗಳನ್ನು ನೀಡಲಾಗುತ್ತದೆ ಎಂದು ಅಸ್ಸಾಂ ರಾಜ್ಯ ಸರ್ಕಾರ ತಿಳಿಸಿದೆ.

* ಸಾಹಿತಿ ಡಾ. ಹೋಮೆನ್ ಬೋರ್ಗೋಹೈನ್ ಅವರ ಜನ್ಮದಿನ ಡಿಸೆಂಬರ್. 7ರಂದು ಅವರ ಹೆಸರಿನಲ್ಲಿ ಸಾಹಿತ್ಯಕ್ಕೆ ಪಿಂಚಣಿಯನ್ನು ನೀಡಲಾಗುತ್ತದೆ.

* ಕ್ರೀಡಾ ಪಿಂಚಣಿಯನ್ನು ಅರ್ಜುನ್ ಭೋಗೇಶ್ವರ ಬರುವಾ ಅವರ ಜನ್ಮದಿನ ಸೆಪ್ಟೆಂಬರ್ 3 ರಂದು ನೀಡಲಾಗುತ್ತದೆ.

* ಇದೇ ರೀತಿ ಪ್ರತಿವರ್ಷವು ಕಲಾವಿದ ಪ್ರಶಸ್ತಿಯನ್ನು ಜನವರಿ 17ರಂದು ನೀಡಲಾಗುತ್ತದೆ ಎಂದು ಅಸ್ಸಾಂ ಸರ್ಕಾರವು ತಿಳಿಸಿದೆ.

## ರಷ್ಯಾದ ಮೊದಲ ಪೂರ್ಣ ಸ್ಟೆಲ್ತ್ ನೇವಲ್ ಹಡಗು



* ರಷ್ಯಾ ರಾಷ್ಟ್ರವು ತನ್ನ ಮೊದಲ ನೌಕಾ ಹಡಗನ್ನು ನಿರ್ಮಾಣ ಮಾಡುತಿದ್ದು, ಈ ಹಡಗು ಸಂಪೂರ್ಣ ರಹಸ್ಯ ತಂತ್ರಜ್ಞಾನವನ್ನು ಹೊಂದಿರಲಿದೆ ಎಂದು ರಷ್ಯಾ ತಿಳಿಸಿದೆ.

* ಹರ್ ಆಫ್ ದಿ ಮರ್ಕ್ಯುರಿ ನೇವಲ್ ಕಾರ್ವೆಟ್ ಡಬ್ಡ್ ಪ್ರಾಜೆಕ್ಟ್ 20386 ಸಿದ್ದವಾಗಿದೆ ಎಂದು ರಷ್ಯಾ ತಿಳಿಸಿದೆ ಸುಮಾರು 2022ರಲ್ಲಿ ಈ ಹಡಗನ್ನು ನೌಕಾಪಡೆಗೆ ಸೇರುವ ನಿರೀಕ್ಷೆಯಿದೆ ಎಂದಿದ್ದಾರೆ.

* ರಷ್ಯಾದ ಈ ಹಡಗು ಯುದ್ಧನೌಕೆ ಕ್ರೂಸ್ ಕ್ಷಿಪಣಿಗಳು ಹಾಗೂ ವಿಮಾನ ವಿರೋಧಿ ಕ್ಷಿಪಣಿಗಳನ್ನೂ ಒಳಗೊಂಡಿದೆ, ಈ ಹಡಗು

ಜಲಾಂತರ್ಗಾಮಿ ನೌಕೆಗಳನ್ನು ಹುಡುಕುವ ಮತ್ತು ನಾಶಪಡಿಸುವ ಸಾಮರ್ಥ್ಯವನ್ನು ಹೊಂದಿದೆ.

* ಸ್ಟೆಲ್ತ್ ತಂತ್ರಜ್ಞಾನವು ಸಿಬ್ಬಂದಿ, ಹಡಗುಗಳು, ವಿಮಾನಗಳು, ಕ್ಷಿಪಣಿಗಳು, ಜಲಾಂತರ್ಗಾಮಿ ನೌಕೆಗಳು, ಉಪಗ್ರಹಗಳು, ನೆಲದ ವಾಹನಗಳು, ಅತಿಗೆಂಪು, ಸೋನಾರ್ ಇತ್ಯಾದಿಗಳನ್ನು ತಯಾರಿಸಲು ಬಳಸುವ ಹಲವು ವಿಧಾನಗಳನ್ನು ಹೊಂದಿದೆ, 1958ರಲ್ಲಿ ಈ ಆಧುನಿಕ ರಹಸ್ಯ ತಂತ್ರಜ್ಞಾನಗಳನ್ನು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಅಭಿವೃದ್ಧಿಪಡಿಸಲು ಆರಂಭಿಸಲಾಗಿದೆ.

## ಬಿಟ್‌ಕಾಯಿನ್'ನ್ನು ಕಾನೂನು ಟೆಂಡರ್ ಆಗಿ ಸ್ವೀಕರಿಸಿದ ಮೊದಲ ದೇಶ ಎಲ್ ಸಾಲ್ವಡಾರ್



* ಪ್ರಸ್ತುತ ಬಿಟ್‌ಕಾಯಿನ್'ನ್ನು ಕಾನೂನು ಟೆಂಡರ್ ಆಗಿ ಸ್ವೀಕರಿಸಿದ ಮೊದಲ ದೇಶ ಎಲ್ ಸಾಲ್ವಡಾರ್(El Salvador), ಎಲ್ ಸಾಲ್ವಡಾರ್ ಅಧಿಕೃತವಾಗಿ ಮಧ್ಯ ಅಮೆರಿಕದ ಒಂದು ದೇಶ. ಇದು ಈಶಾನ್ಯದಲ್ಲಿ ಹೊಂಡುರಾಸ್, ವಾಯುವ್ಯದಲ್ಲಿ ಗ್ವಾಟೆಮಾಲಾ ಮತ್ತು ದಕ್ಷಿಣದಲ್ಲಿ ಪೆಸಿಫಿಕ್ ಸಾಗರದ ಗಡಿಯನ್ನು ಹಂಚಿಕೊಂಡಿದೆ.

* ಅಂತರರಾಷ್ಟ್ರೀಯ ಹಣಕಾಸು ನಿಧಿಯೊಂದಿಗೆ ಎಲ್ ಸಾಲ್ವಡಾರ್‌ನ 1 ಬಿಲಿಯನ್ ಕಾರ್ಯಕ್ರಮದ ಮೇಲೆ ಕ್ರಿಪ್ಟೋಕರೆನ್ಸಿಯನ್ನು ಕಾನೂನುಬದ್ಧಗೊಳಿಸುವ ಬಗ್ಗೆ ಕಳವಳವಿತ್ತು ಆದರೂ ಸಹ ಸಾಧ್ಯವಿದ್ದ 84 ಮತಗಳಲ್ಲಿ 62 ಬಹುಮತಗಳನ್ನೂ ಪಡೆದು ಈ ಪ್ರಸ್ತಾಪವನ್ನು ಅಂಗೀಕರಿಸಲಾಗಿದೆ.

* ಪ್ರಸ್ತುತ ವಿದೇಶದಲ್ಲಿ ವಾಸ ಮಾಡುತ್ತಿರುವ ಸಾಲ್ವಡೊರನ್‌ಗಳಿಗೆ ಹಣ ರವಾನೆ ಮಾಡಲು ಸಹಾಯ ಮಾಡುವ ಸಾಮರ್ಥ್ಯವನ್ನು ಪರಿಗಣಿಸಿ ಈ ಬಿಟ್‌ಕಾಯಿನ್'ಗೆ ಅನುಮೋದನೆ ನೀಡಲಾಗಿದೆ, ಹಾಗೂ ಇದು ಎಲ್ ಸಾಲ್ವಡಾರ್ನಲ್ಲಿ ಆರ್ಥಿಕ ಹೂಡಿಕೆ, ಪ್ರವಾಸೋದ್ಯಮ ಜೊತೆಗೆ ಆರ್ಥಿಕ ಅಭಿವೃದ್ಧಿಯನ್ನು ತರಲಿದೆ ಎಂದು ತಿಳಿಸಲಾಗಿದೆ, US ಡಾಲರ್ ದೇಶದಲ್ಲಿ ಕಾನೂನು ಟೆಂಡರ್ ಆಗಿ ಮುನ್ನಡೆದಿದೆ.

* ವಿಶ್ವಬ್ಯಾಂಕ್ ಮಾಹಿತಿಯ ಪ್ರಕಾರ 2019ರಲ್ಲಿ 6 ಬಿಲಿಯನ್ ಬಿಟ್ ಕಾಯಿನ್ ದೇಶಕ್ಕೆ ರವಾನೆ ಆಗಿದೆ, ಪ್ರಸ್ತುತ GDPಯ 5ನೇ ಒಂದು ಭಾಗವಾಗಿದೆ.

* ಪ್ರಸ್ತುತ 2009ರಲ್ಲಿ ಬಿಟ್ ಕಾಯಿನ್ ಬಿಡುಗಡೆಯಾದ ಮೊದಲ ವಿಕೇಂದ್ರೀಕೃತ ಕ್ರಿಪ್ಟೋಕರೆನ್ಸಿ ಆಗಿದೆ, ಇದು ಕೇಂದ್ರ ಬ್ಯಾಂಕ್ ಅಥವಾ ಯಾವುದೇ ಏಕ ನಿರ್ವಾಹಕರನ್ನು ಹೊಂದಿರುವುದಿಲ್ಲ ಹಾಗೂ ಇದಕ್ಕೆ ಯಾವುದೇ ಮಧ್ಯವರ್ತಿಗಳ ಅಗತ್ಯವಿರುವದಿಲ್ಲ, ಇದನ್ನು ಪೀರ್ ಟು ಪೀರ್ ಬಿಟ್‌ಕಾಯಿನ್ ನೆಟ್‌ವರ್ಕ್‌ನಲ್ಲಿ ಬಳಕೆದಾರರಿಂದ ಬಳಕೆದಾರರಿಗೆ ರವಾನಿಸಲಾಗುತ್ತದೆ.

## ವಿಶ್ವದ ಅತ್ಯಂತ ವಾಸಯೋಗ್ಯ ನಗರಗಳ ಅರ್ಥಶಾಸ್ತ್ರಜ್ಞರ ವಾರ್ಷಿಕ ಸಮೀಕ್ಷೆ



* 2021ರ ವಾರ್ಷಿಕ ಸಮೀಕ್ಷೆಯ ಪ್ರಕಾರ ವಿಶ್ವದ ಅತ್ಯಂತ ವಾಸಯೋಗ್ಯ ನಗರಗಳ ಶ್ರೇಯಾಂಕ ಬಿಡುಗಡೆಯಾಗಿದೆ.

* ಪ್ರಸ್ತುತ ಕೋವಿಡ್ 19 ಸಾಂಕ್ರಾಮಿಕ ರೋಗವು ವಿಶ್ವದ ಅತ್ಯಂತ ವಾಸಯೋಗ್ಯ ನಗರಗಳ ಶ್ರೇಯಾಂಕವನ್ನು ಏರುಪೇರು ಮಾಡಿದೆ, ಇದರ ನಡುವೆಯೂ 2021ರಲ್ಲಿ ಆಕ್ಲೆಂಡ್ ಅತೀ ಹೆಚ್ಚು ವಾಸಯೋಗ್ಯ ನಗರವಾಗಿದೆ, ಆಕ್ಲೆಂಡ್ ನ್ಯೂಜಿಲೆಂಡ್‌ನ ಉತ್ತರ ದ್ವೀಪದ ಪ್ರಮುಖ ನಗರವಾಗಿದೆ.

* ಆಕ್ಲೆಂಡ್'ನ ನಂತರ ಸ್ಥಾನಗಳಲ್ಲಿ ಜಪಾನ್‌ನಲ್ಲಿ ಒಸಾಕಾ ಹಾಗೂ ಟೋಕಿಯೊ, ಆಸ್ಟ್ರೇಲಿಯಾದ ಅಡಿಲೇಡ್ ಮತ್ತು ನ್ಯೂಜಿಲೆಂಡ್‌ನ ವೆಲ್ಲಿಂಗ್ಟನ್ ನಗರಗಳಾಗಿವೆ.

* ಪ್ರಸ್ತುತ ಸಿರಿಯಾದಲ್ಲಿ ನಡೆಯುತ್ತಿರುವ ಅಂತರ್ಯುದ್ಧದ ಕಾರಣದಿಂದಾಗಿ ಡಮಾಸ್ಕಸ್‌ನಲ್ಲಿ ಜೀವನ ನಡೆಸುವದು ಅತ್ಯಂತ ಕಷ್ಟಕರವಾಗಿದೆ ಎಂದು ವರದಿಯನ್ನು ಮಾಡಿದೆ.

* ಪ್ರಸ್ತುತ 2021ರಲ್ಲಿ ವಾಸಯೋಗ್ಯಕ್ಕೆ ಯುರೋಪಿಯನ್ ನಗರಗಳು ಕಳಪೆಯಾಗಿವೆ, ಈ ಹಿಂದೆ 2018 20ರ ಸಮಯದಲ್ಲಿ ವಿಯೆನ್ನಾ ಸಿಟಿ ವಿಶ್ವದ ಅತ್ಯಂತ ವಾಸಯೋಗ್ಯ ನಗರವಾಗಿತ್ತು ಇದೀಗ ಈ ನಗರವು 12ನೇ ಸ್ಥಾನವನ್ನು ಪಡೆದಿದೆ.

* ಈ ಹಿಂದೆ ಯುರೋಪಿಯನ್ ಅಗ್ರ ಹತ್ತು ಅತಿದೊಡ್ಡ ನಗರಗಳು ವಾಸಯೋಗ್ಯಕ್ಕೆ ಉತ್ತಮವಾಗಿದ್ದವು ಇದೀಗ ಅಂದರೆ 2021ರಲ್ಲಿ ಯುರೋಪಿಯನ್ 8ನಗರಗಳು ಶ್ರೇಯಾಂಕದಲ್ಲಿ ಕುಸಿತವನ್ನು ಕಂಡಿವೆ.

# 10-06-2021

## ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ ಮಾಜಿ ಬಾಕ್ಸರ್ ಡಿಂಕೊ ಸಿಂಗ್ ವಿಧಿವಶ



* ಮಾಜಿ ಬಾಕ್ಸರ್ ಡಿಂಕೊ ಸಿಂಗ್ ಅವರು 1998ರ ಬ್ಯಾಕಾಂಕ್ ಏಷ್ಯನ್ ಗೇಮ್ಸ್'ನಲ್ಲಿ ಚಿನ್ನದ ಪದಕವನ್ನು ಗಳಿಸಿದ್ದರು, ಇದೀಗ ಇವರು ತಮ್ಮ 42ನೇ ವಯಸ್ಸಿನಲ್ಲಿ ಅನಾರೋಗ್ಯದ ಕಾರಣದಿಂದಾಗಿ ವಿಧಿವಶರಾಗಿದ್ದಾರೆ, ಪ್ರಸ್ತುತ ಕ್ರೀಡಾ ಸಚಿವ ಕಿರಣ್ ರಿಜಿಜು ಅವರು ಸಂತಾಪ ಸೂಚಿಸಿದ್ದಾರೆ.

* ಮಣಿಪುರ ಮೂಲದ ಡಿಂಕೊ ಸಿಂಗ್ ಅವರು ತಮ್ಮ 10ನೇ ವಯಸ್ಸಿನಲ್ಲಿ ಸಬ್ ಜೂನಿಯರ್ ಬಾಕ್ಸಿಂಗ್ ವಿಭಾಗದಲ್ಲಿ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು, 2000ರಲ್ಲಿ ಸಿಡ್ನಿಯಲ್ಲಿ ನಡೆದ ಒಲಿಂಪಿಕ್ಸ್‌ನಲ್ಲೂ ಭಾರತ ದೇಶದ ಪರವಾಗಿ ಆಡಿದ್ದರು.

* ಡಿಂಕೊ ಸಿಂಗ್ ಅವರಿಗೆ ಅರ್ಜುನ ಪ್ರಶಸ್ತಿ ಹಾಗೂ 2013ರಲ್ಲಿ ಪದ್ಮ ಶ್ರೀ ಪ್ರಶಸ್ತಿ ಲಭಿಸಿದೆ.

## ಮೊದಲ ಬಾರಿಗೆ ಯುದ್ಧ ವಿಮಾನ ತರಬೇತಿಗೆ ಇಬ್ಬರು ಮಹಿಳೆಯರ ಆಯ್ಕೆ



* ಮೊದಲ ಬಾರಿಗೆ ಇಬ್ಬರು ಮಹಿಳಾ ಅಧಿಕಾರಿಗಳು ಹೆಲಿಕಾಪ್ಟರ್ ಪೈಲಟ್‌ಗಳಾಗಿ ತರಬೇತಿ ಪಡೆಯಲು ಮಹಾರಾಷ್ಟ್ರದ ನಾಸಿಕ್‌ನಲ್ಲಿರುವ ಯುದ್ಧಸೇನಾ ವಿಮಾನಯಾನ ತರಬೇತಿ ಕೇಂದ್ರಕ್ಕೆ ಆಯ್ಕೆಯಾಗಿ ಹೊಸ ಮೈಲುಗಲ್ಲು ಇಟ್ಟಿದ್ದಾರೆ, ಪ್ರಸ್ತುತ ತರಬೇತಿ ಪಡೆಯಲು ಸಿದ್ಧವಾಗಿದ್ದ 47 ಸೇನಾಧಿಕಾರಿಗಳ ಪೈಕಿ ಕೇವಲ ಇಬ್ಬರು ಮಹಿಳೆಯರು ಆಯ್ಕೆಯಾಗಿದ್ದಾರೆ.

* ಹೆಲಿಕಾಪ್ಟರ್ ಪೈಲಟ್‌ಗಳಾಗಿ ತರಬೇತಿ ಪಡೆಯಲಿರುವ ಮಹಿಳಾ ಅಧಿಕಾರಿಗಳ ತರಬೇತಿಯು 2022ರ ಜುಲೈ ತಿಂಗಳಲ್ಲಿ ಪೂರ್ಣವಾಗಲಿದೆ, ನಂತರ ಇವರು ಪೈಲಟ್‌ಗಳಾಗಿ ಕಾರ್ಯ ನಿರ್ವಹಿಸಲಿದ್ದಾರೆ.

* ಪ್ರಸ್ತುತ ಭಾರತೀಯ ಸೇನೆಯ ವಾಯುಯಾನ ವಿಭಾಗದಲ್ಲಿ ಇಲ್ಲಿಯತನಕ ಪುರುಷರು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದರು, ಆದರೆ ಇದೀಗ ಮಹಿಳೆಯರನ್ನು ನೇಮಕ ಮಾಡಿಕೊಳ್ಳಲು ಸೇನಾ ಮುಖ್ಯಸ್ಥ ಜನರಲ್ ಮುಕುಂದ್‌ನ ನರವಾನೆ ಅವರು ಗ್ರೀನ್ ಸಿಗ್ನಲ್ ನೀಡಿದ ನಂತರ ಈ ಕಾರ್ಯ ನಡೆದಿದೆ, ಈ ಹಿಂದೆ ಮಹಿಳೆಯರು ಕೇವಲ ಭಾರತೀಯ ಸೇನೆಯಲ್ಲಿ ಭೂ ಕರ್ತವ್ಯ ಸೇವೆಗಳಿಗೆ ಸೇರಿಸಿಕೊಳ್ಳಲು ಮಾತ್ರ ಅವಕಾಶವಿತ್ತು ಮತ್ತೆ ಇದೀಗ ಸೇನೆಯ ವಾಯುಯಾನ ವಿಭಾಗದಲ್ಲಿಯು ಅವಕಾಶ ನೀಡಲಾಗಿದೆ.

## ಕುವೈತ್'ಗೆ ಭೇಟಿ ನೀಡಿದ ಭಾರತೀಯ ವಿದೇಶಾಂಗ ಸಚಿವ ಜೈಶಂಕರ್



* ಪ್ರಸ್ತುತ ಕುವೈತ್ ವಿದೇಶಾಂಗ ಸಚಿವ ಶೇಕ್ ಆಹಮ್ಮದ್ ನಾಸೀರ್ ಅಲ್ ಮಹಮ್ಮದ್ ಅಲ್ ಸಾಬ್ ಅವರ ಆಮಂತ್ರಣದ ಮೇರೆಗೆ ಭಾರತೀಯ ವಿದೇಶಾಂಗ ಸಚಿವ ಜೈಶಂಕರ್ ಅವರು ತೈಲ ರಾಷ್ಟ್ರವಾಗಿರುವ ಕುವೈತ್‌ಗೆ ಭೇಟಿ ನೀಡಿದ್ದಾರೆ, ನಂತರ ಅಲ್ಲಿನ ವಿದೇಶಾಂಗ ಸಚಿವರೊಂದಿಗೆ ಮಹತ್ವದ ಮಾತುಕತೆ ನಡೆಸಿ ನಂತರ ಭಾರತೀಯ ಪ್ರಧಾನಿ ಮೋದಿ ಅವರು ನೀಡಿರುವ ವೈಯಕ್ತಿಕ ಪತ್ರವನ್ನು ಕುವೈತ್'ನ ಮುಖ್ಯಸ್ಥರಿಗೆ ನೀಡಲಿದ್ದಾರೆ.

* ಭಾರತೀಯ ವಿದೇಶಾಂಗ ಸಚಿವ ಜೈಶಂಕರ್ ಅವರು ಇದೇ ಮೊದಲ ಬಾರಿಗೆ ಕುವೈತ್ ಪ್ರವಾಸ ಕೈಗೊಂಡಿದ್ದಾರೆ, ಕುವೈತ್ ವಿದೇಶಾಂಗ ಸಚಿವರು ಭಾರತಕ್ಕೆ ಭೇಟಿ ನೀಡಿದ್ದ ಸಮಯದಲ್ಲಿ ಇಂಧನ, ವ್ಯಾಪಾರ, ಬಂಡವಾಳ, ಮಾಹಿತಿ ತಂತ್ರಜ್ಞಾನ, ಮಾನವ ಸಂಪನ್ಮೂಲ ಬಗ್ಗೆ ಜಂಟಿ ಸಚಿವಾಲಯದ ಆಯೋಗ ರಚನೆಗೆ ಅನುಮತಿ ನೀಡಲಾಗಿತ್ತು.


## ಭಾರತೀಯ ಫುಟ್ಬಾಲ್ ತಂಡದ ಮಾಜಿ ನಾಯಕ ಶೇಖರ್ ಬಂಗೇರ ನಿಧನ



* ಭಾರತೀಯ ಫುಟ್ಬಾಲ್ ತಂಡದ ಮಾಜಿ ನಾಯಕನಾಗಿದ್ದ ಉಡುಪಿ ಮೂಲದ ಶೇಖರ್ ಪದ್ದು ಬಂಗೇರ ಅವರು ತಮ್ಮ 74ನೇ ವಯಸ್ಸಿನಲ್ಲಿ ಸಾಂಕ್ರಾಮಿಕ ರೋಗವಾಗಿರುವ ಕೋವಿಡ್ 19 ಬಲಿಯಾಗಿದ್ದಾರೆ ಎಂದು ತಿಳಿದಿದೆ.

* ಶೇಖರ್ ಬಂಗೇರ ಅವರು ಭಾರತೀಯ ಫುಟ್ಬಾಲ್ ತಂಡದಲ್ಲಿ ಗೋಲ್ ಕೀಪರ್ ಮತ್ತು ತಂಡದ ನಾಯಕ ಆಗಿ ಆಟವಾಡಿದ್ದರು, ಮತ್ತು ಹಲವು ಫುಟ್ಬಾಲ್ ಸಂಘಸಂಸ್ಥೆಗಳಲ್ಲಿ ಕೋಚ್ ಆಗಿ ಸೇವೆಯನ್ನು ಸಲ್ಲಿಸಿದ್ದಾರೆ.

## ಲಕ್ಷದ್ವೀಪ ಆಡಳಿತದಿಂದ ಮೀನುಗಾರಿಕಾ ದೋಣಿಗಳಲ್ಲಿ ಸಿಬ್ಬಂದಿ ನಿಯೋಜಿಸುವ ಆದೇಶ ಹಿಂದಕ್ಕೆ



* ಇತ್ತೀಚಿಗೆ ಲಕ್ಷದ್ವೀಪ ಆಡಳಿತವು ಮೀನುಗಾರಿಕಾ ದೋಣಿಗಳಲ್ಲಿ ಸರಕಾರಿ ಸಿಬ್ಬಂದಿಗಳನ್ನೂ ನಿಯೋಜಿಣೆ ಮಾಡಲಾಗುವದು ಎಂದು ಆದೇಶವನ್ನು ಹೊರಡಿಸಿತ್ತು, ಇದೀಗ ಅಲ್ಲಿನ ನೌಕರರು ಮತ್ತು ಸ್ಥಳೀಯರಿಂದ ವ್ಯಾಪಕ ಪ್ರತಿಭಟನೆ ಕಾರಣದಿಂದಾಗಿ ಮೀನುಗಾರಿಕಾ ದೋಣಿಗಳಲ್ಲಿ ಸರಕಾರಿ ಅಧಿಕಾರಿಗಳನ್ನು ನಿಯೋಜಿಸುವ ಆದೇಶವನ್ನು ಹಿಂದಕ್ಕೆ ಹಾಗೂ ಇದರ ಜೊತೆಗೆ ಹಡಗುಗಳಲ್ಲಿ ಸುರಕ್ಷತೆಯನ್ನು ಹೆಚ್ಚಿಸುವ ಆದೇಶವನ್ನು ಹಿಂಪಡೆಯಲಾಗಿದೆ ಎಂದು ಲಕ್ಷದ್ವೀಪ ಆಡಳಿತ ತಿಳಿಸಿದೆ.

* ಈ ಹಿಂದೆ ಲಕ್ಷದ್ವೀಪ ಆಡಳಿತಾಧಿಕಾರಿಯಾಗಿರುವ ಪ್ರಫುಲ್ ಖೋಡಾ ಪಟೇಲ್ ಅವರು ಪ್ರಸ್ತಾವಣೆಯ ಸುಧಾರಣೆಗಳ ವಿರುದ್ಧ ದ್ವೀಪವಾಸಿಗಳು (ಸ್ಥಳೀಯರು) ಪ್ರತಿಭಟನೆ ಆರಂಭಿಸಿರುವಾಗಲೇ ಗುಪ್ತಚರ ಮಾಹಿತಿ ಸಂಗ್ರಹಣೆಗಾಗಿ ಸ್ಥಳೀಯ ಮೀನುಗಾರಿಕಾ ದೋಣಿಗಳಲ್ಲಿ ಸರಕಾರಿ ಅಧಿಕಾರಿಗಳನ್ನು ನಿಯೋಜಿಸಲಗುವದು ಎಂದು ಲಕ್ಷದ್ವೀಪ ಆಡಳಿತ ಆದೇಶ ಹೊರಡಿಸಿತ್ತು ಇದೀಗ ಆ ಆದೇಶವನ್ನು ಹಿಂಪಡೆಯಲಾಗಿದೆ.

## ಭಾರತೀಯ ವಿದ್ಯಾರ್ಥಿಗೆ ಅಮೆರಿಕಾದ ಪ್ರತಿಷ್ಠಿತ ಪ್ರಶಸ್ತಿ



* ಭಾರತೀಯ ಮೂಲದ ವಿದ್ಯಾರ್ಥಿ ಈ ಹಿಂದೆ 1984ರಲ್ಲಿ ಭೂಪಾಲ್'ನಲ್ಲಿ ಸಂಭವಿಸಿದ ಅನಿಲ (40 ಟನ್ ಮಿಥೈಲ್ ಐಸೋಸೈನೆಟ್ ಸೋರಿಕೆ) ದುರಂತದಿಂದ ಎಚ್ಚತ್ತು ಪರಿಸರ ಸ್ನೇಹಿ ಪರ್ಯಾಯ ಫೋಮ್ ಕಂಡು ಹಿಡಿಯುವ ಕಾರ್ಯದಲ್ಲಿ ಯಶಸ್ವಿಯಾಗಿ ಅಮೆರಿಕಾದ ಪ್ರತಿಷ್ಠಿತ ಪ್ರಶಸ್ತಿಗೆ ಭಾಜನನಾಗಿದ್ದಾನೆ.

* ISEF'ನ ಅಂತಾರಾಷ್ಟ್ರೀಯ ವಿಜ್ಞಾನ ಸಮಾವೇಶದಲ್ಲಿ ಪ್ರತಿಷ್ಠಿತ ಪ್ಯಾಟ್ರಿಕ್ ಹೆಚ್ ಹರ್ಡ್ ಸಸ್ಟೈನಬಿಲಿಟಿ ಪ್ರಶಸ್ತಿಗೆ ಸೋಹಿ ಸಂಜಯ್ ಪಾಟೀಲ್ ಎಂಬ ವಿದ್ಯಾರ್ಥಿಯು ಆಯ್ಕೆಯಾಗಿದ್ದಾನೆ.

## ಅಂಡಮಾನ್ ಸಮುದ್ರದಲ್ಲಿ ಭಾರತ ಥಾಯ್ಲೆಂಡ್ ನೌಕಾಪಡೆಯ ಜಂಟಿ ಗಸ್ತು ತಿರುಗಾಟ



* ಪ್ರಸ್ತುತ ಹಿಂದೂ ಮಹಾಸಾಗರದಲ್ಲಿ ಚೀನಾ ದೇಶದ ನೌಕಾಪಡೆಗಳ ನೌಕೆಗಳು ಹೆಚ್ಚುತ್ತಿರುವ ಹಿನ್ನಲೆಯಿಂದಾಗಿ ಸದ್ಯ ಭಾರತ ಮತ್ತು ಥಾಯ್ಲೆಂಡ್ ಜಂಟಿ ನೌಕಾ ಕವಾಯತಿನ 31ನೇ ಆವೃತ್ತಿಯ ಭಾಗವಾಗಿ ಈ ನೌಕಾಪಡೆಗಳು ಜಂಟಿಯಾಗಿ 3 ದಿನಗಳ ಕಾಲ ಅಂಡಮಾನ್ ಸಮುದ್ರದಲ್ಲಿ ಗಸ್ತು ತಿರುಗಾಟವನ್ನು ನಡೆಸಿವೆ ಎಂದು ತಿಳಿದಿದೆ.

* ಹಿಂದೂ ಮಹಾಸಾಗರದಲ್ಲಿ ಎರಡು ದೇಶಗಳ ನೌಕಾಪಡೆಯ ಯುದ್ಧ ವಿಮಾನಗಳು, ಇದರ ಜೊತೆಗೆ ಭಾರತೀಯ ಮೂಲದ ಯುದ್ಧನೌಕೆ INS ಸರಯೂ ಮತ್ತು ಥಾಯ್ಲೆಂಡ್'ನ ಕ್ರಾಬಿ ಹಡಗು ಈ ಗಸ್ತು ತಿರುಗಾಟದ ಕವಾಯತಿನಲ್ಲಿ ಭಾಗಿಯಾಗಿದ್ದವು ಎಂದು ಅಧಿಕಾರಿಗಳು ಮಾಹಿತಿಯನ್ನು ನೀಡಿದರು.

* ಭಾರತೀಯ ನೌಕಾಪಡೆಯ ವಕ್ತಾರ ಕಮಾಂಡರ್ ವಿವೇಕ್ ಮಾಧ್ವಾಲ್ ಅವರು ತಿಳಿಸಿರುವ ಮಾಹಿತಿ ಪ್ರಕಾರ ಭಾರತ ಮತ್ತು ಥೈಲ್ಯಾಂಡ್ ಈ ಎರಡು ರಾಷ್ಟ್ರಗಳ ನೌಕಾಪಡೆಗಳು 2005 ರಿಂದ ಜಾಗತಿಕ ವ್ಯಾಪಾರ ಕಾರಣಗಳಿಂದ ಹಿಂದೂ ಮಹಾಸಾಗರದ ಪ್ರಮುಖ ಭಾಗವನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳಲು 2 ವರ್ಷಕ್ಕೊಮ್ಮೆ ಅಂತರರಾಷ್ಟ್ರೀಯ ಕಡಲ ಗಡಿರೇಖೆಯಲ್ಲಿ ಜಂಟಿ ನೌಕಾ ಕವಾಯತು ನಡೆಸುತ್ತಾ ಬಂದಿವೆ ಎಂದಿದ್ದಾರೆ.

## ಐಐಟಿ ಖರಗ್‌ಪುರ್ ದಿಂದ ಆರಂಭಿಕ ಚಂಡಮಾರುತ ಪತ್ತೆ ಹಚ್ಚುವ ತಂತ್ರಜ್ಞಾನ ಅಭಿವೃದ್ಧಿಪಡಿಸಿದೆ



* ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (IIT) ಖರಗ್‌ಪುರ್ ಉತ್ತರ ಹಿಂದೂ ಮಹಾಸಾಗರ ಪ್ರದೇಶದಲ್ಲಿನ ಉಷ್ಣವಲಯದ ಚಂಡಮಾರುತಗಳ ಅಥವಾ ಆರಂಭಿಕ ಸೈಕ್ಲೋನ್ ಪತ್ತೆ ಹಚ್ಚುವ ತಂತ್ರವನ್ನು ಅಭಿವೃದ್ಧಿಪಡಿಸಿದೆ.

* ಐಐಟಿ ಖರಗ್‌ಪುರ್ ಎಡ್ಡಿ ತಂತ್ರವನ್ನು ಬಳಸಿಕೊಂಡು ಆರಂಭಿಕ ಸೈಕ್ಲೋನ್ ಪತ್ತೆ ಹಚ್ಚುವ ತಂತ್ರವನ್ನು ಅಭಿವೃದ್ಧಿಪಡಿಸಿದೆ, ಈ ತಂತ್ರಜ್ಞಾನವು ಉಷ್ಣವಲಯದ ಸೈಕ್ಲೋನ್ ಮುಂಚಿತವಾಗಿ ಪತ್ತೆ ಮಾಡುವ ಅವಧಿಯನ್ನು ತನಿಖೆ ಮಾಡಲು ಸಹಾಯ ಮಾಡುತ್ತದೆ, ಈ ತಂತ್ರ ಜ್ಞಾನವು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಹವಾಮಾನ ಬದಲಾವಣೆ ಕಾರ್ಯಕ್ರಮದ ಅಡಿಯಲ್ಲಿ ಕಾರ್ಯ ನಿರ್ವಹಿಸಲಿದೆ.

* ಪ್ರಸ್ತುತ ಈ ತಂತ್ರಜ್ಞಾನವನ್ನು ವಾಯುಮಂಡಲದ ಪೂರ್ವ ಸೈಕ್ಲೋನಿಕ್ ಆರಂಭಿಕ ಹಂತವನ್ನು ಗುರುತಿಸುವ ಉದ್ದೇಶ ಮತ್ತು ಪ್ರಾದೇಶಿಕ ತಾತ್ಕಾಲಿಕ ವಿಕಾಸವನ್ನು ಪತ್ತೆ ಹಚ್ಚುವ ಸಲುವಾಗಿ ಅಭಿವೃದ್ಧಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

* ಈ ಹಿಂದೆ ಸೈಕ್ಲೋನ್'ಗಳನ್ನೂ ಮೊದಲೇ ಕಂಡುಹಿಡಿಯಲು ದೂರಸ್ಥ ಸಂವೇದನಾ ತಂತ್ರಗಳನ್ನು ಬಳಕೆ ಮಾಡಲಾಗುತ್ತಿತ್ತು, ಪ್ರಸ್ತುತ ಐಐಟಿ ಖರಗ್‌ಪುರ್'ನ ಈ ಹೊಸ ತಂತ್ರವು ಸೈಕ್ಲೋನಿಕ್ ಎಡ್ಡಿಗಳನ್ನು ಆಧರಿಸಿ ಆರಂಭಿಕ ಹಂತದಲ್ಲಿ ಚಂಡಮಾರುತಗಳ ಮುನ್ಸೂಚನೆಯನ್ನು ಕಂಡುಹಿಡಿಯಲು ಬಳಸಬಹುದಾಗಿದೆ ಎಂದು ತಿಳಿಸಲಾಗಿದೆ.

* ಮಾನ್ಸೂನ್ ನಂತರದ 4 ತೀವ್ರ ಚಂಡಮಾರುತಗಳು 2013ರಲ್ಲಿ ಫೈಲಿನ್, ವರ್ದಾ ಮತ್ತು ಮಡಿ 2018ರಲ್ಲಿ ಗಜಾ ಇದರ ಜೊತೆಗೆ 2 ಮಾನ್ಸೂನ್'ನ ಪೂರ್ವ ಚಂಡಮಾರುತಗಳು 2017ರಲ್ಲಿ ಮೊರಾ ಹಾಗೂ 2009ರಲ್ಲಿ ಐಲಾ ಪ್ರಕರಣಗಳನ್ನು ಸಂಶೋಧಕರು ನಡೆಸಿದ್ದಾರೆ, ಈ ತಂತ್ರವು ಚಂಡಮಾರುತಗಳಿಗೆ ಕನಿಷ್ಠ 4 ದಿನಗಳ ಪ್ರಮುಖ ಸಮಯದೊಂದಿಗೆ ಕಂಡುಹಿಡಿಯಲು ಸಾಧ್ಯವಾಗಿದೆ ಎಂದು ತಿಳಿಸಿದ್ದಾರೆ.

## ಬಾಲ ಕಾರ್ಮಿಕ ಪದ್ಧತಿ ಕುರಿತು ILO UNICEF ವರದಿ ಪ್ರಕಟ



* ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ILO) ಮತ್ತು ಯುನಿಸೆಫ್ ಜಂಟಿಯಾಗಿ ಬಾಲ ಕಾರ್ಮಿಕ ಪದ್ಧತಿ ಕುರಿತು ವರದಿಯನ್ನು ಪ್ರಕಟಿಸಿವೆ, ಅದುವೇ ವಿಶ್ವವು 2ದಶಕಗಳಲ್ಲಿ ಬಾಲ ಕಾರ್ಮಿಕ ಪದ್ಧತಿಯನ್ನು ಹೆಚ್ಚಿಸಿದೆ ಎಂದು ತಿಳಿಸಿದೆ.

* ಈ ಹಿಂದಿನ 4ವರ್ಷಗಳಲ್ಲಿ 8.4 ಮಿಲಿಯನ್ ಇದ್ದ ಬಾಲ ಕಾರ್ಮಿಕರ ಸಂಖ್ಯೆ 2020ರ ಸಮಯಕ್ಕೆ 160 ಮಿಲಿಯನ್ ಆಗಿದೆ ಎಂದು ವರದಿ ಮಾಡಿದೆ, ಆದರೆ ಈ ಕೋವಿಡ್ 19 ಸಾಂಕ್ರಾಮಿಕ ರೋಗದ ನಡುವೆ ಜಾಗತಿಕವಾಗಿ 10ರಲ್ಲಿ 1 ಮಗು ಬಾಲ ಕಾರ್ಮಿಕ ಪದ್ಧತಿಯಲ್ಲಿ ತೊಡಗಿದೆ ಎಂದು ತಿಳಿಸಿದ್ದಾರೆ.

* ಸರಿ ಸುಮಾರು 79 ಮಿಲಿಯನ್ ಮಕ್ಕಳು ಅಪಾಯಕಾರಿ ಕೆಲಸ ಮಾಡುವದರಲ್ಲಿ ತೊಡಗಿದ್ದಾರೆ, ಅದು 5 ರಿಂದ 17 ವರ್ಷದ ಮಕ್ಕಳಾಗಿದ್ದರೆ ಎಂದು ತಿಳಿಸಿದೆ, ಮತ್ತು ಇದರಿಂದ ಮಕ್ಕಳ ಅಭಿವೃದ್ಧಿ, ಶಿಕ್ಷಣ ಅಥವಾ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಎಂದಿದ್ದಾರೆ.

# 11-06-2021

## ನೈಜೀರಿಯಾದಲ್ಲಿ ಟ್ವಿಟರ್ ನಿಷೇಧ: 'ಕೂ' ಆಯಪ್ ಬಳಕೆಗೆ ಸಮ್ಮತಿ




* ನೈಜೀರಿಯಾ ದೇಶದಲ್ಲಿ ಅಮೆರಿಕ ಮೂಲದ ಸಾಮಾಜಿಕ ಜಾಲತಾಣ ಟ್ವಿಟರ್`ನ್ನು ನಿಷೇಧಿಸಿದೆ, ಇದೀಗ ಬೆಂಗಳೂರು ಮೂಲದ ಸ್ಟಾರ್ಟ್‌ಅಪ್ ಅಭಿವೃದ್ಧಿಪಡಿಸಿರುವ 'ಕೂ' ಆಯಪ್ ಬಳಕೆಗೆ ಅಲ್ಲಿನ ಸರ್ಕಾರ ಸಮ್ಮತಿ ನೀಡಿದೆ, ಇದರ ಬೆನ್ನಲ್ಲೇ "ಕೂ" ಸಹ ಸಂಸ್ಥಾಪಕ ಆರ್ ಅಪ್ರಮೇಯ ಋಷಿಯನ್ನು ವ್ಯಕ್ತಪಡಿಸಿದ್ದಾರೆ.

* ಕೆಲವು ದಿನಗಳ ಹಿಂದೆ ಅಂದರೆ ಜೂನ್ 2 ರಂದು ನೈಜೀರಿಯಾ ಅಧ್ಯಕ್ಷ ಮುಹಮ್ಮದ್ ಬುಹಾರಿ ಅವರ ಟ್ವೀಟ್`ನ್ನು ಅವಹೇಳನಕಾರಿ ನೀತಿಯ ಉಲ್ಲಂಘನೆಯನ್ನು ಉಲ್ಲೇಖಿಸಿ ಅಳುಹಿಸಲಾಗಿತ್ತು, ಇದರ ನಂತರ ನೈಜೀರಿಯಾ ಸರ್ಕಾರ ಟ್ವಿಟರ್'ಗೆ ಅನಿರ್ದಿಷ್ಟಾವಧಿಗೆ ನಿಷೇಧವನ್ನು ಹೇರಿತ್ತು ಎಂದು ನೈಜೀರಿಯಾದ ಮಾಹಿತಿ ಮತ್ತು ಸಂಸ್ಕೃತಿ ಸಚಿವ ಲೈ ಮೊಹಮ್ಮದ್ ಅವರು ತಿಳಿಸಿದ್ದರು.

* ನೈಜೀರಿಯಾದಲ್ಲಿ ಟ್ವಿಟರ್ ನಿಷೇದ ಹೇರಿಕೆಯನ್ನು ತಗೆಯಬೇಕಾದರೆ ಟ್ವಿಟರ್ ಮೊದಲು ನೈಜೀರಿಯಾದಲ್ಲಿ ಕಂಪನಿಯಾಗಿ ನೋಂದಾಯಿಸಿಕೊಳ್ಳಬೇಕು ಮತ್ತು ನೈಜೀರಿಯಾದ ಸಾಂಸ್ಥಿಕ ಅಸ್ತಿತ್ವಕ್ಕೆ ವಿರುದ್ಧವಾದ ಚಟುವಟಿಕೆಗಳನ್ನು ಉತ್ತೇಜಿಸುವವರು ಈ ಆಪ್'ನ್ನು ಬಳಸಲು ಅನುಮತಿ ನೀಡಬಾರದು ಈ ನೀತಿಗಳಿಗೆ ಒಪ್ಪಿಕೊಳ್ಳಬೇಕು ಎಂದು ನೈಜೀರಿಯಾದ ಮಾಹಿತಿ ಮತ್ತು ಸಂಸ್ಕೃತಿ ಸಚಿವ ಲೈ ಮೊಹಮ್ಮದ್ ಅವರು ಎಎಫ್‌ಪಿಗೆ ಮಾಹಿತಿಯನ್ನು ತಿಳಿಸಿದರು.

* ಪ್ರಸ್ತುತ 2021ರ ಹೊಸ ಐಟಿ ನಿಯಮಗಳನ್ನು ಫೇಸ್‌ಬುಕ್, ವಾಟ್ಸ ಆಯಪ್ ಮತ್ತು ಗೂಗಲ್ ಒಡೆತನದ ಎಲ್ಲ ಪ್ರಮುಖ ವೇದಿಕೆಗಳು ಪಾಲಿಸುತ್ತಿವೆ, ಆದರೆ ಟ್ವಿಟರ್ ಹೊಸ ಐಟಿ ನಿಯಮಗಳನ್ನು ಪಾಲಿಸುತ್ತಿಲ್ಲ ಎಂದು ತಿಳಿದು ಬಂದಿದೆ.

## ಭಾರತದ ಕೊವ್ಯಾಕ್ಸಿನ್ ಲಸಿಕೆಯ ತುರ್ತು ಬಳಕೆ ಅರ್ಜಿಗೆ ಅಮೆರಿಕಾದಲ್ಲಿ ತಿರಸ್ಕಾರ




* ಪ್ರಸ್ತುತ ಯುಎಸ್ ಆಹಾರ ಮತ್ತು ಔಷಧೀಯ ಪ್ರಾಧಿಕಾರವು ಭಾರತ್ ಬಯೋಟೆಕ್ ಉತ್ಪಾದಿಸುವ ಕೋವಿಡ್ 19 ಕೊವ್ಯಾಕ್ಸಿನ್ ಲಸಿಕೆಯ ತುರ್ತು ಬಳಕೆ ಅರ್ಜಿಯ ಪ್ರಸ್ತಾವನೆಯನ್ನು ತಿರಸ್ಕರಿಸಿದೆ.

* ಭಾರತ್ ಬಯೋಟೆಕ್ ಸಂಸ್ಥೆಯ ಜೊತೆ ಬಯೋಫಾರ್ಮಾಸ್ಯುಟಿಕಲ್ ಕಂಪನಿ 'ಯುನೈಟೆಡ್ ಸ್ಟೇಟ್ಸ್`ನಲ್ಲಿ ಕೊವಾಕ್ಸಿನ್ ಲಸಿಕೆ ಪೂರೈಕೆ ಮಾಡುವದಕ್ಕೆ ಒಪ್ಪಂದವನ್ನು ಮಾಡಿಕೊಂಡಿದೆ, ಆದರೆ US`ನ ಆಹಾರ ಮತ್ತು ಔಷಧೀಯ ಪ್ರಾಧಿಕಾರದ ನಿರ್ಧಾರ ಹಾಗೂ ಶಿಫಾರಸ್ಸಿನ ಆಧಾರದ ಮೇಲೆ ಪೂರ್ಣ ಪ್ರಮಾಣದ ಸಮ್ಮತಿ ಸಂಗ್ರಹಿಸಿ ಅನುಮೋದನೆ ಪಡೆಯಲಾಗುವುದು ಎಂದು ಈ ಕಂಪನಿ ತಿಳಿಸಿದೆ.

* ಭಾರತ್ ಬಯೋಟೆಕ್ ಸಂಸ್ಥೆಯು 2021ನೇ ಮಾರ್ಚ್ ತಿಂಗಳಿನಲ್ಲಿ ನಡೆಸಿದ ಕೊವ್ಯಾಕ್ಸಿನ್ ಲಸಿಕೆ ದತ್ತಾಂಶವನ್ನು ಒಕುಜೆನ್ ಸಂಸ್ಥೆಯು ಯುಎಸ್ FDA`ಗೆ ಸಲ್ಲಿಸಿದ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ, ಆದರೆ US`ನ ಆಹಾರ ಮತ್ತು ಔಷಧೀಯ ಪ್ರಾಧಿಕಾರವು ಕಳೆದ ತಿಂಗಳ ಆರಂಭದಲ್ಲೇ ಕೊವಿಡ್ 19 ಲಸಿಕೆ ಅನುಮೋದನೆಗೆ ಸಂಬಂಧಿಸಿದ ಹೊಸ

ಅರ್ಜಿಗಳಿಗೆ ಅನುಮತಿ ನೀಡುವುದಿಲ್ಲ ಎಂದು ತಿಳಿಸಿತ್ತು. ಇದಾದ ನಂತರ ಜೂನ್`ನಲ್ಲಿ ತುರ್ತು ಬಳಕೆ ಅರ್ಜಿ ಸಲ್ಲಿಸಲು ಅರ್ಹತೆ ಪಡೆಯಲಿದೆ ಎಂದು ಕಂಪನಿಯು ಒಕುಜೆನ್ ತಿಳಿಸಿದೆ.

## ಅಮೆರಿಕದ ಫೆಡರಲ್ ನ್ಯಾಯಾಧೀಶರಾಗಿ ಮುಸ್ಲಿಂ ಅಮೆರಿಕನ್ ಝುಹೀದ್ ಖುರೇಷಿ ನಾಮನಿರ್ದೇಶನ



* ಪ್ರಸ್ತುತ ಪಾಕಿಸ್ತಾನಿ ಅಮೆರಿಕನ್ ಝುಹೀದ್ ಖುರೇಷಿ ಅವರನ್ನು ವಾಷಿಂಗ್ಟನ್ ನ್ಯೂಜೆರ್ಸಿಯ ಜಿಲ್ಲಾ ನ್ಯಾಯಾಲಯದ ಫೆಡರಲ್ ನ್ಯಾಯಾಧೀಶರನ್ನಾಗಿ ನಾಮನಿರ್ದೇಶನಗೊಳಿಸುವ ನಿರ್ಣಯಕ್ಕೆ ಅಮೆರಿಕದ ಸೆನೆಟ್ ಅನುಮೋದನೆಯನ್ನು ನೀಡಿದೆ.ಇದೇ ಮೊದಲ ಬಾರಿ ಅಮೆರಿಕದ ಇತಿಹಾಸದಲ್ಲಿಯೇ ಜಿಲ್ಲಾ ನ್ಯಾಯಾಲಯಕ್ಕೆ ಮುಸ್ಲಿಂ ವ್ಯಕ್ತಿ ನ್ಯಾಯಾಧೀಶರಾಗಿ ನೇಮಕ ಗೊಳ್ಳಲಿದ್ದಾರೆ ಎಂದು ತಿಳಿಸಿದೆ.

* ಅಮೆರಿಕದ ಸೆನೆಟ್‌ನಲ್ಲಿ ನಡೆದ ಚುನಾವಣೆಯಲ್ಲಿ ಝುಹೀದ್ ಖುರೇಷಿ ಅವರು 81 ಮತಗಳನ್ನು ಪಡೆದಿದ್ದಾರೆ ಇದರಿಂದಾಗಿ ಇವರನ್ನು ನ್ಯಾಯಾಧೀಶರಾಗಿ ನಾಮನಿರ್ದೇಶನ ಮಾಡುವುದಕ್ಕೆ ಅನುಮೋದನೆ ಸಿಕ್ಕಿದೆ.

* ಮುಸ್ಲಿಂ ಅಮೆರಿಕನ್ ವ್ಯಕ್ತಿಯನ್ನು ಫೆಡರಲ್ ನ್ಯಾಯಾಧೀಶರಾಗಿ ನೇಮಕ ಮಾಡಲು ರಿಪಬ್ಲಿಕನ್ ಡೆಮಾಕ್ರಟಿಕ್ ಪಕ್ಷದ 34ಸೆನೆಟರ್‌ಗಳು ಅನುಮೋದನೆ ನೀಡಿದ್ದಾರೆ.

## ಭಾರತದ ಈಶಾನ್ಯ ರಾಜ್ಯಗಳಲ್ಲಿ ಮ್ಯಾನ್ಮಾರ್`ನ ಸಾವಿರಾರು ಜನರು



* ಭಾರತದ ಈಶಾನ್ಯ ರಾಜ್ಯಗಳಲ್ಲಿ ಮ್ಯಾನ್ಮಾರ್`ನ ಸಾವಿರಾರು ಜನರು ಆಶ್ರಯ ಪಡೆದಿದ್ದು, ಇದರಿಂದಾಗಿ ಹೊಸ ಸಮಸ್ಯೆಗಳನ್ನು ಎದುರಾಗುವ ಸಾಧ್ಯತೆಗಳಿವೆ ಎಂದು ಈಶಾನ್ಯ ರಾಜ್ಯಗಳ ಅಧಿಕಾರಿಗಳು ಕಳವಳವನ್ನು (ಆತಂಕ) ವ್ಯಕ್ತಪಡಿಸಿದ್ದಾರೆ.

* ಪ್ರಸ್ತುತ ಮ್ಯಾನ್ಮಾರ್`ನ ಪ್ರಜಾಪ್ರಭುತ್ವ ಮರುಸ್ಥಾಪಿಸುವಂತೆ ನಡೆಸುವ ಹೋರಾಟದ ಚಟುವಟಿಕೆಗಳಿಗೆ ಈ ರಾಜ್ಯಗಳು ತಾಣವಾಗಬಹುದು, ಇದರಿಂದಾಗಿ ಇಲ್ಲಿ ಅಸ್ಥಿರತೆ ಸೃಷ್ಟಿಯಾಗುವ ಸಾಧ್ಯತೆಗಳಿವೆ ಎಂದು ತಿಳಿಸಿದ್ದಾರೆ.

* ಮಿಜೋರಾಂ, ಮಣಿಪುರ ಮತ್ತು ನಾಗಾಲ್ಯಾಂಡ್ ಪ್ರಸ್ತುತ ಈಶಾನ್ಯ ರಾಜ್ಯಗಳಲ್ಲಿ ಮ್ಯಾನ್ಮಾರ್`ನ ಸರಿ ಸುಮಾರು 16 ಸಾವಿರ ಜನರು ಆಶ್ರಯ ಪಡೆಯುತ್ತಿದ್ದಾರೆ, ಇದರಲ್ಲಿ ಅತೀ ಹೆಚ್ಚು ಜನರು ಮಿಜೋರಾಂ ರಾಜ್ಯವನ್ನು ಪ್ರವೇಶಿಸಿದ್ದಾರೆ ಎಂದು ಅಲ್ಲಿನ ಸರ್ಕಾರಿ ಅಧಿಕಾರಿಗಳು ಅಂದಾಜಿಸಿ ಮಾಹಿತಿಯನ್ನು ನೀಡಿದ್ದಾರೆ.

* ಇತ್ತೀಚಿಗೆ ಮ್ಯಾನ್ಮಾರ್`ನಲ್ಲಿ ನಡೆಯುತ್ತಿರುವ ಮಿಲಿಟರಿ ಆಡಳಿತದ ದೌರ್ಜನ್ಯದಿಂದ ಪಾರಾಗಲು ಅಲ್ಲಿನ ಜನರು ಈಶಾನ್ಯ ರಾಜ್ಯಗಳಿಗೆ ಆಗಮಿಸಿದ್ದಾರೆ.

## ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ 3.61 ಲಕ್ಷ ಮನೆಗಳ ನಿರ್ಮಾಣ




* ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಆವಾಸ್ ಯೋಜನೆ ನಗರ (PMAY U) ಅಡಿಯಲ್ಲಿ ಸುಮಾರು 3.61 ಲಕ್ಷ ಮನೆಗಳ ನಿರ್ಮಾಣದ ಪ್ರಸ್ತಾವಗಳಿಗೆ ಕೇಂದ್ರವು ಅನುಮತಿಯನ್ನು ನೀಡಿದೆ.

* ಕೇಂದ್ರ ಸರ್ಕಾರವು ಕೇಂದ್ರ ಮಂಜೂರಾತಿ ಮತ್ತು ನಿಗಾ ಸಮಿತಿಯ 54ನೇ ಸಭೆಯಲ್ಲಿ ಈ ಯೋಜನೆಯ ನಿರ್ಧಾರವನ್ನು ತೆಗೆದುಕೊಂಡಿದೆ. ಈ ಸಭೆಯಲ್ಲಿ ಒಟ್ಟು 13 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಪಾಲ್ಗೊಂಡಿದ್ದವು ಎಂದು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಮಾಹಿತಿಯನ್ನು ನೀಡಿದೆ.

* 2021 ರ PMAY U ಪ್ರಶಸ್ತಿಗಳ ನೂರು ದಿನದ ಸವಾಲುಗಳ ಆಂದೋಲನಕ್ಕೆ ಕೇಂದ್ರ ಸಚಿವಾಲಯದ ಕಾರ್ಯದರ್ಶಿ ಶ್ರೀ ಶಂಕರ್ ಮಿಶ್ರ ಅವರು ಚಾಲನೆ ನೀಡಿದರು. ಈ ಪ್ರಶಸ್ತಿಗಳನ್ನೂ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸ್ಥಳೀಯ ಸಂಸ್ಥೆಯ ಫಲಾನುಭವಿಗಳ ಕೊಡುಗೆ ಹಾಗೂ ಸಾಧನೆಗಳನ್ನೂ ಪರಿಗಣಿಸಿ ಈ ಪ್ರಶಸ್ತಿಗಳನ್ನು ನೀಡಲಾಗುತ್ತದೆ ಎಂದು ಸಚಿವಾಲಯವು ಮಾಹಿತಿ ನೀಡಿದೆ.

* ಪ್ರಸ್ತುತ PMAY U ಯೋಜನೆ ಅಡಿಯಲ್ಲಿ ಮಂಜೂರಾದ ಒಟ್ಟು ಮನೆಗಳ ಸಂಖ್ಯೆ 112.4 ಲಕ್ಷ. ಇದರಲ್ಲಿ 82.5 ಲಕ್ಷ.ಮನೆಗಳ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವದು, ಈಗಾಗಲೇ 48.31 ಲಕ್ಷ. ಮನೆಗಳನ್ನು ಪೂರ್ಣಗೊಳಿಸಿ ಜನರಿಗೆ ಹಸ್ತಾಂತರಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

## ಜಿ 7 ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ




* 2021 ರ ಜೂನ್‌ನಲ್ಲಿ ಯುಕೆ ನೇತೃತ್ವದ ಜಿ 7 ವರ್ಚುವಲ್ ಶೃಂಗಸಭೆಯು ಕಾರ್ನ್‌ವಾಲ್‌ನಲ್ಲಿ ನಡೆಯಲಿದೆ. ಈ ಸಭೆಯಲ್ಲಿ ಭಾರತೀಯ ಪ್ರಧಾನಿ ನರೇಂದ್ರ ಮೋದಿ ಭಾಗಿಯಾಗಲಿದ್ದಾರೆ.

* ಜಿ 7 ಶೃಂಗಸಭೆಯು ಇದೇ 2021 ರ ಜೂನ್ 12 ಮತ್ತು 13 ರಂದು ನಡೆಯಲಿದೆ, ಈ ಜಿ 7 ಶೃಂಗಸಭೆಯುಲ್ಲಿ ಭಾರತದ ಪ್ರಧಾನಿಯವರು 2ನೇ ಬಾರಿ ಭಾಗವಹಿಸಲಿದ್ದಾರೆ.

* ಜಿ 7 ಫ್ರೆಂಚ್ ಪ್ರೆಸಿಡೆನ್ಸಿ ಬಿಯರಿಟ್ಜ್ ಶೃಂಗಸಭೆಗೆ ಗುಡ್‌ವಿಲ್ ಪಾಲುದಾರ 2019 ರಲ್ಲಿ ಭಾರತವನ್ನು ಈ ಸಭೆಗೆ ಆಹ್ವಾನ ನೀಡಿತ್ತು, ಆ ಸಂಧರ್ಭದಲ್ಲಿ ಮೋದಿ ಅವರು ಹವಾಮಾನ, ಜೀವವೈವಿಧ್ಯ ಹಾಗೂ ಸಾಗರಗಳು ಮತ್ತು ಡಿಜಿಟಲ್ ಟ್ರಾನ್ಸ್‌ಫರ್ಮೇಷನ್ ವಿಷಯಗಳ ಕುರಿತು ಅಧಿವೇಶನಗಳಲ್ಲಿ ಭಾಗಿಯಾಗಿದ್ದರು.

* 2021 ರಲ್ಲಿ ನಡೆಯುವ ಈ ಜಿ 7 ಶೃಂಗಸಭೆಯು 47ನೇ ಸಭೆಯಾಗಿದೆ, ಈ ಜಿ 7 ಶೃಂಗಸಭೆಯಲ್ಲಿ ಏಳು ಜಿ 7 ಸದಸ್ಯ ರಾಷ್ಟ್ರಗಳ ನಾಯಕರು ಮತ್ತು ಯುರೋಪಿಯನ್ ಒಕ್ಕೂಟದ ಪ್ರತಿನಿಧಿಗಳು ಭಾಗಿಯಾಗುತ್ತಾರೆ, ಪ್ರಸ್ತುತ 1981 ರಿಂದ ಯುರೋಪಿಯನ್ ಆಯೋಗದ ಅಧ್ಯಕ್ಷರು ಈ ಎಲ್ಲಾ ಜಿ 7 ಸಭೆಗಳು ಮತ್ತು ನಿರ್ಧಾರ ತೆಗೆದುಕೊಳ್ಳುವಲ್ಲಿ ಶಾಶ್ವತವಾಗಿ ಭಾಗವಹಿಸುವವರಾಗಿದ್ದರೆ.

* ಜಿ 7 ದೇಶಗಳು: ಕೆನಡಾ, ಫ್ರಾನ್ಸ್, ಇಟಲಿ, ಜರ್ಮನಿ, ಜಪಾನ್, ಯುಕೆ ಮತ್ತು ಯುಎಸ್ ದೇಶಗಳು.

## 2020 21ರ ಅವಧಿಯಲ್ಲಿ ಭಾರತದ ಕೃಷಿ ರಫ್ತು




* 2020 21ರ ಅವಧಿಯ ಭಾರತದ ಕೃಷಿ ಸಂಬಂಧಿತ ಉತ್ಪನ್ನಗಳ ರಫ್ತು ಶೇಕಡಾ 17.34% ರಷ್ಟು ಏರಿಕೆಯಾಗಿದೆ ಅಂದರೆ 41.25 ಬಿಲಿಯನ್ USD ಗಳಿಗೆ ಸಮ ಎಂದರ್ಥ.

* ಭಾರತವು ಈ ಕೃಷಿ ರಫ್ತಿನ ಬೆಳವಣಿಗೆಯಲ್ಲಿ ಸಿರಿಧಾನ್ಯಗಳಾಗಿರುವ ಗೋಧಿ, ರಾಗಿ, ಬಾಸ್ಮತಿ ಅಲ್ಲದ ಅಕ್ಕಿ, ಮೆಕ್ಕೆಜೋಳ ಹಾಗೂ ಇತರ ಧಾನ್ಯಗಳ ರಫ್ತಿನಲ್ಲಿ ಬೆಳವಣಿಗೆಯನ್ನು ಕಂಡಿವೆ ಎಂದು ವಾಣಿಜ್ಯ ಕಾರ್ಯದರ್ಶಿಯಾಗಿರುವ ಅನುಪ್ ವಾಧವನ್ ಮಾಹಿತಿ ನೀಡಿದ್ದಾರೆ.

* ಭಾರತದಲ್ಲಿ ಮೊದಲ ಬಾರಿಗೆ ಕ್ಲಸ್ಟರ್‌ಗಳಿಂದ ರಫ್ತು ನಡೆದಿದೆ, ಅವುಗಳು ವಾರಣಾಸಿಯಿಂದ ತಾಜಾ ತರಕಾರಿ ಹಾಗೂ ಮಾವಿನಹಣ್ಣು, ಚಂದೌಲಿಯಿಂದ ಕಪ್ಪು ಅಕ್ಕಿ ರವಾನೆಯಾಗಿವೆ.

* ಪ್ರಸ್ತುತ ಯುನೈಟೆಡ್ ಸ್ಟೇಟ್ಸ್, ಚೀನಾ, ಬಾಂಗ್ಲಾದೇಶ, ಯುನೈಟೆಡ್ ಅರಬ್ ಎಮಿರೇಟ್ಸ್, ವಿಯೆಟ್ನಾಂ, ಸೌದಿ ಅರೇಬಿಯಾ, ಇಂಡೋನೇಷ್ಯಾ, ನೇಪಾಳ, ಇರಾನ್ ಮತ್ತು ಮಲೇಷ್ಯಾ ರಾಷ್ಟ್ರಗಳು ಭಾರತದ ಕೃಷಿ ಉತ್ಪನ್ನಗಳ ಅತಿದೊಡ್ಡ ಮಾರುಕಟ್ಟೆಯಾಗಿರುವ ದೇಶಗಳಾಗಿವೆ.

* ಭಾರತ ದೇಶವು ದಾಳಿಂಬೆಗಾಗಿ ಆಸ್ಟ್ರೇಲಿಯಾದಲ್ಲಿ ಮಾರುಕಟ್ಟೆ ಪ್ರವೇಶವನ್ನು ಪಡೆದಿದೆ, ಕಿತ್ತಳೆಗಾಗಿ ಸರ್ಬಿಯಾದಲ್ಲಿ ಮಾರುಕಟ್ಟೆ ಪ್ರವೇಶ, ಮಾವು ಮತ್ತು ಬಾಸ್ಮತಿ ಅಕ್ಕಿಗಾಗಿ ಅರ್ಜೆಂಟೀನಾದಲ್ಲಿ ಮಾರುಕಟ್ಟೆ ಪ್ರವೇಶ, ಮಾವು, ಬಾಳೆಹಣ್ಣು ಹಾಗೂ ಸೋಯಾಬೀನ್ ಎಣ್ಣೆಕೇಕ್‌ಗಾಗಿ ಉಜ್ಬೇಕಿಸ್ತಾನದಲ್ಲಿ ಮಾರುಕಟ್ಟೆ ಪ್ರವೇಶ, ಕ್ಯಾರೆಟ್ ಬೀಜಗಳಿಗಾಗಿ ಇರಾನ್‌ನಲ್ಲಿ ಮಾರುಕಟ್ಟೆ ಪ್ರವೇಶ, ಅಂತಿಮವಾಗಿ ಗೋಧಿ ಹಿಟ್ಟು, ಬಾಸ್ಮತಿ ಅಕ್ಕಿ ಜೊತೆ ಟೊಮೆಟೊ, ಓಕ್ರಾ ಹಾಗೂ ಈರುಳ್ಳಿ ಬೆಳೆಗಳಿಗಾಗಿ ಭೂತಾನ್‌ನಲ್ಲಿ ಮಾರುಕಟ್ಟೆ ಪ್ರವೇಶವನ್ನು ಪಡೆದುಕೊಂಡಿದೆ.

## ಅಸ್ಸಾಂ ರಾಜ್ಯದ 7ನೇ ರಾಷ್ಟ್ರೀಯ ಉದ್ಯಾನವನ "ಡಿಹಿಂಗ್ ಪಾಟ್ಕೈ"




* ಪ್ರಸ್ತುತ ಅಸ್ಸಾಂ ರಾಜ್ಯದ ಕಣಿವೆಯ ಉಷ್ಣವಲಯದ ಆರ್ದ್ರ ನಿತ್ಯಹರಿದ್ವರ್ಣ ಕಾಡುಗಳ ಕೊನೆಯ ವಿಸ್ತಾರವಾದ ಡಿಹಿಂಗ್ ಪಟ್ಕೈ (Dhing Patkai) ಯನ್ನು ರಾಷ್ಟ್ರೀಯ ಉದ್ಯಾನವನವೆಂದು ಅಸ್ಸಾಂ ಸರ್ಕಾರ ತಿಳಿಸಿದೆ.

* ಭಾರತದಲ್ಲಿ ಅತಿ ಹೆಚ್ಚು ರಾಷ್ಟ್ರೀಯ ಉದ್ಯಾನವನಗಳನ್ನು ಹೊಂದಿರುವ ಪೈಕಿ ಅಸ್ಸಾಂ ರಾಜ್ಯವು 3ನೇ ಸ್ಥಾನದಲ್ಲಿದೆ.

* ಮಧ್ಯಪ್ರದೇಶ ರಾಜ್ಯವು 12 ರಾಷ್ಟ್ರೀಯ ಉದ್ಯಾನವನಗಳನ್ನು ಹೊಂದಿ ಅಗ್ರ ಸ್ಥಾನದಲ್ಲಿದೆ.

* ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು 9 ರಾಷ್ಟ್ರೀಯ ಉದ್ಯಾನವನಗಳನ್ನು ಹೊಂದಿ 2ನೇ ಸ್ಥಾನದಲ್ಲಿದೆ.

* ಡಿಹಿಂಗ್ ಪಟ್ಕೈ ರಾಷ್ಟ್ರೀಯ ಉದ್ಯಾನವನ ಅಸ್ಸಾಂನ ದಿಬ್ರುಗರಃ ಮತ್ತು ಟಿನ್ಸುಕಿಯಾ ಜಿಲ್ಲೆಗಳನ್ನು ಒಳಗೊಂಡ 234.26 ಚದರ.ಕಿ.ಮೀ. ವಿಸ್ತೀರ್ಣ ಹೊಂದಿದೆ, ಈ ಉದ್ಯಾನವನವು 310 ಜಾತಿಯ ಚಿಟ್ಟೆ, ಹಾಗೂ ಹುಲಿ, ಚಿರತೆ, ಹಾಗೂ 47 ಜಾತಿಯ ಸರೀಸೃಪಗಳು ಮತ್ತು ಸಸ್ತನಿಗಳನ್ನು ಒಳಗೊಂಡ ಉದ್ಯಾನವನ ಇದಾಗಿದೆ.

### ವಿಶ್ವದ ಅತಿ ಉದ್ದದ ಕೇಬಲ್'ಅನ್ನು ಸಾಗರದೊಳಗೆ ನಿರ್ಮಿಸಲು ಸಿದ್ದವಾದ ಗೂಗಲ್



* ಪ್ರಸ್ತುತ ಗೂಗಲ್ ಸಂಸ್ಥೆಯು ಇಂಟರ್ನೆಟ್ ಸಂಪರ್ಕ ಸಾಮರ್ಥ್ಯವನ್ನು ಹೆಚ್ಚಿಸಲು ಯುನೈಟೆಡ್ ಸ್ಟೇಟ್ಸ್, ಬ್ರೆಜಿಲ್, ಅರ್ಜೆಂಟೀನಾ ಮತ್ತು ಉರುಗ್ವೆ ರಾಷ್ಟ್ರಗಳನ್ನು ಸಂಪರ್ಕಿಸುವ ವಿಶ್ವದ ಅತಿ ಉದ್ದದ ಸಾಗರದೊಳಗಿನ ಕೇಬಲ್'ನ್ನು ನಿರ್ಮಿಸಲು ಆಲ್ಫಾಬೆಟ್ ಗೂಗಲ್ ಸಿದ್ಧವಾಗಿದೆ.

* ಗೂಗಲ್ ಸಂಸ್ಥೆಯು ಫಿರ್ಮಿನಾ ಎಂದು ಕರೆಯುವ ಸಾಗರದೊಳಗಿನ ಕೇಬಲ್ ಯುನೈಟೆಡ್ ಸ್ಟೇಟ್ಸ್'ನ ಪೂರ್ವ ಕರಾವಳಿಯಿಂದ ಹಿಡಿದು ಅರ್ಜೆಂಟೀನಾದ ಲಾಸ್ ಟೋನಿನಾಸ್ ಮತ್ತು ಬ್ರೆಜಿಲ್ನ ಪ್ರಿಯಾ ಗ್ರಾಂಡೆ ಮತ್ತು ಉರುಗ್ವೆಯ ಪಂಟಾ ಡೆಲ್ ಎಸ್ಟೇನಲ್ಲಿ ಹೆಚ್ಚುವರಿ ಇಳಿಯುವಿಕೆಯೊಂದಿಗೆ ಈ ಕೇಬಲ್ ಚಲಿಸುತ್ತದೆ ಎಂದು ತಿಳಿಸಿದೆ.

* ಪ್ರಸ್ತುತ ದಕ್ಷಿಣ ಅಮೆರಿಕಾದಲ್ಲಿ ಗೂಗಲ್ ಸೇವೆಗಳನ್ನು ಬಳಸುತ್ತಿರುವವರ ಪ್ರವೇಶವನ್ನು ಫಿರ್ಮಿನಾ ಸಾಗರದ ಒಳಗಿನ ಈ ಕೇಬಲ್ ಸುಧಾರಿಸಲಿದೆ ಎಂದು ತಿಳಿಸಿದ್ದಾರೆ, ಈ ಕೇಬಲ್ 12ಫೈಬರ್ ಜೋಡಿಗಳನ್ನು ಹೊಂದಿರುತ್ತದೆ, ಇದು ಗೂಗಲ್ ಬಳಕೆದಾರರಿಗೆ ಜಿಮೇಲ್, ಯೂಟ್ಯೂಬ್ ಮತ್ತು ಗೂಗಲ್ ಸೇವೆಗಳನ್ನೂ ವೇಗವಾಗಿ ಒದಗಿಸಿಕೊಡುತ್ತದೆ.

* ಈ ಆಲ್ಫಾಬೆಟ್ ಗೂಗಲ್ ಅಮೇರಿಕನ್ ಬಹುರಾಷ್ಟ್ರೀಯ ಸಂಘವನ್ನು ಗೂಗಲ್ 2015ರ ಅಕ್ಟೋಬರ್. 2ರಂದು ರಚಿಸಿದೆ, ಹಾಗೂ ಇದು ಪ್ರಧಾನ ಕಚೇರಿಯನ್ನು ಕ್ಯಾಲಿಫೋರ್ನಿಯಾದಲ್ಲಿ ಹೊಂದಿದೆ.

* ಆದಾಯದ ಪ್ರಕಾರ ಈ ಗೂಗಲ್ ಕಂಪನಿ ವಿಶ್ವದ 4ನೇ ಅತಿದೊಡ್ಡ ತಂತ್ರಜ್ಞಾನ ಕಂಪನಿಯಾಗಿದೆ.

## 12-06-2021

### ಕನ್ನಡದ ದಲಿತ ಕವಿ ಡಾ. ಸಿದ್ದಲಿಂಗಯ್ಯ ನಿಧನ



* ದಲಿತ ಕವಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷರಾಗಿದ್ದ ಡಾ. ಸಿದ್ದಲಿಂಗಯ್ಯ ಅವರು ತಮ್ಮ 66ನೇ ವಯಸ್ಸಿನಲ್ಲಿ ಕೋವಿಡ್ 19 ಸಾಂಕ್ರಾಮಿಕ ರೋಗದಿಂದ ಮೃತಪಟ್ಟಿದ್ದಾರೆ.

* ಡಾ. ಸಿದ್ದಲಿಂಗಯ್ಯ ಅವರು ದಲಿತರ ಧ್ವನಿಯಾಗಿದ್ದರು, ದಲಿತರ ಬಂಡಾಯಗಳ ಚಳುವಳಿಯಲ್ಲಿ ಸಕ್ರಿಯರಾಗಿ ಭಾಗಿಯಾಗುತ್ತಿದ್ದರು, ಹಾಗೂ ರಾಜ್ಯದ ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕರಲ್ಲಿ ಒಬ್ಬರಾಗಿ ಸೇವೆ ಸಲ್ಲಿಸಿದ್ದಾರೆ, ಇದರ ಜೊತೆಗೆ ಸಾಮಾಜಿಕ ಸಮಾನತೆಯ ಕವನ, ಕಾವ್ಯ, ನಾಟಕ, ಪ್ರಬಂಧ, ವಿಮರ್ಶೆ, ಸಂಶೋಧನೆ, ಆತ್ಮಕಥನ ಹೀಗೆ ಹಲವಾರು ಸಾಹಿತ್ಯ ರಚಿಸಿ ಹೆಸರುವಾಸಿಯಾಗಿದ್ದರು.

* ಡಾ. ಸಿದ್ದಲಿಂಗಯ್ಯ ಅವರು 1954 ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮಾಗಡಿ ತಾಲೂಕು ಮಂಚನಬೆಲೆ ಎಂಬ ಗ್ರಾಮದಲ್ಲಿ ಜನಿಸಿದ್ದರು, ಇವರು 2 ಬಾರಿ ವಿಧಾನಪರಿಷತ್ತಿನ ಸದಸ್ಯರಾಗಿದ್ದರು.

* ಡಾ. ಸಿದ್ದಲಿಂಗಯ್ಯ ಅವರು ರಚಿಸಿದ ಅನೇಕ ಕೃತಿಗಳು: ಏಕಲವ್ಯ, ನೆಲಸಮ, ಪಂಚಮ, ಸದನದಲ್ಲಿ ಸಿದ್ದಲಿಂಗಯ್ಯ ಭಾಗ 1 ಮತ್ತು ಭಾಗ 2, ಆತ್ಮಕಥೆಯಾದ ಊರುಕೇರಿ ಭಾಗ 1 ಮತ್ತು ಭಾಗ 2 ಹೀಗೆ ಹಲವು ಕೃತಿಗಳನ್ನು ರಚಿಸಿದ್ದಾರೆ.

* ಡಾ. ಸಿದ್ದಲಿಂಗಯ್ಯ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಜಾನಪದ ತಜ್ಞ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಪ್ರೆಸಿಡೆನ್ಸಿ ಇನ್ಸ್ಟಿಟ್ಯೂಷನ್ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ಪಂಪ ಪ್ರಶಸ್ತಿಗಳು ಲಭಿಸಿವೆ, ಇವರು 81ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು, ಈ ಸಮ್ಮೇಳನವು ಶ್ರವಣಬೆಳಗೊಳದಲ್ಲಿ ನಡೆದಿದೆ.

### ಕುವೈತ್'ನಲ್ಲಿ ಭಾರತೀಯ ಮನೆಗೆಲಸದವರ ನೇಮಕಾತಿಗೆ ಕಾನೂನು ಚೌಕಟ್ಟಿನ ಸಹಕಾರ



* ಪ್ರಸ್ತುತ ಕೊಲ್ಲಿ ರಾಷ್ಟ್ರಗಳಲ್ಲಿನ ಭಾರತೀಯ ಮನೆಗೆಲಸದವರ ನೇಮಕಾತಿಯನ್ನು ವ್ಯವಸ್ಥಿತವಾಗಿಸುವ ಮತ್ತು ಕಾನೂನಿನ ಚೌಕಟ್ಟಿನಲ್ಲೇ ಇವರಿಗೆ ರಕ್ಷಣೆ ದೊರಕಿಸಿಕೊಡುವಂತಹ ಒಡಂಬಡಿಕೆಯೊಂದಕ್ಕೆ ಇದೀಗ ಭಾರತ ಮತ್ತು ಕುವೈತ್ ರಾಷ್ಟ್ರಗಳು ಪರಸ್ಪರ ಒಪ್ಪಿಕೊಂಡು ಸಹಿ ಹಾಕಿವೆ.

* ಪ್ರಸ್ತುತ ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಹಾಗೂ ಕುವೈತ್'ನ ಅವರ ಸಹವರ್ತಿ ಶೇಖ್ ಅಹ್ಮದ್ ನಾಸೀರ್ ಅಲ್ ಮೊಹಮ್ಮದ್ ಅಲ್ ಸಭಾ ಅವರ ಸಮ್ಮುಖದಲ್ಲಿ ಕೊಲ್ಲಿ ರಾಷ್ಟ್ರಗಳಲ್ಲಿನ ಭಾರತೀಯ ಮನೆಗೆಲಸದವರಿಗೆ ರಕ್ಷಣೆ ದೊರಕಿಸಿಕೊಡುವಂತಹ ಒಡಂಬಡಿಕೆಯೊಂದಕ್ಕೆ ಕುವೈತ್‌ನಲ್ಲಿರುವ ಭಾರತೀಯ ರಾಯಭಾರಿ ಸಿ ಬಿ ಜಾರ್ಜ್ ಮತ್ತು ಕುವೈತ್'ನ ವಿದೇಶಾಂಗ ವ್ಯವಹಾರಗಳ ಸಚಿವಾಲಯದ

ಸಹಾಯಕ ಸಚಿವ ಮಜಿದ್ ಅಹ್ಮದ್ ಅಲ್ ದಫೀರಿ ಅವರು ಪರಸ್ಪರ ಒಪ್ಪಿ ಪತ್ರಕ್ಕೆ ಸಹಿ ಹಾಕಿದರು.

## ಮಿಲಿಟರಿ ಸಿಬ್ಬಂದಿಯನ್ನು ಅವಮಾನಿಸುವುದನ್ನು ನಿಷೇಧಿಸುವ ಮಸೂದೆಗೆ ಅನುಮೋದನೆ ನೀಡಿದ ಚೀನಾ



* ಚೀನಾ ರಾಷ್ಟ್ರವು ಇದೀಗ ಮಿಲಿಟರಿ ಸಿಬ್ಬಂದಿಯನ್ನು ಅವಮಾನಿಸುವುದನ್ನು ನಿಷೇಧಿಸುವ ಮಸೂದೆಗೆ ಅನುಮೋದನೆ ನೀಡಿದೆ, ಪ್ರಸ್ತುತ ಚೀನಾದ ನ್ಯಾಷನಲ್ ಪೀಪಲ್ಸ್ ಕಾಂಗ್ರೆಸ್‌ನ ಸ್ಥಾಯಿ ಸಮಿತಿಯು ಈ ಮಸೂದೆಯನ್ನು ಮಂಡಿಸಿ ಅನುಮೋದನೆ ನೀಡಿದೆ.

* ಮಿಲಿಟರಿ ಸಿಬ್ಬಂದಿಯನ್ನು ಯಾವುದೇ ವ್ಯಕ್ತಿ ಅಥವಾ ಸಂಘಟನೆಗಳು ಯಾವುದೇ ರೀತಿಯಲ್ಲಿ ಅವಹೇಳನ ಮಾಡುವದು ಮತ್ತು ಗೌರವಕ್ಕೆ ಧಕ್ಕೆ ತರುವದನ್ನು ನಿಷೇಧಿಸಲು ಈ ಮಸೂದೆಗೆ ಅನುಮೋದನೆ ನೀಡಲಾಗಿದೆ ಎಂದು ಚೀನಾ ಸರ್ಕಾರಿ ಷಿನ್‌ಹುವಾ ಎಂಬ ಸುದ್ದಿವಾಹಿನಿ ವರದಿ ನೀಡಿದೆ.

* ಈ ಹಿಂದೆ ಭಾರತ ಮತ್ತು ಚೀನಾ ಸೈನಿಕರ ಮಧ್ಯೆ ಪೂರ್ವ ಲಡಾಖ್'ನ ಗಡಿಯಲ್ಲಿನ ಗಾಲ್ವಾನ್ ಕಣಿವೆಯಲ್ಲಿ ಸಂಘರ್ಷ ನಡೆದಿತ್ತು ಆ ಸಂದರ್ಭದಲ್ಲಿ ಭಾರತದ ಸೈನಿಕರು ಚೀನಾ ದೇಶದ ಸೈನಿಕರನ್ನು ಹತ್ಯೆ ಮಾಡಿದ್ದರು, ಆದರೆ ಚೀನಾ ಈ ಮೊದಲು ಇದನ್ನು ಒಪ್ಪಿಕೊಂಡಿದಿಲ್ಲ, ನಂತರದ ದಿನಗಳಲ್ಲಿ ನಮ್ಮ 4ಸೈನಿಕರು ಹತ್ಯೆಯಾಗಿದ್ದಾರೆ ಎಂದು ಒಪ್ಪಿಕೊಂಡಿತು, ಈ ವಿಷಯದ ಬಗ್ಗೆ ಚೀನಾದ ಖ್ಯಾತ ಬ್ಲಾಗರ್' ಅವರು ಲೇಖನವನ್ನು ಬರೆದಿದ್ದರು, ಈ ಲೇಖನದಲ್ಲಿ ಯೋಧರನ್ನು ಅವಮಾನಿಸಲಾಗಿದೆ ಎಂದು ಅಲ್ಲಿನ ಕಮ್ಯುನಿಸ್ಟ್ ಸರ್ಕಾರವು ಕಿಡಿಕಾರಿ ಲೇಖಕ ಬ್ಲಾಗರ್'ಅವರಿಗೆ ಶಿಕ್ಷೆಯನ್ನು ನೀಡಿತ್ತು ಎಂದು ತಿಳಿಸಿದೆ.

## ಗ್ರೀಕೊ ರೋಮನ್ ಕುಸ್ತಿ ಕೋಚ್ ತೆಮೊ ಕಜರಶಿವಿಲಿ ವಜಾ



* ಪ್ರಸ್ತುತ ಭಾರತ ಕ್ರೀಡಾ ಪ್ರಾಧಿಕಾರವು ಈ ಬಾರಿಯ ಒಲಿಂಪಿಕ್ಸ್'ಗೆ ಭಾರತದ ಗ್ರೀಕೊ ರೋಮ್ ಕುಸ್ತಿಪಟುಗಳ ಪೈಕಿ ಯಾರೊಬ್ಬರಿಗೂ ಅವಕಾಶ ಸಿಗದ ಕಾರಣದಿಂದಾಗಿ ಗ್ರೀಕೊ ರೋಮನ್ ಕುಸ್ತಿ ಕೋಚ್ ತೆಮೊ ಕಜರಶಿವಿಲಿ ಅವರನ್ನು ವಜಾಗೊಳಿಸಿದೆ.

* ಭಾರತವು 2019 ರಲ್ಲಿ ಜಾರ್ಜಿಯಾದ ತೆಮೊ ಕಜರಶಿವಿಲಿ ಅವರ ಜೊತೆಗೆ ಗ್ರೀಕೊ ರೋಮನ್ ಕುಸ್ತಿಪಟುಗಳಿಗೆ ಒಲಿಂಪಿಕ್ಸ್'ವರೆಗೂ ತರಬೇತಿ ನೀಡಲು ಒಪ್ಪಂದವನ್ನು ಮಾಡಿಕೊಂಡಿತ್ತು, ಈ ಕುಸ್ತಿ ತರಬೇತಿಯು ಸೋನೆಪತ್'ನಲ್ಲಿ ನಡೆದ ರಾಷ್ಟ್ರೀಯ ಶಿಬಿರದಲ್ಲಿ ನಡೆಸಲಾಗುತ್ತಿತ್ತು.

* ಟೋಕಿಯೊ ಒಲಿಂಪಿಕ್ಸ್'ಗೆ ಫ್ರೀಸ್ಟೈಲ್ ಕುಸ್ತಿಪಟುಗಳ ಪೈಕಿ ತಲಾ 4 ಪುರುಷರು ಹಾಗೂ ಮಹಿಳೆಯರು ಟಿಕೆಟ್ ಪಡೆದುಕೊಂಡಿದ್ದಾರೆ, ಇದೀಗ ಭಾರತ ಕುಸ್ತಿ ಫೆಡರೇಷನ್'ನ ಶಿಫಾರಸಿನ ಮೇರೆಗೆ ಕೋಚ್ ಅವರ ಒಪ್ಪಂದವನ್ನು ಮುಕ್ತಾಯಗೊಳಿಸಲಾಗಿದೆ ಎಂದು ಭಾರತ ಕ್ರೀಡಾ ಪ್ರಾಧಿಕಾರವು ತಿಳಿಸಿದೆ.

## ಸುಪ್ರೀಂಕೋರ್ಟ್ "ಒನ್ ನೇಷನ್, ಒನ್ ರೇಷನ್ ಕಾರ್ಡ್" ಯೋಜನೆ ಜಾರಿಗೊಳಿಸಲು ರಾಜ್ಯಗಳಿಗೆ ಸೂಚನೆ




* "ಒಂದು ರಾಷ್ಟ್ರ, ಒಂದು ಪಡಿತರ ಕಾರ್ಡ್" ಯೋಜನೆಯನ್ನು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಜಾರಿಗೆ ತರಬೇಕು ಎಂದು ಸುಪ್ರೀಂ ಕೋರ್ಟ್ ಸೂಚಿಸಿದೆ.

* ಪ್ರಸ್ತುತ ಈ "ಒಂದು ರಾಷ್ಟ್ರ, ಒಂದು ಪಡಿತರ ಕಾರ್ಡ್" ಯೋಜನೆಯನ್ನು ಪಶ್ಚಿಮ ಬಂಗಾಳ, ಛತ್ತೀಸ್ ಗಢ ಹಾಗೂ ಅಸ್ಸಾಂ ರಾಜ್ಯಗಳು ಈ ಯೋಜನೆಯನ್ನು ಜಾರಿಗೆ ತಂದಿಲ್ಲ ಎಂದು ತಿಳಿದು ಬಂದಿದೆ.

* ಬೇರೆ ಬೇರೆ ರಾಜ್ಯಗಳಲ್ಲಿನ ವಲಸೆ ಕಾರ್ಮಿಕರು ಅವರ ಕೆಲಸದ ಸ್ಥಳದಲ್ಲಿ ಪಡಿತರ ಚೀಟಿಗಳನ್ನು ನೋಂದಾಯಿಸಬಹುದು ಮತ್ತು ಅದೇ ಸ್ಥಳದಲ್ಲಿ ಪಡಿತರವನ್ನು ಪಡೆಯಲು ಈ ಯೋಜನೆಯು ಅನುಮತಿಯನ್ನು ನೀಡುತ್ತದೆ.

* ವಲಸೆ ಕಾರ್ಮಿಕರಿಗೆ ಆಹಾರ ವಿತರಣೆಯ ವಿಷಯದ ಬಗ್ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್ ಹಾಗೂ ಎಂ.ಆರ್.ಶಾ ಅವರ ಪೀಠವು ವಿಚಾರಣೆಯನ್ನು ನಡೆಸಿತ್ತು, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಯಾವುದೇ ಕಾರಣವನ್ನು ಪರಿಗಣಿಸಲಾಗುವುದಿಲ್ಲ ಎಂದು ತಿಳಿಸಿದೆ, ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು "ಒನ್ ನೇಷನ್ ಒನ್ ರೇಷನ್" ಯೋಜನೆಯನ್ನು ಜಾರಿಗೆ ತರಬೇಕು ಎಂದು ಸುಪ್ರೀಂ ಕೋರ್ಟ್ ಸೂಚಿಸಿದೆ.

## ಶಿಕ್ಷಣ ಸಚಿವಾಲಯವು ಶಾಲೆಯಿಂದ ಹೊರಗಿರುವ ಮಕ್ಕಳ ಡೇಟಾವನ್ನು ಸಂಗ್ರಹಿಸಲು ಆನ್‌ಲೈನ್ ಮಾಡ್ಯೂಲ್'ನ್ನು ಅಭಿವೃದ್ಧಿಪಡಿಸಿದೆ



* ಪ್ರಸ್ತುತ ಶಿಕ್ಷಣ ಸಚಿವಾಲಯವು ಶಾಲೆಯಿಂದ ಹೊರಗಿರುವ ಮಕ್ಕಳ ಡೇಟಾವನ್ನು ಸಂಗ್ರಹಿಸಲು ಆನ್‌ಲೈನ್ ಮಾಡ್ಯೂಲ್'ನ್ನು ಅಭಿವೃದ್ಧಿಪಡಿಸಿದೆ, ಇದರಿಂದ ತ್ರೈಮಾಸಿಕ ಪ್ರಗತಿ ವರದಿಯನ್ನು ಅಪ್‌ಲೋಡ್ ಮಾಡಲು ಶಿಕ್ಷಣ ಸಚಿವಾಲಯ ರಾಜ್ಯ ಮತ್ತು ಕೇಂದ್ರ ಪ್ರದೇಶಗಳಿಗೆ ಕೇಳಿದೆ.

* ಈ ಆನ್‌ಲೈನ್ ಮಾಡ್ಯೂಲ್ ಶಾಲೆಯಿಂದ ಹೊರಗಿರುವ ಮಕ್ಕಳನ್ನು ಶಾಲಾ ತರಗತಿಗೆ ಮರಳಿ ತರಲು ಸಹಾಯ ಮಾಡುತ್ತದೆ, ಈ ಮಾಡ್ಯೂಲ್ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಮುಖ ಕೇಂದ್ರಕ್ಕೆ ಅನುಗುಣವಾಗಿದೆ.

* ಪ್ರಸ್ತುತ ಶಾಲೆಗಳಿಂದ ಹೊರಗುಳಿದಿರುವ ಮಕ್ಕಳು ಮತ್ತು ಎಸ್‌ಟಿಸಿಗಳ ಮಾಹಿತಿಯನ್ನು ಬ್ಲಾಕ್ ಸಂಪನ್ಮೂಲ ಸಂಯೋಜಕರ ಅಡಿಯಲ್ಲಿ ಬ್ಲಾಕ್ ಮಟ್ಟದಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ ಎಂದು ತಿಳಿಸಿದೆ.

* ಪ್ರಸ್ತುತ ಈ ಕೋವಿಡ್ 19 ಸಾಂಕ್ರಾಮಿಕ ರೋಗದ ಮಧ್ಯೆ ಲಕ್ಷಾಂತರ ವಿದ್ಯಾರ್ಥಿಗಳು ಶಾಲೆಗಳಿಂದ ಹೊರಗುಳಿದಿದ್ದಾರೆ ಎಂದು ತಜ್ಞರು ಮತ್ತು ಶಿಕ್ಷಣ ತಜ್ಞರು ಅಭಿಪ್ರಾಯಪಟ್ಟಿದ್ದರಿಂದ ಈ ಮಾಡ್ಯೂಲ್'ನ್ನು ಅಭಿವೃದ್ಧಿಪಡಿಸಿದೆ.

* ಈ ಆನ್‌ಲೈನ್ ಮಾಡ್ಯೂಲ್ ಶಾಲಾ ಶಿಕ್ಷಣಕ್ಕಾಗಿ ಅಭಿವೃದಿಪಡಿಸಿದ ಸಂಯೋಜಿತ ಯೋಜನೆ ಇದಾಗಿದೆ, ಇದು ಶಾಲೆಯಲ್ಲಿ ಎಲ್ಲಾ ಹಂತದಲ್ಲೂ ಸಮಾನ ಗುಣಮಟ್ಟದ ಶಿಕ್ಷಣವನ್ನು ಖಾತ್ರಿಗೊಳಿಸುತ್ತದೆ, ಮತ್ತು ಸರ್ವ ಶಿಕ್ಷಣ ಅಭಿಯಾನ್, ಶಿಕ್ಷಕರ ಶಿಕ್ಷಣ ಮತ್ತು ರಾಷ್ಟ್ರೀಯ ಮಧ್ಯಮಕ್ಷ ಶಿಕ್ಷಣ ಅಭಿಯಾನಗಳನ್ನು ಸಬ್‌ಮ್ಯೂಸ್ ಮಾಡುವ ಮೂಲಕ ಈ ಯೋಜನೆಯನ್ನು ಆರಂಭಿಸಲಾಗಿದೆ ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ.

## "ನಮಸ್ತೆ ಯೋಗ" ಮೊಬೈಲ್ App ಆರಂಭಿಸಿದ ಆಯುಷ್ ಸಚಿವಾಲಯ




* ಇದೇ 2021 ರ ಜೂನ್. 11ರಂದು 7 ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ 'ನಮಸ್ತೆ ಯೋಗ' ಎಂಬ ಮೊಬೈಲ್ ಅಪ್ಲಿಕೇಶನ್'ನ್ನು ಆಯುಷ್ ಸಚಿವಾಲಯವು ಆರಂಭಿಸಿದೆ, ಹಾಗೂ ಈ ಅಪ್ಲಿಕೇಶನ್ ಯೋಗಕ್ಕೆ ಮಾತ್ರ ಸೀಮಿತವಾಗಿರಲಿದೆ ಎಂದು ತಿಳಿಸಿದೆ.

* ಆಯುಷ್ ಸಚಿವಾಲಯವು, ಮೊರಾರ್ಜಿ ದೇಸಾಯಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಯೋಗ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಆಯೋಜಿಸಿದೆ, ಇದೇ ಸಮಯದಲ್ಲಿ ಆಯುಷ್ ಸಚಿವರಾಗಿರುವ ಶ್ರೀ ಕಿರೆನ್ ರಿಜಿಜು ಅವರು ಅಂತರರಾಷ್ಟ್ರೀಯ ಯೋಗ ದಿನ (IDY) 2021 ರಂದು ದೂರದರ್ಶನದಲ್ಲಿ ಸುಮಾರು 10 ದಿನಗಳ ಯೋಗದ ಈ ಸರಣಿಯನ್ನು ಕೇಂದ್ರ ಸಂದೇಶ ಮೂಲಕ ತಿಳಿಸುತ್ತದೆ, "ಬಿ ವಿಥ್ ಯೋಗ, ಬಿ ಅಟ್ ಹೋಂ" ಎಂದು ಹೇಳಿದರು.

* ಸಾರ್ವಜನಿಕರಿಗೆ ಮಾಹಿತಿ ವೇದಿಕೆಯಾಗಿ ಈ ನಮಸ್ತೆ ಯೋಗ ಅಪ್ಲಿಕೇಶನ್'ನ್ನು ಅಭಿವೃದ್ಧಿ ಪಡಿಸಲಾಗಿದೆ, ಇದರಿಂದ ಯೋಗದ ಜಾಗೃತಿ ಹಾಗೂ ದೊಡ್ಡ ಸಮುದಾಯಕ್ಕೆ ಯೋಗವನ್ನು ಪ್ರವೇಶಿಸುವ ಉದ್ದೇಶದಿಂದ ನಮಸ್ತೆ ಯೋಗ ಅಪ್ಲಿಕೇಶನ್ ಆರಂಭಿಸಲಾಗಿದೆ.

* ಪ್ರತಿ ವರ್ಷ ಜೂನ್. 21 ರಂದು ಅಂತರರಾಷ್ಟ್ರೀಯ ಯೋಗ ದಿನ (IDY) ಆಚರಣೆ ಮಾಡಲಾಗುತ್ತದೆ, ಈ ಹಿಂದೆ 2020 ನೇ ವರ್ಷದ ಧ್ಯೇಯವಾಕ್ಯ 'ಆರೋಗ್ಯಕ್ಕಾಗಿ ಯೋಗ ಮನೆಯಲ್ಲಿ ಯೋಗ' ವಿಷಯದ ಅಡಿಯಲ್ಲಿ ಆಚರಿಸಲಾಗಿತ್ತು, ಪ್ರಸ್ತುತ 2021 ನೇ ವರ್ಷದ ಧ್ಯೇಯವಾಕ್ಯ 'ಮನೆಯಲ್ಲಿ ಯೋಗ ಮತ್ತು ಕುಟುಂಬದೊಂದಿಗೆ ಯೋಗ' ಎಂಬ ವಿಷಯದ ಅಡಿಯಲ್ಲಿ ಆಚರಿಸಲಾಗುವುದು.

* 2014 ರ ಡಿಸೆಂಬರ್'ನಲ್ಲಿ ವಿಶ್ವಸಂಸ್ಥೆಯು ನಿರ್ಣಯವನ್ನು ಅಂಗೀಕರಿಸಲಾಯಿತು, ಜೂನ್.21 ರಂದು ಅಂತರರಾಷ್ಟ್ರೀಯ ಯೋಗ ದಿನ ಎಂದು ಘೋಷಣೆ ಮಾಡಿತು, 2015 ರಲ್ಲಿ ಪ್ರಥಮ ಯೋಗ ದಿನವನ್ನು ನವದೆಹಲಿಯ ರಾಜ್‌ಪಾತ್'ನಲ್ಲಿ ಆಚರಣೆ ಮಾಡಲಾಯಿತು.

## ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮಾವೇಶದ ಮುಖ್ಯಸ್ಥರಾದ 1 ನೇ ಮಹಿಳೆ ರೆಬೆಕಾ ಗ್ರಿನ್ಸ್‌ಪಾನ್



* ಪ್ರಸ್ತುತ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯು ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮಾವೇಶದ (UNCTAD) ಮುಖ್ಯಸ್ಥರಾಗಿ ಅರ್ಥಶಾಸ್ತ್ರಜ್ಞ ರೆಬೆಕ್ಕಾ ಗ್ರಿನ್ಸ್‌ಪಾನ್ ಅವರನ್ನು ನಾಮನಿರ್ದೇಶನ ಮಾಡಲು ಅನುಮೋದನೆ ನೀಡಿದೆ.

* ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮಾವೇಶದ ಪ್ರಧಾನ ಕಾರ್ಯದರ್ಶಿಯಾಗಿ ಸೆಕ್ರೆಟರಿ ಜನರಲ್ ಆಂಟೋನಿಯೊ ಗುಟೆರೆಸ್ ಅವರು ನಾಮನಿರ್ದೇಶನಗೊಂಡಿದ್ದಾರೆ.

* ರೆಬೆಕ್ಕಾ ಗ್ರಿನ್ಸ್‌ಪಾನ್ ಅವರು ಜಿನೀವಾ ಮೂಲದ UNCTAD ಸಂಘಟನೆಯನ್ನು ಮುನ್ನಡೆಸಿದ್ದಾರೆ, ಈ ಮೊದಲು 2014 ರಿಂದ ರೆಬೆಕಾ ಗ್ರಿನ್ಸ್‌ಪಾನ್ ಅವರು ಐಬೆರೋ ಅಮೇರಿಕನ್ ಜನರಲ್ ಸೆಕ್ರೆಟರಿಯಟ್‌ನ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

* ಯುನೈಟೆಡ್ ನೇಷನ್ಸ್ ಡೆವಲಪ್ಮೆಂಟ್ ಪ್ರೋಗ್ರಾಂನ ಉಪ ನಿರ್ವಾಹಕರಾಗಿ 2010 ರಿಂದ 2014 ರವರೆಗೆಯೂ ಕೆಲಸ ಮಾಡಿದ್ದಾರೆ, ಇದರ ಜೊತೆಯಲ್ಲಿ ಲ್ಯಾಟಿನ್ ಅಮೆರಿಕ ಹಾಗೂ ಕೆರಿಬಿಯನ್ ದೇಶಗಳ ಯುಎನ್ಡಿಪಿಯ ಪ್ರಾದೇಶಿಕ ನಿರ್ದೇಶಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

* 1964 ರಲ್ಲಿ ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಕುರಿತ ವಿಶ್ವಸಂಸ್ಥೆಯ ಸಮ್ಮೇಳವನ್ನು ಶಾಶ್ವತ ಅಂತರ್ ಸರ್ಕಾರಿ ಸಂಸ್ಥೆಯಾಗಿ ಸ್ಥಾಪನೆ ಮಾಡಲಾಗಿದೆ, ಹಾಗೂ ಇದು ವಿಶ್ವಸಂಸ್ಥೆಯ ಸಚಿವಾಲಯದ ಒಂದು ಭಾಗವಾಗಿ ವ್ಯಾಪಾರ ಮತ್ತು ಅಭಿವೃದ್ಧಿ ವಿಷಯಗಳಲ್ಲಿ ಕಾರ್ಯ ನಿರ್ವಹಿಸುತ್ತದೆ.

## 'Medicines from the Sky' ಯೋಜನೆಯನ್ನು ಫ್ಲಿಪ್'ಕಾರ್ಟ್ ಆರಂಭಿಸಲಿದೆ



* ಇ ಕಾಮರ್ಸ್'ನ ದೊಡ್ಡ ಸಂಸ್ಥೆಯಾಗಿರುವ ಫ್ಲಿಪ್'ಕಾರ್ಟ್ (Flipkart) ತೆಲಂಗಾಣ ಸರ್ಕಾರದ ಸಹಯೋಗದೊಂದಿಗೆ 'ಮೆಡಿಸಿನ್ಸ್ ಫ್ರಮ್ ದಿ ಸ್ಕೈ (Medicines from the Sky)' ಯೋಜನೆಯನ್ನು ಪ್ರಾಂಭಿಸಲಿದೆ.

* ಫ್ಲಿಪ್'ಕಾರ್ಟ್'ನ ಈ ಯೋಜನೆಯಿಂದ ದೂರದಲ್ಲಿನ ಪ್ರದೇಶಗಳಿಗೆ ವೈದ್ಯಕೀಯ ಉಪಕರಣಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸರಬರಾಜು ಮಾಡಲು ಡ್ರೋನ್ ವಿತರಣೆಯ ಅಭಿವೃದ್ಧಿ ಹಾಗೂ ಕಾರ್ಯಗತಗೊಳಿಸುವ ಕೆಲಸವನ್ನು ಫ್ಲಿಪ್'ಕಾರ್ಟ್'ನ ಒಕ್ಕೂಟಕ್ಕೆ ಒಪ್ಪಿಡಿಸಲಾಗಿದೆ.

* ವಾಲ್ಮಾರ್ಟ್ ಒಡೆತನದ ಡ್ರೋನ್‌ಗಳನ್ನು ಫ್ಲಿಪ್ಕಾರ್ಟ್ ನಿಯೋಜನೆ ಮಾಡಲಿದೆ ಈ ಡ್ರೋನ್'ಗಳನ್ನೂ ಬಳಸಿಕೊಂಡು ಲಸಿಕೆಗಳು ಮತ್ತು ವೈದ್ಯಕೀಯ ಸರಬರಾಜು ಮಾಡಲು ಅವಕಾಶವನ್ನು ಕಲ್ಪಿಸಲಾಗುತ್ತದೆ ಎಂದು ತಿಳಿಸಿದೆ.

* ಮೆಡಿಸಿನ್ಸ್ ಫ್ರಮ್ ದಿ ಸ್ಕೈ' ಈ ಯೋಜನೆಯನ್ನು ವರ್ಲ್ಡ್ ಎಕನಾಮಿಕ್ ಫೋರಮ್ ಮತ್ತು ಹೆಲ್ತ್'ನೆಟ್ ಗ್ಲೋಬಲ್ ಲಿಮಿಟೆಡ್ ಕಂಪನಿಗಳು ಅಭಿವೃದ್ಧಿ ಪಡಿಸಿವೆ.

## ಪರಂಪರೆ ಮರಗಳನ್ನು ರಕ್ಷಿಸುವ ಕ್ರಿಯಾ ಯೋಜನೆ ಆರಂಭಿಸಿದ ಮಹಾರಾಷ್ಟ್ರ ಸರ್ಕಾರ



* ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ನೇತೃತ್ವದ ಕ್ಯಾಬಿನೆಟ್ ನಗರ ಪ್ರದೇಶದಲ್ಲಿರುವ ಸುಮಾರು 50 ವರ್ಷ ಅಥವಾ ಅದಕ್ಕಿಂತ ಪ್ರಾಚೀನವಾಗಿರುವ ಹಳೆಯ ಮರಗಳನ್ನು ರಕ್ಷಿಸುವ "ಹೆರಿಟೇಜ್ ಟ್ರೀ" ಪರಿಕಲ್ಪನೆಯ ಕ್ರಿಯಾ ಯೋಜನೆಗೆ ಕ್ಯಾಬಿನೆಟ್ ಅನುಮೋದನೆ ನೀಡಿದೆ.

* ಪ್ರಸ್ತುತ ಮಹಾರಾಷ್ಟ್ರ ರಾಜ್ಯದಲ್ಲಿನ ನಗರ ಪ್ರದೇಶಗಳ ಮರಗಳನ್ನು ರಕ್ಷಣೆ ಮಾಡಲು ಮಹಾರಾಷ್ಟ್ರ ರಾಜ್ಯ ಸರ್ಕಾರವು ಮರ ಸಂರಕ್ಷಣೆ ಮತ್ತು ಸಂರಕ್ಷಣಾ ಕಾಯ್ದೆ 1975 ನ್ನು ತಿದ್ದುಪಡಿ ಮಾಡಿದೆ ಹಾಗೂ ಇದನ್ನು ಮಹಾರಾಷ್ಟ್ರದ ಪರಿಸರ ಇಲಾಖೆಯು ಈ ಯೋಜನೆ ಪ್ರಸ್ತಾಪಿಸಿದೆ.

* ಮಹಾರಾಷ್ಟ್ರ ಸರ್ಕಾರವು ಈ ಮರ ಸಂರಕ್ಷಣೆ ಮತ್ತು ಸಂರಕ್ಷಣಾ ಕಾಯ್ದೆ ತಿದ್ದು ಪಡೆಮಾಡಿದ ನಂತರ ಮರಗಳನ್ನು ರಕ್ಷಿಸುವ ಉದ್ದೇಶದಿಂದಾಗಿ 'ಮಹಾರಾಷ್ಟ್ರ ರಾಜ್ಯ ಮರ ಪ್ರಾಧಿಕಾರ' ವನ್ನು ಆರಂಭಿಸಲಿದೆ ಮತ್ತು ಪ್ರಸ್ತುತ ಪುರಸಭೆಯ ಮುಖ್ಯ ಅಧಿಕಾರಿಯು ಮರ ಪ್ರಾಧಿಕಾರದ ಅಧ್ಯಕ್ಷರಾಗಿರುತ್ತಾರೆ ಎಂದು ಮಹಾರಾಷ್ಟ್ರ ಸರ್ಕಾರ ತಿಳಿಸಿದೆ.

# 14-06-2021

## ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ಹಾಗೂ ಡಬಲ್ಸ್‌ನಲ್ಲೂ ಪ್ರಶಸ್ತಿ ಗೆದ್ದು ಇತಿಹಾಸ ಬರೆದ ಕ್ರೆಜ್‌ಸಿಕೋವಾ

* ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮಹಿಳಾ ಡಬಲ್ಸ್ ಮತ್ತು ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಗಿ ಜೆಕ್ ಗಣರಾಜ್ಯದ ಬರ್ಬೊರಾ ಕ್ರೆಚಿಕೊವಾ ಅವರು ಹೊರಹೊಮ್ಮಿದ್ದಾರೆ. ಇವರು ಬರ್ಬೊರಾ ದೇಶದ ಕಟೆರಿನಾ ಸಿನಿಯಾಕೊವಾ ಅವರ ಜೊತೆಯಾಗಿ ಈ ಪ್ರಶಸ್ತಿಗಳನ್ನೂ ಪಡೆದುಕೊಂಡಿದ್ದಾರೆ.

* ಫೈನಲ್ ಪಂದ್ಯದಲ್ಲಿ ಜೆಕ್ ಆಟಗಾರ್ತಿಯರು 6 4, 6 2 ಅಂತರದಿಂದ ಪೋಲೆಂಡ್‌ನ ಇಗಾ ಸ್ವಾಟೆಕ್ ಮತ್ತು ಅಮೆರಿಕದ ಬೆಥನಿ ಮಟೆಕ್ ಸ್ಯಾಂಡ್ಸ್ ಅವರನ್ನು ಸೋಲಿಸಿದ್ದಾರೆ.

* ಪ್ರಸ್ತುತ 2000 ಇಸ್ವಿಯ ಬಳಿಕ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಕ್ರೆಚಿಕೊವಾ ಅವರು ಮಹಿಳಾ ವಿಭಾಗದ ಸಿಂಗಲ್ಸ್ ಮತ್ತು ಡಬಲ್ಸ್ ಎರಡೂ ಟ್ರೋಫಿಗಳನ್ನು ಗೆದ್ದ ಮೊದಲ ಆಟಗಾರ್ತಿಯಾರಾಗಿ ಹೊರ ಹೊಮ್ಮಿದ್ದಾರೆ, ಈ ಸಾಧನೆಯನ್ನು ಮಾಡಿದ 7 ನೇ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಇವರದಾಗಿದೆ.

* ಈ ಹಿಂದೆ ಫ್ರಾನ್ಸ್‌ನ ಮೇರಿ ಪಿಯರ್ಸ್ ಅವರು ೨೦೦೦ ರಲ್ಲಿ ಈ ಗೆಲುವನ್ನು ಸಾಧಿಸಿದ್ದರು.

* 2018 ರಲ್ಲಿ ಕ್ರೆಜ್‌ಸಿಕೋವಾ ಸಿನಿಯಾಕೋವಾ ಜೋಡಿ ಡಬಲ್ಸ್ ಪ್ರಶಸ್ತಿ ಸಾಧಿಸಿತ್ತು, ಮತ್ತೆ 2019 ರಲ್ಲಿ ವಿಂಬಲ್ಡ್‌ನಲ್ಲೂ ಡಬಲ್ಸ್ ಪ್ರಶಸ್ತಿ ಗಳಿಸಿತ್ತು.

* ಪ್ರಸ್ತುತ ಕ್ರೆಜ್‌ಸಿಕೋವಾ ಅವರು ಗ್ರಾಂಡ್ ಸ್ಲಾಂನಲ್ಲಿ ಸಿಂಗಲ್ಸ್, ಡಬಲ್ಸ್ ಹಾಗೂ ಮಿಶ್ರ ಡಬಲ್ಸ್ ಪ್ರಶಸ್ತಿ ಸಾಧಿಸಿದ 4ನೇ ಹಾಲಿ ಆಟಗಾರ್ತಿಯಾಗಿ ಹೊರಹೊಮ್ಮಿದ್ದಾರೆ.

## ಕರ್ನಾಟಕ ಕೇಂದ್ರೀಯ ವಿವಿ ನಿವೃತ್ತ ಕುಲಪತಿ ಪ್ರೊ.ಎಚ್.ಎಂ. ಮಹೇಶ್ವರಯ್ಯ ವಿಧಿವಶ



* ಪ್ರಸ್ತುತ ಕಲಬುರಗಿಯಲ್ಲಿನ ಕರ್ನಾಟಕ ಕೇಂದ್ರೀಯ ವಿವಿ ನಿವೃತ್ತ ಕುಲಪತಿ ಪ್ರೊ.ಎಚ್.ಎಂ. ಮಹೇಶ್ವರಯ್ಯ ಅವರು ತಮ್ಮ 65ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.

* ಮಹೇಶ್ವರಯ್ಯ ಅವರು ಶಿಕಾರಿಪುರ ತಾಲೂಕಿನ ಹಿತ್ತಲ ಎಂಬ ಗ್ರಾಮದವರು, ಇವರು ಕರ್ನಾಟಕ ವಿವಿ ಕನ್ನಡ ಅಧ್ಯಯನ ವಿಭಾಗ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ, ಇತ್ತೀಚಿಗೆ ಕಲಬುರಗಿ ಕೇಂದ್ರ ವಿವಿ ಕುಲಪತಿ ಹುದ್ದೆಯಿಂದ ನಿವೃತ್ತಿಯನ್ನು ಹೊಂದಿದ್ದರು.

## ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಭಾರತದ ವೇಟ್‌ಲಿಫ್ಟರ್ ಮೀರಾಬಾಯಿ ಚಾನುಗೆ ಅವಕಾಶ



* ಟೋಕಿಯೋ ಒಲಿಂಪಿಕ್ಸ್'ನಲ್ಲಿ ಮಹಿಳೆಯರ 49 KG ವಿಭಾಗದಲ್ಲಿ ಭಾರತದ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಅರ್ಹತೆಯನ್ನು ಪಡೆದುಕೊಂಡಿದ್ದಾರೆ ಎಂದು ಅಂತಾರಾಷ್ಟ್ರೀಯ ವೇಟ್‌ಲಿಫ್ಟಿಂಗ್ ಸಂಸ್ಥೆ ಪ್ರಕಟಿಸಿದೆ, ಹಾಗೂ ಇವರು ಚಿನ್ನದ ಪದಕ ಪಡೆಯುವದಕ್ಕಾಗಿ ಹೋರಾಡಲಿದ್ದಾರೆ ಎಂದು ಭಾರತೀಯ ವೇಟ್ ಲಿಫ್ಟಿಂಗ್ ಫೆಡರೇಶನ್ ಪ್ರಧಾನ ಕಾರ್ಯದರ್ಶಿ ಸಹದೇವ್ ಯಾದವ್ ಅವರು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ.

* ಇತ್ತೀಚಿಗೆ ಏಪ್ರಿಲ್'ನಲ್ಲಿ ತಾಷ್ಕೆಂಟ್‌ನಲ್ಲಿ ನಡೆದಿರುವ ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಚಾನು ಕ್ಲೀನ್ ಹಾಗೂ ಜರ್ಕ್‌ನಲ್ಲಿ ವಿಶ್ವ ದಾಖಲೆ ಬರೆಯುವದರೊಂದಿಗೆ ಕಂಚಿನ ಪದಕವನ್ನು ಗಿಟ್ಟಿಸಿಕೊಂಡಿದ್ದಾರೆ, ಇದೀಗ ಟೋಕಿಯೋ ಒಲಿಂಪಿಕ್ಸ್'ನಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.

## ಭಾರತ ಮೂಲದ ಪತ್ರಕರ್ತೆ ಮೇಘಾ ರಾಜಗೋಪಾಲನ್ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿಗೆ ಆಯ್ಕೆ



* ಭಾರತ ಮೂಲದ ಪತ್ರಕರ್ತೆ ಮೇಘಾ ರಾಜಗೋಪಾಲನ್ ಅವರು ಚೀನಾ ದೇಶದ ಷಿನ್‌ಜಿಯಾಂಗ್ ಪ್ರಾಂತ್ಯದಲ್ಲಿ ಮುಸ್ಲಿಮರನ್ನು ಬಂಧಿಸಲು ರಹಸ್ಯವಾಗಿ ಬೃಹತ್ ಜೈಲುಗಳನ್ನು ನಿರ್ಮಿಸಿರುವ ಕುರಿತು ಸಾಕ್ಷಿ ಸಹಿತ ತನಿಖಾ ವರದಿಯನ್ನು ಪ್ರಕಟಿಸಿದ್ದಾರೆ, ಇದರಿಂದಾಗಿ ಚೀನಾದ ಈ ಕ್ರಮವನ್ನು ಜಗತ್ತಿಗೆ ತಿಳಿಸಿದ್ದಾರೆ, ಆದ್ದರಿಂದ ಈ ಬಾರಿಯ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

* ಮೇಘಾ ರಾಜಗೋಪಾಲನ್ ಈ ವರದಿಗೆ ಸಾಥ್ ನೀಡಿದ ಇಬ್ಬರು ಆಲಿಸನ್ ಕಿಲ್ಲಿಂಗ್ ಹಾಗೂ ಕ್ರಿಸ್ಟೋ ಬಷೇಕ್ ಎಂಬ ಸಹಾಯಕರೊಂದಿಗೆ ಈ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ, ಪ್ರಸ್ತುತ ಮೇಘಾ ಅವರು "ಬಜ್ ಫೀಡ್ ನ್ಯೂಸ್" ಸುದ್ದಿವಾಹಿನಿಯಲ್ಲಿ ವರದಿಗಾರ್ತಿಯಾಗಿ ಕೆಲಸವನ್ನು ನಿರ್ವಹಣೆ ಮಾಡುತಿದ್ದರು.

* ಮೇಘಾ ರಾಜಗೋಪಾಲನ್ ಜೊತೆಗೆ "ಟಂಪಾ ಬೇ ಟೈಮ್ಸ್"ನ ವರದಿಗಾರರಾದ ನೀಲ್ ಬೇಡಿ ಮತ್ತು ಕ್ಯಾಥ್ಲಿನ್ ಮ್ಯಾಕ್‌ಗ್ರೊರಿ ಅವರು ಕೂಡ ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

## ರಕ್ಷಣಾ ವಲಯದ ಸಂಶೋಧನೆಗೆ 499 ಕೋಟಿ ರೂ. ಅನುಮೋದನೆ



* ಪ್ರಸ್ತುತ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ರಕ್ಷಣಾ ಕ್ಷೇತ್ರದಲ್ಲಿ ಹೊಸ ಹೊಸ ಸಂಶೋಧನೆ ಹಾಗೂ ಆವಿಷ್ಕಾರಗಳನ್ನು ಕೈಗೊಳ್ಳುವ ಸಲುವಾಗಿ ಸುಮಾರು 499 ಕೋಟಿ ರೂ. ಅನುದಾನಕ್ಕೆ ಅನುಮೋದನೆ ನೀಡಿದ್ದಾರೆ.

* ಪ್ರಸ್ತುತ ರಕ್ಷಣಾ ವಲಯದಲ್ಲಿ ಸ್ವಾವಲಂಬನೆ ಸಾಧಿಸುವ ಉದ್ದೇಶದಿಂದ ಸರಿ ಸುಮಾರು 300 ಹೊಸ ಉದ್ಯಮಗಳಿಗೆ ಮತ್ತು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ (MSME) ಜೊತೆಗೆ ಆವಿಷ್ಕಾರಗಳನ್ನು ಕೈಗೊಳ್ಳುವ ವ್ಯಕ್ತಿಗಳಿಗೆ ಈ ಅನುದಾನವನ್ನು ಮುಂಬರುವ 5 ವರ್ಷಗಳ ಅವಧಿಗೆ ಈ ಅನುದಾನ ನೀಡುವದಾಗಿ ತಿಳಿಸಿದ್ದಾರೆ.

* ಪ್ರಸ್ತುತ ಭಾರತವು ರಕ್ಷಣಾ ಶಸ್ತ್ರಾಸ್ತ್ರ, ಸಾಮಗ್ರಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುತ್ತಿದೆ, ಈ ಯೋಜನೆಯಿಂದ ಮಿಲಿಟರಿ ಹಾರ್ಡ್‌ವೇರ್ ಸಾಮಗ್ರಿಗಳ ಆಮದು ಕಡಿಮೆ ಮಾಡುಲು ಉದ್ದೇಶಿಸಲಾಗುವದು, ಇದರಿಂದಾಗಿ ರಕ್ಷಣಾ ಸಾಮಗ್ರಿಗಳ ತಯಾರಿಕೆಯಲ್ಲಿ ಭಾರತವನ್ನು ಕೇಂದ್ರ ಸ್ಥಾನವನ್ನಾಗಿ ಮಾಡುವ ಗುರಿ ಹೊಂದಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

## 'ಗೂಗಲ್' ನೊಂದಿಗೆ 'ಕ್ಯೂ ಮ್ಯಾತ್' ಪಾಲುದಾರಿಕೆ

* ಪ್ರಸ್ತುತ ಗೂಗಲ್ ಸಂಸ್ಥೆಯೊಂದಿಗೆ 'ಕ್ಯೂ ಮ್ಯಾತ್' ಸಂಸ್ಥೆಯು "ಗೂಗಲ್ ಫಾರ್ ಎಜುಕೇಷನ್" ನೊಂದಿಗೆ ಪಾಲುದಾರಿಕೆಯನ್ನು ಪಡೆದಿದೆ.

* ಈ "ಗೂಗಲ್ ಫಾರ್ ಎಜುಕೇಷನ್" ನಿಂದಾಗಿ ಬೋಧನಾ ಹಾಗೂ ಕಲಿಯುವ ಅನುಭವದಲ್ಲಿ ಬದಲಾವಣೆ ತರಲು ಕೆ 12 ತರಗತಿಗಳ ಶಾಲಾ ನಂತರ ಮ್ಯಾತ್ ಮತ್ತು ಕೋಡಿಂಗ್ ಪ್ರೋಗ್ರಾಂಗಳಿಗಾಗಿ ಕ್ಯೂಮ್ಯಾತ್ "ಗೂಗಲ್ ಫಾರ್ ಎಜುಕೇಷನ್ "ನೊಂದಿಗೆ ಕೈಜೋಡಿಸಿದೆ, ಈ ಕ್ಯೂ ಮ್ಯಾತ್ ಸಂಸ್ಥೆಯು ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ 'ಗೂಗಲ್ ಫಾರ್ ಎಜುಕೇಷನ್' ಎಂಬ ಪ್ರಮಾಣಪತ್ರವನ್ನು ಒದಗಿಸಿಕೊಡುತ್ತದೆ.

* ಈ ಕ್ಯೂ ಮ್ಯಾತ್'ನ ಸಂಸ್ಥಾಪಕ ಹಾಗೂ CEO ಮನನ್ ಖುರ್ಮಾ ಅವರು ಈ ಪಾಲುದಾರಿಕೆಯ ವಿಷಯದ ಬಗ್ಗೆ ಮಾತನಾಡಿದರು, ಈ 'ಗೂಗಲ್ ಫಾರ್ ಎಜುಕೇಷನ್' ನೊಂದಿಗಿನ ನಾವು ಸಹಭಾಗಿತ್ವವನ್ನು ಹೊಂದಿದ್ದೇವೆ ಇದರಿಂದಾಗಿ ವಿದ್ಯಾರ್ಥಿಗಳಿಗೆ ಜ್ಞಾನವನ್ನು ನೀಡಲು ಮತ್ತು ನೈಜ ಪ್ರಪಂಚದ ಕೌಶಲ್ಯಗಳ ಸಾಮರ್ಥ್ಯಗಳನ್ನು ಹೆಚ್ಚಿಸಲು ಅವಕಾಶವನ್ನು ನೀಡುವದರ ಜೊತೆಗೆ ಪ್ರತಿ ವಿದ್ಯಾರ್ಥಿಯ ಗಣಿತ ವಿಷಯದಲ್ಲಿ ಉತ್ತಮ ಜ್ಞಾನ ಪಡೆಯುವುದಕ್ಕೆ ಅನುಕೂಲ ಮಾಡಿಕೊಡಲಾಗುತ್ತದೆ ಕಲಿಕೆಯ ನಿರ್ವಹಣಾ ವ್ಯವಸ್ಥೆಗಳು ಮತ್ತು ಸ್ಮಾರ್ಟ್ ತರಗತಿಗಳು ಈ ಪ್ರೋಗ್ರಾಂನಲ್ಲಿ ಇರಲಿವೆ ಎಂದು ಕ್ಯೂ ಮ್ಯಾತ್ ತಿಳಿಸಿದೆ.

* ಈ ಗೂಗಲ್ ಫಾರ್ ಎಜುಕೇಷನ್'ನಲ್ಲಿ 3ಗಂಟೆಗಳ ಅವಧಿಗೆ ಪರೀಕ್ಷೆ ಇರುತ್ತದೆ, ಈ ಕ್ಯೂ ಮ್ಯಾತ್ ಕೋಡಿಂಗ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳಿಗೆ ಗೂಗಲ್'ನ ಸಿಎಸ್ ಮೊದಲ ಪಠ್ಯಕ್ರಮವನ್ನು ಬೋಧಿಸಲಾಗುತ್ತದೆ ಎಂದು ತಿಳಿಸಿದೆ.

## ಪೋಲೆಂಡ್ ಕುಸ್ತಿ ಟೂರ್ನಿಯಲ್ಲಿ ಚಿನ್ನ ಪಡೆದ ವಿನೇಶ್ ಫೋಗಟ್



* ಪ್ರಸ್ತುತ ಪೋಲೆಂಡ್'ನ ರಾಜಧಾನಿಯಾಗಿರುವ ವಾರ್ಸಾದಲ್ಲಿ ನಡೆಯುತ್ತಿರುವ ಪೋಲೆಂಡ್ ಕುಸ್ತಿ ಟೂರ್ನಿಯ 53 KG ಮಹಿಳಾ ವಿಭಾಗದ ಫೈನಲ್‌ನಲ್ಲಿ ಭಾರತದ ತಾರಾ ಕುಸ್ತಿ ಪಟು ವಿನೇಶ್ ಫೋಗಟ್ ಅವರು ಉಕ್ರೇನಿನ ಕ್ರಿಸ್ಟಿಯಾನ ಬ್ರೀಜಾ ಅವರನ್ನು ಸೋಲಿಸಿ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ.

* ವಿನೇಶ್ ಫೋಗಟ್ ಅವರ 3ನೇ ಚಿನ್ನದ ಪದಕ ಇದಾಗಿದೆ, ಈ ಮೊದಲು ಮಾರ್ಚ್‌ನಲ್ಲಿ ಮೆಟ್ಟಿಯೂ ಪೆಲಿಕಾನ್ ಇವೆಂಟ್ ಮತ್ತು ಏಪ್ರಿಲ್'ನಲ್ಲಿ ನಡೆದ ಏಷಿಯನ್ ಚಾಂಪಿಯನ್ ಶಿಪ್‌ನಲ್ಲಿ ಚಿನ್ನದ ಪದಕವನ್ನು ಜಯಿಸಿದ್ದಾರೆ.

* ಈ ಪೋಲೆಂಡ್'ನ ಕುಸ್ತಿ ಟೂರ್ನಿಯಲ್ಲಿ ಭಾರತವು 61 KG ಪುರುಷರ ವಿಭಾಗದಲ್ಲಿ ರವಿಕುಮಾರ್ ದಹಿಯಾ ಅವರು ಬೆಳ್ಳಿ ಪದಕವನ್ನು ಜಯಿಸಿದ್ದಾರೆ.

* ಪ್ರಸ್ತುತ ಭಾರತೀಯ 4 ಕುಸ್ತಿ ಪಟುಗಳಾಗಿರುವ ವಿನೇಶ್ ಫೋಗಟ್, ಅಂಶು ಮಲಿಕ್, ರವಿಕುಮಾರ್ ದಹಿಯಾ ಮತ್ತು ದೀಪಕ್ ಪುನಿಯಾ ಅವರು ಈ ಬಾರಿಯ ಟೋಕಿಯೊ ಒಲಿಂಪಿಕ್ಸ್‌ಗೆ ತೆರಳಲಿದ್ದಾರೆ.

## ಫ್ರೆಂಚ್ ಓಪನ್ ಟೆನಿಸ್ ಟೂರ್ನಿ ಚಾಂಪಿಯನ್ ಪಟ್ಟ ನೊವಾಕ್ ಜೊಕೊವಿಕ್‌ಗೆ



* ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಚಾಂಪಿಯನಶಿಪ್ನಲ್ಲಿ ಸರ್ಬಿಯಾದ ಟೆನಿಸ್ ಆಟಗಾರ ನೊವಾಕ್ ಜೊಕೊವಿಕ್ ಅವರು ಗ್ರೀಸ್‌ನ ಸ್ಟೆಫನೊಸ್ ಸಿಟ್ಸಿಪಾಸ್ ಅವರನ್ನು ಸೋಲಿಸಿ ಚಾಂಪಿಯನ್ ಪಟ್ಟವನ್ನು ಪಡೆದುಕೊಂಡಿದ್ದಾರೆ.

* ನೊವಾಕ್ ಜೊಕೊವಿಕ್ ಅವರು 2ನೇ ಬಾರಿ ಫ್ರೆಂಚ್ ಓಪನ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ, ಹಾಗೂ ಗ್ರ್ಯಾನ್‌ಸ್ಲಾಂ ಟೂರ್ನಿಗಳಲ್ಲಿ 2 ಬಾರಿ ಪ್ರಶಸ್ತಿ ಗೆದ್ದ ಮೊದಲ ಆಟಗಾರ ಎಂಬ ದಾಖಲೆ ಬರೆದಿದ್ದಾರೆ.

* ನೊವಾಕ್ ಜೊಕೊವಿಕ್ ಅವರು ಒಟ್ಟಾರೆ ಗೆದ್ದಿರುವ 19 ನೇ ಗ್ರ್ಯಾನ್ ಸ್ಲಾಂ ಪ್ರಶಸ್ತಿ ಇದಾಗಿದೆ.

* ನೊವಾಕ್ ಜೋಕೊವಿಕ್ ಅವರ 19 ಗ್ರಾಂಡ್ ಸ್ಲಾಂ ಪ್ರಶಸ್ತಿಗಳು: ಆಸ್ಟ್ರೇಲಿಯನ್ ಓಪನ್: 9 ಫ್ರೆಂಚ್ ಓಪನ್: 2 ವಿಂಬಲ್ಡನ್: 5 ಯುಎಸ್ ಓಪನ್: 3

* ಅತೀ ಹೆಚ್ಚು ಗ್ರಾಂಡ್ ಸ್ಲಾಂ ಪ್ರಶಸ್ತಿಗಳನ್ನೂ ಗೆದ್ದವರು: ರೋಜರ್ ಫೆಡರರ್: 20 ರಾಫೆಲ್ ನಡಾಲ್: 20 ನೊವಾಕ್ ಜೋಕೊವಿಕ್: 19

## ಇಂಡಿಯನ್ ಕೋಸ್ಟ್ ಗಾರ್ಡ್ ಆಪರೇಷನ್ ಒಲಿವಿಯಾ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ



* ಒಡಿಶಾ ರಾಜ್ಯದಲ್ಲಿ ಆಲಿವ್ ರಿಡ್ಲೆ ಆಮೆಗಳನ್ನು ರಕ್ಷಿಸಲು ಇಂಡಿಯನ್ ಕೋಸ್ಟ್ ಗಾರ್ಡ್ ಕಾನೂನುಗಳನ್ನು ಜಾರಿಗೊಳಿಸಿದೆ, ಜೊತೆಗೆ ಒಲಿವಿಯಾ ಕಾರ್ಯಾಚರಣೆಯನ್ನು ಸಹ ಆರಂಭಿಸಿದೆ.

* ಇಂಡಿಯನ್ ಕೋಸ್ಟ್ ಗಾರ್ಡ್ 1980 ರ ದಶಕದಲ್ಲಿ ಆಪರೇಷನ್ ಒಲಿವಿಯಾವನ್ನು ಆರಂಭಿಸಿತ್ತು, ಪ್ರತಿವರ್ಷ ನವೆಂಬರ್ ನಿಂದ ಡಿಸೆಂಬರ್ ತಿಂಗಳಿನಲ್ಲಿ ಈ ಆಲಿವ್ ರಿಡ್ಲೆ ಆಮೆಗಳು ಸಂತಾನೋತ್ಪತ್ತಿಗಾಗಿ ಒಡಿಶಾ ಕರಾವಳಿಯಲ್ಲಿ ಗೂಡುಕಟ್ಟಲು ಆರಂಭಿಸುತ್ತವೆ ಇವುಗಳನ್ನು ರಕ್ಷಿಸಲು ಈ ಆಪರೇಷನ್ ಒಲಿವಿಯಾ ಕಾರ್ಯಾಚರಣೆಯು ಸಹಾಯ ಮಾಡುತ್ತದೆ.

* ಒಡಿಶಾ ಕರಾವಳಿಯಲ್ಲಿ ಕೋಸ್ಟ್ ಗಾರ್ಡನ ಫಾಸ್ಟ್ ಪೆಟ್ರೋಲ್ ಹಡಗುಗಳು, ಇಂಟರ್ಸೆಪ್ಟರ್ ಕ್ರಾಫ್ಟ್, ಏರ್ ಕುಶನ್ ಹಡಗುಗಳು ಹಾಗೂ ಡಾರ್ನಿಯರ್ ವಿಮಾನಗಳ ಮೂಲಕ ನವೆಂಬರ್ ನಿಂದ ಮೇ ತಿಂಗಳಿನವರೆಗೆ ಕಣ್ಗಾವಲು ನಡೆಸಲಾಗುತ್ತದೆ ಎಂದು ಇಂಡಿಯನ್ ಕೋಸ್ಟ್ ಗಾರ್ಡ್ ತಿಳಿಸಿದೆ.

* ಪ್ರಸ್ತುತ ಈ ಆಪರೇಷನ್ ಒಲಿವಿಯಾ ನವೆಂಬರ್ 2020 ರಿಂದ ಮೇ 2021 ರ ನಡುವೆ ಇಂಡಿಯನ್ ಕೋಸ್ಟ್ ಗಾರ್ಡ್ 225 ಹಡಗು ಮತ್ತು 388 ವಿಮಾನಗಳನ್ನೂ ಬಳಸಿ ಒಡಿಶಾ ಕರಾವಳಿಯಲ್ಲಿ ಕಣ್ಗಾವಲು ಕಾರ್ಯಾಚರಣೆಯನ್ನು ನಡೆಸಿ ಸರಿ ಸುಮಾರು 3.49 ಲಕ್ಷ ಆಮೆಗಳ ರಕ್ಷಣೆ ಮಾಡಿದ್ದಾರೆ.

* ಇಂಟರ್ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಶನ್ ಆಫ್ ನೇಚರ್ (IUCN) ರೆಡ್ ಲಿಸ್ಟ್ ಅಡಿಯಲ್ಲಿ ಆಲಿವ್ ರಿಡ್ಲೆ ಆಮೆಗಳನ್ನು ದುರ್ಬಲ ಎಂದು ಪಟ್ಟಿ ಮಾಡಲಾಗಿದೆ, ಹಾಗೂ ಭಾರತೀಯ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ರ ಅಡಿಯಲ್ಲಿ ಈ ಆಮೆಗಳನ್ನು ವೇಳಾಪಟ್ಟಿಗೆ ಸೇರಿಸಿದ್ದಾರೆ.

* ಈ ಆಲಿವ್ ರಿಡ್ಲೆ ಆಮೆಗಳ ಸಾಮೂಹಿಕ ಗೂಡುಕಟ್ಟುವಿಕೆಯನ್ನು ಅರಿಬಾಡಾ ಎಂದು ಕರೆಯುತ್ತಾರೆ, ಒಡಿಶಾ ರಾಜ್ಯದ ಕರಾವಳಿಯಲ್ಲಿ 4 ಅರಿಬಾಡಾ ಸ್ಥಳಗಳಿವೆ.

## ನಫ್ತಾಲಿ ಬೆನೆಟ್ ಇಸ್ರೇಲ್'ನ ಹೊಸ ಪ್ರಧಾನಿ



* ಇಸ್ರೇಲ್'ನ ಹೊಸ ಪ್ರಧಾನಿಯಾಗಿ 49 ವರ್ಷ ವಯಸ್ಸಿನ ನಫ್ತಾಲಿ ಬೆನೆಟ್ ಅವರು ಅಧಿಕಾರ ಸ್ವೀಕಾರ ಮಾಡಿದರು, ಇವರು ಧಾರ್ಮಿಕ ರಾಷ್ಟ್ರೀಯವಾದಿ ಹಾಗೂ ಬಹು ಮಿಲಿಯನೇರ್ ಮಾಜಿ ಟೆಕ್ ಉದ್ಯಮಿ ಕೂಡ ಆಗಿದ್ದರು, ಇದರ ಜೊತೆಗೆ ರಕ್ಷಣಾ ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ, ಪ್ರಸ್ತುತ ಮಾಜಿ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು 12 ವರ್ಷಗಳ ಕಾಲ ಇಸ್ರೇಲ್'ನ ಅಧಿಕಾರದ ಚುಕ್ಕಾಣಿಯನ್ನು ಹಿಡಿದಿದ್ದರು.

* ನಫ್ತಾಲಿ ಬೆನೆಟ್ ಅವರ ಬಗ್ಗೆ ಮಾಹಿತಿ: ಇವರು ಪರಿಪೂರ್ಣ ಇಂಗ್ಲಿಷ್ ಮಾತನಾಡುವ ಅಮೇರಿಕನ್ ಮೂಲದ ಪೋಷಕರ ಮಗ, ಇವರು ಮಿಲಿಟರಿ ಸೇವೆ, ಕಾನೂನು ಶಾಲೆ ಹಾಗೂ ಖಾಸಗಿ ವಲಯಕ್ಕಾಗಿ ಉತ್ತರ ಅಮೆರಿಕ ಮತ್ತು ಇಸ್ರೇಲ್ ನಡುವೆ ಸಂಚರಿಸುತ್ತಿದ್ದರು, ಇವರು ಅಲ್ಟ್ರಾ ನ್ಯಾಷನಲಿಸ್ಟ್ ಮತ್ತು ಹಾರ್ಡ್ ರೈಟ್ ನಾಯಕರಾಗಿದ್ದರು, ಗಣ್ಯ ಸಯರೆಟ್ ಮಟ್ಕಲ್ ಕಮಾಂಡೋ ಘಟಕದಲ್ಲಿ ಕಾರ್ಯ ನಿರ್ವಹಿಸಿದ್ದಾರೆ.

* ನಫ್ತಾಲಿ ಬೆನೆಟ್ ಅವರು 1999 ರಲ್ಲಿ ಸೈಟಾ ಎಂಬ ವಂಚನೆ ವಿರೋಧಿ ಸಾಫ್ಟ್‌ವೇರ್ ಕಂಪನಿಯನ್ನು ಆರಂಭಿಸಿದ್ದರು, ಮತ್ತೆ 2005 ರಲ್ಲಿ ಈ ಕಂಪನಿಯನ್ನು US ಮೂಲದ RSA ಸೆಕ್ಯುರಿಟಿಗೆ ಮಾರಾಟ ಮಾಡಿದರು.

* ಭಾರತ ಮತ್ತು ಇಸ್ರೇಲ್'ನ ಸಂಬಂಧ: 1950 ರಿಂದ ಭಾರತ ಮತ್ತು ಇಸ್ರೇಲ್ ಬಲವಾದ ದ್ವಿಪಕ್ಷೀಯ ಸಂಬಂಧವನ್ನು ವಿಸ್ತರಿಸಿಕೊಂಡಿವೆ, ಭಾರತವು ಇಸ್ರೇಲಿ ಮಿಲಿಟರಿ ಉಪಕರಣಗಳನ್ನು ಅತೀ ಹೆಚ್ಚು ಖರೀದಿಸುವ ದೇಶವಾಗಿದೆ, ಪ್ರಸ್ತುತ ಭಾರತಕ್ಕೆ ರಷ್ಯಾ ರಾಷ್ಟ್ರದ ಬಳಿಕ ಇಸ್ರೇಲ್ ರಾಷ್ಟ್ರವು 2 ನೇ ಅತೀ ದೊಡ್ಡ ರಕ್ಷಣಾ ಸಾಮಗ್ರಿಗಳನ್ನು ಪೂರೈಕೆ ಮಾಡುವ ದೇಶವಾಗಿದೆ.

* ಭಾರತ ದೇಶವು ಏಷ್ಯಾದ 3 ನೇ ಅತಿದೊಡ್ಡ ವ್ಯಾಪಾರ ಪಾಲುದಾರ ಮತ್ತು ಇಸ್ರೇಲ್'ನ 10 ನೇ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರವಾಗಿದೆ.

# 15-06-2021

## ಕೋವಿಡ್ 19 ನಿಂದ ಮೃತಪಟ್ಟವರ ಕುಟುಂಬಗಳಿಗೆ 1ಲಕ್ಷ ರೂ. ಪರಿಹಾರ ಘೋಷಣೆ

* ಕರ್ನಾಟಕ ರಾಜ್ಯ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಕೋವಿಡ್ 19 ಸಾಂಕ್ರಾಮಿಕ ರೋಗದಿಂದ ಮೃತಪಟ್ಟ ವ್ಯಕ್ತಿಗಳ ಕುಟುಂಬಕ್ಕೆ 1 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ಘೋಷಣೆ ಮಾಡಿದ್ದಾರೆ.

* ಪ್ರಸ್ತುತ ರಾಜ್ಯದಲ್ಲಿನ ಬಿಪಿಎಲ್ ಕಾರ್ಡ್'ಗಳನ್ನೂ ಹೊಂದಿರುವ ಕುಟುಂಬಗಳಲ್ಲಿ ಕೋವಿಡ್ 19 ಸೋಂಕಿನಿಂದ ವಯಸ್ಕರು ಮೃತ ಪಟ್ಟಿದ್ದರೆ ಆ ಕುಟುಂಬಕ್ಕೆ ಒಬ್ಬರಂತೆ 1ಲಕ್ಷ ಪರಿಹಾರ ನೀಡಲು ನಿರ್ಧರಿಸಿಲಾಗಿದೆ ಎಂದು ಸಿಎಮ್ B. S. ಯಡಿಯೂರಪ್ಪನವರು ತಿಳಿಸಿದ್ದಾರೆ.

## ವಿಶ್ವ ರಕ್ತದಾನಿಗಳ ದಿನ 2021




* ವಿಶ್ವ ರಕ್ತದಾನಿಗಳ ದಿನವನ್ನು ಪ್ರತಿವರ್ಷ 2021ರ ಜೂನ್.14 ರಂದು ಆಚರಣೆ ಮಾಡಲಾಗುತ್ತದೆ.

* ವಿಶ್ವ ಆರೋಗ್ಯ ಸಂಸ್ಥೆ (WHO)ಯು ರಕ್ತದಾನಿಗಳ ದಿನವನ್ನು ಮೊದಲ ಬಾರಿಗೆ 2004 ರ ಜೂನ್.14 ರಂದು ಆರಂಭಿಸಿತ್ತು.

* ಪ್ರಸ್ತುತ ಕಾರ್ಲ್ ಲ್ಯಾಂಡ್‌ಸ್ಟೈನರ್ ಅವರ ಜನ್ಮದಿನವಾಗಿರುವ ಜೂನ್. 14 ನ್ನು ವಿಶ್ವ ರಕ್ತದಾನಿಗಳ ದಿನವಾಗಿ ಆಚರಿಸಲಾಗುತ್ತದೆ.

* ಅಂತರರಾಷ್ಟ್ರೀಯ ರೆಡ್‌ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಸೊಸೈಟಿಗಳ ಒಕ್ಕೂಟವು ಈಗೀನ ಸಾರ್ವಜನಿಕರಲ್ಲಿ ಆರೋಗ್ಯವಂತ ವ್ಯಕ್ತಿಗಳು ಸ್ವಯಂಪ್ರೇರಣೆಯಿಂದ ಮತ್ತು ಹಣರಹಿತ ಸುರಕ್ಷಿತ ರಕ್ತದಾನ ಮಾಡುವ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶವನ್ನು ಹೊಂದಿವೆ.

* ವಿಶ್ವ ಆರೋಗ್ಯ ಸಂಸ್ಥೆ (WHO)ಯು ತನ್ನ 192 ಸದಸ್ಯ ರಾಷ್ಟ್ರಗಳೊಂದಿಗೆ 58ನೇ ವಿಶ್ವ ಆರೋಗ್ಯ ಅಸೆಂಬ್ಲಿಯಲ್ಲಿ ರಕ್ತದಾನಿಗಳ ದಿನವನ್ನು 2005ರ ಮೇ.ನಲ್ಲಿ ಸ್ಥಾಪನೆ ಮಾಡಲಾಯಿತು.

* 2021ರ ವಿಶ್ವ ರಕ್ತದಾನಿಗಳ ದಿನದ ಧ್ಯೇಯವಾಕ್ಯ: ಪ್ರಸ್ತುತ ಸಮುದಾಯ ಒಗ್ಗಟ್ಟು ಹಾಗೂ ಸಾಮಾಜಿಕ ಒಗ್ಗಟ್ಟು ವೃದ್ಧಿಸುವಲ್ಲಿ ಸಮುದಾಯ ಮೌಲ್ಯಗಳನ್ನು ಉತ್ತೇಜಿಸಲು ರಕ್ತದಾನ ಸಹಾಯ ಮಾಡುತ್ತದೆ.

## ಅಂತಾರಾಷ್ಟ್ರೀಯ ಪ್ರಶಸ್ತಿ ಪಡೆದ ರಂಗಭೂಮಿ ಕಲಾವಿದೆ ಅಕ್ಷತಾ ಪಾಂಡವಪುರ

* ರಂಗಭೂಮಿ ಕಲಾವಿದೆಯಾಗಿರುವ ಅಕ್ಷತಾ ಪಾಂಡವಪುರ ಅವರು ಅಂತಾರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದಾರೆ, ಪ್ರಸ್ತುತ ಅಕ್ಷತಾ ಪಾಂಡವಪುರ ನಟನೆಯ "ವೇರ್ ಈಸ್ ಪಿಂಕಿ" ಚಿತ್ರದ ನಟನೆಗಾಗಿ ಅತ್ಯುತ್ತಮ ನಟಿ ಪ್ರಶಸ್ತಿ ಲಭಿಸಿದೆ.

* 2021 ರ ನ್ಯೂಯಾರ್ಕ್'ನ ಇಂಡಿಯನ್ ಫಿಲಂ ಫೆಸ್ಟಿವಲ್ 'ನಲ್ಲಿ ಅಕ್ಷತಾ ಪಾಂಡವಪುರ ನಟನೆಯ "ವೇರ್ ಈಸ್ ಪಿಂಕಿ" (ಪಿಂಕಿ ಎಲ್ಲಿ) ಚಿತ್ರಕ್ಕೆ ಅತ್ಯುತ್ತಮ ಚಿತ್ರಕಥೆ ಹಾಗೂ ಅತ್ಯುತ್ತಮ ನಟಿ ವಿಭಾಗದಲ್ಲಿ 2 ಪ್ರಶಸ್ತಿಗಳು ಲಭಿಸಿವೆ.

* 2021ರ ನ್ಯೂಯಾರ್ಕ್'ನ ಇಂಡಿಯನ್ ಫಿಲಂ ಫೆಸ್ಟಿವಲ್'ಗಿಂತ ಮೊದಲು "ಪಿಂಕಿ ಎಲ್ಲಿ" ಚಿತ್ರವು ಭಾರತದ ಕೋಲ್ಕತಾ, ಮುಂಬೈ, ಕೇರಳ, ಜೈಪುರ್, ಪನೋರಮ ಅಂತಾರಾಷ್ಟ್ರೀಯ ಫಿಲಂ ಫೆಸ್ಟಿವಲ್‌ಗೆ ಆಯ್ಕೆಯಾಗಿ ಹೆಸರು ಗಳಿಸಿತ್ತು.

## ಭಾರತೀಯ ಸೈನಿಕರಿಗೆ ವಿಶ್ವಸಂಸ್ಥೆಯ ಪದಕ ಗೌರವ



* ವಿಶ್ವಸಂಸ್ಥೆಯ ಶಾಂತಿ ಪಾಲನಾ ಪಡೆಯ ಭಾಗವಾಗಿ ದಕ್ಷಿಣ ಸುಡಾನ್ ನಲ್ಲಿನ ಭಾರತೀಯ ಸೇನಾ ತುಕಡಿಯಲ್ಲಿರುವ 135 ಸೈನಿಕರಿಗೆ ವಿಶ್ವಸಂಸ್ಥೆಯು ವಿಶೇಷ ಸೇವಾ ಪದಕಗಳನ್ನು ನೀಡಿ ಗೌರವಿಸಲಾಗಿದೆ.

* ಪ್ರಸ್ತುತ ವಿಶ್ವಸಂಸ್ಥೆಯ ಫೋರ್ಸ್ ಕಮಾಂಡರ್ ಭಾರತೀಯ ಸೈನಿಕರಿಗೆ ವಿಶ್ವಸಂಸ್ಥೆಯ ಪದಕ ಮಾಡಿದರು.

* ಪ್ರಸ್ತುತ ಭಾರತೀಯ ಸೈನಿಕರು ದಕ್ಷಿಣ ಸುಡಾನ್'ನ ಜೊಂಗ್ಲೆ ರಾಜ್ಯ ಹಾಗೂ ಗ್ರೇಟರ್ ಪೈಬರ್ ಪ್ರಾಂತ್ಯದಲ್ಲಿನ ಸಮಾಜ ಸುಧಾರಣೆಯ ಸೇವೆಯಲ್ಲಿ ಬಹುಮುಖ್ಯ ಪಾತ್ರವಹಿಸಿದ ಕಾರಣದಿಂದಾಗಿ ಸೈನಿಕರಿಗೆ ವಿಶ್ವಸಂಸ್ಥೆಯ ವತಿಯಿಂದ ಪದಕಗಳನ್ನು ನೀಡಿ ಗೌರವಿಸಲಾಗಿದೆ ಎಂದು ಟ್ವೀಟ್ ಮಾಡುವ ಮೂಲಕ ಮಾಹಿತಿ ನೀಡಿದ್ದಾರೆ.

## ಛತ್ತೀಸ್‌ಗಡ ರಾಜ್ಯವು ಲಿಂಗ ಸಮಾನತೆಯಲ್ಲಿ ಮುಂಚೂಣಿಯಲ್ಲಿದೆ



* 2020 21ನೇ ನೀತಿ ಆಯೋಗದ ವರದಿಯ ಪ್ರಕಾರ ಸುಸ್ಥಿರ ಅಭಿವೃದ್ಧಿಯ ಗುರಿಯನ್ನು (SDG) ಸಾಧಿಸುವ ನಿಟ್ಟಿನಲ್ಲಿ ದೇಶದಲ್ಲಿಯೇ ಛತ್ತೀಸ್‌ಗಡ ರಾಜ್ಯವು ಲಿಂಗ ಸಮಾನತೆಯ ಶ್ರೇಯಾಂಕದಲ್ಲಿ ಮುಂಚೂಣಿಯಲ್ಲಿದೆ ಎಂದು ತಿಳಿಸಿದೆ.

* ದೇಶದಲ್ಲಿ ಈ ಹಿಂದಿನ ವರ್ಷ ಲಿಂಗಸಮಾನತೆಯ ಶ್ರೇಯಾಂಕದಲ್ಲಿ ಛತ್ತೀಸ್‌ಗಡ ರಾಜ್ಯವು 43 ಅಂಕಗಳನ್ನೂ ಗಳಿಸಿ, 7 ನೇ ಸ್ಥಾನ ಪಡೆದುಕೊಂಡಿತ್ತು ಆದರೆ 2021 ನೇ ವರ್ಷದಲ್ಲಿ ರಾಜ್ಯವು 61 ಅಂಕಗಳನ್ನು ಗಳಿಸಿ ಅಗ್ರಸ್ಥಾನ ಪಡೆದುಕೊಂಡಿದೆ.

* ಲಿಂಗಸಮಾನತೆಯ ಶ್ರೇಯಾಂಕದಲ್ಲಿ ಕೇರಳ ರಾಜ್ಯವು 2 ನೇ ಸ್ಥಾನ ಪಡೆದುಕೊಂಡಿದೆ, ಆದರೆ ಬಿಹಾರ ರಾಜ್ಯವು ಕೊನೆಯ ಸ್ಥಾನವನ್ನು ಪಡೆದುಕೊಂಡಿದೆ ಎಂದು ನೀತಿ ಆಯೋಗವು ವರದಿಯನ್ನು ಮಾಡಿದೆ.

* ಭಾರತವು ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ಸುಸ್ಥಿರ ಅಭಿವೃದ್ಧಿಯ ಶ್ರೇಯಾಂಕವನ್ನು ವಿಶ್ವಸಂಸ್ಥೆಯ ಸಹಯೋಗದೊಂದಿಗೆ ಮೌಲ್ಯಮಾಪನವನ್ನು ಮಾಡಲಾಗಿದೆ ಎಂದು ನೀತಿ ಆಯೋಗ ತಿಳಿಸಿದೆ.

## ನಟ ಸಂಚಾರಿ ವಿಜಯ್ ವಿಧಿವಶ



* ರಂಗಭೂಮಿ ಹಿನ್ನೆಲೆಯಿಂದ ಬಂದ 38 ನೇ ವಯಸ್ಸಿನ ನಟ ಸಂಚಾರಿ ವಿಜಯ್ ಅವರು (1983ರ ಜುಲೈ.18 ರಿಂದ 2021ರ ಜೂನ್.15) ಬೈಕ್ ಅಪಘಾತದಿಂದ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

* ಕನ್ನಡ ಚಿತ್ರರಂಗದಲ್ಲಿ ಕೆಲಸ ಮಾಡಿದ ಭಾರತೀಯ ನಟ 2014 ರಲ್ಲಿ 'ನಾನು ಅವನಲ್ಲ, ಅವಳು' ಸಿನಿಮಾದಲ್ಲಿ ತೃತೀಯ ಲಿಂಗಿಯ ಪಾತ್ರದ ನಟನೆಗಾಗಿ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿದ್ದಾರೆ, ಅವರು ಅತ್ಯುತ್ತಮ ನಟನಿಗಾಗಿ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ಮತ್ತು ಅತ್ಯುತ್ತಮ ನಟ ದಕ್ಷಿಣದ ಫಿಲ್ಮ್‌ಫೇರ್ ವಿಮರ್ಶಕರ ಪ್ರಶಸ್ತಿಯನ್ನೂ ಕೂಡ ಪಡೆದುಕೊಂಡಿದ್ದಾರೆ.

* ಸಂಚಾರಿ ವಿಜಯ್ ಅವರು 2011 ರಲ್ಲಿ ಕನ್ನಡ ಚಿತ್ರರಂಗಕ್ಕೆ ರಂಗಪ್ಪ ಹೊಗ್ಬಿಟ್ನಾ ಎಂಬ ಚಿತ್ರದ ಮೂಲಕ ಪಾದಾರ್ಪಣೆ ಮಾಡಿದರು.

## ಮಧ್ಯಪ್ರದೇಶ ರಾಜ್ಯವು "ಯುವ ಶಕ್ತಿ ಕರೋನಾ ಮುಕ್ತ ಅಭಿಯಾನ" ಆರಂಭಿಸಲಿದೆ





* ಮಧ್ಯಪ್ರದೇಶ ರಾಜ್ಯವು ಕೋವಿಡ್ 19 ಸಾಂಕ್ರಾಮಿಕ ರೋಗದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಯುವ ಶಕ್ತಿ ಕರೋನಾ ಮುಕ್ತ ಅಭಿಯಾನ' ಪ್ರಾರಂಭಿಸಲಿದೆ.

* ಮಧ್ಯಪ್ರದೇಶ ರಾಜ್ಯದ ಯುವ ಶಕ್ತಿ ಕರೋನಾ ಮುಕ್ತ ಅಭಿಯಾನ, ಎಂದರೆ ಯುವ ಜನಗಳ ಸಹಾಯದಿಂದ ಕರೋನಾ ಮುಕ್ತಗೊಳಿಸುವದು ಎಂದರ್ಥ, ಈ ಅಭಿಯಾನದ ಅಡಿಯಲ್ಲಿ ಕಾಲೇಜು ಶಿಕ್ಷಕರು ಹಾಗೂ ಸುಮಾರು 16 ಲಕ್ಷ ವಿದ್ಯಾರ್ಥಿಗಳಿಗೆ ಕೋವಿಡ್ ಸಂಕ್ರಾಮಿಕ ರೋಗದ ಸೂಕ್ತ ನಡವಳಿಕೆ ಹಾಗೂ ವ್ಯಾಕ್ಸಿನೇಷನ್ ಹಾಕುವ ಮೂಲಕ ಕೋವಿಡ್ 19 ಸೋಂಕಿನ ಬಗ್ಗೆ ಅರಿವು ಮೂಡಿಸಲು ಈ ಅಭಿಯಾನವನ್ನು ಪ್ರಾರಂಭಿಸಲಾಗುವದು ಎಂದು ತಿಳಿಸಿದ್ದಾರೆ.

* ಮಧ್ಯಪ್ರದೇಶ ರಾಜ್ಯವು ಈ ಅಭಿಯಾನವನ್ನು ಉನ್ನತ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯು ಸಾರ್ವಜನಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಆರಂಬಿಸಲಾಗುವದು ಎಂದು ತಿಳಿಸಿದ್ದಾರೆ.

* ಭಾರತದಲ್ಲಿ ಮಧ್ಯಪ್ರದೇಶ ರಾಜ್ಯವು ಕೋವಿಡ್ 19 ಸೋಂಕಿನ ವಿಷಯದಲ್ಲಿ 26ನೇ ಸ್ಥಾನದಲ್ಲಿದೆ.

## ನ್ಯೂಜಿಲೆಂಡ್'ನಿಂದ ವಿಶ್ವದ ಮೊದಲ ಮರದ ಉಪಗ್ರಹ ಉಡಾವಣೆ



* 2021 ರ ಅಂತ್ಯದ ವೇಳೆಗೆ ವಿಶ್ವದ ಮೊದಲ ಮರದ ಉಪಗ್ರಹವನ್ನು WISA ವುಡ್ಸಾಟ್ (Woodsat) ಯುರೋಪಿಯನ್ ಬಾಹ್ಯಾಕಾಶ ಸಂಸ್ಥೆಯು ಭೂಮಿಯ ಕಕ್ಷೆಯಲ್ಲಿ ಉಡಾವಣೆ ಮಾಡಲಿದೆ.

* ಈ ಮರದ ಉಪಗ್ರಹವನ್ನು ಫಿನ್‌ಲ್ಯಾಂಡ್'ನಲ್ಲಿ ವಿನ್ಯಾಸಗೊಳಿಸಲಾಗಿದೆ, ಬಾಹ್ಯಾಕಾಶ ನೌಕೆ ರಚನೆಗಳಲ್ಲಿ ಪ್ಲೈವುಡ್'ನಂತಹ ಮರದ ವಸ್ತುಗಳನ್ನು ಪರೀಕ್ಷಿಸಲು ಪ್ರಾರಂಭಿಸಲಾಗುವುದು, ಈ ಮರದ ಉಪಗ್ರಹವನ್ನು 2021 ರ ಅಂತ್ಯದ ವೇಳೆಗೆ ರಾಕೆಟ್ ಲ್ಯಾಬ್ ಎಲೆಕ್ಟ್ರಾನ್ ರಾಕೆಟ್‌ನೊಂದಿಗೆ ಬಾಹ್ಯಾಕಾಶಕ್ಕೆ ಉಡಾವಣೆ ಮಾಡಲಾಗುವದು ಈ ಉಪಗ್ರಹವನ್ನು ನ್ಯೂಜಿಲೆಂಡ್'ನ ಮಹಿಯಾ ಪೆನಿನ್ಸುಲಾ ಉಡಾವಣಾ ಸಂಕೀರ್ಣದಿಂದ ಬಿಡುಗಡೆ ಮಾಡಲಾಗುವುದು.

* ಈ ಉಪಗ್ರಹವು ಸರಿ ಸುಮಾರು 500 600 ಕೀ.ಮೀ. ಎತ್ತರದಲ್ಲಿ ಪರಿಭ್ರಮಿಸುತ್ತದೆ ಹಾಗೂ ಇದು 10x10x10 cm ನ್ಯಾನೋ ಉಪಗ್ರಹವಾಗಿದೆ. ಈ ಉಪಗ್ರಹವು ಪ್ಲೈವುಡ್'ನ ಫಲಕಗಳನ್ನು ಬಳಸಿ ನಿರ್ಮಾಣ ಮಾಡಲಾಗಿದೆ.

## GI ಪ್ರಮಾಣೀಕೃತ 'ಜರ್ದಲು' ಮಾವಿನಹಣ್ಣನ್ನು ಯುಕೆಗೆ ರಫ್ತು ಮಾಡಿದ ಭಾರತ



* GI ಪ್ರಮಾಣೀಕರಿಸಿದ "ಜರ್ದಲು" ಮಾವಿನ ಹಣ್ಣಿನ ಮೊದಲ ವಾಣಿಜ್ಯ ಸರಕನ್ನು ಬಿಹಾರ್ ರಾಜ್ಯದಿಂದ ಯುನೈಟೆಡ್ ಕಿಂಗ್‌ಡಮ್ ಗೆ ರಫ್ತು ಮಾಡಿದೆ.

* 2018 ರಲ್ಲಿ ಬಿಹಾರ್ ರಾಜ್ಯದ ಭಾಗಲ್ಪುರ್ ಜಿಲ್ಲೆಯ ಈ ಜರ್ದಲು ಮಾವುಗಳಿಗೆ GI ಪ್ರಮಾಣೀಕರಣ ನೀಡಲಾಗಿದೆ.

* ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರವು, ಬಿಹಾರ ರಾಜ್ಯ ಸರ್ಕಾರವು ಭಾರತೀಯ ಹೈಕಮಿಷನ್ ಮತ್ತು ಇನ್ವೆಸ್ಟ್ ಇಂಡಿಯಾ ಸಹಯೋಗದೊಂದಿಗೆ ಜರ್ದಲು ಮಾವಿನಹಣ್ಣುಗಳನ್ನೂ ರಫ್ತು ಮಾಡಿದೆ.

* ಪ್ರಸ್ತುತ ಮಾವಿನ ರಫ್ತು ಹೆಚ್ಚಿಸುವ ಉದ್ದೇಶದಿಂದ ವರ್ಚುವಲ್ ಖರೀದಿದಾರ ಹಾಗೂ ಮಾರಾಟಗಾರರ ಸಭೆ ಮತ್ತು ಉತ್ಸವವನ್ನು ಭಾರತೀಯ ರಾಯಭಾರ ಕಚೇರಿಗಳ ಸಹಯೋಗದೊಂದಿಗೆ ಬರ್ಲಿನ್, ಜರ್ಮನಿ ಮತ್ತು ಜಪಾನ್‌ನಲ್ಲಿ ಮಾವಿನ ಉತ್ಸವವನ್ನು ನಡೆಸುತ್ತಿದೆ.

* ಇತ್ತೀಚಿಗೆ ಭಾರತೀಯ ಮಾವಿನ ಹಣ್ಣಿನ ಪ್ರಚಾರ ಕಾರ್ಯಕ್ರಮವನ್ನು ಒಂದು ವಾರದವರೆಗೆ ಬಹ್ರೇನ್‌ನಲ್ಲಿ ಆಯೋಜಿಸಲಾಗಿತ್ತು, ಈ ಕಾರ್ಯಕ್ರಮದಲ್ಲಿ 3 GI ಪ್ರಮಾಣೀಕೃತ ಪ್ರಭೇದಗಳಾಗಿರುವ ಪಶ್ಚಿಮ ಬಂಗಾಳದ ಖಿರ್ಸಪತಿ ಮತ್ತು ಲಕ್ಷ್ಮಣ್‌ಭೋಗ್, ಹಾಗೂ ಬಿಹಾರದಿಂದ ಜರ್ದಲು ಒಟ್ಟಾರೆ 16 ವಿಧದ ಮಾವಿನ ಹಣ್ಣುಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

* ಭಾರತದಲ್ಲಿ ಮಾವಿನ ಹಣ್ಣನ್ನು ಹಣ್ಣುಗಳ ರಾಜ ಎಂದು ಕರೆಯುತ್ತಾರೆ. ಪ್ರಸ್ತುತ ಉತ್ತರಪ್ರದೇಶ, ಬಿಹಾರ, ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕ ಈ ಎಲ್ಲ ರಾಜ್ಯಗಳಲ್ಲಿ ಅತೀ ಹೆಚ್ಚಾಗಿ ಮಾವಿನ ಹಣ್ಣನ್ನು ಬೆಳೆಯುತ್ತಾರೆ.

# 16-06-2021

## ಸರಳಾ ವಿದ್ಯಾ ನಗಲಾ ಅವರು ಅಮೇರಿಕಾದ ಕನೆಕ್ಟಿಕಟ್‌ನ ಫೆಡರಲ್ ನ್ಯಾಯಾಧೀಶರಾಗಿ ನೇಮಕ



* ಭಾರತೀಯ ಅಮೆರಿಕನ್ ಸರಳಾ ವಿದ್ಯಾ ನಗಲಾ ಅವರನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಕನೆಕ್ಟಿಕಟ್‌ನ ಫೆಡರಲ್ ನ್ಯಾಯಾಧೀಶರನ್ನಾಗಿ ನಾಮನಿರ್ದೇಶನ ಮಾಡಿದ್ದಾರೆ.

* ಅಮೆರಿಕ ಜಿಲ್ಲಾ ನ್ಯಾಯಾಲಯದಲ್ಲಿ ಕಾರ್ಯವನ್ನು ನಿರ್ವಹಿಸಲಿರುವ ದಕ್ಷಿಣ ಏಷ್ಯಾ ಮೂಲದ ಸರಳಾ ವಿದ್ಯಾ ಅವರು ಮೊದಲ ವ್ಯಕ್ತಿಯಾಗಲಿದ್ದಾರೆ.

* ಸರಳಾ ವಿದ್ಯಾ ಅವರು ಈ ಹಿಂದೆ 2012 ರಲ್ಲಿ ಅಮೆರಿಕದ ಅಟಾರ್ನಿ ಕಚೇರಿಗೆ ಸೇರ್ಪಡೆಯಾಗಿದ್ದಾರೆ.

* ಪ್ರಸ್ತುತ ಭಾರತೀಯ ಅಮೆರಿಕನ್ ಸರಳಾ ವಿದ್ಯಾ ನಗಲಾ ಅವರು ಕನೆಕ್ಟಿಕಟ್‌ನಲ್ಲಿರುವ ಅಟಾರ್ನಿ ಕಚೇರಿಯಲ್ಲಿ ಅಪರಾಧ ವಿಭಾಗದ ಉಪ ಮುಖ್ಯಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಭಾರತೀಯರಿಂದ ಶೇ. 43 ರಷ್ಟು ಚೀನಾ ಉತ್ಪನ್ನಗಳ ತಿರಸ್ಕಾರ



* ಭಾರತೀಯ ಮತ್ತು ಚೀನಾದ ಸೈನಿಕರ ನಡುವೆ ಕಳೆದ ಒಂದು ವರ್ಷದ ಹಿಂದೆ ಲಡಾಖ್‌ನ ಗಾಲ್ವಾನ್ ಕಣಿವೆಯಲ್ಲಿ ಘರ್ಷಣೆ ನಡೆದು ಹೋಗಿದೆ, ಇದೀಗ ಈ ಘರ್ಷಣೆ ನಡೆದ ಬಳಿಕ ಭಾರತೀಯರು ಶೇಕಡಾ 43 ರಷ್ಟು ಚೀನಾ ತಯಾರಿಸಿದ ಉತ್ಪನ್ನಗಳನ್ನು ಖರೀದಿ ಮಾಡಿಲ್ಲ ಎಂದು ಸಮೀಕ್ಷೆಯೊಂದು ಮಾಹಿತಿಯನ್ನು ವರದಿ ಮಾಡಿದೆ.

* ಭಾರತ ಚೀನಾ ನಡುವಿನ ಗಡಿ ವಿವಾದದಿಂದಾಗಿ ಶೇಕಡಾ 40 ಕ್ಕೂ ಹೆಚ್ಚು ಭಾರತೀಯ ಗ್ರಾಹಕರು ಮೇಡ್ ಇನ್ ಚೀನಾ ವಸ್ತುಗಳನ್ನು ಖರೀದಿಸಲು ಹಿಂದೆ ಸರಿದಿದ್ದಾರೆ ಎಂದು ತಳಿದು ಬಂದಿದೆ.

* ಭಾರತದ 281 ಜಿಲ್ಲೆಗಳಿಂದ ಸುಮಾರು 18,000 ಜನಗಳ ಅಭಿಪ್ರಾಯವನ್ನು ಲೋಕಲ್‌ಸರ್ಕಲ್ಸ್‌ನಿಂದ ಸಂಗ್ರಹಿಸಲಾಗಿದೆ, ಈ ಮಾಹಿತಿಯ ಪ್ರಕಾರ ಕಳೆದ 1 ವರ್ಷದಲ್ಲಿ ಶೇ. 43 ರಷ್ಟು ಭಾರತೀಯ ಗ್ರಾಹಕ ಪ್ರಜೆಗಳು ಚೀನಾ ದೇಶ ತಯಾರಿಸಿದ ವಸ್ತುಗಳನ್ನು ಖರೀದಿ ಮಾಡಿಲ್ಲ ಎಂದು ತಿಳಿಸಿದ್ದಾರೆ.

* ಆದರೆ ಶೇಕಡಾ 34 ರಷ್ಟು ಜನರು ಒಂದು ಅಥವಾ ಎರಡು ಚೀನಾ ವಸ್ತುಗಳನ್ನು ಖರೀದಿ ಮಾಡಿದ್ದೇವೆ ಎಂದು ತಿಳಿಸಿದ್ದಾರೆ, ಇನ್ನು ಶೇಕಡಾ 14 ರಷ್ಟು ಜನರು 3 5 ವಸ್ತುಗಳು, ಹಾಗೂ ಶೇಕಡಾ 7 ರಷ್ಟು ಜನರು 5 10 ವಸ್ತುಗಳನ್ನು ಖರೀದಿಸಿದ್ದಾರೆ ಎಂದು ತಿಳಿದು ಬಂದಿದೆ.

## 2014 ರ ಬಳಿಕ ಭಾರತೀಯ ವನಿತೆಯರಿಂದ ಮೊದಲ ಟೆಸ್ಟ್

* ಪ್ರಸ್ತುತ ಮಿಥಾಲಿ ನಾಯಕತ್ವದ ತಂಡವು ಇಂಗ್ಲೆಂಡ್ ವಿರುದ್ಧ ಟೆಸ್ಟ್ ಪಂದ್ಯವನ್ನಾಡಲು ಸಿದ್ಧವಾಗಿದೆ, ಈ ಟೆಸ್ಟ್ ಪಂದ್ಯವು 4 ದಿನಗಳ ಕಾಲ ಭಾರತ ಮತ್ತು ಇಂಗ್ಲೆಂಡ್ ಮಧ್ಯ ನಡೆಯಲಿದೆ.

* ಪ್ರಸ್ತುತ ಇಂಗ್ಲೆಂಡ್‌'ನ ಬ್ರಿಸ್ಟಲ್‌ನಲ್ಲಿ ನಡೆಯುವ ಏಕೈಕ ಟೆಸ್ಟ್ ಪಂದ್ಯ ಇದಾಗಿದೆ. ಇದು ಭಾರತೀಯ ವನಿತೆಯರು ಸುಮಾರು 7 ವರ್ಷಗಳ ಬಳಿಕ ಆಡಲು ಸಿದ್ಧವಾಗಿರುವ ಮೊದಲ ಟೆಸ್ಟ್ ಪಂದ್ಯ ಇದಾಗಿದೆ.

* ಈ ಹಿಂದೆ 2014 ರಲ್ಲಿ ಭಾರತವು ದಕ್ಷಿಣ ಆಫ್ರಿಕಾ ವಿರುದ್ಧ ಮೈಸೂರಿನಲ್ಲಿ ತನ್ನ ಕೊನೆಯ ಟೆಸ್ಟ್ ಪಂದ್ಯವನ್ನು ಆಡಿತ್ತು, ಆ ಸಂಧರ್ಭದಲ್ಲಿ ಕೂಡ ಮಿಥಾಲಿ ಅವರು ಭಾರತೀಯ ಮಹಿಳಾ ಕ್ರಿಕೆಟ್ ತಂಡದ ನಾಯಕಿಯಾಗಿದ್ದರು.

## ಭಾರತಕ್ಕೆ ಮಧ್ಯಂತರ ಮುಖ್ಯ ಅನುಸರಣೆ ಅಧಿಕಾರಿಯನ್ನು ನೇಮಿಸಿದ ಟ್ವಿಟರ್




* ಟ್ವಿಟರ್ ಇದೀಗ ಭಾರತ ಸರ್ಕಾರದ ಹೊಸ ಐಟಿ ನಿಯಮಗಳನ್ನು ಅನುಸರಿಸಲು ಭಾರತದಲ್ಲಿ ಮಧ್ಯಂತರ ಮುಖ್ಯ ಅನುಸರಣೆ ಅಧಿಕಾರಿಯನ್ನು ನೇಮಿಸಿದೆ.

* 2021 ರ ಫೆಬ್ರುವರಿಯಲ್ಲಿ ಭಾರತವು ಹೊಸ ಐಟಿ ನಿಯಮಗಳನ್ನು ಘೋಷಣೆ ಮಾಡಿತು, ಹಾಗೂ ಈ ನಿಯಮವನ್ನು ಮೇ. 25 ರಂದು ಜಾರಿಗೆ ತಂದಿದೆ ಆದರೆ ಈ ಹೊಸ ಐಟಿ ನಿಯಮಗಳನ್ನು ಅನುಸರಿಸಲು ವಾಟ್ಸಾಪ್ ಮತ್ತು ಫೇಸ್‌ಬುಕ್ ತಮ್ಮ ಕುಂದುಕೊರತೆ ಅಧಿಕಾರಿಗಳನ್ನು ನೇಮಿಸಿತು ಆದರೆ ಟ್ವಿಟರ್ ಇಂಡಿಯಾ ಹೆಚ್ಚಿನ ಸಮಯವನ್ನು ಕೇಳಿತ್ತು.

* ಭಾರತೀಯ ಸರ್ಕಾರವು ಮಾಹಿತಿ ತಂತ್ರಜ್ಞಾನ ನಿಯಮಗಳನ್ನು 2021 ರ ಫೆಬ್ರುವರಿಯಲ್ಲಿ ಸೂಚಿಸಿತ್ತು, ಮಾಹಿತಿ ತಂತ್ರಜ್ಞಾನ (IT) ಕಾಯ್ದೆ 2000 ರ ಸೆಕ್ಷನ್ 87 (2) ರ ಅಡಿಯಲ್ಲಿ ನಿಯಮಗಳನ್ನು ರೂಪಿಸಲಾಗಿದೆ, ಈ ಹೊಸ ಮಾಹಿತಿ ತಂತ್ರಜ್ಞಾನ ನಿಯಮಗಳು ಸಾಮಾಜಿಕ ಮಾಧ್ಯಮ ಮತ್ತು ಓವರ್ ದಿ ಟಾಪ್ (OTT) ಪ್ಲಾಟ್ ಫಾರ್ಮ್‌ಗಳೊಂದಿಗೆ ವ್ಯವಹರಿಸುತ್ತವೆ. ಹೊಸ ನಿಯಮಗಳ ಪ್ರಕಾರ ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್‌ಗಳಲ್ಲಿನ ವಿಷಯವನ್ನು ಸಕ್ರಿಯವಾಗಿ ಮೇಲ್ವಿಚಾರಣೆ ಮಾಡಲಾಗುತ್ತದೆ ಎಂದು ತಿಳಿಸಿದೆ.

## ಭಾರತ, ಚೀನಾ, ಪಾಕಿಸ್ತಾನ ರಾಷ್ಟ್ರಗಳು ಪರಮಾಣು ಶಸ್ತ್ರಾಸ್ತ್ರ ಹೆಚ್ಚಿಸುತ್ತಿರುವ ವರದಿ



* ಪ್ರಸ್ತುತ ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರೀಸರ್ಚ್ ಇನ್ ಸ್ಟಿಟ್ಯೂಟ್ ನಡೆಸಿದ ಅಧ್ಯಯನದಿಂದ ಚೀನಾ, ಪಾಕಿಸ್ತಾನ ಹಾಗೂ ಭಾರತ ಕ್ರಮವಾಗಿ 350, 165 ಮತ್ತು 156 ಪರಮಾಣು ಸಿಡಿತಲೆಗಳನ್ನು ಹೊಂದಿವೆ ಎಂದು ತಿಳಿದು ಬಂದಿದೆ, ಇದರಿಂದ ಈ 3 ರಾಷ್ಟ್ರಗಳು ಪರಮಾಣು ಶಸ್ತ್ರಾಸ್ತ್ರಗಳನ್ನು ಹೆಚ್ಚಿಸುತ್ತಿರುವ ದೇಶಗಳಾಗಿ ಕಂಡು ಬಂದಿವೆ.

* ಈ ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರೀಸರ್ಚ್ ಇನ್ ಸ್ಟಿಟ್ಯೂಟ್ ನಡೆಸಿದ ಅಧ್ಯಯನದಲ್ಲಿ ನೀಡಿರುವ ಮಾಹಿತಿ ಪ್ರಕಾರ, ವಿಶ್ವದಲ್ಲಿನ ಅಂದಾಜು 13,080 ಜಾಗತಿಕ ಪರಮಾಣು ಶಸ್ತ್ರಾಸ್ತ್ರದಲ್ಲಿ ಶೇಕಡ 90 ರಷ್ಟು ಭಾಗವನ್ನು ರಷ್ಯಾ ಮತ್ತು ಅಮೆರಿಕ ಹೊಂದಿವೆ.

* ಈ ಹಿಂದಿನ ವರ್ಷ ಜನೇವರಿಯಲ್ಲಿ ಚೀನಾ, ಪಾಕಿಸ್ತಾನ ಮತ್ತು ಭಾರತ ಕ್ರಮವಾಗಿ 320, 160 ಹಾಗೂ 150 ಪರಮಾಣು ಸಿಡಿತಲೆಗಳನ್ನು ಹೊಂದಿದ್ದವು ಎಂದು ಸಿಪ್ರೈ ಅಧ್ಯಯನ ಮಾಹಿತಿಯನ್ನು ನೀಡಿದೆ.

* ಪ್ರಸ್ತುತ ಅಮೆರಿಕ, ರಷ್ಯಾ, ಬ್ರಿಟನ್, ಫ್ರಾನ್ಸ್, ಚೀನಾ, ಭಾರತ, ಪಾಕಿಸ್ತಾನ, ಇಸ್ರೇಲ್ ಮತ್ತು ಉತ್ತರ ಕೊರಿಯಾ ಈ ವಿಶ್ವದ ಒಂಬತ್ತು ರಾಷ್ಟ್ರಗಳು ಪರಮಾಣು ಶಸ್ತ್ರಾಸ್ತ್ರವನ್ನು ಹೊಂದಿವೆ.

## ಚೀನಾವನ್ನು ಜಾಗತಿಕ ಭದ್ರತಾ ಸವಾಲು ಎಂದು ಘೋಷಿಸಿದ,ನ್ಯಾಟೋ(NATO)



* ನ್ಯಾಟೋ (NATO) ನಾಯಕರು ಚೀನಾವನ್ನು ನಿರಂತರ ಭದ್ರತಾ ಸವಾಲು ಎಂದು ಘೋಷಣೆ ಮಾಡಿದ್ದಾರೆ, ಚೀನಾದವರು ಜಾಗತಿಕ ಕ್ರಮವನ್ನು ದುರ್ಬಲಗೊಳಿಸಲು ಕೆಲಸ ಮಾಡುತ್ತಿದ್ದಾರೆ ಎಂದು ವರದಿಯನ್ನು ಮಾಡಿದ್ದಾರೆ.

* ಚೀನಾ ದೇಶವು ಗುರಿಗಳು ಹಾಗೂ ಪ್ರತಿಷ್ಠಾಪನೆಯ ನಡವಳಿಕೆಯು ನಿಯಮ ಆಧಾರಿತ ಅಂತರರಾಷ್ಟ್ರೀಯ ಕ್ರಮಕ್ಕೆ ಹಾಗೂ ಮೈತ್ರಿ ಭದ್ರತೆಗೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಸವಾಲುಗಳನ್ನು ಒಡ್ಡುತ್ತಿದೆ ಎಂದು ನ್ಯಾಟೋ ನಾಯಕರು ವರದಿಯನ್ನು ನೀಡಿದ್ದಾರೆ.

* ಚೀನಾದ ಮಾನವ ಹಕ್ಕುಗಳ ದಾಖಲೆ ವ್ಯಾಪಾರ ಅಭ್ಯಾಸಗಳು ಹಾಗೂ ಚೀನಾದ ಮಿಲಿಟರಿಯ ನಡವಳಿಕೆಯ ಬಗ್ಗೆ ಏಕೀಕೃತ ಧ್ವನಿಯಲ್ಲಿ ಮಾತನಾಡಲು US ಅಧ್ಯಕ್ಷರು ಮಿತ್ರರಾಷ್ಟ್ರಗಳನ್ನು ಒಟ್ಟುಗೂಡಿಸುವ ಪ್ರಯತ್ನವನ್ನು ಆರಂಭಿಸಿದ್ದರು.

* ಇದೀಗ ನ್ಯಾಟೋ ನಾಯಕರು ಚೀನಾ ತನ್ನ ಅಂತರರಾಷ್ಟ್ರೀಯ ವ್ಯವಸ್ಥೆಯೊಂದಿಗೆ ಜವಾಬ್ದಾರಿಯುತವಾಗಿ ನಡೆದುಕೊಳ್ಳುವಂತೆ ಕೇಳಿಕೊಂಡಿದ್ದಾರೆ.

* ಉತ್ತರ ಅಟ್ಲಾಂಟಿಕ್ ಒಪ್ಪಂದ ಸಂಸ್ಥೆ (NATO): ನ್ಯಾಟೋ ಯುರೋಪಿಯನ್ ಮತ್ತು ಉತ್ತರ ಅಮೆರಿಕದ ದೇಶಗಳ ಮೈತ್ರಿಯಾಗಿದೆ. ಈ ನ್ಯಾಟೋ 2 ನೇ ಮಹಾಯುದ್ಧದ ರಷ್ಯಾದ ಆಕ್ರಮಣದ ನಂತರ ರೂಪಗೊಂಡಿದೆ.

## ಆಸ್ಟ್ರೇಲಿಯಾ ಮತ್ತು ಯುಕೆ ಮುಕ್ತ ವ್ಯಾಪಾರ ಒಪ್ಪಂದ



* ಪ್ರಸ್ತುತ 2021 ರ ಜೂನ್. 15 ರಂದು ಯುನೈಟೆಡ್ ಕಿಂಗ್‌ಡಮ್ ಹಾಗೂ ಆಸ್ಟ್ರೇಲಿಯಾ ರಾಷ್ಟ್ರಗಳು ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿವೆ, ಈ ಮುಕ್ತ ವ್ಯಾಪಾರ ಒಪ್ಪಂದವು ಸರಕುಗಳ ಮೇಲಿನ ಸುಂಕವನ್ನು ತೆಗೆದುಹಾಕುವ ಒಪ್ಪಂದವಾಗಿದೆ, ಪ್ರಸ್ತುತ ಈ ಒಪ್ಪಂದಕ್ಕೆ ಯುರೋಪಿಯನ್ ಒಕ್ಕೂಟದಿಂದ ಯುಕೆ ನಿರ್ಗಮಿಸಿದ ನಂತರ ಸಹಿ ಹಾಕಲಾಗಿದೆ. ಇದೀಗ ಯು.ಕೆ ಪ್ರಪಂಚದ ಎಲ್ಲ ಕಡೆಗಳಲ್ಲಿ ಉತ್ತಮ ಲಿಂಕ್‌ಗಳನ್ನು ವಿಸ್ತರಿಸಲು ಹುಡುಕುತ್ತಿದೆ.

* ಈ ಒಪ್ಪಂದದಿಂದ ಬ್ರಿಟಿಷ್ ಉತ್ಪನ್ನಗಳಾಗಿರುವ ಸ್ಕಾಚ್ ವಿಸ್ಕಿಯಂತಹ ವಸ್ತುಗಳ ರಫ್ತನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.

* ಯುಕೆ ರಾಷ್ಟ್ರವು ಆಸ್ಟ್ರೇಲಿಯಾ, ಚಿಲಿ, ಜಪಾನ್, ಕೆನಡಾ, ಮೆಕ್ಸಿಕೊ, ಸಿಂಗಾಪುರ್ ಹಾಗೂ ವಿಯೆಟ್ನಾಂನ 11 CPTPP ಸದಸ್ಯರ 7 ಜನರೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಗಳನ್ನು ಹೊಂದಿದೆ.

* ಪ್ರಸ್ತುತ ಯುಕೆ ಆಸ್ಟ್ರೇಲಿಯಾದ 5 ನೇ ಅತಿದೊಡ್ಡ ವ್ಯಾಪಾರ ಪಾಲುದಾರ, 2020 ರಲ್ಲಿ ಆಸ್ಟ್ರೇಲಿಯಾದೊಂದಿಗಿನ ಯುಕೆ ವ್ಯಾಪಾರವು ಅದರ ಒಟ್ಟು ವ್ಯಾಪಾರದ 1.2% ಆಗಿದೆ.

* ಟ್ರಾನ್ಸ್ ಪೆಸಿಫಿಕ್ ಸಹಭಾಗಿತ್ವಕ್ಕಾಗಿ ಸಮಗ್ರ ಮತ್ತು ಪ್ರಗತಿಶೀಲ ಒಪ್ಪಂದ (CPTPP) ಅಥವಾ TPP 11 ಎಂದೂ ಕರೆಯಲಾಗುತ್ತದೆ, ಆಸ್ಟ್ರೇಲಿಯಾ, ಬ್ರೂನಿ, ಚಿಲಿ, ಮಲೇಷ್ಯಾ, ಕೆನಡಾ, ಜಪಾನ್, ಮೆಕ್ಸಿಕೊ, ನ್ಯೂಜಿಲೆಂಡ್, ಸಿಂಗಾಪುರ್, ಪೆರು ಮತ್ತು ವಿಯೆಟ್ನಾಂ ರಾಷ್ಟ್ರಗಳ ನಡುವೆ ವ್ಯಾಪಾರ ಒಪ್ಪಂದವಾಗಿದೆ.

## ದುಬೈಗೆ GI ಪ್ರಮಾಣೀಕರಿಸಿದ ಜಲ್ಗಾಂವ್ ಬಾಳೆಹಣ್ಣನ್ನು ರಫ್ತು ಮಾಡಲಾಗಿದೆ



* ಪ್ರಸ್ತುತ 2021 ರ ಜೂನ್.16 ರಂದು ಮಹಾರಾಷ್ಟ್ರ ರಾಜ್ಯದ ಜಲ್ಗಾಂವ್ ಜಿಲ್ಲೆಯ ಫೈಬರ್ ಹಾಗೂ ಖನಿಜ ಸಮೃದ್ಧವಾದ 'ಜಲ್ಗಾಂವ್ ಬಾಳೆಹಣ್ಣು'ನ್ನು ದುಬೈಗೆ ರಫ್ತು ಮಾಡಲಾಯಿತು, ಪ್ರಸ್ತುತ ಜಲ್ಗಾಂವ್ ಬಾಳೆಹಣ್ಣು ಮಹಾರಾಷ್ಟ್ರ ರಾಜ್ಯದ ಜಲ್ಗಾಂವ್ ಜಿಲ್ಲೆಯಿಂದ ಭೌಗೋಳಿಕ ಸೂಚನೆಗಳು (GI) ಪ್ರಮಾಣೀಕೃತ ಕೃಷಿ ಉತ್ಪನ್ನ ಇದಾಗಿದೆ.

* ಮಹಾರಾಷ್ಟ್ರ ರಾಜ್ಯದ ಜಲ್ಗಾಂವ್ ಜಿಲ್ಲೆಯ ತಂದಲ್ವಾಡಿ ಗ್ರಾಮದ ರೈತರಿಂದ 22 ಮೆಟ್ರಿಕ್ ಟನ್ ಜಲ್ಗಾಂವ್ ಬಾಳೆಹಣ್ಣನ್ನು ಪಡೆದುಕೊಂಡು ಅವುಗಳನ್ನು ದುಬೈಗೆ ರಫ್ತು ಮಾಡಲಾಗಿದೆ.

* ಪ್ರಸ್ತುತ ಮಹಾರಾಷ್ಟ್ರ ರಾಜ್ಯದ ಜಲ್ಗಾಂವ್ ಜಿಲ್ಲೆಯನ್ನು 'ಬಾಳೆ ನಗರ' ಎಂದು ಕರೆಯುತ್ತಾರೆ ಹಾಗೂ ಈ ಬಾಳೆಹಣ್ಣು ಕೃಷಿ ರಫ್ತು ನೀತಿಯ ಅಡಿಯಲ್ಲಿ ಗುರುತಿಸಿಕೊಂಡ ಕ್ಲಸ್ಟರ್ ಬಾಳೆಹಣ್ಣು ಆಗಿದೆ.

* ಈ ಹಿಂದೆ 2016 ರಲ್ಲಿ ಜಲ್ಗಾಂವ್ ಜಿಲ್ಲೆಯ ಬಾಳೆಹಣ್ಣಿಗೆ GI ಪ್ರಮಾಣೀಕರಣವು ದೊರಕಿದೆ. ಹಾಗೂ ಈ ಬಾಳೆಹಣ್ಣನ್ನು ಜಲ್ಗಾಂವ್'ನ ನಿಸರ್ಗ್‌ರಾಜಾ ಕೃಷಿ ವಿಜ್ಞಾನ ಕೇಂದ್ರದಲ್ಲಿ ನೋಂದಾಯಿಸಲಾಗಿದೆ.

* 2020 21 ರ ಅವಧಿಯಲ್ಲಿ ಭಾರತದಲ್ಲಿ ಬೆಳೆದಿರುವ 1.91 ಲಕ್ಷ ಟನ್ ಮೌಲ್ಯದ ಬಾಳೆಹಣ್ಣನ್ನು ರಫ್ತು ಮಾಡಲಾಗಿದೆ ಈ ಬಾಳೆಹಣ್ಣಿನ ಮೌಲ್ಯವು 619 ಕೋಟಿ ರೂ. ಆಗಿದೆ.

* ಭಾರತದಲ್ಲಿ ಶೇ. 70 ರಷ್ಟು ಬಾಳೆಹಣ್ಣು ಉತ್ಪಾದನೆ ಮಾಡುವ ಮುಖ್ಯ ರಾಜ್ಯಗಳು ಗುಜರಾತ್, ಆಂಧ್ರಪ್ರದೇಶ, ಕೇರಳ, ಉತ್ತರ ಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಬಿಹಾರ ಮತ್ತು ಮಧ್ಯಪ್ರದೇಶ.

## ವಿಶ್ವ ಹಿರಿಯರ ನಿಂದನೆ ಜಾಗೃತಿ ದಿನ (Abuse Awareness Day)




* ಪ್ರತಿವರ್ಷವು ಜೂನ್. 15 ರಂದು ವಿಶ್ವ ಹಿರಿಯರ ನಿಂದನೆ ದಿನದ ಬಗ್ಗೆ ಜಾಗೃತಿಯನ್ನು ಮೂಡಿಸಲಾಗುತ್ತದೆ ಹಾಗೂ ಪ್ರಪಂಚದಾದ್ಯಂತ ಇರುವ ವಯಸ್ಸಾದ ಜನರು ಅನುಭವಿಸುವ ನಿಂದನೆಗಳ (ದೈಹಿಕ ಅಥವಾ ಭಾವನಾತ್ಮಕ) ವಿಷಯಗಳ ಬಗ್ಗೆ ಈ ದಿನದಂದು ಜಾಗೃತಿ ಮೂಡಿಸಲಾಗುತ್ತದೆ.

* "ನ್ಯಾಯಕ್ಕೆ ಪ್ರವೇಶ" ಪ್ರಸ್ತುತ ವರ್ಷದ ವಿಶ್ವ ಹಿರಿಯರ ನಿಂದನೆ ಜಾಗೃತಿ ದಿನದ ಧ್ಯೇಯವಾಕ್ಯವಾಗಿದೆ.

* ಈ ಹಿಂದೆ 2006 ರಲ್ಲಿ ಜೂನ್. 15 ನ್ನು ಹಿರಿಯರಿಗೆ ವಿಶೇಷ ದಿನವೆಂದು ಘೋಷಣೆ ಮಾಡಿ ಆಚರಿಸಲು ಆರಂಭಿಸಲಾಯಿತು ಆದರೆ 2011 ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಈ ದಿನವನ್ನು ಅಧಿಕೃತವಾಗಿ ಗುರುತಿಸಿದೆ.

## ಪ್ರಧಾನಿ ನರೇಂದ್ರ ಮೋದಿ ವಿವಾಟೆಕ್ ನ(VivaTech) 5 ನೇ ಆವೃತ್ತಿಯನ್ನು ಉದ್ದೇಶಿಸಿ ಭಾಷಣ



* 2021 ರ ಜೂನ್. 16 ರಿಂದ 19 ರವರೆಗೆ ನಡೆಯಲಿರುವ ವಿವಾಟೆಕ್ (VivaTech)ನ 5 ನೇ ಆವೃತ್ತಿಯಲ್ಲಿ ಮುಖ್ಯ ಭಾಷಣ

ಮಾಡಲು ಪ್ರಧಾನಿ ನರೇಂದ್ರ ಮೋದಿ ಅವರನ್ನು ಗೌರವ ಅತಿಥಿಯಾಗಿ ಆಹ್ವಾನಿಸಿದ್ದಾರೆ.

* ಈ ವಿವಾಟೆಕ್(VivaTech)ನ 5 ನೇ ಆವೃತ್ತಿಯಲ್ಲಿ ಬೇರೆ ಬೇರೆ ರಾಷ್ಟ್ರಗಳ ಪ್ರಮುಖ ಭಾಷಣಕಾರರು ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರೋನ್, ಸ್ಪೇನ್‌ನ ಪ್ರಧಾನ ಮಂತ್ರಿ ಪೆಡ್ರೊ ಸ್ಯಾಂಚೆಜ್ ಹಾಗೂ ವಿವಿಧ ಯುರೋಪಿಯನ್ ರಾಷ್ಟ್ರಗಳ ಮಂತ್ರಿಗಳು ಮತ್ತು ಸಂಸದರು ಇರಲಿದ್ದಾರೆ, ಇದಲ್ಲದೆ ಕಾರ್ಪೊರೇಟ್ ನಾಯಕರುಗಳಾಗಿರುವ ಆಪಲ್ ಸಂಸ್ಥೆಯ ಸಿಇಒ ಟಿಮ್ ಕುಕ್, ಮೈಕ್ರೋಸಾಫ್ಟ್ ಅಧ್ಯಕ್ಷ ಬ್ರಾಡ್ ಸ್ಮಿತ್, ಇವರ ಜೊತೆಗೆ ಫೇಸ್‌ಬುಕ್ ಅಧ್ಯಕ್ಷ ಮಾರ್ಕ್ ಜುಕರ್‌ಬರ್ಗ್ ಅವರು ಪಾಲ್ಗೊಳ್ಳಲಿದ್ದಾರೆ.

* ಪ್ರಸ್ತುತ ವಿವಾಟೆಕ್'ನ್ನು 2016 ರಲ್ಲಿ ಆರಂಭಿಸಲಾಗಿದೆ, ಇದು ಯುರೋಪಿನ ಅತಿದೊಡ್ಡ ಡಿಜಿಟಲ್ ಮತ್ತು ಸ್ಟಾರ್ಟ್ ಅಪ್ ಘಟನೆಗಳಲ್ಲಿ ವಿವಾಟೆಕ್ ಕೂಡ ಒಂದಾಗಿದೆ ಹಾಗೂ ಇದು ಪ್ರತಿ ವರ್ಷವು ಪ್ಯಾರಿಸ್‌ನಲ್ಲಿ ನಡೆಸಲಾಗುತ್ತದೆ.

* ಈ ವಿವಾಟೆಕ್‌ನ (VivaTech) 5 ನೇ ಆವೃತ್ತಿಯ ಈವೆಂಟ್'ನ್ನು ಪ್ರಮುಖ ಜಾಹೀರಾತು ಮತ್ತು ಮಾರ್ಕೆಟಿಂಗ್ ಸಂಘಟನೆಯಾಗಿರುವ ಫ್ರಾನ್ಸ್'ನ ಪ್ರಮುಖ ಮಾಧ್ಯಮ ಸಮೂಹ ಲೆಸ್ ಎಕೋಸ್ ಹಾಗೂ ಪಬ್ಲಿಕ್ ಗ್ರೂಪ್ ಜಂಟಿಯಾಗಿ ಆಯೋಜಿಸಿದೆ.

## 17-06-2021

### ಕರ್ನಾಟಕ ರಾಜ್ಯದ ಗದಗ ನಗರವು ಶುದ್ದ ಗಾಳಿಯ ನಗರಗಳ ಪಟ್ಟಿಯಲ್ಲಿ ಟಾಪ್



* ಪ್ರತಿದಿನ ದೇಶದ ಪ್ರಮುಖ ನಗರದ ಗಾಳಿಯ ಗುಣಮಟ್ಟದ ಮಾನದಂಡ ಸೂಚ್ಯಂಕ ಪಟ್ಟಿಯನ್ನು ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಬಿಡುಗಡೆ ಮಾಡುತ್ತದೆ.

* ಇದೇ ಜೂನ್. 15 ರಂದು ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ 131 ನಗರಗಳ ಸೂಚ್ಯಂಕದ ಪಟ್ಟಿಯನ್ನು ಪ್ರಕಟಣೆ ಮಾಡಿದೆ, ಈ ಸೂಚ್ಯಂಕದ ಪಟ್ಟಿಯಲ್ಲಿ 41 ನಗರಗಳು ಉತ್ತಮ, ಮತ್ತು 65 ನಗರಗಳು ಸಮಾಧಾನಕರ ಇದರ ಜೊತೆಗೆ 21 ನಗರಗಳ ಗಾಳಿಯ ಸ್ಥಿತಿ ಮಧ್ಯಮ ಎಂದು ಪ್ರಕಟಣೆಯನ್ನು ಹೊರಡಿಸಿದೆ.

* ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಜೂನ್. 15 ರಂದು ಬಿಡುಗಡೆ ಮಾಡಿದ ವರದಿಯ ಪ್ರಕಾರ ಕರ್ನಾಟಕ ರಾಜ್ಯದ ಗದಗ ನಗರವು ದೇಶದಲ್ಲಿ ಶುದ್ದ ಹಾಗೂ ಸ್ವಚ್ಛ ಗಾಳಿ ಬೀಸುವ ನಗರ ಪಟ್ಟಿಯಲ್ಲಿ ಮುಂಚೂಣಿ ಸ್ಥಾನವನ್ನು ಪಡೆದುಕೊಂಡಿದೆ.

* ಪ್ರಸ್ತುತ ಸ್ವಚ್ಛ ಗಾಳಿ ಬೀಸುವ ನಗರ ಪಟ್ಟಿಯಲ್ಲಿ ಕರ್ನಾಟಕ ರಾಜ್ಯದ ಗದಗ ನಗರವು 10 ಸೂಚ್ಯಂಕ ಪಡೆದುಕೊಂಡು ಶುದ್ದ ಗಾಳಿ ಬೀಸುವ ಅತ್ಯುತ್ತಮ ನಗರವಾಗಿದೆ, ಮತ್ತು ಮಿಜೋರಾಂ ರಾಜ್ಯದ ರಾಜಧಾನಿ ಐಜ್ವಾಲ್ 11 ಸೂಚ್ಯಂಕ ಪಡೆದುಕೊಂಡು 2 ನೇ ಸ್ಥಾನದಲ್ಲಿದೆ, ಕರ್ನಾಟಕದ ರಾಜ್ಯದ ಯಾದಗಿರಿ ನಗರವು 14 ಸೂಚ್ಯಂಕ ಪಡೆದುಕೊಂಡು 3 ನೇ ಸ್ಥಾನ ಪಡೆದಿದೆ, ನಂತರ ಹುಬ್ಬಳ್ಳಿ 21 ಸೂಚ್ಯಂಕ ಪಡೆದು 4 ನೇ ಸ್ಥಾನದಲ್ಲಿದೆ, ಬಾಗಲಕೋಟೆ ಜಿಲ್ಲೆಯು 25 ಸೂಚ್ಯಂಕ ಪಡೆದುಕೊಂಡು 6 ಸ್ಥಾನ, ಬೀದರ್ ಮತ್ತು ರಾಯಚೂರು 26 ಸೂಚ್ಯಂಕ ಪಡೆದು 7 ನೇ ಸ್ಥಾನ ಗಳಿಸಿವೆ.

* ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಕಟಿಸಿರುವ ವರದಿಯ ಪ್ರಕಾರ ಗಾಳಿ ಗುಣಮಟ್ಟದ ಸೂಚ್ಯಂಕದಲ್ಲಿ 0&50 ಬಂದರೆ ತುಂಬಾ ಕಡಿಮೆ ಕಲುಷಿತ ಗಾಳಿ ಎಂದು ಪರಿಗಣಿಸಲಾಗುವದು ಎಂದು ತಿಳಿಸಿದೆ.

* ಪ್ರತಿ 24 ಗಂಟೆಗಳಿಗೊಮ್ಮೆ ಶುದ್ದ ಗಾಳಿ ಮಾಪನ ಪ್ರಕ್ರಿಯೆ ನಡೆಯುತ್ತಿರುತ್ತದೆ ಎಂದು ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ತಿಳಿಸಿದೆ.

### ಟೆಲಿಕಾಮ್ ಭಾರತದಲ್ಲಿ 5ಜಿ ಬಳಕೆಯ ವರದಿಯನ್ನು ನೀಡಿದೆ




* ಪ್ರಸ್ತುತ ಎರಿಕ್ಸನ್ ಮೊಬಿಲಿಟಿ 2021ರ ವರದಿ ಪ್ರಕಾರ ಭಾರತದಲ್ಲಿ 2026 ರ ವೇಳೆಗೆ 5ಜಿ ಬಳಕೆದಾರರ ಸಂಖ್ಯೆಯು ಸುಮಾರು 30.3 ಕೋಟಿ ಇರಲಿದೆ ಎಂದಿದೆ, ಹಾಗೂ ಪ್ರತಿ ಬಳಕೆದಾರನ ತಿಂಗಳ ಡೇಟಾ ಬಳಕೆಯ ಪ್ರಮಾಣ 40 ಜಿಬಿಗಿಂತ ಹೆಚ್ಚಿರಲಿದೆ ಎಂದು ತಿಳಿಸಿದೆ.

* ಎರಿಕ್ಸನ್ ಮೊಬಿಲಿಟಿ ವರದಿಯ ಪ್ರಕಾರ ಇದೀಗ ಭಾರತದಲ್ಲಿ ಸರಾಸರಿ ಪ್ರತಿ ತಿಂಗಳು ಒಬ್ಬ ಬಳಕೆದಾರನ ತಿಂಗಳ ಬಳಕೆಯ ಡೇಟಾ ಪ್ರಮಾಣ 14.6 ಜಿಬಿ ಆಗಿದೆ, ಹಾಗೂ ಜಗತ್ತಿನಲ್ಲಿ ಭಾರತವು ಡೇಟಾ ಬಳಕೆಯ ಪ್ರಮಾಣವು 2 ನೇ ಸ್ಥಾನದಲ್ಲಿದೆ ಎಂದು ತಿಳಿಸಿದೆ.

* ಪ್ರಸ್ತುತ ಭಾರತದಲ್ಲಿ 2020 ರ ಅವಧಿಯಲ್ಲಿ 60.8 ಕೋಟಿ 4G ಬಳಕೆದಾರರು ಇದ್ದಾರೆ, ಹಾಗೂ ಬಳಕೆದಾರರ ಪ್ರಮಾಣವು 2026 ರ ವೇಳೆಗೆ 80.3 ಕೋಟಿ ತಲುಪಲಿದೆ ಎಂದು ತಿಳಿಸಿದೆ, ಹಾಗೂ ಆ ಸಮಯಕ್ಕೆ ಶೇ. 26 ರಷ್ಟು 5G ಬಳಕೆ ಮಾಡುವವರು ಇರಲಿದ್ದಾರೆ ಎಂದು ಎರಿಕ್ಸನ್ ಭಾರತೀಯ ಮಾರುಕಟ್ಟೆ ಸಂಪರ್ಕ ಜಾಲದ ಮುಖ್ಯಸ್ಥ ನಿತಿನ್ ಬನ್ಸಾಲ್ ಅವರು ಅಂದಾಜಿಸಿದ್ದಾರೆ.

ಪ್ರತಿ ದಿನದ ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ **KPSC VAANI** APP ಡೌನ್ಲೋಡ್ ಮಾಡಿಕೊಳ್ಳಿ

KPSC Vaani



ರಿಯಾಯಿತಿ ದರದಲ್ಲಿ ಸ್ಪರ್ಧಾತ್ಮಕ ಪುಸ್ತಕಗಳನ್ನು ಖರೀದಿಸಲು ಖರೀದಿಸಲು ಇಲ್ಲಿ ಕ್ಲಿಕ್ ಮಾಡಿ

ಪ್ರತಿದಿನದ ಉದ್ಯೋಗ ಮಾಹಿತಿ, ಪ್ರಚಲಿತ ಘಟನೆಗಳು, ಪ್ರಶ್ನೆ ಪತ್ರಿಕೆಗಳು, ಕಟ್ ಆಫ್ ಅಂಕಗಳು, Daily Quiz ಸೇರಿ ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಳು ಒಂದೇ ವೇದಿಕೆಯಲ್ಲಿ ನಿಮಗಾಗಿ

ನಮ್ಮ ಗುಂಪುಗಳನ್ನು ಸೇರಿಕೊಳ್ಳಿ

Click here To Join

To Download Our App

Follow Us on Facebook

Follow Us on Instagram

Scan QR Code
To Download
KPSC Vaani App

## ಕೇಂದ್ರ ಸರ್ಕಾರವು ಆಭರಣಗಳ ಮೇಲೆ ಹಾಲ್ ಮಾರ್ಕ್ ಕಡ್ಡಾಯ ಎಂದು ಆದೇಶ ಹೊರಡಿಸಿದೆ



* ಪ್ರಸ್ತುತ ಕೇಂದ್ರ ಸರ್ಕಾರವು ಚಿನ್ನದ ಆಭರಣಗಳು ಮತ್ತು ವಸ್ತುಗಳ ಮೇಲೆ ಹಾಲ್ ಮಾರ್ಕ್'ನ್ನು ಕಡ್ಡಾಯಗೊಳಿಸಿ ಎಂದು ಆದೇಶ ಹೊರಡಿಸಿದೆ.

* ಪ್ರಸ್ತುತ ಮಳಿಗೆಗಳಲ್ಲಿ ಆಭರಣಗಳನ್ನು ಖರೀದಿ ಮಾಡುವಾಗ ಅವುಗಳಿಗೆ ಹಾಲ್ ಮಾರ್ಕ್ ಇದ್ದರೆ ನಂಬಿಕೆ ಮತ್ತು ವಿಶ್ವಾಸ ಹೆಚ್ಚುತ್ತದೆ ಹಾಗೂ ಹಾಲ್ ಮಾರ್ಕ್ ಇರುವ ಚಿನ್ನ ಶುದ್ಧವಾಗಿದ್ದು ಭಾರತದ ಎಲ್ಲಿ ಬೇಕಾದರೂ ಗ್ರಾಹಕರು ಖರೀದಿಸಬಹುದು ಎಂದು ತಿಳಿಸಿದ್ದಾರೆ.

* ಭಾರತದ ಚಿನ್ನ ಮತ್ತು ಜ್ಯುವೆಲ್ಲರಿ ಒಕ್ಕೂಟದ ಮುಂಬೈ ಶಾಖೆಯ ಮುಖ್ಯಸ್ಥ ಕೇಂದ್ರ ಸರ್ಕಾರದ ಈ ನಿರ್ಧಾರವನ್ನು ಸ್ವಾಗತಿಸುತ್ತೇವೆ ಎಂದು ತಿಳಿಸಿದ್ದಾರೆ.

* ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಸ್'ನ ಡಿಜಿ ಪ್ರಮೋದ್ ಕುಮಾರ್ ತಿವಾರಿ ಅವರು ಪ್ರಸ್ತುತ ಹಾಲ್ ಮಾರ್ಕ್ ಇಲ್ಲದ ಚಿನ್ನದ ಆಭರಣಗಳನ್ನು ಅಂಗಡಿಗಳು ಅಥವಾ ಮಳಿಗೆಗಳಲ್ಲಿ ಮಾರಾಟ ಮಾಡಲು ಇನ್ನೂ ಅವಕಾಶ ಇದೇ, ಈ ಆಭರಣಗಳನ್ನು ಖರೀದಿಸಿದವರು ಅದಕ್ಕೆ ಹಾಲ್ ಮಾರ್ಕ್ ಹಾಕಿಸಿ ಹೊಸ ಜ್ಯುವೆಲ್ಲರಿಯಾಗಿ ಮಾಡಿ ಗುಣಮಟ್ಟ ಕಾಪಾಡಿಕೊಳ್ಳಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

## ಚೀನಾ ದೇಶವು ಬಾಹ್ಯಾಕಾಶ ನಿಲ್ದಾಣಕ್ಕೆ ಗಗನ ಯಾತ್ರಿಗಳನ್ನು ಕಳುಹಿಸಲು ಸಜ್ಜು



* ಚೀನಾ ದೇಶವು ಬಾಹ್ಯಾಕಾಶ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ಸಾಧಿಸಲು ಹೊಸ ಬಾಹ್ಯಾಕಾಶ ನಿಲ್ದಾಣಕ್ಕೆ 3 ಪುರುಷ ಗಗನಯಾತ್ರಿಗಳನ್ನು ಕಳುಹಿಸಲು ಚೀನಾದ ಮ್ಯಾನ್ಡ್ ಸ್ಪೇಸ್ ಏಜೆನ್ಸಿ ಮಾಹಿತಿ ನೀಡಿದೆ.

* ಚೀನಾ ದೇಶದ ನಿಯೆ ಹೈಶೆಂಗ್, ಲಿಯು ಬೊಮಿಂಗ್ ಮತ್ತು ಟ್ಯಾಂಗ್ ಹಾಂಗ್ಬೊ ಎಂಬ 3 ಗಗನಯಾತ್ರಿಗಳನ್ನು ಹೊತ್ತು ಶೆನ್‌ಶಾವ್ 12 ಆಕಾಶನೌಕೆ ಜಿಯುಕ್ವಾನ್ ಉಪಗ್ರಹ ಉಡಾವಣಾ ಕೇಂದ್ರದಿಂದ ಉಡಾವಣೆ ಮಾಡಲಿದ್ದಾರೆ, ಹಾಗೂ ಆ 3 ಗಗನ ಯಾತ್ರಿಗಳು 3 ತಿಂಗಳ ಕಾಲ ಹೊಸ ಬಾಹ್ಯಾಕಾಶ ನಿಲ್ದಾಣದಲ್ಲಿ ಉಳಿದುಕೊಳ್ಳಲಿದ್ದಾರೆ ಎಂದು ಸಿಎಮ್ಎಸ್ಎ ನಿರ್ದೇಶಕ ಜಿ ಕಿಮಿಂಗ್ ಉಡಾವಣಾ ಕೇಂದ್ರದಲ್ಲಿ ನಡೆಸಿದ ಸುದ್ದಿವಾಹಿನಿಯಲ್ಲಿ ಮಾಹಿತಿಯನ್ನು ನೀಡಿದ್ದಾರೆ, ಹಾಗೂ ಇದೇ ಮೊದಲ ಮಾನವಸಹಿತ ಕಾರ್ಯಾಚರಣೆಯಾಗಿದೆ ಎಂದಿದ್ದಾರೆ.

* ಪ್ರಸ್ತುತ ಚೀನಾ ದೇಶದ ಆಡಳಿತದಲ್ಲಿರುವ ಚೀನಾ ಕಮ್ಯುನಿಸ್ಟ್ ಪಾರ್ಟಿಗೆ ಸದ್ಯದಲ್ಲೇ 100 ವರ್ಷಗಳು ತುಂಬುತ್ತಿವೆ ಹಿನ್ನೆಲೆಯಲ್ಲಿ ಚೀನಾ ಈ ಬಾಹ್ಯಾಕಾಶ ಯೋಜನೆಯನ್ನು ಕೈಗೊಂಡಿದೆ.

## ಗೂಗಲ್ ಪೇ ಹಣಪಾವತಿ ಸೇವೆಯನ್ನು ವೀಸಾ ಕ್ರೆಡಿಟ್ ವಿಸ್ತರಿಸಿದೆ

* ಪ್ರಸ್ತುತ ಗೂಗಲ್ ಸಂಸ್ಥೆಯು 'ಗೂಗಲ್ ಪೇ' ಮಾದರಿಯ




ಹಣಪಾವತಿ ಸೇವೆಯನ್ನು ಇನ್ನಷ್ಟು ಬ್ಯಾಂಕ್‌ಗಳು ಮತ್ತು ಕ್ರೆಡಿಟ್ ಕಾರ್ಡ್‌ಗಳಿಗೆ ವಿಸ್ತರಿಸಿದೆ.

* 'ಗೂಗಲ್ ಪೇ' ಈ ಮೊದಲು ಕೋಟಕ್ ಮಹಿಂದ್ರಾ, ಎಸ್‌ಬಿಐ ಮತ್ತು ಆಯಕ್ಸಿಸ್ ಕಾರ್ಡ್'ಗಳಿಗಷ್ಟೇ ಸೇವೆ ಲಭ್ಯವಿತ್ತು, ಇದೀಗ ಇಂಡಸ್‌ಲ್ಯಾಂಡ್ ಮತ್ತು ಎಚ್‌ಎಸ್‌ಬಿಸಿ ಕ್ರೆಡಿಟ್ ಕಾರ್ಡ್‌ಗಳಿಗೂ ವಿಸ್ತರಣೆ ಮಾಡಿದೆ, ಹಾಗೂ ನೇರವಾಗಿ ಬ್ಯಾಂಕ್ ಖಾತೆಯಿಂದ ಹಣ ಕಡಿತವಾಗುವ ಸೌಲಭ್ಯಕ್ಕೆ ಎಸ್‌ಬಿಐ, ಫೆಡರಲ್ ಬ್ಯಾಂಕ್‌ಗಳನ್ನು 'ಗೂಗಲ್ ಪೇ' ಸೇರ್ಪಡೆಗೊಳಿಸಿದೆ.

* ಪ್ರಸ್ತುತ ದೇಶಾದ್ಯಂತ ಇರುವ 25 ಲಕ್ಷ ವೀಸಾ ಮರ್ಚೆಂಟ್ ಲೊಕೇಶನ್‌ಗಳಲ್ಲಿ, 1.5 ಭಾರತ್ ಕ್ಯು.ಆರ್. ಪೇಮೆಂಟ್ ಪಾಯಿಂಟ್ ಗಳಲ್ಲಿ ಮತ್ತು ಆನ್‌ಲೈನ್ ವ್ಯವಹಾರಗಳಲ್ಲಿ ಈ ಕಾರ್ಡ್ ಆಧಾರಿತ ಗೂಗಲ್ ಪೇಮೆಂಟ್ ಮಾಡಬಹುದು ಎಂದು ಗೂಗಲ್ ಪೇ ತಿಳಿಸಿದೆ.

## ಆಹಾರ ಕೊರತೆ ಬಗ್ಗೆ ಎಚ್ಚರಿಕೆ ನೀಡಿದ ಉತ್ತರ ಕೊರಿಯಾ ಅಧ್ಯಕ್ಷ ಕಿಮ್ ಜೋಂಗ್ ಉನ್



* ಉತ್ತರ ಕೊರಿಯಾ ಅಧ್ಯಕ್ಷ ಕಿಮ್ ಜೋಂಗ್ ಉನ್ ಅವರು ಪ್ರಸ್ತುತ ಕೋವಿಡ್ 19, ಚಂಡಮಾರುತ ಹಾಗೂ ಪ್ರವಾಹದಿಂದಾಗಿ ದೇಶದಲ್ಲಿ ಆಹಾರ ಕೊರತೆಯಾಗುವ ಸಾಧ್ಯತೆಗಳು ಬಹಳ ಇವೇ ಎಂದು ಎಚ್ಚರಿಕೆ ನೀಡಿದ್ದಾರೆ.

* ಉತ್ತರ ಕೊರಿಯಾಕ್ಕೆ ಕೆಲವು ದೇಶಗಳು ಅಣ್ವಸ್ತ್ರ ಹಾಗೂ ಕ್ಷಿಪಣಿ ಯೋಜನೆಗಳಿಂದ ನಿರ್ಬಂಧವನ್ನು ವಿಧಿಸಿವೆ ಇದರಿಂದಾಗಿ ಉತ್ತರ ಕೊರಿಯಾ ರಾಷ್ಟ್ರವು ಆರ್ಥಿಕ ಸಂಕಷ್ಟ ಎದುರಿಸುತ್ತಿದೆ, ಹಾಗೂ ಕೃಷಿ ವಲಯ ಸಂಪೂರ್ಣ ವಿಫಲವಾಗಿ ನಿರೀಕ್ಷಿಣೆಯ ಆಹಾರ ಪದಾರ್ಥಗಳ ಉತ್ಪಾದನೆಯಾಗಿಲ್ಲ ಎಂದಿದ್ದಾರೆ.

* ಕೋವಿಡ್ 19 ಸಾಂಕ್ರಾಮಿಕ ರೋಗದ ಹಿನ್ನಲೆಯಿಂದಾಗಿ ದೇಶದ ಗಡಿಗಳನ್ನು ಮುಚ್ಚಲಾಗಿದೆ ಇದರಿಂದ ಉತ್ತರ ಕೊರಿಯಾ ರಾಷ್ಟ್ರದ ಆರ್ಥಿಕತೆಯು ಇನ್ನಷ್ಟು ಕ್ಷೀಣಿಸಿದೆ, ಇದರ ಜೊತೆಯಲ್ಲೇ ಚೀನಾ ರಾಷ್ಟ್ರದೊಂದಗಿರುವ ವ್ಯಾಪಾರವನ್ನು ಕೂಡ ಉತ್ತರ ಕೊರಿಯಾ ಸ್ಥಗಿತಗೊಳಿಸಿದೆ.

# 18-06-2021

## ಕೋವಿಡ್ 19 ಮಹಾಮಾರಿಗೆ ವಿಶ್ವದಲ್ಲೇ 40 ಲಕ್ಷಕ್ಕೂ ಹೆಚ್ಚು ಸಾವು



* ಕೊರೋನಾ ಸಾಂಕ್ರಾಮಿಕ ರೋಗದ ಮೊದಲನೇ ಮತ್ತು ಎರಡನೇ ಅಲೆಯಿಂದ ಇಡೀ ವಿಶ್ವವೇ ಅಲುಗಾಡಿ ಹೋಗಿದೆ, ಇದೀಗ ಜಗತ್ತಿನಾದ್ಯಂತ 40 ಲಕ್ಷಕ್ಕೂ ಹೆಚ್ಚು ಜನರು ಕೋವಿಡ್ 19 ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿದ್ದಾರೆ(ಮೃತಪಟ್ಟಿದ್ದಾರೆ) ಎಂದು ರಾಯಿಟರ್ಸ್ ವರದಿಯನ್ನು ಪ್ರಕಟಿಸಿದೆ.

* ಇತ್ತೀಚಿಗೆ ಅಮೆರಿಕ ಹಾಗೂ ಬ್ರಿಟನ್ ದೇಶಗಳಲ್ಲಿ ಹೊಸ ಪ್ರಕರಣಗಳು ಮತ್ತು ಸಾವಿನ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ತಿಳಿದು ಬಂದಿದೆ ಆದರೆ ಡೆಲ್ಟಾ ರೂಪಾಂತರ ವೈರಸ್ ಪ್ರಬಲವಾಗಿದೆ ಇದರಿಂದಾಗಿ ಹಲವು ರಾಷ್ಟ್ರಗಳು ಕೋವಿಡ್ 19 ಲಸಿಕೆಯ ಕೊರತೆಯನ್ನು ಎದುರಿಸುತ್ತಿವೆ ಎಂದು ರಾಯಿಟರ್ಸ್ ಮಾಹಿತಿಯನ್ನು ನೀಡಿದೆ.

* ಈ ಹಿಂದೆ ಕೋವಿಡ್ 19 ಸಂಬಂಧಿತ ಸಾವಿನ ಸಂಖ್ಯೆ 20 ಲಕ್ಷಕ್ಕೆ ತಲುಪಲು ಒಂದು ವರ್ಷಗಳ ಕಾಲಾವಕಾಶವನ್ನು ತೆಗೆದುಕೊಂಡಿತು, ಆದರೆ ಇನ್ನುಳಿದ 20 ಲಕ್ಷ ಸಾವುಗಳು ಕೇವಲ166 ದಿನಗಳಲ್ಲಿ ದಾಖಲಾಗಿವೆ ಎಂದು ರಾಯಿಟರ್ಸ್ ತಿಳಿಸಿದೆ.

* ವಿಶ್ವದಲ್ಲಿನ ಒಟ್ಟು ಸಾವಿನ ಪ್ರಕರಣಗಳಲ್ಲಿ ಶೇ. 50 ರಷ್ಟು ಸಾವುಗಳು ಅಮೆರಿಕ, ಬ್ರೆಜಿಲ್, ಭಾರತ, ರಷ್ಯಾ ಮತ್ತು ಮೆಕ್ಸಿಕೊ ದೇಶಗಳಲ್ಲಿ ಸಾವಿನ ಪ್ರಕರಣಗಳು ಸಂಭವಿಸಿವೆ.

* ಭಾರತದಲ್ಲಿ ಇಲ್ಲಿಯವರೆಗೆ ಒಟ್ಟಾರೆ ಕೋವಿಡ್ 19 ಸಾಂಕ್ರಾಮಿಕ ರೋಗಕ್ಕೆ ಮೃತರ ಸಂಖ್ಯೆ 3,81,903.

## ಗೂಗಲ್ ಕಂಪನಿಯ ಮೊದಲ ಶೋರೂಂ




* ವಿಶ್ವದ ದೈತ್ಯ ಕಂಪೆನಿ ಯಾಗಿರುವ ಗೂಗಲ್ ಇದೀಗ ನ್ಯೂಯಾರ್ಕ್ ನಗರದಲ್ಲಿ ತನ್ನದೇ ಆದ ಶೋರೂಂನ್ನು ಪ್ರಾರಂಭ ಮಾಡಿದೆ ಹಾಗೂ ಇದು ಗೂಗಲ್ ಕಂಪೆನಿಯ ವಿಶ್ವದ ಮೊಟ್ಟಮೊದಲ ಶೋರೂಂ ಆಗಿದೆ.

* ಪ್ರಸ್ತುತ ಈ ಗೂಗಲ್'ನ ಶೋರೂಂನಲ್ಲಿ ತನ್ನದೇ ಆದ ಅಂದರೆ ಗೂಗಲ್'ನ ಪರಿಕರಗಳಾದ ಪಿಕ್ಸೆಲ್ ಫೋನ್'ಗಳು, ನೆಸ್ಟ್ ಬ್ರಾಂಡ್'ನ ಎಲೆಕ್ಟ್ರಾನಿಕ್ ವಸ್ತುಗಳು, ಫಿಟ್‌ಬಿಟ್ ಉತ್ಪನ್ನಗಳು ಹಾಗೂ ಪಿಕ್ಸೆಲ್ ಬುಕ್‌ಗಳ ಪ್ರಾತ್ಯಕ್ಷಿಕೆಯನ್ನು ಈ ಶೋರೂಂನಲ್ಲಿ ಪಡೆಯಬಹುದು, ಜೊತೆಗೆ ಆ ವಸ್ತುಗಳ ಬಳಕೆಯಿಂದ ಆಗುವ ಉಪಯೋಗಗಳ ಬಗ್ಗೆಯ ಕೂಡ ತಿಳಿದುಕೊಳ್ಳಬಹುದಾಗಿದೆ.

## ವಿಶ್ವದ 3 ನೇ ಅತಿ ದೊಡ್ಡ ವಜ್ರ ಪತ್ತೆ



* ಸರ್ಕಾರ ಮತ್ತು ಆಂಗ್ಲೊ ಅಮೆರಿಕನ್ಸ್ ಡೆ ಬೀರ್ಸ್‌ನ ಜಂಟಿ ಸಂಸ್ಥೆಯ ಸಹಭಾಗಿತ್ವದಲ್ಲಿ ವಿಶ್ವದ 3 ನೇ ಅತಿ ದೊಡ್ಡ ವಜ್ರವನ್ನು ಗ್ಯಾಬೋರೋನ್ (ಬೋಟ್ಸ್‌ವಾನಾ)ದಲ್ಲಿ ಪತ್ತೆ ಹಚ್ಚಲಾಗಿದೆ ಎಂದು ರಾಯಿಟರ್ಸ್ ಸುದ್ದಿವಾಹಿನಿಯು ಮಾಹಿತಿ ನೀಡಿದೆ.

* ಬೋಟ್ಸ್ವಾನಾದ ಗಣಿಗಾರಿಕೆ ಮಾಡುವ ಪ್ರದೇಶದಲ್ಲಿ ವಜ್ರದ ಕಂಪನಿ ಡೆಬ್ಸ್ವಾನಾ 1,098 ಕ್ಯಾರೆಟ್ ವಜ್ರವನ್ನು ಪತ್ತೆ ಹಚ್ಚಿದ್ದಾರೆ, ಈ ವಜ್ರವನ್ನು ಡೈಮಂಡ್ ಕಂಪನಿಯ ಹಂಗಾಮಿ ವ್ಯವಸ್ಥಾಪಕ ನಿರ್ದೇಶಕ ಲಿನೆಟ್ ಆರ್ಮ್ ಸ್ಟ್ರಾಂಗ್ ಅವರು ಬೋಟ್ಸ್‌ವಾನಾ ಅಧ್ಯಕ್ಷರಿಗೆ ನೀಡಿದ್ದಾರೆ.

* ಈ ಹಿಂದೆ ದಕ್ಷಿಣ ಆಫ್ರಿಕಾದ ಗಣಿಗಾರಿಕೆಯ ಪ್ರದೇಶದಲ್ಲಿ ಅಂದರೆ 1905 ರಲ್ಲಿ ವಿಶ್ವದ ಅತಿ ದೊಡ್ಡ ಸುಮಾರು 3,106 ಕ್ಯಾರೆಟ್ ವಜ್ರವನ್ನು ಪತ್ತೆ ಮಾಡಲಾಗಿತ್ತು, ಹಚ್ಚಲಾಗಿತ್ತು, ಮತ್ತೆ 2015ರಲ್ಲಿ ಬೋಟ್ಸ್‌ವಾನಾದಲ್ಲಿ 1,109 ಕ್ಯಾರೆಟ್ "ಲೆಸೆಡಿ ಲಾ ರೋನ" ಎಂಬ ವಜ್ರವನ್ನು ಲುಕಾರಾ ಡೈಮಂಡ್ಸ್ ಕಂಪನಿಯ ಪತ್ತೆ ಮಾಡಿತ್ತು, ಇದೀಗ ಈ ವಜ್ರವು ವಿಶ್ವದ 2ನೇ ಅತಿ ದೊಡ್ಡ ವಜ್ರವಾಗಿದೆ ಎಂದು ತಿಳಿದು ಬಂದಿದೆ.

* ಡೆಬ್‌ಸ್ವಾನಾ ಎಂಬ ವಜ್ರದ ಕಂಪನಿಯ 50 ವರ್ಷಗಳ ಇತಿಹಾಸದಲ್ಲಿ ಪತ್ತೆ ಹಚ್ಚಿರುವ ಅತೀ ದೊಡ್ಡ ವಜ್ರ ಇದಾಗಿದೆ ಎಂದು ಡೈಮಂಡ್ ಕಂಪನಿಯ ಹಂಗಾಮಿ ವ್ಯವಸ್ಥಾಪಕ ನಿರ್ದೇಶಕ ಲಿನೆಟ್ ಆರ್ಮ್ ಸ್ಟ್ರಾಂಗ್ ಹೇಳಿದರು.

## ಭಾರತೀಯರು ಇಟ್ಟಿರುವ 20 ಸಾವಿರ ಕೋಟಿ ರೂ. ಸ್ವಿಸ್ ಬ್ಯಾಂಕ್'ನಲ್ಲಿ ಇಟ್ಟಿರುವ 20 ಸಾವಿರ ಕೋಟಿ ರೂ.



* ಭಾರತದ ವ್ಯಕ್ತಿಗಳು ಹಾಗೂ ಇತರೆ ಸಂಸ್ಥೆಗಳಿಂದ ಸ್ವಿಸ್ ಬ್ಯಾಂಕ್ ಗಳಲ್ಲಿ ಇಟ್ಟಿರುವ ಹಣದ ಮೊತ್ತವು 2020 ರಲ್ಲಿ 20,706 ಕೋಟಿ ರೂ.ಗೆ ಏರಿಕೆಯಾಗಿದೆ, ಭಾರತೀಯ ವ್ಯಕ್ತಿಗಳು ಬೇರೆ ಬೇರೆ ಹಣಕಾಸು ಉತ್ಪನ್ನಗಳ ಮೂಲಕ ಸ್ವಿಸ್ ಬ್ಯಾಂಕ್'ನಲ್ಲಿ ಇಷ್ಟು ಮೊತ್ತದ ಹಣವನ್ನು ಇಟ್ಟಿದ್ದಾರೆ.

* ಭಾರತೀಯ ವ್ಯಕ್ತಿಗಳು ಇಟ್ಟಿರುವ ಹಣದ ಮೊತ್ತವು 13 ವರ್ಷಗಳಲ್ಲಿನ ಅತಿಹೆಚ್ಚಿನ ಮೊತ್ತವಾಗಿದೆ, ಈ ಹಣದ ಮೊತ್ತವು ಸ್ವಿಸ್ ಬ್ಯಾಂಕ್‌ಗಳು ಸ್ವಿಸ್ ನ್ಯಾಷನಲ್ ಬ್ಯಾಂಕ್‌ಗೆ ನೀಡಿರುವ ಅಧಿಕೃತ ಮಾಹಿತಿ ಇದಾಗಿದೆ, ಆದರೆ ಭಾರತೀಯರು ಇಟ್ಟಿರುವ ಈ ಹಣವು ಕಪ್ಪುಹಣಕ್ಕೆ ಸಂಬಂಧಿಸಿಲ್ಲ ಎಂದಿದ್ದಾರೆ.

## ಮೈಕ್ರೊಸಾಫ್ಟ್'ನ ನೂತನ ಅಧ್ಯಕ್ಷರಾಗಿ ಸತ್ಯ ನಾಡೆಲ್ಲಾ ಆಯ್ಕೆ




* ಪ್ರಸ್ತುತ ಮೈಕ್ರೊಸಾಫ್ಟ್'ನ ಅಧ್ಯಕ್ಷರಾಗಿರುವ ಜಾನ್ ಡಬ್ಲೂ ಥಾಮಸ್ ಅವರ ಉತ್ತರಾಧಿಕಾರಿಯಾಗಿ ಸತ್ಯ ನಾಡೆಲ್ಲಾ ಅವರನ್ನು ಮುಂದಿನ ಮೈಕ್ರೊಸಾಫ್ಟ್'ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ಥಾನಕ್ಕೆ ಆಯ್ಕೆ ಮಾಡಲಾಗಿದೆ.

* 2014 ರಲ್ಲಿ ಸ್ಟೀವ್ ಬಾಲ್ಮರ್ ಮೂಲಕ ಸತ್ಯ ನಾಡೆಲ್ಲಾ ಅವರು CEOಆಗಿ ಅಧಿಕಾರ ವಹಿಸಿಕೊಂಡರು, ಈ ಮೊದಲು ಇವರು ಲಿಂಕ್ಡ್ ಇನ್, ನ್ಯೂನ್ಸ್ ಕಮ್ಯುನಿಕೇಷನ್ಸ್ ಹಾಗೂ ಜೆನಿಮ್ಯಾಕ್ಸ್ ನಂತಹ ಬಿಲಿಯನ್ ಡಾಲರ್'ನ ಹಲವು ಕಡೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

* ಪ್ರಸ್ತುತ ಮೈಕ್ರೊಸಾಫ್ಟ್'ನ ಅಧ್ಯಕ್ಷರಾಗಿರುವ ಜಾನ್ ಡಬ್ಲೂ ಥಾಮಸ್ ಸ್ವತಂತ್ರ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಲಿದ್ದಾರೆ, ಇದರಿಂದಾಗಿ ಸತ್ಯ ನಾಡೆಲ್ಲಾ ಅವರನ್ನು ನೇಮಕ ಮಾಡಲಾಗಿದೆ ಎಂದು ಮೈಕ್ರೋಸಾಫ್ಟ್ ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ.

## ಭಾರತವು ಶ್ರೀಲಂಕಾದ ಸೌರಶಕ್ತಿ ಯೋಜನೆಗೆ 100 ಮಿಲಿಯನ್ ಡಾಲರ್ ನೆರವು



* ಭಾರತ ದೇಶವು ಶ್ರೀಲಂಕಾ ರಾಷ್ಟ್ರದ ಸೌರಶಕ್ತಿ ಯೋಜನೆಗೆ 100 ಮಿಲಿಯನ್ ಡಾಲರ್ ನೆರವು ನೀಡಲು ನಿರ್ಧರಿಸಿದೆ, ಪ್ರಸ್ತುತ ಶ್ರೀಲಂಕಾದಲ್ಲಿ 2030 ರೊಳಗೆ ಶೇ.70 ರಷ್ಟು ನವೀಕರಿಸಬಹುದಾದ ಇಂಧನವನ್ನು ಸದುಪಯೋಗ ಮಾಡಿಕೊಂಡು ಸೌರಶಕ್ತಿ ಬಳಕೆಯಲ್ಲಿ ಸಾಧನೆ ಮಾಡಲು ಮುಂದಾಗಿದೆ ಇದರಿಂದಾಗಿ ಭಾರತವು ಶ್ರೀಲಂಕಾಕ್ಕೆ 100 ಮಿಲಿಯನ್ ಅಮೆರಿಕನ್ ಡಾಲರ್ ನೆರವು ನೀಡಲು ನಿರ್ಧರಿಸಿದೆ.

* ಶ್ರೀಲಂಕಾ ಸರ್ಕಾರ ಮತ್ತು ಭಾರತೀಯ ಎಕ್ಸ್‌ಪೋರ್ಟ್ ಮತ್ತು ಇಂಪೋರ್ಟ್ ಸಂಸ್ಥೆಗಳು ಭಾರತೀಯ ಹೈ ಕಮಿಷನರ್ ಕಚೇರಿಯಲ್ಲಿ ಈ ಒಪ್ಪಂದದ ಒಡಂಬಡಿಕೆಗೆ ಸಹಿ ಹಾಕಿವೆ.

* ಭಾರತದ ಈ 100 ಮಿಲಿಯನ್ ಅಮೆರಿಕನ್ ಡಾಲರ್'ನ್ನು ಶ್ರೀಲಂಕಾದ ಸೌರಶಕ್ತಿ ಉತ್ಪಾದನೆಯಲ್ಲಿ ಪ್ರಗತಿ ಸಾಧಿಸುವ ಯೋಜನೆಗಳಿಗೆ ಬಳಕೆ ಮಾಡಲಾಗುತ್ತದೆ ಎಂದು ಶ್ರೀಲಂಕಾ ಅಧ್ಯಕ್ಷ ಗೊಟಾಬಯಾ ರಾಜಪಕ್ಸೆ ಟ್ವೀಟ್ ಮೂಲಕ ತಿಳಿಸಿದ್ದಾರೆ.

* ಪ್ರಸ್ತುತ ಭಾರತ ಸೇರಿ 89 ರಾಷ್ಟ್ರಗಳು ಸೌರಶಕ್ತಿ ಸದ್ಬಳಕೆಗಾಗಿ ರಚನೆಯಾಗಿರುವ ಅಂತಾರಾಷ್ಟ್ರೀಯ ಸೋಲಾರ್ ಒಕ್ಕೂಟದಲ್ಲಿ ಸದಸ್ಯ ರಾಷ್ಟ್ರಗಳಾಗಿವೆ.

## ರಾಧಿಕಾ ಫಾಕ್ಸ್ ಅಮೇರಿಕದ ಪರಿಸರ ಸಂರಕ್ಷಣಾ ಏಜನ್ಸಿಯ (EPA) ಮುಖ್ಯಸ್ಥರಾಗಿ ಆಯ್ಕೆ



* ಭಾರತೀಯ ಮೂಲದ ನೀರು ತಜ್ಞೆ ರಾಧಿಕಾ ಫಾಕ್ಸ್ ಅವರು ಅಮೇರಿಕದ ಪರಿಸರ ಸಂರಕ್ಷಣಾ ಏಜನ್ಸಿಯ(EPA) ನೀರು ವಿಭಾಗದ ಮುಖ್ಯಸ್ಥರಾಗಿ ಆಯ್ಕೆಯಾಗಿದ್ದಾರೆ.

* ಈ ಭಾರತೀಯ ಮೂಲದ ರಾಧಿಕಾ ಫಾಕ್ಸ್ ಆಯ್ಕೆಗೆ ಸೆನೆಟ್‌ನಲ್ಲಿ ಚುನಾವಣೆಯನ್ನು ನಡೆಸಲಾಯಿತು, ಈ ಚುನಾವಣೆಯಲ್ಲಿ ರಾಧಿಕಾ ಫಾಕ್ಸ್ ಅವರು 55 ಸದಸ್ಯರಲ್ಲಿ 43 ಸದಸ್ಯರ ಬೆಂಬಲ ಪಡೆದು ಬಹುಮತವನ್ನು ಪಡೆದುಕೊಂಡು ಆಯ್ಕೆಯಾದರು.

* ರಾಧಿಕಾ ಫಾಕ್ಸ್ ಅವರು 2 ದಶಕಗಳವರೆಗೆ ಸೇವೆಯನ್ನು ಸಲ್ಲಿಸಿದ್ದಾರೆ, ಆ ಸೇವಾ ಅವಧಿಯಲ್ಲಿ ರಾಧಿಕಾ ಅವರು ಅಲ್ಲಿನ ಸ್ಥಳೀಯ ನೀರಿನ ಸಮಸ್ಯೆ ಬಗೆಹರಿಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ, ಈ ಕಾರಣದಿಂದಾಗಿ ರಾಧಿಕಾ ಫಾಕ್ಸ್ ಅವರನ್ನು EPA ಮುಖ್ಯಸ್ಥ ಸ್ಥಾನಕ್ಕೆ ನೇಮಕ ಮಾಡಲಾಗಿದೆ ಎಂದು ತಿಳಿದು ಬಂದಿದೆ.

## ಗ್ರಾಮೀಣ ಭಾರತಕ್ಕೆ 113 ಕೋಟಿ ರೂ. ಗೂಗಲ್ ನೆರವು ಘೋಷಣೆ




* ಗೂಗಲ್ ಕಂಪನಿಯು ಭಾರತದ ಗ್ರಾಮೀಣ ಭಾಗಗಳಲ್ಲಿ 80 ಆಮ್ಲಜನಕ ಉತ್ಪಾದನಾ ಘಟಕಗಳ ಸ್ಥಾಪನೆ ಇದರ ಜೊತೆಗೆ ಆರೋಗ್ಯ ಕಾರ್ಯಕರ್ತರ ಕೌಶಲ ಅಭಿವೃದ್ಧಿಗಾಗಿ 113 ಕೋಟಿ ರೂ. ದೇಣಿಗೆ ನೀಡುವುದಾಗಿ ತಿಳಿಸಿದೆ.

* ಗೂಗಲ್ ಕಂಪನಿಯು ಆಮ್ಲಜನಕ ಉತ್ಪಾದನಾ ಘಟಕಗಳ ಸ್ಥಾಪನೆ ಮಾಡಲು"ಗೀವ್ ಇಂಡಿಯಾ" ಸಂಸ್ಥೆಗೆ 90 ಕೋಟಿ ರೂ. ಹಾಗೂ "ಪಾಥ್" ಸಂಸ್ಥೆಗೆ 18.5 ಕೋಟಿ ರೂ. ದೇಣಿಗೆ ನೀಡಲಾಗುತ್ತದೆ ಎಂದು ತಿಳಿಸಿದೆ, ಇದರ ಜೊತೆಗೆ ಸುಮಾರು 20,000 ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್ 19 ನಿರ್ವಹಣೆಯ ವಿಶೇಷ ತರಬೇತಿ ನೀಡಲು ಹಾಗೂ ಗ್ರಾಮೀಣ ಆರೋಗ್ಯ ವ್ಯವಸ್ಥೆಗಳನ್ನು ಉತ್ತಮಗೊಳಿಸಲು ಅಪೋಲೊ ಮೆಡ್‌ಸ್ಕಿಲ್ಸ್‌ಗೆ ಗೂಗಲ್ ನೆರವು ನೀಡುವದಾಗಿ ತಿಳಿಸಿದೆ.

* ಗೂಗಲ್ ಕಂಪನಿ ಭಾರತದಲ್ಲಿನ 15 ರಾಜ್ಯಗಳ ಸುಮಾರು 1,80,000 ಆಶಾ ಕಾರ್ಯಕರ್ತೆಯರು ಹಾಗೂ 40,000 ಎಎನ್‌ಎಂ ಕಾರ್ಯಕರ್ತರಿಗೆ ಕೌಶಲ ಕಾರ್ಯಕ್ರಮಗಳನ್ನು ನಡೆಸಲು ಅರ್ಮಾನ್ ಸಂಸ್ಥೆಗೆ 3.6 ಕೋಟಿ ರೂ. ಹಣಕಾಸಿನ ನೆರವು ನೀಡಲಾಗುತ್ತದೆ ಎಂದು ತಿಳಿಸಿದೆ.

* ಗೂಗಲ್ ಸಂಸ್ಥೆಯು ಈ ಹಿಂದೆ ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೌಲಭ್ಯಗಳನ್ನು ಹೆಚ್ಚಿಸಲು 135 ಕೋಟಿ ರೂ. ನೆರವು ನೀಡುವುದಾಗಿ ಏಪ್ರಿಲ್'ನಲ್ಲೇ ಘೋಷಣೆ ಮಾಡಿತ್ತು, ಇದರ ಅಂಗವಾಗಿ ಕೋವಿಡ್ 19 ಪರಿಸ್ಥಿತಿಯಿಂದಾಗಿ ಕಷ್ಟ ಅನುಭವಿಸುತ್ತಿರುವ ಬಡ ಕುಟುಂಬಗಳಿಗೆ ಅನುಕೂಲವಾಗಲು "ಗೀವ್'ಇಂಡಿಯಾ" ಮತ್ತು ಯುನಿಸೆಫ್'ಗೆ 20 ಕೋಟಿ ರೂ.ನೀಡಲಾಗಿದೆ ಎಂಬ ಮಾಹಿತಿಯನ್ನು ತಿಳಿಸಿದೆ.

# 19-06-2021

## ದಿಗ್ಗಜ ಅಥ್ಲೆಟ್ 'ಮಿಲ್ಖಾ ಸಿಂಗ್' ನಿಧನ



* ಫ್ಲೈಯಿಂಗ್ ಸಿಖ್ ಎಂದೇ ಪ್ರಖ್ಯಾತಿ ಪಡೆದಿರುವ ಭಾರತದ ಖ್ಯಾತ ಅಥ್ಲೆಟಿಕ್ ಮಿಲ್ಖಾ ಸಿಂಗ್ ಅವರು ಅನಾರೋಗ್ಯದ ಕಾರಣದಿಂದಾಗಿ ವಿಧಿವಶರಾಗಿದ್ದಾರೆ.

* ಪ್ರಸ್ತುತ ಮಿಲ್ಖಾ ಸಿಂಗ್ ಅವರು1935 ರಲ್ಲಿ ಈಗಿನ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯಕ್ಕೆ ಸೇರಿರುವ ಗೋವಿಂದಪುರದಲ್ಲಿ ಜನಿಸಿದ್ದರು, ನಂತರ ಪಾಕಿಸ್ತಾನವು ಭಾರತದಿಂದ ವಿಭಜನೆಯಾಗುವ ಸಂಧರ್ಭದಲ್ಲಿ ನಡೆದ ಕೋಮು ಗಲಭೆಯಲ್ಲಿ 12 ನೇ ವಯಸ್ಸಿನ ಮಿಲ್ಖಾ ಸಿಂಗ್ ಅವರು ತಂದೆ ತಾಯಿಯನ್ನು ಕಳೆದುಕೊಂಡರು.

* 1958 ರಲ್ಲಿ ಮಿಲ್ಖಾ ಸಿಂಗ್ ಅವರು ಏಷ್ಯನ್ ಕ್ರೀಡಾಕೂಟದಲ್ಲಿ 200 ಮೀ. ಹಾಗೂ 400 ಮೀ. ಓಟದಲ್ಲಿ ಚಿನ್ನದ ಪದಕವನ್ನು ಪಡೆದುಕೊಂಡಿದ್ದರು, ನಂತರ 1958 ರ ಕಾಮನ್ ವೆಲ್ತ್‌ನಲ್ಲಿಯು ಕೂಡ ಚಿನ್ನದ ಪದಕ ಜಯಿಸಿದ್ದಾರೆ, ಇವರ ಈ ಪದಕವು ಭಾರತಕ್ಕೆ ಕಾಮನ್‌ವೆಲ್ತ್‌ನಲ್ಲಿ ಬಂದಿರುವ ಮೊಟ್ಟ ಮೊದಲ ಚಿನ್ನದ ಪದಕವಾಗಿತ್ತು, ಇದೇ ಸಮಯದಲ್ಲಿ ಭಾರತ ಸರ್ಕಾರವು ಇವರ ಈ ಸಾಧನೆಗೆ ಪದ್ಮಶ್ರೀ ನೀಡಿ ಗೌರವಿಸಿತ್ತು.

* ಪ್ರಸ್ತುತ ಭಾರತದ ಮಹಿಳಾ ವಾಲಿಬಾಲ್ ತಂಡದ ಮಾಜಿ ನಾಯಕಿ ಹಾಗೂ ಭಾರತದ ಅಥ್ಲೀಟ್ ಮಿಲ್ಖಾ ಸಿಂಗ್ ಅವರ ಧರ್ಮ ಪತ್ನಿ ಯಾಗಿದ್ದ ನಿರ್ಮಲಾ ಕೌರ್ ಅವರು ತಮ್ಮ 85 ನೇ ವಯಸ್ಸಿನಲ್ಲಿ ಕೋವಿಡ್ 19ಗೆ ಬಲಿಯಾಗಿದ್ದಾರೆ.

## ಆಂಟೋನಿಯೊ ಗುಟೆರೆಸ್ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ಮರುಆಯ್ಕೆ



* ಮುಂದಿನ 5ವರ್ಷಗಳ ಕಾಲ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ಆಂಟೋನಿಯೊ ಗುಟೆರೆಸ್ ಮರು ಆಯ್ಕೆಯಾಗಿದ್ದಾರೆ.

* ಆಂಟೋನಿಯೊ ಗುಟೆರೆಸ್ ಅವರನ್ನು 193 ಸದಸ್ಯ ರಾಷ್ಟ್ರಗಳ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಆಯ್ಕೆಮಾಡಲಾಗಿದೆ.

* ಆಂಟೋನಿಯೊ ಗುಟೆರೆಸ್ ಅವರನ್ನು ಭದ್ರತಾ ಮಂಡಳಿಯು ವಿಶ್ವಸಂಸ್ಥೆಯ 2 ನೇ ಅವಧಿಗೆ ಶಿಫಾರಸ್ಸುಮಾಡಿದೆ.

* 2017 ರ ಜನವರಿ 1 ರಂದು ಆಂಟೋನಿಯೊ ಗುಟೆರೆಸ್ ಅವರು ವಿಶ್ವಸಂಸ್ಥೆಯ 9 ನೇ ಪ್ರಧಾನ ಕಾರ್ಯದರ್ಶಿಯಾಗಿ ಪ್ರಮಾಣವಚನ ಸ್ವೀಕಾರ ಮಾಡಿದ್ದರು, ಪ್ರಸ್ತುತ ಇವರ ಮೊದಲ ಅಧಿಕಾರವಧಿಯು ಮುಂಬರುವ ಡಿಸೆಂಬರ್. 31 ರಂದು ಕೊನೆಗೊಳ್ಳಲಿದೆ, ನಂತರ ಇವರ 2 ನೇ ಅವಧಿಯು 2022 ರ ಜನವರಿ 1ರಿಂದ ಪ್ರಾರಂಭವಾಗಲಿದೆ.

* 72 ವರ್ಷ ವಯಸ್ಸಿನ ಆಂಟೋನಿಯೊ ಗುಟೆರೆಸ್ ಅವರು ಈ ಮೊದಲು 1995 ರಿಂದ 2002 ರ ವರೆಗೆ ಪೋರ್ಚುಗಲ್‌ನ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ, ಮತ್ತೇ 2005 ರಿಂದ 2015 ರ ವರೆಗೆ ವಿಶ್ವಸಂಸ್ಥೆಯಲ್ಲಿ ನಿರಾಶ್ರಿತರ ಹೈಕಮಿಷನರ್ ಆಗಿ ಕಾರ್ಯ ನಿರ್ವಹಿಸಿದ್ದಾರೆ.

## ಐರ್ಲೆಂಡ್'ನ ಕೆವಿನ್ ಒಬ್ರಿಯೆನ್ ಏಕದಿನ ಕ್ರಿಕೆಟ್‌ನಿಂದ ನಿವೃತ್ತಿ



* ಐರ್ಲೆಂಡ್ ಕ್ರಿಕೆಟ್ ತಂಡದ ಆಲ್‌ರೌಂಡರ್ ಕೆವಿನ್ ಒಬ್ರಿಯೆನ್ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್'ಗೆ ನಿವೃತ್ತಿ ನೀಡಿದ್ದಾರೆ.

* ಕೆವಿನ್ ಒಬ್ರಿಯೆನ್ ಅವರು ಏಕದಿನ ಕ್ರಿಕೆಟ್'ನಲ್ಲಿ 153 ಪಂದ್ಯಗಳನ್ನು ಆಡಿ 3 ಸಾವಿರಕ್ಕೂ ಹೆಚ್ಚು ರನ್ ಕಲೆಹಾಕಿದ್ದಾರೆ, ಇದರ ಜೊತೆಗೆ 114 ವಿಕೆಟ್ ಪಡೆದುಕೊಂಡು ರಾಷ್ಟ್ರೀಯ ದಾಖಲೆಯನ್ನು ಬರೆದಿದ್ದಾರೆ.

* ಈ ಹಿಂದೆ ಇವರು 2011 ರ ಬೆಂಗಳೂರಿನಲ್ಲಿ ನಡೆದ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ 113 ರನ್ ಬಾರಿಸಿ ಇಂಗ್ಲೆಂಡ್ ವಿರುದ್ಧ ತಮ್ಮ ತಂಡವನ್ನು ಗೆಲ್ಲಿಸಿದ್ದರು, ಹಾಗೂ ಇವರು ಬಾರಿಸಿದ ಈ ಶತಕವು ವಿಶ್ವಕಪ್'ನಲ್ಲಿ ವೇಗದ ಶತಕವಾಗಿದೆ.

## ಪ್ರಧಾನಿ ಮೋದಿ ಜಾಗತಿಕ ನಾಯಕರಿಗಿಂತ ಮುಂದೆ



* ಪ್ರಸ್ತುತ ಅಮೇರಿಕ ಮೂಲದ ಮಾರ್ನಿಂಗ್ ಕನ್ಸಲ್ಟ್ ಸಂಸ್ಥೆಯು ನಡೆಸಿದ ವಿಶ್ವದ ನಾಯಕರುಗಳ ಸಮೀಕ್ಷೆಯಲ್ಲಿ ಭಾರತ ಪ್ರಧಾನಿ ನರೇಂದ್ರ ಮೋದಿ ಅವರನ್ನು ಶೇ.66 ರಷ್ಟು ಜನರು(ರೇಟಿಂಗ್) ಅನುಮೋದಿಸಿದ್ದಾರೆ ಎಂದು ತಿಳಿಸಿದೆ.

* ಈ ಹಿಂದೆ 2019 ರ ಆಗಸ್ಟ್'ನಲ್ಲಿ ಶೇ.82 ರಷ್ಟು ಜನರು ಮೋದಿ ಅವರನ್ನು(ರೇಟಿಂಗ್) ಅನುಮೋದಿಸಿದ್ದರು, ಆದರೆ ಪ್ರಸ್ತುತ ವರ್ಷದಲ್ಲಿ ಸುಮಾರು 20 ರಷ್ಟು ಪಾಯಿಂಟ್ ಕಡಿಮೆಯಾದರೂ ಪ್ರಪಂಚದ ಇತರ ನಾಯಕರಿಗಿಂತ ಮೋದಿ ಮುಂಚೂಣಿಯಲ್ಲಿದ್ದಾರೆ.

* ಬೇರೆ ಬೇರೆ ದೇಶಗಳಲ್ಲಿ ಆಡಳಿತ ನಡೆಸುವ ನಾಯಕರ ಬಗ್ಗೆ ಸಾರ್ವಜನಿಕರು ಹೊಂದಿರುವ ಅಭಿಪ್ರಾಯವನ್ನು ಅಮೇರಿಕನ್ ಡಾಟಾ ಇಂಟೆಲಿಜೆನ್ಸ್ ಏಜೆನ್ಸಿ "ಮಾರ್ನಿಂಗ್ ಕನ್ಸಲ್ಟ್" ಸಂಸ್ಥೆಯು ಪತ್ತೆ ಮಾಡುತ್ತದೆ, ಪ್ರಸ್ತುತ ಈ ಸಂಸ್ಥೆಯು ಗುಪ್ತಚರ ಸಂಸ್ಥೆಗಳ ಮೂಲಕ ರಾಜಕೀಯ ಮಾಹಿತಿ ಸಂಗ್ರಹಿಸಿ ಪ್ರಕಟಿಸುತ್ತದೆ.

* ಪ್ರಸ್ತುತ 13 ದೇಶಗಳಾಗಿರುವ ಅಮೆರಿಕಾ, ಯುಕೆ, ರಷ್ಯಾ, ಕೆನಡಾ, ಬ್ರೆಜಿಲ್, ಫ್ರಾನ್ಸ್ ಹಾಗೂ ಜರ್ಮನಿ ಸೇರಿ ಅನೇಕ ರಾಷ್ಟ್ರಗಳ ವಿಶ್ವ ನಾಯಕರಿಗಿಂತ ಭಾರತದ ಪ್ರಧಾನಿ ನರೇಂದ್ರ ಮೋದಿ ಮುಂಚೂಣಿಯಲ್ಲಿದ್ದಾರೆ ಎಂದು ಮಾರ್ನಿಂಗ್ ಕನ್ಸಲ್ಟ್ ತಿಳಿಸಿದೆ.

* ಅಮೇರಿಕ ಅಧ್ಯಕ್ಷ ಜೋ ಬೈಡನ್, ಶೇ.53 ರಷ್ಟು ರೇಟಿಂಗ್ ಪಡೆದಿದ್ದಾರೆ, ಆದರೆ ಜಪಾನಿನ ಪ್ರಧಾನಿ ಯೋಶಿಹಿಡೆ ಸುಗಾ ಅವರು ಕೇವಲ ಶೇ. 29 ರೇಟಿಂಗ್ ಪಡೆದುಕೊಂಡಿದ್ದಾರೆ.

## ಮುರ್ಡೇಶ್ವರ ಶಿವನ ಮೂರ್ತಿಗೆ ಗ್ಲೋಬಲ್ ಪೀಪಲ್ಸ್ ಚಾಯ್ಸ್ ಅವಾರ್ಡ್ ಲಭಿಸಿದೆ



* ಪ್ರಸ್ತುತ ಮುರ್ಡೇಶ್ವರದ ಶಿವನ ಮೂರ್ತಿಗೆ ಗ್ಲೋಬಲ್ ಪೀಪಲ್ಸ್ ಚಾಯ್ಸ್ ಅವಾರ್ಡ್ ಲಭಿಸಿದೆ, ಈ ಮೂರ್ತಿಯು ವಿಶ್ವದ 2 ನೇ ಅತಿ ಎತ್ತರದ ಶಿವನ ವಿಗ್ರಹ ಎಂಬ ಖ್ಯಾತಿ ಪಡೆದಿದೆ.

* ಅಂತಾರಾಷ್ಟ್ರೀಯ ಫಿಲಿಪ್ಸ್ ಕಂಪನಿ ಆಯೋಜಿಸಿದ ಸ್ಪರ್ಧೆಯಲ್ಲಿ ಮುರ್ಡೇಶ್ವರ ಶಿವನ ಮೂರ್ತಿ ಸೇರಿದಂತೆ ವಿಶ್ವದ 25 ಪ್ರಸಿದ್ಧ ತಾಣಗಳು ನಾಮ ನಿರ್ದೇಶನವಾಗಿದ್ದವು.

* ಅಂತಾರಾಷ್ಟ್ರೀಯ ಫಿಲಿಪ್ಸ್ ಕಂಪನಿ ಆಯೋಜಿಸಿದ ಸ್ಪರ್ಧೆಗೆ ಸಾರ್ವಜನಿಕರು ಆನ್‌ಲೈನ್ ಮೂಲಕ ವೋಟಿಂಗ್ ಮಾಡಲು ಅವಕಾಶ ನೀಡಲಾಗಿತ್ತು, ಈ ವೋಟಿಂಗ್ ಸ್ಪರ್ಧೆಯಲ್ಲಿ ಒಟ್ಟಾರೆ 6800 ಜನ ವಿವಿಧ ತಾಣಗಳ ಬಗ್ಗೆ ಮತ ಚಲಾಯಿಸಿದ್ದಾರೆ, ಇದರಲ್ಲಿ ಮುರ್ಡೇಶ್ವರದ ಶಿವನಮೂರ್ತಿ ಶೇ.40 ಅಂದರೆ 2500ಕ್ಕೂ ಹೆಚ್ಚು ವೋಟ್ ಪಡೆದುಕೊಂಡು ಮೊದಲ ಸ್ಥಾನವನ್ನು ಪಡೆದುಕೊಂಡಿದೆ.

* ಪ್ರಸ್ತುತ ಈ ವರ್ಷ ಮುರ್ಡೇಶ್ವರದ ಶಿವನ ವಿಗ್ರಹಕ್ಕೆ ವಿಶೇಷ ಲೈಟಿಂಗ್ ವ್ಯವಸ್ಥೆಯನ್ನು RNS ಮೋಟರ್ಸ್ ಕಂಪನಿಯು ಸಾಮಾಜಿಕ ಜವಾಬ್ದಾರಿ ನಿಧಿಯಲ್ಲಿ ಮಾಡಿದೆ.

## '3' ಮಿಲಿಯನ್'ಗೂ ಹೆಚ್ಚು ಜನ ಒಂದು ವರ್ಷದಲ್ಲಿ ನಿರಾಶ್ರಿತರು



* ಕೋವಿಡ್ 19 ಸಾಂಕ್ರಾಮಿಕ ರೋಗದಿಂದಾಗಿ ಬೇರೆ ಬೇರೆ ದೇಶಗಳ ಗಡಿ ಸ್ಥಗಿತಗೊಂಡಿವೆ, ಇದರ ನಡುವೆ ಕಳೆದ ವರ್ಷ ಯುದ್ಧ, ಗಲಭೆ ಇನ್ನಿತರ ಕಾರಣಗಳಿಂದಾಗಿ '3' ಮಿಲಿಯನ್'ಗೂ ಹೆಚ್ಚು ಜನರು ಮನೆ ಮಠ ಬಿಟ್ಟು ಹೊರ ಹೋಗಿದ್ದಾರೆ ಎಂದು ವಿಶ್ವಸಂಸ್ಥೆಯ ನಿರಾಶ್ರಿತರ ಏಜನ್ಸಿಯು ಮಾಹಿತಿಯನ್ನು ನೀಡಿದೆ.

* ಪ್ರಸ್ತುತ ವಿಶ್ವಸಂಸ್ಥೆಯ ವಾರ್ಷಿಕ ವರದಿಯ ಪ್ರಕಾರ ಜರ್ಮನಿ ದೇಶದ ಜನಸಂಖ್ಯೆಯಷ್ಟು ಜನರು ಅಂದರೆ 82.4 ಮಿಲಿಯನ್'ಗೂ ಹೆಚ್ಚು ಜನ ಮನೆ ಮಠ ಕಳೆದುಕೊಂಡು ಬೀದಿ ಬೀದಿ ಅಲೆಯುತ್ತಿದ್ದಾರೆ ಎಂದು ಉಲ್ಲೇಖಮಾಡಿದೆ.

* ಪ್ರಸ್ತುತ ವಿಶ್ವಸಂಸ್ಥೆಯ ನಿರಾಶ್ರಿತರ ಹೈ ಕಮಿಷನರ್ ಫಿಲಿಪ್ಪೋ ಗ್ರಾಂಡಿ ಅವರು ನೀಡಿರುವ ಮಾಹಿತಿಯ ಪ್ರಕಾರ ಮೊಝೋಂಬಿಕ್, ಈಥಿಯೋಪಿಯಾ ಹಾಗೂ ಆಫ್ರಿಕಾದ ಕೆಲ ರಾಷ್ಟ್ರಗಳ ಸಾವಿರಾರು ಜನರು ಹವಾಮಾನ ಬದಲಾವಣೆ ಹಾಗೂ ಸಮುದಾಯಗಳ ಅಥವಾ ವರ್ಗಗಳ ಸಂಘರ್ಷಗಳಿಂದ ಪ್ರತಿವರ್ಷ ನಿರಾಶ್ರಿತರಾಗುತ್ತಿದ್ದಾರೆ ಎಂದು ತಿಳಿಸಿದ್ದಾರೆ.

## ಅಮೆರಿಕ ಅಧ್ಯಕ್ಷ ಜೋ ಬೈಡನ್ ರಾಷ್ಟ್ರೀಯ ಸ್ವಾತಂತ್ರ್ಯ ದಿನ ಕಾಯ್ದೆಗೆ ಸಹಿ



* ಅಮೆರಿಕದಲ್ಲಿ ಗುಲಾಮಗಿರಿ ಅಂತ್ಯಗೊಳಿಸಿದ ಸವಿ ನೆನಪಿಗಾಗಿ ಆಚರಿಸುವ 'ಜೂನ್'ಟೀನ್ತ್' (ಜೂನ್. 19) ದಿನದಂದು ಅಧ್ಯಕ್ಷ ಜೋ ಬೈಡನ್ ಅವರು ರಜೆ ಘೋಷಣೆ ಮಾಡಿದ್ದಾರೆ, ಇದನ್ನು ಕಪ್ಪುವರ್ಣೀಯರು ಸ್ವಾಗತ ಮಾಡುವದರ ಜೊತೆ ಸಂಭ್ರಮಾಚರಣೆ ಮಾಡಿದ್ದಾರೆ.

* ಇದೇ ಜೂನ್. 17 ರಂದು ರಾಷ್ಟ್ರೀಯ ಸ್ವಾತಂತ್ರ್ಯ ದಿನ ಕಾಯ್ದೆಯ 'ಜೂನ್'ಟೀನ್ತ್'ಗೆ ಅಧ್ಯಕ್ಷ ಜೋ ಬೈಡನ್ ಅವರು ಸಹಿ ಹಾಕಿದ್ದಾರೆ.

* ಇತ್ತೀಚಿಗೆ ಅಮೇರಿಕದಲ್ಲಿ ಜನಾಂಗೀಯ ದ್ವೇಷದ ಪ್ರಕರಣಗಳು ಹೆಚ್ಚುತ್ತಿವೆ ಈ ಸಂಧರ್ಭದಲ್ಲಿ ಅಧ್ಯಕ್ಷ ಜೋ ಬೈಡನ್ ಅವರು ಈ ಕ್ರಮವನ್ನು ಕೈಗೊಂಡಿದ್ದಾರೆ, ಈ ಕ್ರಮದ ಜೊತೆಯಲ್ಲಿ ಬದಲಾವಣೆ ತರುವ ನಿರ್ಧಾರಗಳನ್ನು ಕೈಗೊಳ್ಳಬೇಕು ಹಾಗೂ ನಮ್ಮ ಮತದಾನದ ಹಕ್ಕನ್ನು ರಕ್ಷಿಸಬೇಕು ಎಂದು ಕನ್ಸಾಸ್ ಪಟ್ಟಣದ ಅರ್ಬನ್ ಲೀಗ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗ್ವೆನ್ ಗ್ರ್ಯಾಂಟ್ ಅವರು ತಿಳಿಸಿದ್ದಾರೆ.

* ಪೂರ್ತಿ ವರ್ಷವು ಅಮೇರಿಕದಲ್ಲಿ ಜೂನ್. 19 ರಂದು ಗುಲಾಮಗಿರಿ ಅಂತ್ಯಗೊಳಿಸಿರುವ ದಿನ ಆಚರಣೆ ಮಾಡಲಾಗುತ್ತದೆ, ಈ ಹಿಂದೆ ಕಪ್ಪು ವರ್ಣೀಯ ಜನರನ್ನು ಗುಲಾಮಗಿರಿಯಿಂದ ಮುಕ್ತಗೊಳಿಸುವುದನ್ನು 1865 ರ ಜೂನ್.19 ರಂದು ಟೆಕ್ಸಾಸ್'ನ ಗಾಲ್ವೆಸ್ಟಾನ್'ನಲ್ಲಿ ಘೋಷಣೆ ಮಾಡಲಾಗಿತ್ತು, ಮತ್ತೆ 1980 ರಿಂದಲೇ ಜೂನ್. 19 ರಂದು ಟೆಕ್ಸಾಸ್'ನಲ್ಲಿ ರಜೆ ಘೋಷಣೆ ಮಾಡಲಾಗಿದೆ, ಪ್ರಸ್ತುತ ರಜೆ ಘೋಷಣೆ ಮಾಡಿದ ಮೊದಲ ರಾಜ್ಯವಾಗಿದೆ.

## ಭಾರತದ ಮೊದಲ ವೈದ್ಯಕೀಯ 'ಡ್ರೋನ್ ಪ್ರಯೋಗ' ಗೌರಿಬಿದನೂರಿನಲ್ಲಿ ಆರಂಭ



* ಬೆಂಗಳೂರಿನ ಥ್ರೋಟಲ್ ಏರೋಸ್ಪೇಸ್ ಸಿಸ್ಟಮ್ಸ್ ನೇತೃತ್ವದ ಸಂಸ್ಥೆಗಳ ಒಕ್ಕೂಟದಿಂದ ಭಾರತದ ಮೊದಲ ವೈದ್ಯಕೀಯ ಡ್ರೋನ್ ವಿತರಣಾ ಪ್ರಯೋಗವು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ಎಂಬ ತಾಲೂಕಿನಲ್ಲಿ ಆರಂಭವಾಗಲಿದೆ, 2020 ರ ಮಾರ್ಚ್ ತಿಂಗಳಿನಲ್ಲಿ ಈ ಡ್ರೋನ್ ಪ್ರಯೋಗವು ವಸ್ತು ವಿತರಣಾ ಪ್ರಯೋಗಗಳಿಗೆ ನಾಗರಿಕ ವಿಮಾನಯಾನ ಮಹಾನಿರ್ದೇಶಕರಿಂದ ಅನುಮೋದನೆ ಪಡೆದುಕೊಂಡಿತ್ತು.

* ಪ್ರಸ್ತುತ ಥ್ರೋಟಲ್ ಏರೋಸ್ಪೇಸ್ ಸಿಸ್ಟಮ್ಸ್ ನೇತೃತ್ವದ ಸಂಸ್ಥೆ ಈ ಡ್ರೋನ್ ಪ್ರಯೋಗವು 30 45 ದಿನಗಳವರೆಗೆ ನಡೆಸಲಿದೆ.

* ಪ್ರಸ್ತುತ ಡ್ರೋನ್'ಗಳಲ್ಲಿ ರಾಂಡಿಂಟ್ ಎಂಬ ಡೆಲಿವರಿ ಸಾಫ್ಟ್ ವೇರ್ ಬಳಸಲಾಗಿದೆ ಹಾಗೂ ಇವುಗಳಲ್ಲಿ ಎರಡು ವಿಧಗಳಿವೆ, ಒಂದು ಸಣ್ಣ ಮೆಡ್ ಕಾಪ್ಟರ್ ಡ್ರೋನ್ 1 KG ವರೆಗೆ ವೈದ್ಯಕೀಯ ಉಪಕರಣಗಳನ್ನು 15 ಕಿ.ಮೀ ವ್ಯಾಪ್ತಿಯವರೆಗೆ ತಲುಪಿಸುವ ಸಾಮರ್ಥ್ಯ ಹೊಂದಿದೆ, ಇನ್ನೊಂದು ವಿಧದ ಡ್ರೋನ್ 2 KG ಉಪಕರಣಗಳನ್ನು 12 ಕಿ.ಮೀವರೆಗೆ ತಲುಪಿಸುವ ಸಾಮರ್ಥ್ಯ ಹೊಂದಿದೆ ಎಂದು ತಿಳಿದು ಬಂದಿದೆ.

# 20-06-2021

## ವಿಶ್ವಸಂಸ್ಥೆ ನಿರ್ಣಯದಿಂದ ಹೊರ ನಡೆದ ಭಾರತ



* ಕರಡು ನಿರ್ಣಯದಲ್ಲಿ ಮಾನ್ಯತೆ ನೀಡದ ಕಾರಣದಿಂದಾಗಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ನಿರ್ಣಯದಿಂದ ಭಾರತ ಹೊರ ನಡೆದಿದೆ, ವಿಶ್ವಸಂಸ್ಥೆಯ ಈ ಕರಡು ನಿರ್ಣಯದಲ್ಲಿ ಭಾರತ ಸರ್ಕಾರದ ನಿಲುವಿಗೆ ಸೂಕ್ತ ಮಾನ್ಯತೆ ನೀಡಲಾಗಿಲ್ಲ ಹಾಗೂ ದೇಶಕ್ಕೆ ಸಂಬಂಧಿಸಿದಂತೆ ಕೈಗೊಂಡಿರುವ ನಿರ್ಧಾರಗಳಲ್ಲಿ ನಂಬಿಕೆ ಇಲ್ಲ ಎಂದು ಭಾರತದ ಶಾಶ್ವತ ರಾಯಭಾರಿ ಟಿ.ಎಸ್.ತಿರುಮೂರ್ತಿ ಅವರು ತಿಳಿಸಿದ್ದಾರೆ.

* ಈ ಕರಡು ನಿರ್ಣಯದ ಪರ 119 ರಾಷ್ಟ್ರಗಳು ಮತ ಹಾಕಿವೆ,

ಆದರೆ ಭಾರತ, ಮಯನ್ಮಾರ್ ಸೇರಿ ಒಟ್ಟು 36 ರಾಷ್ಟ್ರಗಳು ಮತದಾನದಿಂದ ದೂರ ಉಳಿದಿವೆ ಎಂದು ತಿಳಿದು ಬಂದಿದೆ.

## ಇರಾನ್ ದೇಶದ ನೂತನ ಅಧ್ಯಕ್ಷರಾಗಿ ಇಬ್ರಾಹಿಂ ರೈಸಿ ಆಯ್ಕೆ



* ಪ್ರಸ್ತುತ ಇರಾನ್'ನ ನೂತನ ಅಧ್ಯಕ್ಷರಾಗಿ ಇಬ್ರಾಹಿಂ ರೈಸಿ ಅವರು ಆಯ್ಕೆಯಾಗಿದ್ದಾರೆ.

* ವಿದೇಶಾಂಗ ಸಚಿವರಾಗಿರುವ ಮೊಹಮ್ಮದ್ ಜಾವಾದ್ ಜರೀಫ್ ಅವರು ಈ ರೈಸಿ ಅವರ ಆಯ್ಕೆಯನ್ನು ಘೋಷಣೆ ಮಾಡಿದ್ದಾರೆ.

* ಈ ಬಾರಿಯ ಇರಾನ್'ನ ಅಧ್ಯಕ್ಷ ಚುನಾವಣೆಯಲ್ಲಿ ಕಡಿಮೆ ಮತದಾನವಾಗಿದೆ, ಅದರಲ್ಲಿ ಇಬ್ರಾಹಿಂ ರೈಸಿ ಅವರು ಪರ 1.78 ಕೋಟಿ ಮತಗಳುನ್ನು ಪಡೆದಿದ್ದಾರೆ, ಹಾಗೂ ಇವರ ಪ್ರತಿಸ್ಪರ್ಧಿಗಳಾಗಿರುವ ಮೊಹಸೆನ್ ರೆಝೆ 33 ಲಕ್ಷ ಮತ್ತು ಹೆಮ್ಮಟ್ಟಿ 24 ಲಕ್ಷ ಮತಗಳನ್ನು ಪಡೆದುಕೊಂಡಿದ್ದಾರೆ.

* ಇರಾನ್ ನೂತನ ಅಧ್ಯಕ್ಷರಾಗಿ 60 ವರ್ಷ ವಯಸ್ಸಿನ ಇಬ್ರಾಹಿಂ ರೈಸಿ ಅವರು ಆಗಸ್ಟ'ನಲ್ಲಿ ಅಧಿಕಾರ ಸ್ವೀಕಾರ ಮಾಡಲಿದ್ದಾರೆ, ಈ ಮೊದಲು ಇಬ್ರಾಹಿಂ ರೈಸಿ ಅವರು ಇರಾನ್'ನ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದಾರೆ.

* ಸದ್ಯ ಇರಾನ ರಾಷ್ಟ್ರವು ಅಮೆರಿಕದ ನಿರ್ಬಂಧ, ಹಾಗೂ ಅಣ್ವಸ್ತ್ರ ಯೋಜನೆ ಸೇರಿ ಹಲವು ಕಠಿಣ ಪರಿಸ್ಥಿತಿಗಳನ್ನು ಎದುರಿಸುತ್ತಿದೆ ಎಂದು ತಿಳಿದು ಬಂದಿದೆ.

## ಉತ್ತರಪ್ರದೇಶ ಬಿಜೆಪಿ ಉಪಾಧ್ಯಕ್ಷರಾಗಿ ಮಾಜಿ IAS ಅಧಿಕಾರಿ ಎ.ಕೆ.ಶರ್ಮಾ ನೇಮಕ



* ಮಾಜಿ IAS ಅಧಿಕಾರಿ ಎ.ಕೆ.ಶರ್ಮಾ ಅವರನ್ನು ಬಿಜೆಪಿಯ ಉತ್ತರ ಪ್ರದೇಶ ಘಟಕದ ಉಪಾಧ್ಯಕ್ಷರಾಗಿ ನೇಮಕ ಮಾಡಿದ್ದಾರೆ, ಈ ಐಎಎಸ್ ಅಧಿಕಾರಿ ಪ್ರಧಾನಿ ನರೇಂದ್ರ ಮೋದಿಯವರಿಗೆ ಆಪ್ತರು ಕೂಡ ಹೌದು.

* ಕೋವಿಡ್ 19 ವಿರುದ್ಧದ ಹೋರಾಟದ ಮೇಲ್ವಿಚಾರಣೆಗೆ ಮಾಜಿ ಭಾರತೀಯ ಆಡಳಿತ ಸೇವಾ ಅಧಿಕಾರಿ ಮತ್ತು ಎಂಎಲ್‌ಸಿ(MLC) ಆಗಿದ್ದ ಎ.ಕೆ.ಶರ್ಮಾ ಅವರನ್ನು ಪ್ರಸ್ತುತ ವರ್ಷದ ಪ್ರಾರಂಭದಲ್ಲಿ ವಾರಣಾಸಿಗೆ ಕಳುಸಲಾಗಿತ್ತು, ಈ ಪ್ರದೇಶವು ಪ್ರಧಾನಿ ಮೋದಿ ಜೀ ಅವರ ಲೋಕಸಭಾ ಕ್ಷೇತ್ರವಾಗಿತ್ತು.

* ಎ.ಕೆ.ಶರ್ಮಾ ಅವರು 1988ರ ಬ್ಯಾಚಿನ ಐಎಎಸ್ ಅಧಿಕಾರಿಯಾಗಿದ್ದರು.

# 21-06-2021

## 'CBSE 12ನೇ ತರಗತಿ' ಫಲಿತಾಂಶ ಜುಲೈ.31 ಕ್ಕೆ ಪ್ರಕಟ

* 2021 ರ 12 ನೇ ತರಗತಿ ಸಿಬಿಎಸ್‌ಇ ಬೋರ್ಡ್ ಪರೀಕ್ಷೆ ಫಲಿತಾಂಶಗಳನ್ನು 31 July 2021 ರೊಳಗೆ ಘೋಷಿಸಲಾಗುವುದು.

* ವಿದ್ಯಾರ್ಥಿಗಳ ಮೌಲ್ಯಮಾಪನ ನೀತಿಗೆ ಅನುಗುಣವಾಗಿ ಮಾಡಿದ ಫಲಿತಾಂಶಗಳ ಲೆಕ್ಕಾಚಾರಕ್ಕೆ ಸಂಬಂಧಿಸಿದ ವಿವಾದವನ್ನು ಸಿಬಿಎಸ್‌ಇ ರಚಿಸಿದ ಸಮಿತಿಗೆ ಕಳುಹಿಸಲಾಗುವುದು ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ ಸುಪ್ರೀಂ ಕೋರ್ಟ್ ಗೆ ತಿಳಿಸಿದೆ.

* ವಿದ್ಯಾರ್ಥಿಗಳು ತಮ್ಮ ಮೌಲ್ಯಮಾಪನದಿಂದ ತೃಪ್ತರಾಗದ ಪಕ್ಷದಲ್ಲಿ ವಿದ್ಯಾರ್ಥಿಗಳ ಐಚ್ಛಿಕ ಪರೀಕ್ಷೆಯು ಯಾವ ದಿನಾಂಕಕ್ಕೆ ಸಂಬಂಧಿಸಿದೆ ಎಂಬುದಕ್ಕೆ ಸಂಬಂಧಿಸಿದಂತೆ, ಸಿಬಿಎಸ್‌ಇಯು ಅಂತಹ ವಿದ್ಯಾರ್ಥಿಗಳ ಪರೀಕ್ಷೆಗಳನ್ನು ಅನುಕೂಲಕರ ಪರಿಸ್ಥಿತಿಗೆ ಒಳಪಟ್ಟಂತೆ August 15, 2021 ರಿಂದ September 15, 2021 ರ ನಡುವೆ ಯಾವುದೇ ಸಮಯದಲ್ಲಿ ನಡೆಸಲಾಗುತ್ತದೆ ಎಂದು ಹೇಳಿದೆ.

## ಬಿಸಿಸಿಐ ಒಲಿಂಪಿಕ್ಸ್ ನಲ್ಲಿ ಭಾಗವಹಿಸುವ ಕ್ರೀಡಾಪಟುಗಳ ಸಿದ್ಧತೆಗೆ 10 ಕೋಟಿ ರೂ.ದೇಣಿಗೆ ನೀಡಲಿದೆ

* ಒಲಿಂಪಿಕ್ಸ್ ಕ್ರೀಡಾಪಟುಗಳ ತರಬೇತಿ ಹಾಗೂ ಸಿದ್ಧತೆಗಳಿಗಾಗಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ರವಿವಾರ 10 ಕೋಟಿ ರೂ.ದೇಣಿಗೆ ನೀಡಲಿರುವುದಾಗಿ ಪ್ರಕಟಿಸಿದೆ.

* ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ(ಬಿಸಿಸಿಐ)ಯ ಅಧ್ಯಕ್ಷ ಸೌರವ್ ಗಂಗುಲಿ ಹಾಗೂ ಕಾರ್ಯದರ್ಶಿ ಜಯ ಶಾ ಭಾಗವಹಿಸಿದ ಬಿಸಿಸಿಐನ

ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

* ಬಿಸಿಸಿಐನ ಕಾರ್ಯದರ್ಶಿ ಜಯ ಶಾ "ಟೋಕಿಯೊ ಕ್ರೀಡಾಕೂಟಕ್ಕೆ ಅರ್ಹತೆ ಪಡೆದ ನಮ್ಮ ಕ್ರೀಡಾಪಟುಗಳ ತಯಾರಿ ಹಾಗೂ ಇತರ ತುರ್ತು ಉದ್ದೇಶಗಳಿಗಾಗಿ ಇದನ್ನು (ನಿಧಿ) ಬಳಸಲಾಗುತ್ತದೆ. ಕ್ರೀಡಾ ಸಚಿವಾಲಯ ಹಾಗೂ ಭಾರತೀಯ ಒಲಿಂಪಿಕ್ಸ್ ಅಸೋಸಿಯೇಶನ್ (IOA) ಜೊತೆಗೆ ಮಾತನಾಡಿದ ನಂತರ ಪಾವತಿಯ ವಿಧಾನಗಳನ್ನು ಅಂತಿಮಗೊಳಿಸಲಾಗುತ್ತದೆ" ಎಂದು ತಿಳಿಸಿದರು.

* ಮುಂಬರುವ ಒಲಿಂಪಿಕ್ಸ್ ಕ್ರೀಡೆಗಳು ಜುಲೈ 23 ರಿಂದ ಟೋಕಿಯೊದಲ್ಲಿ ಆರಂಭವಾಗಲಿದೆ.

## ಅಮರನಾಥ ಯಾತ್ರೆಯನ್ನು ರದ್ದುಗೊಳಿಸಿದ ಕೇಂದ್ರ ಸರಕಾರ



* ಕೇಂದ್ರ ಸರಕಾರವು ಕೊರೊನಾ ಸೋಂಕಿನ ಅಬ್ಬರ ಹಾಗೂ ಲಾಕ್ ಡೌನ್ ಗಳ ಹಿನ್ನೆಲೆಯಲ್ಲಿ ಪವಿತ್ರ ಅಮರನಾಥ ಯಾತ್ರೆಯನ್ನು ರದ್ದುಗೊಳಿಸಿದೆ.

* ಕೇಂದ್ರ ಸರಕಾರ ಸತತ 2ನೇ ವರ್ಷವೂ ಮೂರನೇ ಅಲೆಯ ಭೀತಿ ಹಿನ್ನೆಲೆಯಲ್ಲಿ ಅಮರನಾಥ ಯಾತ್ರೆಯನ್ನು ರದ್ದುಗೊಳಿಸುವ ತೀರ್ಮಾನ ಕೈಗೊಂಡಿದೆ.

# 22-06-2021

## ಮಕ್ಕಳಲ್ಲಿ ಸೋಂಕು ಪತ್ತೆಗೆ ಗಂಟಲಿನ ಗಾರ್ಗ್ಲ್ ಮಾದರಿ ಬಳಕೆ



ಇತ್ತೀಚಿಗೆ ಹೃದ್ರೋಗ ತಜ್ಞ ದೇವಿ ಪ್ರಸಾದ್ ಶೆಟ್ಟಿ ನೇತೃತ್ವದ 13 ಸದಸ್ಯರ ತಜ್ಞರ ಸಮಿತಿಯು 6 14 ವರ್ಷ ವಯಸ್ಸಿನ ಮಕ್ಕಳಲ್ಲಿ COVID 19 ಸೋಂಕನ್ನು ಪತ್ತೆಹಚ್ಚಲು ಗಂಟಲಿನ ಗಾರ್ಗ್ಲ್ ಮಾದರಿಗಳನ್ನು ಬಳಸಬಹುದು ಎಂದು ಶಿಫಾರಸ್ಸು ಮಾಡಿದೆ. ಮುಖ್ಯ ಅಂಶಗಳು :

* ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ (ICMR) ನಡೆಸಿದ ಅಧ್ಯಯನದ ಪ್ರಕಾರ SARS CoV 2 ವೈರಸ್ ಅನ್ನು ಪತ್ತೆಹಚ್ಚಲು ಗಂಟಲಿನ ಗಾರ್ಗ್ಲ್ ಮಾದರಿಗಳ ಬಳಕೆಯು ಒಂದು ಒಂದು ಪರ್ಯಾಯ ವಿಧಾನವಾಗಿದೆ ಎಂದು ತಿಳಿಸಿದೆ.

* ಈ ಸಮಿತಿಯ ಒಂದು ಅಂದಾಜಿನ ಪ್ರಕಾರ, 18 ವರ್ಷ ವಯಸ್ಸಿನ ಸುಮಾರು 3.4 ಲಕ್ಷ ಮಕ್ಕಳು ದೇಶದಲ್ಲಿ ಮೂರನೇ ಅಲೆಯ ಸೋಂಕಿಗೆ ತುತ್ತಾಗುವ ಸಾಧ್ಯತೆಯಿದೆ.

* ಸಮಿತಿಯ ಹಲವು ಶಿಫಾರಸುಗಳು ಮೂರನೇ ಅಲೆಯಲ್ಲಿ ಆಸ್ಪತ್ರೆಗಳಲ್ಲಿ ಗರಿಷ್ಠ ಮಟ್ಟದಲ್ಲಿ ಮಕ್ಕಳ ಹಾಸಿಗೆಗಳ ಲಭ್ಯತೆಗೆ ಅನುವು ಸೋಂಕಿತ ಮಕ್ಕಳಿಗೆ ಚಿಕಿತ್ಸೆಗಾಗಿ ಸುಮಾರು 6,801 ಐಸಿಯು ಮತ್ತು 43,358 ಕೋವಿಡ್ ಕೇರ್ ಸೆಂಟರ್ ಗಳ ಅವಶ್ಯ

## ಲಾರೆಲ್ ಹಬಾರ್ಡ್: ವಿಶ್ವದ ಮೊದಲ ಲಿಂಗ ಪರಿವರ್ತಿತ ಒಲಿಂಪಿಯನ್



2020 ರ ಬೇಸಿಗೆ ಒಲಿಂಪಿಕ್ಸ್ ಕ್ರೀಡಾಕೂಟದ ಮಹಿಳೆಯರ +87 ಕೆಜಿ ವಿಭಾಗದ ವೇಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಸ್ಪರ್ಧಿಸಲು ನ್ಯೂಜಿಲೆಂಡ್ ಒಲಿಂಪಿಕ್ ಸಮಿತಿಯು ವೇಟ್‌ಲಿಫ್ಟರ್ ಲಾರೆಲ್ ಹಬಾರ್ಡ್ ಅವರನ್ನು ಆಯ್ಕೆ ಮಾಡಿದೆ. ಈ ಮೂಲಕ ಲಿಂಗ ಪರಿವರ್ತನೆಯ ಬಳಿಕ ಒಲಿಂಪಿಕ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಿದ ಮೊದಲ ಲಿಂಗ ಪರಿವರ್ತಿತ ಕ್ರೀಡಾಪಟು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

* 43 ವರ್ಷದ ಇವರು ಈ ಮೊದಲು ಅಂದರೆ 2013 ರಲ್ಲಿ ಲಿಂಗ ಪರಿವರ್ತನೆಗೂ ಮೊದಲು ಪುರುಷರ ವೇಟ್‌ಲಿಫ್ಟಿಂಗ್ ಸ್ಪರ್ಧೆಗಳಲ್ಲಿ ಸ್ಪರ್ಧಿಸಿದ್ದರು.

## "ಮುಖ್ಯಮಂತ್ರಿ ಆರ್ಥಿಕ ಸಲಹಾ ಮಂಡಳಿ" ಸ್ಥಾಪನೆಗೆ ನಿರ್ಧರಿಸಿದ ತಮಿಳುನಾಡು



ಇತ್ತೀಚಿಗೆ ನಡೆದ ಚುನಾವಣೆಯಲ್ಲಿ ಆಯ್ಕೆಯಾದ ನೂತನ ಸರ್ಕಾರವು "ಮುಖ್ಯಮಂತ್ರಿಗೆ ಆರ್ಥಿಕ ಸಲಹಾ ಮಂಡಳಿ" ಯನ್ನು ರಚಿಸಲು ನಿರ್ಧರಿಸಿದೆ. ಈ ಸಲಹಾ ಮಂಡಳಿಯಲ್ಲಿ ವಿಶ್ವದ ಪ್ರಮುಖ ಆರ್ಥಿಕ ತಜ್ಞರನ್ನು ಸದಸ್ಯರನ್ನು ನೇಮಿಸಲಾಗುವದು. ಕೆಲ ಸದಸ್ಯರ ವಿವರಗಳು : ಅಮೇರಿಕದ ಮ್ಯಾಸಚೂಸೆಟ್ಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಎಂಐಟಿ) ನೊಬೆಲ್ ಪ್ರಶಸ್ತಿ ವಿಜೇತ ಎಸ್ತರ್ ಡುಫ್ಲೋ ಭಾರತದ ಮಾಜಿ

ರಿಸರ್ವ್ ಬ್ಯಾಂಕ್ ಗವರ್ನರ್ ರಘುರಾಮ್ ರಾಜನ್ ಕೇಂದ್ರ ಸರ್ಕಾರದ ಮಾಜಿ ಮುಖ್ಯ ಆರ್ಥಿಕ ಸಲಹೆಗಾರ ಡಾ.ಅರವಿಂದ್ ಸುಬ್ರಮಣಿಯನ್ ಅಭಿವೃದ್ಧಿ ಅರ್ಥಶಾಸ್ತ್ರಜ್ಞ ಜೀನ್ ಡ್ರೆಜ್ ಕೇಂದ್ರದ ಮಾಜಿ ಹಣಕಾಸು ಕಾರ್ಯದರ್ಶಿ ಡಾ.ಎಸ್. ನಾರಾಯಣ್

* ಈ ಸಲಹಾ ಮಂಡಳಿಯಯ ಶಿಫಾರಸುಗಳ ಆಧಾರದ ಮೇಲೆ, ತಮಿಳುನಾಡು ಸರ್ಕಾರವು ತನ್ನ ರಾಜ್ಯದಲ್ಲಿ ಆರ್ಥಿಕತೆಯನ್ನು ಪುನರುಜ್ಜೀವನಗೊಳಿಸಲು ಮತ್ತು ಆರ್ಥಿಕ ಬೆಳವಣಿಗೆಯ ಲಾಭಗಳು ಎಲ್ಲರಿಗೂ ತಲುಪುವಂತೆ ನೋಡಿಕೊಳ್ಳುತ್ತದೆ.

## 2020ರಲ್ಲಿ ವಿದೇಶಿ ನೇರ ಹೂಡಿಕೆ ಪಡೆಯುವಲ್ಲಿ ಭಾರತಕ್ಕೆ 5 ನೇ ಸ್ಥಾನ = ವಿಶ್ವಸಂಸ್ಥೆ ವರದಿ




ಇತ್ತೀಚಿಗೆ ವಿಶ್ವಸಂಸ್ಥೆಯ UN Conference on Trade and Development (UNCTAD) ತನ್ನ "ವಿಶ್ವ ಹೂಡಿಕೆ ವರದಿ 2021" ಅನ್ನು ಬಿಡುಗಡೆಗೊಳಿಸಿದ್ದು, ಈ ವರದಿ ಪ್ರಕಾರ ಭಾರತವು 2020ರಲ್ಲಿ 64 ಬಿಲಿಯನ್ ಡಾಲರ್ ವಿದೇಶಿ ನೇರ ಹೂಡಿಕೆಗಳನ್ನು (ಎಫ್‌ಡಿಐ) ಪಡೆದುಕೊಂಡಿದೆ. ಈ ಮೂಲಕ ವಿಶ್ವದ FDI ಒಳಹರಿವಿನ ಐದನೇ ಅತಿದೊಡ್ಡ ರಾಷ್ಟ್ರವಾಗಿ ಹೊರಹೊಮ್ಮಿದೆ.

* 2020ರಲ್ಲಿ ಭಾರತದಲ್ಲಿ ಎಫ್‌ಡಿಐ ಶೇಕಡಾ 27 ರಷ್ಟು ಏರಿಕೆಯಾಗಿ 64 ಬಿಲಿಯನ್ ಡಾಲರ್‌ಗೆ ತಲುಪಿದೆ. FDI (ವಿದೇಶಿ ನೇರ ಹೂಡಿಕೆ): ಒಂದು ಕಂಪನಿಯು ಮತ್ತೊಂದು ದೇಶದಲ್ಲಿನ ವ್ಯಾಪಾರ ಘಟಕದಲ್ಲಿ ಮಾಲೀಕತ್ವವನ್ನು ಪಡೆಯುವ/ನಿಯಂತ್ರಿಸುವ ಸಲುವಾಗಿ ಮಾಡುವ ಹೂಡಿಕೆಯನ್ನು ಸಾಮಾನ್ಯವಾಗಿ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಎನ್ನಬಹುದು.

## ಭಾರತ ಮತ್ತು US ನಿಂದ ಹೈಡ್ರೋಜನ್ ಟಾಸ್ಕ್ ಫೋರ್ಸ್ ಪ್ರಾರಂಭ



ಭಾರತ ಮತ್ತು US (ಯುನೈಟೆಡ್ ಸ್ಟೇಟ್ಸ್) ಜಂಟಿಯಾಗಿ "ಸ್ಟ್ರಾಟೆಜಿಕ್ ಕ್ಲೀನ್ ಎನರ್ಜಿ ಪಾರ್ಟ್ನರ್‌ಶಿಪ್ (SCEP)" ಅಡಿಯಲ್ಲಿ 'ಹೈಡ್ರೋಜನ್ ಟಾಸ್ಕ್ ಫೋರ್ಸ್' ಅನ್ನು ಆರಂಭಿಸಿವೆ, ಈ ಮೂಲಕ ಭಾರತದ ಇಂಧನ ಸುರಕ್ಷತೆ ಮತ್ತು ಸ್ಥಿತಿಸ್ಥಾಪಕತ್ವವನ್ನು ಹೆಚ್ಚಿಸಲು ಸಹಾಯವಾಗಲಿದೆ.

## ಶೀಘ್ರವೇ ನಿರ್ಧಾರ ವಾಹನಗಳಲ್ಲಿ ಎಥೆನಾಲ್ ಎಂಜಿನ್ ಬಳಕೆ



* ಎಥೆನಾಲ್ ಮತ್ತು ಪೆಟ್ರೋಲ್ ಬಳಸಲು ಸಾಧ್ಯವಾಗುವ ಎಂಜಿನ್‌ಗಳನ್ನು ವಾಹನಗಳಲ್ಲಿ ಅಳವಡಿಸುವ ಬಗ್ಗೆ ಕೇಂದ್ರ ಸರ್ಕಾರವು 10 ದಿನಗಳಲ್ಲಿ ನಿರ್ಧಾರ ಕೈಗೊಳ್ಳಲಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿಯವರು ಮಾಹಿತಿಯನ್ನು ನೀಡಿದ್ದಾರೆ.

* ಪ್ರಸ್ತುತ ದೇಶದಲ್ಲಿ ಪೆಟ್ರೋಲ್ ಬೆಲೆಯು ಪ್ರತಿ ಲೀಟರಿಗೆ 100 ರೂ. ಆಗಿದೆ, ಪರ್ಯಾಯ ಇಂಧನವಾಗಿರುವ ಎಥೆನಾಲ್ ಬೆಲೆಯು ಪ್ರತಿ ಲೀಟರಿಗೆ 60 ರಿಂದ 62 ರೂ. ನಷ್ಟಿದೆ ಹಾಗಾಗಿ ಎಥೆನಾಲ್ ಎಂಜಿನ್ ಬಳಸುವದರಿಂದ ಭಾರತೀಯರಿಗೆ ಪ್ರತಿ ಲೀಟರಿಗೆ 30 ರಿಂದ 35 ರೂ. ರವರೆಗೆ ಹಣ ಉಳಿತಾಯವಾಗುತ್ತದೆ ಎಂದು ತಿಳಿಸಿದ್ದಾರೆ.

* ಎಂಜಿನ್‌ಗೆ ಪೆಟ್ರೋಲ್‌ಗಿಂತ ಎಥೆನಾಲ್ ಉತ್ತಮ ಇಂಧನವಾಗಿದೆ, ಹಾಗೂ ಇದು ಕಡಿಮೆ ವೆಚ್ಚದಾಗಿದ್ದು ಮತ್ತು ಮಾಲಿನ್ಯ ಮುಕ್ತವೂ ಆಗಿದೆ ಎಂದು ತಿಳಿಸಿದ್ದಾರೆ.

## ಇ ಕಾಮರ್ಸ್‌ನಲ್ಲಿ ಫ್ಲಾಶ್ ಸೇಲ್'ಗೆ ನಿಷೇಧ ಹೇರಲು ಕೇಂದ್ರ ಸರ್ಕಾರ ನಿರ್ಧಾರ



* ಪ್ರಸ್ತುತ ಇ ಜಾಲತಾಣ(ಕಾಮರ್ಸ್)ಗಳಲ್ಲಿ ಯಾವುದೇ ಉತ್ಪನ್ನಗಳನ್ನೂ ಫ್ಲಾಶ್ ಸೇಲ್'ನ ಅಡಿಯಲ್ಲಿ ಮಾರಾಟ ಮಾಡುವುದಕ್ಕೆ ಕೇಂದ್ರ ಸರ್ಕಾರವು ನಿಷೇಧ ಹೇರಲು ತೀರ್ಮಾನಿಸಿದೆ.

* ಈ ಇ ಕಾಮರ್ಸ್‌ಗಳು ಫ್ಲಾಶ್ ಸೇಲ್ ಹೆಸರಿನಲ್ಲಿ ನಕಲಿ ಕಂಪನಿಗಳು ತಯಾರಿಸಿದ ಉತ್ಪನ್ನಗಳನ್ನು ಗ್ರಾಹಕರಿಗೆ ಮಾರಾಟ ಮಾಡುತ್ತಿವೆ ಈ ನಿಟ್ಟಿನಲ್ಲಿ ಇದನ್ನು ತಡೆಯುವ ಉದ್ದೇಶದಿಂದ ಈ ನಿರ್ಧಾರವನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿದು ಬಂದಿದೆ.

* ಕೇಂದ್ರ ಸರ್ಕಾರವು ಈ ಫ್ಲಾಶ್ ಸೇಲ್ ನಿರ್ಬಂಧದ ಹಾಗೂ ಎಲ್ಲ ಇ ಕಾಮರ್ಸ್'ನ ಜಾಲತಾಣಗಳಲ್ಲಿನ ಸಾರ್ವಜನಿಕರ ಅಥವಾ ಗ್ರಾಹಕರ ಕುಂದು ಕೊರತೆ ಬಗ್ಗೆ ಗಮನ ಹರಿಸಲು ಅಧಿಕಾರಿಗಳನ್ನು ನೇಮಿಸುವ ಕರಡು ಪ್ರತಿಯನ್ನು ಈ ಮೊದಲೇ ಪ್ರಕಟಿಸಿದೆ.

* ಪ್ರಸ್ತುತ ಕೇಂದ್ರ ಸರ್ಕಾರವು ಸಾರ್ವಜನಿಕರ ಸಲಹೆ ಮತ್ತು ಅಭಿಪ್ರಾಯಗಳನ್ನು ಪಡೆದ ನಂತರ ಈ ನಿಷೇದ ಹೇರುವ ನಿಯಮಗಳ ಜಾರಿ ಬಗ್ಗೆ ನಿರ್ಧಾರವನ್ನು ತಗೆದುಕೊಳ್ಳಲಾಗುವದು ಎಂದು ತಿಳಿಸಿದೆ.

* ಇ ಕಾಮರ್ಸ್ ಗ್ರಾಹಕರ ಹಕ್ಕುಗಳ ಸಂರಕ್ಷಣಾ ಈ 2020 ರ ಹೊಸ ನಿಯಮಗಳನ್ನು ಪರಿಷ್ಕರಣೆ ಮಾಡಲು ನಿರ್ಧರಿಸಿದೆ, ಈ ಹಿಂದೆ ಇ ಕಾಮರ್ಸ್ ಗ್ರಾಹಕರ ಹಕ್ಕುಗಳ ಸಂರಕ್ಷಣಾ 2020 ರ ನಿಯಮಗಳನ್ನು ಹಿಂದಿನ ವರ್ಷ ವರ್ಷ ಜುಲೈ ತಿಂಗಳಿನಲ್ಲಿ ಪ್ರಕಟಿಸಿದೆ, ಹಾಗೂ ಈ ಕೇಂದ್ರ ಸರ್ಕಾರದ ನಿಯಮಗಳನ್ನು ಉಲ್ಲಂಘಿಸುವ ಇ ಕಾಮರ್ಸ್ ಜಾಲತಾಣಗಳಿಗೆ ದಂಡ ವಿಧಿಸಲಾಗುವದು ಎಂದು ತಿಳಿಸಿದೆ.

## ಸ್ಯಾಮ್ಸಂಗ್ ಡಿಸ್‌ಪ್ಲೇ ತಯಾರಿ ಘಟಕವು ಚೀನಾದಿಂದ ಭಾರತಕ್ಕೆ ಸ್ಥಳಾಂತರ




* ಪ್ರಸ್ತುತ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ದೈತ್ಯ ಕಂಪನಿಯಾಗಿರುವ ಸ್ಯಾಮ್ಸಂಗ್ ಇದೀಗ ತನ್ನ ಡಿಸ್‌ಪ್ಲೇ ತಯಾರಿ ಘಟಕವನ್ನು ಚೀನಾದಿಂದ ಭಾರತಕ್ಕೆ ಸ್ಥಳಾಂತರ ಮಾಡಿದೆ, ಇದೀಗ ಸ್ಯಾಮ್ಸಂಗ್'ನ ಈ ಘಟಕವು ಉತ್ತರ ಪ್ರದೇಶದ ನೊಯ್ಡಾ ಎಂಬ ನಗರದಲ್ಲಿ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿದೆ ಹಾಗೂ ಸದ್ಯದಲ್ಲೇ ಉತ್ಪಾದನೆಯನ್ನು ಆರಂಭಿಸಲಿದೆ ಎಂದು ತಿಳಿದು ಬಂದಿದೆ.

* ಇದೀಗ ಸ್ಯಾಮ್ಸಂಗ್'ನ ನೈಋತ್ಯ ಏಶ್ಯಾ ಅಧ್ಯಕ್ಷ ಮತ್ತು ಸಿಇಒ ಕೆನ್ ಕಾಂಗ್'ಅವರ ಸಮ್ಮುಖದ ನಿಯೋಗವು ಉತ್ತರ ಪ್ರದೇಶ ರಾಜ್ಯದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಭೇಟಿ ಮಾಡಿ ಈ ಘಟಕದ ಬಗ್ಗೆ ಮಾತನಾಡಿದ್ದಾರೆ, ಈ ಮೊದಲು ಸ್ಯಾಮ್ಸಂಗ್'ನ ಡಿಸ್‌ಪ್ಲೇ ತಯಾರಿ ಘಟಕವು ಚೀನಾ ದೇಶದಲ್ಲಿ ತನ್ನ ಕಾರ್ಯಾವನ್ನು ನಡೆಸುತಿತ್ತು.

## ಪ್ರಧಾನಿ ಮೋದಿಯಿಂದ 'ಎಂ ಯೋಗ' ಆಯಪ್ ಬಿಡುಗಡೆ




* ಪ್ರಸ್ತುತ ದೇಶದಲ್ಲಿನ ಕೋವಿಡ್ 19 ಸಾಂಕ್ರಾಮಿಕ ರೋಗದ ವಿರುದ್ದದ ಹೋರಾಟಕ್ಕೆ ಆತ್ಮಸ್ಥೈರ್ಯ ತುಂಬಲು ಯೋಗವು ಭರವಸೆಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಅಭಿಪ್ರಾಯವನ್ನು ತಿಳಿಸಿದ್ದಾರೆ.

* ಜೂನ್. 21 ಏಳನೇ ಅಂತರ ರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ಪ್ರಧಾನಿ ಮೋದಿಯವರು ಕೋವಿಡ್ ಸೋಂಕಿನ ವಿರುದ್ಧ ಹೋರಾಡಲು ಕ್ರಮವಾಗಿ ಯೋಗಾಭ್ಯಾಸವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆಯನ್ನು ನೀಡಿದ್ದಾರೆ.

* ಮೋದಿ ಜೀ ಅವರು ವಿಶ್ವ ಆರೋಗ್ಯ ಸಂಘಟನೆ (WHO) ಸಹಯೋಗದಲ್ಲಿ ಅಭಿವೃದ್ಧಿ ಪಡಿಸಿರುವ "ಎಂ ಯೋಗ" (M YOGA) ಅಪ್ಲಿಕೇಷನ್'ನ್ನು ಬಿಡುಗಡೆ ಮಾಡಿದರು.

* ಈ ಅಪ್ಲಿಕೇಷನ್ ಯೋಗಾಭ್ಯಾಸದ ಶಿಷ್ಟಾಚಾರಕ್ಕೆ ಅನುಗುಣವಾಗಿದೆ ಮತ್ತು ವಿವಿಧ ಭಾಷೆಗಳಲ್ಲಿ ಬೇರೆ ಬೇರೆ ಯೋಗದ ಆಸನಗಳ ಬಗ್ಗೆ ವಿಡಿಯೋಗಳನ್ನು ಒಳಗೊಂಡ ವಿವರಣೆಯನ್ನು ನೀಡುತ್ತದೆ, ಹಾಗೂ ಆಧುನಿಕ ತಂತ್ರಜ್ಞಾನ ಮತ್ತು ಪ್ರಾಚೀನ ವಿಜ್ಞಾನದ ಸಮ್ಮಿಲನವಾಗಲಿದೆ ಎಂದು ತಿಳಿಸಿದ್ದಾರೆ.

## ಇರಾನ್ ನ ಅಣುಸ್ಥಾವರ ತಾತ್ಕಾಲಿಕ ಸ್ಥಗಿತ



* ಇರಾನ್'ನ ಏಕೈಕ ಪರಮಾಣು ಸ್ಥಾವರವನ್ನು ತಾತ್ಕಾಲಿಕವಾಗಿ ತುರ್ತು ಸ್ಥಗಿತಗೊಳಿಸಲಾಗಿದೆ ಎಂದು ಸರಕಾರಿ ಸುದ್ದಿವಾಹಿನಿ ಮಾಹಿತಿಯನ್ನು ಪ್ರಕಟಿಸಿದೆ, ಪ್ರಸ್ತುತ ಬುಶೆಹರ್'ನಲ್ಲಿರುವ ಈ ಪರಮಾಣು ಸ್ಥಾವರವು ಮೂರು ರಿಂದ ನಾಲ್ಕು ದಿನವರೆಗೆ ಸ್ಥಗಿತವಾಗಲಿದೆ ಎಂದು ತಿಳಿಸಿದ್ದಾರೆ, ಇದರಿಂದಾಗಿ ವಿದ್ಯುತ್ ವ್ಯತ್ಯಯವಾಗುವ ಸಾಧ್ಯತೆ ಇದೆ ಎಂದು ವಿದ್ಯುತ್ ಉತ್ಪಾದನಾ ಸಂಸ್ಥೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

* ಈ ಪರಮಾಣು ಸ್ಥಾವರವು ರಷ್ಯಾ ಸಹಾಯದೊಂದಿಗೆ ನಿರ್ಮಾಣ ಗೊಂಡಿದೆ,ಪ್ರಸ್ತುತ ಈ ಸ್ಥಾವರದಲ್ಲಿ ಬಳಕೆ ಮಾಡಲಾಗಿರುವ ಕಬ್ಬಿಣದ ಸರಳುಗಳನ್ನು ಮರಳಿ ರಷ್ಯಾ ರಾಷ್ಟ್ರಕ್ಕೆ ಹಿಂತಿರುಗಿಸಬೇಕೆಂದು ಷರತ್ತು ನೀಡಿದೆ.

* ಈ ಹಿಂದೆ ಅಮೆರಿಕ ಹೇರಿದ ನಿರ್ಬಂಧದಿಂದಾಗಿ ರಷ್ಯಾದಿಂದ ಪರಮಾಣು ಸಾಧನಗಳನ್ನು ಆಮದು ಮಾಡಿಕೊಳ್ಳಲು ಸಾಧ್ಯವಾಗದ ಕಾರಣ ಸ್ಥಾವರದ ನಿರ್ಮಾಣದ ಕಾರ್ಯವು ಸ್ಥಗಿತಗೊಳ್ಳುವ ಎಲ್ಲ ಲಕ್ಷಣಗಳಿವೆ ಎಂದು 2018ರಲ್ಲಿ ಇರಾನ್'ನ ಪರಮಾಣು ಇಲಾಖೆಯ ಅಧಿಕಾರಿ ಮುಹಮ್ಮದ್ ಜಫಾರಿ ತಿಳಿಸಿದ್ದರು.

* ಇರಾನ್ ನ ಈ ಪರಮಾಣು ಸ್ಥಾವರವು ರಷ್ಯಾ ಉತ್ಪಾದಿಸಿದ ಯುರೇನಿಯಂನಿಂದ ಕಾರ್ಯಚರಿಸುತ್ತದೆ ಹಾಗೂ ಈ ಸ್ಥಾವರವು ವಿಶ್ವಸಂಸ್ಥೆಯ ಅಂತರಾಷ್ಟ್ರೀಯ ಪರಮಾಣು ದಳದ ನಿಗಾದ ಅಡಿಯಲ್ಲಿ ನಡೆಯುತ್ತದೆ.

* ಈ ಪರಮಾಣು ಸ್ಥಾವರದ ನಿರ್ಮಾಣದ ಕಾರ್ಯಕ್ಕೆ 1970 ರಲ್ಲಿ ಚಾಲನೆ ಸಿಕ್ಕಿತ್ತು, ಆದರೆ ಇರಾನ್ ಇರಾಕ್ ಯುದ್ದದ ಸಂಧರ್ಭದಲ್ಲಿ ಈ ಸ್ಥಾವರವು ದಾಳಿಗೆ ಗುರಿಯಾಗಿತ್ತು, ನಂತರದ ದಿನಗಳಲ್ಲಿ ರಷ್ಯಾ ಈ ಸ್ಥಾವರ ನಿರ್ಮಾಣದ ಕಾರ್ಯವನ್ನು ಪೂರ್ಣಗೊಳಿಸಿದೆ ಎಂದು ತಿಳಿದು ಬಂದಿದೆ.

## ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ತೃತೀಯ ಲಿಂಗಿ



* ಪ್ರಸ್ತುತ ನ್ಯೂಜಿಲೆಂಡ್'ನ ವೇಟ್‌ಲಿಫ್ಟರ್ ಲೌರೆಲ್ ಹುಬಾರ್ಡ್ ಎಂಬುವರು ಸೂಪರ್ ಹೇವಿವೇಟ್ ವಿಭಾಗದಲ್ಲಿ ಒಟ್ಟಾರೆ 628 ಪೌಂಡ್ಸ್ (185ಕೆಜಿ) ಭಾರ ಎತ್ತುವ ಮೂಲಕ ಮುಂಬರಲಿರುವ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ (ಟಿಕೆಟ್) ಯನ್ನು ಪಡೆದುಕೊಂಡಿದ್ದಾರೆ.

* ಒಲಿಂಪಿಕ್ ಕ್ರೀಡಾಕೂಟಕ್ಕೆ ಅರ್ಹತೆ ಪಡೆದುಕೊಂಡಿರುವ ಮೊದಲ ತೃತೀಯ ಲಿಂಗ್ ಸ್ಪರ್ಧಿಯಾಗಿ ಹೊರ ಹೊಮ್ಮಿದ್ದಾರೆ, ಹಾಗೂ ಇವರು ಈ ಕ್ರೀಡಾಕೂಟದಲ್ಲಿನ ಅತಿಹಿರಿಯ ವೇಟ್‌ಲಿಫ್ಟರ್ ಎಂದು ಕರೆಸಿಕೊಳ್ಳಲಿದ್ದಾರೆ.

* ನ್ಯೂಜಿಲೆಂಡ್'ನ ವೇಟ್‌ಲಿಫ್ಟರ್ ಲೌರೆಲ್ ಹುಬಾರ್ಡ್ ಅವರು ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ ನಿಯಮದಂತೆ '8' ವರ್ಷಗಳ ಹಿಂದೆಯೇ ತೃತೀಯ ಲಿಂಗಿಗಳು ಒಲಿಂಪಿಕ್ಸ್‌ಗೆ ಸ್ಪರ್ಧಿಸಲು ಬೇಕಾಗಿರುವ ಅರ್ಹತೆ ಹಾಗೂ ಮಾನದಂಡಗಳನ್ನು ಪೂರೈಸಿದ್ದರು.

* ಈ ಮೊದಲು 2017 ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಲೌರೆಲ್ ಹುಬಾರ್ಡ್ ಅವರು ಬೆಳ್ಳಿ ಪಡೆದುಕೊಂಡಿದ್ದಾರೆ, ಮತ್ತೇ 2019 ರ ಫೆಸಿಫಿಕ್ ಕ್ರೀಡಾಕೂಟದಲ್ಲಿ ಚಿನ್ನವನ್ನು ಪಡೆದುಕೊಂಡಿದ್ದರು.

## ವಿಶ್ವಾಸಮತದಲ್ಲಿ ಸ್ವೀಡನ್ ಸರ್ಕಾರಕ್ಕೆ ಸೋಲು



* ಸ್ವೀಡನ್ ಪ್ರಧಾನಿ ಹಾಗೂ ಸ್ವೀಡನ್ ಸೋಷಿಯಲ್ ಡೆಮಾಕ್ರಟಿಕ್ ಪಕ್ಷದ ನಾಯಕ ಸ್ಟೀಫನ್ ಲೋಫ್ವೆನ್ ಅವರು ಸಂಸತ್‌ನಲ್ಲಿ ವಿಶ್ವಾಸಮತ ಯಾಚನೆ ಮಾಡಿದರು ಆದರೆ ಇವರು ಈ ವಿಶ್ವಾಸಮತಯಾಚನೆಯಲ್ಲಿ ಸೋಲು ಅನುಭವಿಸಿದ್ದಾರೆ.

* ದೇಶದ ಇತಿಹಾಸದಲ್ಲಿ ವಿಶ್ವಾಸಮತ ಯಾಚನೆಯಲ್ಲಿ ಅವಿಶ್ವಾಸ ಗೊತ್ತುವಳಿ ಮೂಲಕ ಪದಚ್ಯುತಗೊಂಡ ಮೊದಲ ಪ್ರಧಾನಿ ಇವರಾಗಿದ್ದಾರೆ.

* ಇದೀಗ ಪ್ರಧಾನಿ ಸ್ಟೀಫನ್ ಅವರು ತಕ್ಷಣ ಚುನಾವಣೆ ಘೋಷಣೆ ಮಾಡುವದು ಅಥವಾ ಉಸ್ತುವಾರಿ ಸರ್ಕಾರದ ಮುಖ್ಯಸ್ಥರಾಗಿ ಮುಂದುವರಿಯುವದು ಈ ಎರಡು ಅವಕಾಶಗಳು ಇವರಿಗೆ ಇವೆ ಹಾಗೂ ವಿಚಾರದ ಬಗ್ಗೆ ನಿರ್ಧಾರ ಕೈಗೊಳ್ಳಬೇಕಿದೆ ಎಂದು ತಿಳಿಸಿದ್ದಾರೆ.

* ಸ್ಟೀಫನ್ ಲೋಫ್ವೆನ್ ಈ ಹಿಂದೆ 2018ರಲ್ಲಿ 2ನೇ ಬಾರಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿದ್ದರು.

## 10ನೇ ತರಗತಿಯ ಪಠ್ಯಕ್ರಮದಲ್ಲಿ ಯೋಗ ಪಠ್ಯಕ್ರಮ ಸೇರ್ಪಡೆ



* ಹರಿಯಾಣ ರಾಜ್ಯದ ಪ್ರಸಕ್ತ ಶೈಕ್ಷಣಿಕ ವರ್ಷದಿಂದ 1 ರಿಂದ 10ನೇ ತರಗತಿಯ ಪಠ್ಯಕ್ರಮದಲ್ಲಿ ಯೋಗವನ್ನು ಸೇರ್ಪಡೆ ಮಾಡಲಾಗಿದೆ' ಎಂದು ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಹೇಳಿದ್ದಾರೆ.

* ಹರಿಯಾಣ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಅವರು ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ ಕಾರ್ಯಕ್ರಮ ಒಂದರಲ್ಲಿ ಪ್ರಸ್ತುತ ಯೋಗವು ಮಕ್ಕಳ ದೈನಂದಿನ ಜೀವನದ ಭಾಗವಾಗಿರಬೇಕು ಎಂಬ ನಿಟ್ಟಿನಲ್ಲಿ ಈ ನಿರ್ಧಾರವನ್ನು ತಗೆದುಕೊಳ್ಳಲಾಗಿದೆ ಎಂದಿದ್ದಾರೆ.

* ಮಕ್ಕಳ ಪಠ್ಯಕ್ರಮದಲ್ಲಿ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ವಿಷಯಗಳಿಂದ ಕೂಡಿರುವ ರೀತಿಯಲ್ಲಿ ಹಾಗೂ ದೈಹಿಕ ಶಿಕ್ಷಣದ ಮಾದರಿಯಲ್ಲಿ ಯೋಗದ ಪಠ್ಯಕ್ರಮವನ್ನು ವಿನ್ಯಾಸಗೊಳಿಸಲಾಗುತ್ತದೆ ಎಂದು ಅಧಿಕೃತವಾಗಿ ತಿಳಿಸಿದ್ದಾರೆ.

* ಹರಿಯಾಣ ರಾಜ್ಯದ ಸುಮಾರು 1,000 ಗ್ರಾಮಗಳಲ್ಲಿ ವ್ಯಾಯಾಮ ಶಾಲೆಗಳನ್ನು ಆರಂಬಿಸಲಾಗುವದು ಎಂದು ತಿಳಿಸಿದ್ದಾರೆ, ಇಲ್ಲಿಯವರೆಗೆ ರಾಜ್ಯದ 550 ಗ್ರಾಮಗಳಲ್ಲಿ ವ್ಯಾಯಾಮ ಶಾಲೆಗಳನ್ನು ಪ್ರಾರಂಭಿಸಲಾಗಿದೆ ಎಂದು ತಿಳಿಸಿದ್ದಾರೆ.

## ಕೇವಲ ಮೂರು ಜಾತಿಯ ಮೊಸಳೆಗಳನ್ನು ಹೊಂದಿರುವ ರಾಜ್ಯ ಒಡಿಶಾ



* ಒಡಿಶಾ ರಾಜ್ಯದಲ್ಲಿ ಮೂರು ಜಾತಿಗಳು: ಮಹಾನದಿಯ ಸಟ್ಕೋಸಿಯಾದಲ್ಲಿ ಸರೀಸೃಪ ಸಿಹಿನೀರಿನ ಘರಿಯಾಲ್ಸ್. ಭಿತಾರ್ಕನಿಕಾ ರಾಷ್ಟ್ರೀಯ ಉದ್ಯಾನದಲ್ಲಿ ಮಗ್ಗರ್ಸ್. ಉಪ್ಪುನೀರಿನ ಮೊಸಳೆಗಳು.

* 1975 ರಲ್ಲಿ ಒಡಿಶಾ ರಾಜ್ಯದ ನದಿಗಳಲ್ಲಿ ಪರಿಚಯವಾದ ನಂತರ ಸಟ್ಕೋಸಿಯಾ ಶ್ರೇಣಿಯ ಸಮೀಪವಿರುವ ಬಲದಮರಾ ಪ್ರದೇಶದ ಮಹಾನದಿ ನದಿಯಲ್ಲಿ ಘರಿಯಲ್‌ಗಳ ಸುಮಾರು 28 ಮೊಟ್ಟೆಯಿಡುವ ಮರಿಗಳನ್ನು ಗುರುತಿಸಲಾಗಿದೆ.

* ಈ ಮೊಸಳೆಗಳಿಗೆ ಗೇವಿಯಲ್ ಅಥವಾ ಮೀನು ತಿನ್ನುವ ಮೊಸಳೆ ಎಂದೂ ಕರೆಯಲಾಗುತ್ತದೆ, ಹಾಗೂ ಇವುಗಳು ಘರಿಯಾಲ್ಗಳು ಗವಿಯಾಲಿಡೆ ಕುಟುಂಬದ ಮೊಸಳೆಗಳಾಗಿವೆ, ಹಾಗೂ ಇವುಗಳನ್ನು ಐಯುಸಿಎನ್ ಕೆಂಪು ಪಟ್ಟಿಯಲ್ಲಿ 2007 ರಿಂದ ವಿಮರ್ಶಾತ್ಮಕವಾಗಿ ಅಳಿವಿನಂಚಿನಲ್ಲಿರುವವರು ಮೊಸಳೆಗಳು ಎಂದು ಪಟ್ಟಿ ಮಾಡಿದ್ದಾರೆ.

* ಪ್ರಸ್ತುತ ಈ ಮೊಸಳೆಗಳು ಉತ್ತರ ಭಾರತದ ಉಪಖಂಡದ ನದಿಗಳಲ್ಲಿ ವಾಸಿಸುತ್ತಿದ್ದವೇ ಎಂದು ತಿಳಿದು ಬಂದಿದೆ.

## ಹಳದಿ ಕಲ್ಲಂಗಡಿಯನ್ನು ವಾಣಿಜ್ಯಕವಾಗಿ ಪರಿಚಯಿಸಲಾಗಿದೆ




* ಭಾರತದಲ್ಲಿ 'ಯೆಲ್ಲೊ ಗೋಲ್ಡ್ 48' ಎಂಬ ಮೊಟ್ಟಮೊದಲ ಹಳದಿ ಕಲ್ಲಂಗಡಿ ತಳಿಯನ್ನು ವಾಣಿಜ್ಯಕವಾಗಿ ಜರ್ಮನ್ ಕೃಷಿ ರಾಸಾಯನಿಕಗಳ ಪ್ರಮುಖ ಬೇಯರ್ ಸೆಮಿನಿಸ್ ಬ್ರಾಂಡ್ ಅಡಿಯಲ್ಲಿ ಬಿಡುಗಡೆ ಮಾಡಿದೆ.

* ಪ್ರಸ್ತುತ ಜರ್ಮನ್ ಉನ್ನತ 'ಜರ್ಮ್‌ಪ್ಲಾಸಂ'ನಿಂದ ಈ ಹಳದಿ ಕಲ್ಲಂಗಡಿಯನ್ನು ಬೇಯರ್‌ನ ಜಾಗತಿಕ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯತ್ನಗಳ ಅಡಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿದು ಬಂದಿದೆ, ಇದೀಗ ಈ ಹಳದಿ ಕಲ್ಲಂಗಡಿ ತಳಿಯನ್ನು 2 ವರ್ಷಗಳ ಸ್ವಳೀಯ ಪ್ರಯೋಗಗಳ ನಂತರ ಭಾರತದಲ್ಲಿ ವಾಣಿಜ್ಯಕವಾಗಿ ಪರಿಚಯಿಸಿದ್ದಾರೆ.

* ಹಳದಿ ಚಿನ್ನ 48 ಎಂಬ ಕಲ್ಲಂಗಡಿ ತಳಿಯು ರೈತರಿಗೆ ಹೆಚ್ಚಿನ ಇಳುವರಿ ಹಾಗೂ ಆದಾಯವನ್ನು ತಂದು ಕೊಡುತ್ತದೆ, ಮತ್ತು ಈ ಹಣ್ಣು ಸುಮಾರು 2.5 3 KG. ತೂಕವನ್ನು ಹೊಂದಿರುತ್ತದೆ.

## ವಾಯುಗಾಮಿ ಹೈ ಪವರ್ ಲೇಸರ್'ನ್ನು ಯಶಸ್ವಿಯಾಗಿ ಪರೀಕ್ಷಿಸಿದ ಇಸ್ರೇಲ್



* ಇಸ್ರೇಲಿ ಮಿಲಿಟರಿಯು ಡ್ರೋನ್‌ಗಳನ್ನು ಹೊಡೆದುರುಳಿಸುವ ಸಾಮರ್ಥ್ಯವನ್ನು ಹೊಂದಿರುವ ವಾಯುಗಾಮಿ (airborne) ಹೈ ಪವರ್ ಲೇಸರ್'ನ್ನು ಯಶಸ್ವಿಯಾಗಿ ಪರೀಕ್ಷೆ ಮಾಡಿದೆ.


* ಇಸ್ರೇಲ್ ಅತ್ಯಾಧುನಿಕ ವಾಯು ರಕ್ಷಣಾ ವ್ಯವಸ್ಥೆಯನ್ನು ಹೊಂದಿದೆ ರಾಷ್ಟ್ರವಾಗಿದೆ.

* ಇಸ್ರೇಲ್ ಲೇಸರ್ ರಕ್ಷಣಾ ವ್ಯವಸ್ಥೆಯ ಲೇಸರ್ ಎಲ್ಬಿಟ್ ಸಿಸ್ಟಮ್ ನೊಂದಿಗೆ ಹೈ ಪವರ್ ಲೇಸರ್'ನ್ನು ಅಭಿವೃದ್ಧಿಪಡಿಸಿದೆ ಹಾಗೂ ಇದನ್ನು ಇತ್ತೀಚಿಗೆ ಮೆಡಿಟರೇನಿಯನ್ ಸಮುದ್ರದಲ್ಲಿ ಯಶಸ್ವಿಯಾಗಿ ಪರೀಕ್ಷಿಸಲಾಗಿದೆ.

* ಈ ಲೇಸರ್ ಆಯುಧಗಳು ವಾತಾವರಣದಲ್ಲಿ ಉಷ್ಣ ಹೊರಬಿಡುತ್ತವೆ ಇದು ಇದರ ಪ್ರಮುಖ ಸಮಸ್ಯೆಯಾಗಿದೆ.

# 23-06-2021

## ಭಾರತ ಚೀನಾ ನಡುವೆ ರಾಜತಾಂತ್ರಿಕ ಸಭೆ



* ಪ್ರಸ್ತುತ ಕೇಂದ್ರಾಡಳಿತ ಪ್ರದೇಶವಾಗಿರುವ ಪೂರ್ವ ಲಡಾಖ್ ಗಡಿ ಪ್ರದೇಶದಲ್ಲಿನ ಜನಗಳು ಅಭಿವೃದ್ಧಿ ಹೊಂದಲು ಇಚ್ಛೆಪಡುತ್ತಿದ್ದಾರೆ ಇದರಿಂದಾಗಿ ಈ ಪ್ರದೇಶದಲ್ಲಿ ಸೇನಾ ಚಟುವಟಿಕೆಗಳನ್ನು ನಿಷ್ಕ್ರೀಯಗೊಳಿಸುವ ಅಗತ್ಯ ವಿದೆ, ಈ ಕಾರಣದಿಂದಾಗಿ ಚೀನಾ ಮತ್ತು ಭಾರತದ ನಡುವೆ ರಾಜತಾಂತ್ರಿಕ ಸಭೆ ನಡೆಯಲಿದೆ.

* ಈ ರಾಜತಾಂತ್ರಿಕ ಸಭೆಯಲ್ಲಿ ಭಾರತ ಚೀನಾ ಗಡಿ ವ್ಯವಹಾರಗಳ ಸಮಾಲೋಚನೆ ಹಾಗೂ ಸಮನ್ವಯ ಕಾರ್ಯ ವಿಧಾನದ ಬಗ್ಗೆ ಚರ್ಚೆ ನಡೆಸಲಾಗುತ್ತದೆ ಎಂದು ತಿಳಿದು ಬಂದಿದೆ.

* ಭಾರತ ಮತ್ತು ಚೀನಾ ದೇಶಗಳ ನಡುವೆ ಇದೆ ಜೂನ್ 24 ರಂದು ಕಾರ್ಪ್ಸ್ ಕಮಾಂಡರ್ ಮಟ್ಟದ ಸಭೆ ನಡೆಯಲಿದೆ.

* ಮಿಲಿಟರಿ ಅಧಿಕಾರಿಗಳು ತಿಳಿಸಿರುವ ವರದಿಯ ಪ್ರಕಾರ ಭಾರತ ಹಾಗೂ ಚೀನಾದ ಗಡಿ ಪ್ರದೇಶಗಳಲ್ಲಿ 50,000 ದಿಂದ 60,000 ಸೈನಿಕರನ್ನು ನಿಯೋಜಿಸಿಲಾಗಿದೆ ಎಂದು ತಿಳಿಸಿದ್ದಾರೆ.

## ಖ್ಯಾತ ಕರ್ನಾಟಕ ಸಂಗೀತಗಾರ್ತಿ ಪೊನ್ನಮ್ಮಾಳ್ ನಿಧನ



* ಖ್ಯಾತ ಕರ್ನಾಟಕ ಸಂಗೀತಗಾರ್ತಿ ಮತ್ತು ಪದ್ಮಶ್ರೀ ಪ್ರಶಸ್ತಿಯನ್ನು ಪಡೆದ ಪರಸ್ಸಲ ಬಿ. ಪೊನ್ನಮ್ಮಾಳ್ ಅವರು ತಮ್ಮ 96 ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.

* ಪೊನ್ನಮ್ಮಾಳ್ ಅವರು ಸುಮಾರು 8 ದಶಕಗಳಿಂದ ಶಾಸ್ತ್ರೀಯ ಸಂಗೀತ ಕಛೇರಿಗಳ ಮೂಲಕ ಜನರ ಮನಸೆಳೆದಿದ್ದರು.

* ಪೊನ್ನಮ್ಮಾಳ್ ಅವರು 1940 ರಲ್ಲಿ ಸ್ವಾತಿ ತಿರುನಾಳ್ ಸಂಗೀತ ಕಾಲೇಜಿಗೆ ದಾಖಲಾದ ಮೊದಲ ಮಹಿಳೆಯಾಗಿದ್ದಾರೆ, ಹಾಗೂ ಇವರು ಇದೇ ಕಾಲೇಜಿನ ಮೊದಲ ಮಹಿಳಾ ಅಧ್ಯಾಪಕಿಯಾಗಿ ಸೇವೆ ಸಲ್ಲಿಸಿದ್ದಾರೆ, ಹಾಗೂ ತ್ರಿಪುನಿಥುರಾದ ಆರ್‌ಎಲ್‌ವಿ ಕಾಲೇಜ್ ಆಫ್ ಮ್ಯೂಸಿಕ್ ಅಂಡ್ ಫೈನ್ಸ್ ಆರ್ಟ್ಸ್‌ಗೆ ಮೊದಲ ಮಹಿಳಾ ಪ್ರಾಂಶುಪಾಲೆಯಾಗಿ ಸೇವೆ ಸಲ್ಲಿಸಿದ್ದಾರೆ.

* ಪರಸ್ಸಲ ಬಿ. ಪೊನ್ನಮ್ಮಾಳ್ ಅವರು 2017 ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

## ಅತೀ ಹೆಚ್ಚು ಲಸಿಕೆ ನೀಡಿದ ರಾಜ್ಯಗಳು




* ಪ್ರಸ್ತುತ ಕೋವಿಡ್ 19 ಲಸಿಕೆ ಅಭಿಯಾನ ಪ್ರಾರಂಭವಾದ ನಂತರ ಇದೇ ಮೊದಲ ಬಾರಿಗೆ ಗರಿಷ್ಠ ಸಂಖ್ಯೆಯಲ್ಲಿ ಲಸಿಕೆ ನೀಡಿದ್ದಾರೆ, ಹಾಗೂ ಕೇಂದ್ರ ಸರ್ಕಾರವು 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಉಚಿತವಾಗಿ ಲಸಿಕೆ ನೀಡುವದಾಗಿ ತಿಳಿಸಿದೆ.

* ಪ್ರಸ್ತುತ ಲಸಿಕಾ ಮಾರ್ಗಸೂಚಿ ಅಸ್ತಿತ್ವಕ್ಕೆ ಬಂದ ನಂತರ ಮೊದಲ ದಿನವೇ ಸರಿ ಸುಮಾರು 81 ಲಕ್ಷ ಕೋವಿಡ್ 19 ಡೋಸ್ ಲಸಿಕೆಯನ್ನು ನೀಡಿದ್ದೇವೆ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ.

* ಭಾರತ ದೇಶದಾದ್ಯಂತ ಇಲ್ಲಿಯವರೆಗೆ 28.7 ಕೋಟಿ ಕೋವಿಡ್ 19 ಡೋಸ್ ಲಸಿಕೆಯನ್ನು ನೀಡಿದೆ, ಶೇ.17 ರಷ್ಟು ಜನರಿಗೆ ಕನಿಷ್ಠ ಒಂದು ಡೋಸ್ ಲಸಿಕೆ ನೀಡಿದೆ ಎಂದು ತಿಳಿಸಿದ್ದಾರೆ.

* ಮಧ್ಯ ಪ್ರದೇಶ ರಾಜ್ಯವು ಸುಮಾರು15.4 ಲಕ್ಷ ಡೋಸ್ ಲಸಿಕೆ ನೀಡಿದೆ, ಅದರಲ್ಲೂ ಅತೀ ಹೆಚ್ಚು ಲಸಿಕೆ ನೀಡಿದ ರಾಜ್ಯಗಳ ಪೈಕಿ ಮೊದಲ ಸಾಲಿನಲ್ಲಿದೆ.

* ಕರ್ನಾಟಕ ರಾಜ್ಯದಲ್ಲಿ 10.67 ಲಕ್ಷ ಡೋಸ್ ಲಸಿಕೆ ನೀಡಿ 2 ನೇ ಸ್ಥಾನದಲ್ಲಿದೆ, ಅದರಲ್ಲಿ ಬೆಂಗಳೂರು ನಗರದಲ್ಲಿಯೇ 2.14 ಲಕ್ಷ ಡೋಸ್ ಲಸಿಕೆಯನ್ನು ಹಾಕಲಾಗಿದೆ ಎಂದು ತಿಳಿಸಿದ್ದಾರೆ.

* ಉತ್ತರ ಪ್ರದೇಶ ರಾಜ್ಯವು ಸುಮಾರು 6.74 ಲಕ್ಷ ಡೋಸ್ ಲಸಿಕೆ ನೀಡಿ 3 ನೇ ಸ್ಥಾನದಲ್ಲಿದೆ.

## ಲಸಿಕೆ ಹಾಕಿಸಿಕೊಳ್ಳದಿದ್ದರೆ ಬಂಧನ



* ಫಿಲಿಪ್ಪೀನ್ಸ್ ದೇಶದ ಅಧ್ಯಕ್ಷ ರೊಡ್ರಿಗೋ ಡುಟರ್ಟೆ ಅವರು ಕೋವಿಡ್ 19 ಲಸಿಕೆಯನ್ನು ಹಾಕಿಸಿಕೊಳ್ಳದ ಜನರನ್ನು ಬಂಧನಕ್ಕೆ ಒಳಪಡಿಸಲಾಗುವದು ಎಂದು ಎಚ್ಚರಿಕೆ ನೀಡಿದ್ದಾರೆ, ಅಲ್ಲದೆ ಈ ಸಾಂಕ್ರಾಮಿಕ ರೋಗದ 2 ನೇ ಅಲೆ ಫಿಲಿಪ್ಪೀನ್ಸ್'ಗೆ ಹಾನಿಕಾರಕವಾಗಲಿದೆ ಎಂದು ತಿಳಿಸಿದ್ದಾರೆ.

* ಈ ಎಚ್ಚರಿಕೆ ಸುದ್ದಿಯನ್ನು ಫಿಲಿಪ್ಪೀನ್ಸ್ ದೇಶದ ಅಧ್ಯಕ್ಷ ರೊಡ್ರಿಗೋ ಡುಟರ್ಟೆ ಅವರು ದೂರದರ್ಶನದ ಮೂಲಕ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡುವಾಗ ಹೇಳಿದ್ದಾರೆ.

## ಪಾಕಿಸ್ತಾನದಲ್ಲಿ 2020 ರಲ್ಲಿ ಶೇ.5 ಕ್ಕಿಂತ ಬಡತನ ಹೆಚ್ಚಳ



* ಪ್ರಸ್ತುತ ವಿಶ್ವ ಬ್ಯಾಂಕ್ ವರದಿ ನೀಡಿರುವ ಪ್ರಕಾರ ಪಾಕಿಸ್ತಾನದಲ್ಲಿ 2020 ರಲ್ಲಿ ಬಡತನ ರೇಖೆಯು 4.4 ರಿಂದ 5.4 ಕ್ಕೆ ಹೆಚ್ಚಾಗಿದೆ, ದೇಶದಲ್ಲಿ 2 ಮಿಲಿಯನ್ ಜನರು ಬಡತನ ರೇಖೆಗಿಂತ ಕೆಳಮಟ್ಟದಲ್ಲಿದ್ದಾರೆ ಎಂದು ತಿಳಿಸಿದೆ.

* 2020 21 ರಲ್ಲಿ ಪಾಕಿಸ್ತಾನದ ಬಡತನವು 39.3 ರಷ್ಟಿದ್ದು, ನಂತರ 2021 22 ರಲ್ಲಿ ಇದು ಶೇ.39.2 ರಷ್ಟು ಇರಲಿದೆ, ಮತ್ತೇ ನಂತರದ ದಿನಗಳಲ್ಲಿ ಅಂದರೆ 2022 23 ರಲ್ಲಿ 37.9 ಕ್ಕೆ ಇಳಿಕೆ ಕಾಣಬಹುದು ಎಂದು ಅಂದಾಜಿಸಿ ದಿ ನ್ಯೂಸ್ ಇಂಟರ್ ನ್ಯಾಷನಲ್ ಮಾಹಿತಿಯನ್ನು ನೀಡಿದೆ.

* ವಿಶ್ವಬ್ಯಾಂಕ್ ಪಾಕಿಸ್ತಾನದ ಕೆಳ ಹಾಗೂ ಮಧ್ಯಮ ಆದಾಯದ ಬಡತನ ರೇಖೆಯನ್ನು ಪರಿಗಣಿಸಿ ವರದಿಯನ್ನು ಮಾಡಿದೆ, ಹಾಗೂ ಇಲ್ಲಿನ ಆರ್ಥಿಕ ವರ್ಷದ ಜಿಡಿಪಿ ಶೇ.08 ಕ್ಕೆ ಕುಸಿಯಲಿದೆ ಎಂದು ವರದಿ ಮಾಡಿದೆ.

## ಅಬುಧಾಬಿ ಪ್ರವಾಸಿಗರಿಗೆ ಉಚಿತ ಲಸಿಕೆ ನೀಡಲು ನಿರ್ಧರಿಸಿದೆ



* ಯುನೈಟೆಡ್ ಅರಬ್ ಎಮಿರೆಟ್ಸ್‌ನ (UAE) ರಾಜಧಾನಿಯಾಗಿರುವ ಅಬುಧಾಬಿಯು ಪ್ರವಾಸಿಗರಿಗೆ ಉಚಿತ ಲಸಿಕೆಯನ್ನು ನೀಡಲಾಗುತ್ತದೆ ಎಂದು ತಿಳಿಸಿದೆ.

* ಈ ಮೊದಲು ಯುನೈಟೆಡ್ ಅರಬ್ ಎಮಿರೆಟ್ಸ್‌ನ ನಾಗರಿಕರು ಹಾಗೂ ರೆಸಿಡೆನ್ಸಿ ವೀಸಾ ಹೊಂದಿದವರಿಗೆ ಮಾತ್ರ ಉಚಿತವಾಗಿ ಲಸಿಕೆಯನ್ನು ನೀಡುತ್ತಿದ್ದರು.

* ಪ್ರಸ್ತುತ ಅಬುಧಾಬಿ ಆರೋಗ್ಯ ಸೇವೆಗಳ ಕಂಪನಿಯು ಅಬುಧಾಬಿ ಅನುಮೋದನೆ ನೀಡಿರುವ ವೀಸಾ ಹಾಗೂ ಪಾಸ್‌ಪೋರ್ಟ್‌ಗಳನ್ನು ಹೊಂದಿದವರಿಗೆ ಮಾತ್ರ ಉಚಿತ ಲಸಿಕೆ ಲಭ್ಯ ಎಂದಿದ್ದರು.

## ಭಾರತ್ ಬಯೋಟೆಕ್'ನಿಂದ ಕೋವ್ಯಾಕ್ಸಿನ್ ಲಸಿಕೆ ಪ್ರಭಾವದ ವರದಿ ಪ್ರಕಟ




* ಇದೀಗ ಭಾರತ ದೇಶದಲ್ಲಿ ಉತ್ಪಾದನೆಯಾಗುತ್ತಿರುವ 'ಕೋವ್ಯಾಕ್ಸಿನ್' ಲಸಿಕೆಯ ದಕ್ಷತೆ ಬಗ್ಗೆ ಭಾರತ್ ಬಯೋಟೆಕ್ ಸಂಸ್ಥೆಯ ವರದಿ ಮಾಡಿದೆ.

* ಈ ಹಿಂದೆ ವಿಶ್ವ ಆರೋಗ್ಯ ಸಂಸ್ಥೆಯು 'ಕೋವ್ಯಾಕ್ಸಿನ್' ಲಸಿಕೆಯ ರಫ್ತಿಗೆ ಅನುಮೋದನೆ ಅರ್ಜಿಯನ್ನು ತಿರಸ್ಕರಿಸಿತ್ತು ಮತ್ತು ಹೆಚ್ಚಿನ ದತ್ತಾಂಶಗಳನ್ನು ನೀಡಬೇಕು ಎಂದು ಕೇಳಿತ್ತು.

* ಇದೀಗ ಭಾರತ್ ಬಯೋಟೆಕ್ ಸಂಸ್ಥೆಯು 'ಕೋವ್ಯಾಕ್ಸಿನ್' ಲಸಿಕೆಯ 3 ನೇ ಹಂತದ ಕ್ಲಿನಿಕಲ್ ಟ್ರಯಲ್'ನ ವರದಿಯನ್ನು ನೀಡಿದೆ, ಅದುವೇ ಈ ಲಸಿಕೆಯು ಕೋವಿಡ್ 19 ಸಾಂಕ್ರಾಮಿಕ ಸೋಂಕಿನ ವಿರುದ್ಧ ಹೋರಾಡಲು ಕೋವ್ಯಾಕ್ಸಿನ್ ಲಸಿಕೆ 77.8% ರಷ್ಟು ಪರಿಣಾಮಕಾರಿ ಎಂದು ವರದಿಯನ್ನು ಸಲ್ಲಿಸಿದೆ, ಹಾಗೂ ಈ ಲಸಿಕೆಯ ಮಾಹಿತಿಯನ್ನು ಭಾರತೀಯ ಔಷಧ ನಿಯಂತ್ರಕ ಸಂಸ್ಥೆ ಡಿಸಿಜಿಐಗೆ ನೀಡಿದೆ.

* ಇದೀಗ ಭಾರತದಲ್ಲಿ ಸೆರಂ ಇನ್‌ಸ್ಟಿಟ್ಯೂಟ್'ನ ಕೋವಿಶೀಲ್ಡ್ ಮತ್ತು ಭಾರತ್ ಬಯೋಟೆಕ್‌ನ ಕೋವ್ಯಾಕ್ಸಿನ್ ಲಸಿಕೆಗಳನ್ನು ಜನರಿಗೆ ನೀಡುತ್ತಿದ್ದಾರೆ, ಹಾಗೂ ರಷ್ಯಾ ದೇಶದ ಸ್ಪುಟ್ನಿಕ್ ವಿ ಲಸಿಕೆ ನೀಡಲು ತಯಾರಿ ನಡೆಸಲಾಗುತ್ತಿದೆ.

## ಕಳೆದ ಶತಮಾನದ ವಿಶ್ವದ ಅಗ್ರ ಲೋಕೋಪಕಾರಿ ಜಮ್ಸೆಟ್ಜಿ ಟಾಟಾ



* ಶತಮಾನದ ಎಡೆಲ್‌ಗೈವ್ ಹುರುನ್ ಲೋಕೋಪಕಾರಿಗಳ ಪಟ್ಟಿಯಲ್ಲಿ ಟಾಟಾ ಗ್ರೂಪ್‌ನ ಸಂಸ್ಥಾಪಕರಾಗಿದ್ದ ಜಮ್‌ಸೆಟ್ಜಿ ನುಸರ್ವಾಂಜಿ ಟಾಟಾ ಅಗ್ರಸ್ಥಾನದಲ್ಲಿದ್ದಾರೆ

* ಟಾಟಾ ಗ್ರೂಪ್ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ 102.4 ಬಿಲಿಯನ್ ದೇಣಿಗೆ ನೀಡಲಾಗಿದೆ, ಟಾಟಾದ ಒಟ್ಟು ಲೋಕೋಪಕಾರಿ ಮೌಲ್ಯವು 100 ಬಿಲಿಯನ್ ಎಂದು ಅಂದಾಜಿಸಿದ್ದಾರೆ.

* ಅಧ್ಯಕ್ಷ ರತನ್ ಟಾಟಾ ಅವರು ಟಾಟಾ ಗ್ರೂಪ್ ಹಾಗೂ ಅದರ ಲೋಕೋಪಕಾರಿ ಚಟುವಟಿಕೆಗಳ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು.

* ಜಮ್ಸೆಟ್ಜಿ ಟಾಟಾ ಅವರು ಜಮ್ಶೆಡ್ಪುರದಲ್ಲಿ ಟಾಟಾ ಐರನ್ ಮತ್ತು ಸ್ಟೀಲ್ ವರ್ಕ್ಸ್ ಕಂಪನಿಯ ಸ್ಥಾಪಕರಾಗಿದ್ದರು, ಇದೀಗ ಈ ಕಂಪನಿಯನ್ನು ಟಾಟಾ ಸ್ಟೀಲ್ ಎಂದು ಕರೆಯುತ್ತಾರೆ, ಜಮ್ಸೆಟ್ಜಿ ಟಾಟಾ ಅವರು 1904 ರಲ್ಲಿ ನಿಧನ ಹೊಂದಿದರು.

* ಪ್ರಸ್ತುತ ಈ ಟಾಟಾ ಸ್ಟೀಲ್ ಕಂಪನಿಯು 26 ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದೆ, ಸರಿ ಸುಮಾರು 80,500 ಜನರಿಗೆ ಉದ್ಯೋಗ ನೀಡಿದೆ.

* ಭಾರತೀಯ ಉದ್ಯಮದ ಪಿತಾಮಹ ಎಂದು ಜಮ್ಸೆಟ್ಜಿ ಟಾಟಾ ಅವರನ್ನು ಕರೆಯುತ್ತಾರೆ.

* ಈ ಟಾಟಾ ಕಂಪನಿಯು ಭಾರತೀಯ ಸಾರ್ವಜನಿಕ ಬಹುರಾಷ್ಟ್ರೀಯ ಸಂಘಟನೆಯಾಗಿದೆ ಇದರಲ್ಲಿ ವಾಹನಗಳು, ವಿಮಾನಗಳು ಹಾಗೂ ಇನ್ನಿತರ ಉತ್ಪನ್ನಗಳನ್ನು ತಯಾರಿಸಲಾಗುತ್ತದೆ, ಈ ಕಂಪನಿಯು 1868 ರಲ್ಲಿ ಸ್ಥಾಪನೆಯಾಗಿದೆ ಪ್ರಧಾನ ಕಚೇರಿ ಮುಂಬೈ ನಗರದಲ್ಲಿದೆ.

# 24-06-2021

## ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕಾರವಾರದ ನೌಕಾನೆಲೆಗೆ ಭೇಟಿ



* ಕೇಂದ್ರ ರಕ್ಷಣಾ ಸಚಿವರಾಗಿರುವ ರಾಜನಾಥ್ ಸಿಂಗ್ ಅವರು ಕಾರವಾರದ ನೌಕಾನೆಲೆಗೆ ಭೇಟಿ, ಈ ನೌಕಾನೆಲೆಯೂ ಏಷ್ಯಾದಲ್ಲಿಯೇ ಅತಿದೊಡ್ಡ ನೌಕಾನೆಲೆಯಾಗಿದೆ.

* ಪ್ರಸ್ತುತ ಕಾರವಾರದ INS ಕದಂಬ ನೌಕಾನೆಲೆಯ 2 ನೇ ಹಂತದ ವಿಸ್ತರಣೆ ಕಾಮಗಾರಿ ಕಾರ್ಯವು ನಡೆಯುತ್ತಿದೆ, ಇದರ ವೀಕ್ಷಣೆಗೆ ರಾಜನಾಥ್ ಸಿಂಗ್ ಅವರ ಆಗಮನ, ನಂತರ ನೌಕಾನೆಲೆಯಲ್ಲಿ ನಿರ್ಮಿಸಿರುವ ನೂತನ ಜಟ್ಟಿಯೊಂದನ್ನು ಉದ್ಘಾಟಣೆ ಮಾಡಲಿದ್ದಾರೆ, ಹಾಗೂ ಕೊಚ್ಚಿಯಲ್ಲಿ ಇಂಡಿಜಿನಸ್ ವಿಮಾನವಾಹಕ ನೌಕೆ ನಿರ್ಮಾಣದ ಪ್ರಗತಿಯನ್ನೂ ವೀಕ್ಷಣೆ ಮಾಡಲಿದ್ದಾರೆ.

* ಈ ಹಿಂದೆ ರಾಜನಾಥ್ ಸಿಂಗ್ ಅವರು ಕಾರವಾರ, ಕೊಚ್ಚಿ ನೌಕಾನೆಲೆಗಳ ಭೇಟಿಯ ಮಾಹಿತಿಯನ್ನು ಟ್ವಿಟರ್ ಹಂಚಿಕೊಂಡಿದ್ದರು.

## ಫಿಲಿಪ್ಪೈನ್ ಮಾಜಿ ಅಧ್ಯಕ್ಷ ಬೆನಿಗ್ನೋ ಅಕ್ವಿನೊ ವಿಧಿವಶ



* ಫಿಲಿಪ್ಪೈನ್'ನ ಮಾಜಿ ಅಧ್ಯಕ್ಷ ಬೆನಿಗ್ನೋ ಅಕ್ವಿನೊ ಅವರು 61 ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.

* ಮಾಜಿ ಅಧ್ಯಕ್ಷ ಬೆನಿಗ್ನೋ ಅಕ್ವಿನೊ ಅವರು ನೊಯ್ನಾಯ್ ಎಂದೇ ಪ್ರಸಿದ್ಧಿಯಾಗಿದ್ದರು.

* 2010 ರಿಂದ 2016 ರವರೆಗೆ ಬೆನಿಗ್ನೋ ಅಕ್ವಿನೊ ಅವರು ಫಿಲಿಪೆನ್ಸ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

## ಆಯಂಟಿವೈರಸ್ ಸಾಫ್ಟ್‌ವೇರ್ ಸಂಸ್ಥಾಪಕ ಜಾನ್ ಮೆಕಾಫೆ ಜೈಲಿನಲ್ಲಿ ಸಾವು



* ಪ್ರಸ್ತುತ ಆಯಂಟಿವೈರಸ್ ಸಾಫ್ಟ್‌ವೇರ್ ಸಂಸ್ಥಾಪಕ ಜಾನ್ ಮೆಕಾಫೆ ಅವರನ್ನು ತೆರಿಗೆ ವಂಚನೆ ಆರೋಪದ ಮೇಲೆ ಜೈಲಿನಲ್ಲಿ ಇಡಲಾಗಿತ್ತು, ಇದೀಗ ಇವರು ಜೈಲಿನಲ್ಲಿ ಶವವಾಗಿ ಪತ್ತೆಯಾಗಿದ್ದಾರೆ ಎಂದು ಕಾರಾಗೃಹದ ಅಧಿಕಾರಿ ಮಾಹಿತಿಯನ್ನು ನೀಡಿದ್ದಾರೆ.

* ಸ್ಪ್ಯಾನಿಷ್ ನ್ಯಾಯಾಲಯವು ಜಾನ್ ಮೆಕಾಫೆ ಅವರನ್ನು ತೆರಿಗೆ ಸಂಬಂಧ ಪಟ್ಟ ಕ್ರಿಮಿನಲ್ ಆರೋಪ ಎದುರಿಸಲು ಅಮೆರಿಕಕ್ಕೆ ಹಸ್ತಾಂತರಿಸುವದಾಗಿ ತೀರ್ಪು ನೀಡಿತ್ತು.

* ಬಾರ್ಸಿಲೋನಾ ಬಳಿಯ ಬ್ರಿಯಾನ್ಸ್ 2 ರ ಕಾರಾಗೃಹದ ಕೊಠಡಿಯಲ್ಲಿ ಮೆಕಾಫೆ ಶವವಾಗಿ ಪತ್ತೆಯಾಗಿದ್ದಾರೆ, ಈಶಾನ್ಯ ಕ್ಯಾಟಲೊನಿಯಾ ಪ್ರದೇಶದ ಜೈಲು ವ್ಯವಸ್ಥೆಯ ವಕ್ತಾರರು ಇದು ಆತ್ಮಹತ್ಯೆ ಎಂದು ತಿಳಿಸಿದ್ದಾರೆ.

## ಹೊಸ ಬಗೆಯ ಚಿಮ್ಮುವ ಕಪ್ಪೆ ಕೇರಳದ ತಟ್ಟೆಕಾಡ್ ನಲ್ಲಿ ಪತ್ತೆ



* ಕೇರಳದ ತಟ್ಟೆಕಾಡ್ ಪಕ್ಷಿಧಾಮದ ಸಮೀಪದಲ್ಲಿ ಹೊಸ ಜಾತಿಯ ಚಿಮ್ಮುವ ಕಪ್ಪೆಯನ್ನು ಸಂಶೋಧಕರು ಪತ್ತೆ ಹಚ್ಚಿದ್ದಾರೆ.

* ಈ ಚಿಮ್ಮುವ ಕಪ್ಪೆಯನ್ನು ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜು ಮತ್ತು ಭುವನೇಶ್ವರದ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಷನ್ ರೀಸರ್ಚ್ ತಂಡಗಳು ಜೊತೆಯಾಗಿ ಈ ಕಪ್ಪೆಯನ್ನು ಪತ್ತೆ ಮಾಡಿದ್ದಾರೆ, ಈ ಕಪ್ಪೆಗೆ ಈಯುಫೆಲಿಕ್ಸೀಸ್ ಕೇರಳ ಎಂದು ನಾಮಕರಣ ಮಾಡಿದ್ದಾರೆ ಎಂದು ನ್ಯೂಜಿಲೆಂಡ್‌ನ ಅಂತರರಾಷ್ಟ್ರೀಯ ಜರ್ನಲ್ ಝೂಟಾಕ್ಸ್ ವರದಿ ಮಾಡಿದೆ.

* ಒಟ್ಟಾರೆ ಭಾರತದಲ್ಲಿ ಕಳೆದ ಎರಡು ಶತಮಾನಗಳಿಂದ ಹಲವು ಬಗೆಯ ಚಿಮ್ಮುವ ಕಪ್ಪೆಗಳನ್ನು ಪತ್ತೆ ಹಚ್ಚಲಾಗಿದೆ.

* ಕೇರಳ ರಾಜ್ಯದಲ್ಲಿ ಸರಿ ಸುಮಾರು 180 ಜಾತಿಯ ಕಪ್ಪೆಗಳಿವೆ ಎಂದು ತಿಳಿಸಲಾಗಿದೆ.

## ಒಲಿಂಪಿಕ್ಸ್'ನಲ್ಲಿ ಚಿನ್ನ ಗೆದ್ದರೆ 6 ಕೋಟಿ ರೂ. ಘೋಷಣೆ



* ಪ್ರಸ್ತುತ ಟೋಕಿಯೊ ಒಲಿಂಪಿಕ್ಸ್'ನಲ್ಲಿ ಚಿನ್ನದ ಪದಕ ಗೆಲ್ಲುವ ಅಥ್ಲೀಟ್‌ಗಳಿಗೆ 6 ಕೋಟಿ ರೂ. ಬೆಳ್ಳಿ ಪದಕ ಜಯಿಸಿದವರಿಗೆ 4 ಕೋಟಿ ರೂ. ಹಾಗೂ ಕಂಚು ಜಯಿಸಿದವರಿಗೆ 2.50 ಕೋಟಿ ರೂ. ಬಹುಮಾನ ನೀಡುವುದಾಗಿ ಹರಿಯಾಣ ಸರ್ಕಾರವು ಘೋಷಣೆ ಮಾಡಿದೆ.

* ಈ ಬಾರಿಯ ಟೋಕಿಯೊದಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್‌ನಲ್ಲಿ ಹರಿಯಾಣ ರಾಜ್ಯದ 30 ಅಥ್ಲೀಟ್‌ಗಳು ಪಾಲ್ಗೊಳ್ಳುತ್ತಿದ್ದಾರೆ, ಈ ಎಲ್ಲ ಅಥ್ಲೀಟ್‌ಗಳ ಸಿದ್ಧತೆಗಾಗಿ ತಲಾ 5 ಲಕ್ಷ ರೂ. ನೆರವು ನೀಡಲಾಗಿದೆ ಎಂದು ತಿಳಿಸಿದ್ದಾರೆ.

## ವಿಶ್ವ ಟೆಸ್ಟ್ ಕ್ರಿಕೆಟ್ ಚಾಂಪಿಯನ್‌ಷಿಪ್'ನಲ್ಲಿ ನ್ಯೂಜಿಲೆಂಡ್ ತಂಡ ಚಾಂಪಿಯನ್




* ಪ್ರಸ್ತುತ 2021 ರ ವಿಶ್ವ ಟೆಸ್ಟ್ ಕ್ರಿಕೆಟ್ ಚಾಂಪಿಯನ್‌ಷಿಪ್ 'ನಲ್ಲಿ ಕೇನ್ ವಿಲಿಯಮ್ಸನ್ ನಾಯಕರಾಗಿದ್ದ ನ್ಯೂಜಿಲೆಂಡ್ ತಂಡವು ಪ್ರಥಮ ವಿಶ್ವ ಟೆಸ್ಟ್ ಕ್ರಿಕೆಟ್ ಚಾಂಪಿಯನ್ ಪಟ್ಟವನ್ನು ಪಡೆದಿದೆ.

* ಈ ವಿಶ್ವ ಟೆಸ್ಟ್ ಕ್ರಿಕೆಟ್ ಚಾಂಪಿಯನ್‌ಷಿಪ್'ನಲ್ಲಿ ನ್ಯೂಜಿಲೆಂಡ್ ತಂಡವು 8 ವಿಕೆಟ್'ಗಳಿಂದ ಭಾರತ ತಂಡವನ್ನು ಸೋಲಿಸಿದೆ.

* ಸುಮಾರು ಎರಡು ವರ್ಷ ನಡೆದ ವಿಶ್ವ ಟೆಸ್ಟ್ ಕ್ರಿಕೆಟ್ ಚಾಂಪಿಯನ್'ನ ಪಾಯಿಂಟ್ ಪಟ್ಟಿಯಲ್ಲಿ ಭಾರತ ತಂಡವು ಪ್ರಥಮ ಹಾಗೂ ನ್ಯೂಜಿಲೆಂಡ್ ತಂಡವು 2 ನೇ ಸ್ಥಾನ ಪಡೆದು ಈ ಫೈನಲ್ ಪ್ರಶಸ್ತಿ ಸುತ್ತಿಗೆ ಆಯ್ಕೆಯಾಗಿದ್ದವು.

## ವಾರೆನ್ ಬಫೆಟ್ ರಾಜೀನಾಮೆ



* ಬಿಲ್ ಮತ್ತು ಮೆಲಿಂಡಾ ಗೇಟ್ಸ್ ಫೌಂಡೇಶನ್'ನ ಟ್ರಸ್ಟಿ ಹುದ್ದೆಗೆ ಖ್ಯಾತ ಉದ್ಯಮಿಯಾಗಿರುವ ವಾರೆನ್ ಬಫೆಟ್ ಅವರು ರಾಜೀನಾಮೆ ಕೊಟ್ಟಿದ್ದಾರೆ.

* ವಾರೆನ್ ಬಫೆಟ್ ಅವರು ತಮ್ಮ ಸ್ವಂತ ದುಡ್ಡಿನಲ್ಲಿ ಸುಮಾರು 27 ಶತಕೋಟಿಯಷ್ಟು ಹಣವನ್ನು ಕಳೆದ 15 ವರ್ಷಗಳಲ್ಲಿ ಚಾರಿಟಿಗೆ ದೇಣಿಗೆ ರೂಪದಲ್ಲಿ ನೀಡಿದ್ದಾರೆ, ಹಾಗೂ ವಾರೆನ್ ಬಫೆಟ್ ಅವರು ಗೇಟ್ಸ್ ಫೌಂಡೇಶನ್'ನ 3 ಪ್ರಮುಖ ಸದಸ್ಯರಲ್ಲಿ ಒಬ್ಬರು.

## ಭಾರತ ಮತ್ತು ಅಮೆರಿಕ ಹಿಂದೂ ಮಹಾಸಾಗರದಲ್ಲಿ ಜಂಟಿ ಸಮರಾಭ್ಯಾಸ ಆರಂಭ



* ಪ್ರಸ್ತುತ ಹಿಂದೂ ಮಹಾಸಾಗರದಲ್ಲಿ ಭಾರತ ಹಾಗೂ ಅಮೆರಿಕದ ನೌಕಾಪಡೆಗಳು 2 ದಿನಗಳ ಜಂಟಿ ಸಮರಾಭ್ಯಾಸವನ್ನು ಪ್ರಾರಂಭಿಸಿವೆ.

* ಚೀನಾ ದೇಶವು ಇಂಡೊ ಪೆಸಿಫಿಕ್ ಪ್ರದೇಶದಲ್ಲಿ ಪ್ರಾಬಲ್ಯ ವೃದ್ಧಿಸಿಕೊಳ್ಳಲು ಪ್ರಯತ್ನ ಪಡುತ್ತಿದ್ದೆ, ಇದರಿಂದಾಗಿಯೇ ಭಾರತ ಮತ್ತು ಅಮೆರಿಕ ರಾಷ್ಟ್ರಗಳು ಈ ಸಮರಾಭ್ಯಾಸಕ್ಕೆ ಚಾಲನೆ ನೀಡಿವೆ.

* ಅಮೆರಿಕ ರಾಷ್ಟ್ರದ ಯುದ್ಧವಿಮಾನಗಳನ್ನು ಒಳಗೊಂಡ ಹಡಗು "ಯುಎಸ್ಎಸ್ ರೊನಾಲ್ಡ್ ರೇಗನ್", ಮತ್ತು 'ಎಫ್ 18' ಯುದ್ಧವಿಮಾನಗಳು, ಇದರ ಜೊತೆಗೆ ಹವಾಮಾನ ಪರಿಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುವ 'ಇ 2ಸಿ' ಯುದ್ಧವಿಮಾನಗಳನ್ನು ಈ ಜಂಟಿ ಸಮರಾಭ್ಯಾಸದಲ್ಲಿ ನಿಯೋಜನೆ ಮಾಡಲಾಗಿದೆ ಎಂದು ಅಮೇರಿಕಾ ತಿಳಿಸಿದೆ.

* ಭಾರತವು ಜಾಗ್ವಾರ್ ಮತ್ತು ಸುಖೋಯ್ 30 ಎಂಕೆಐ ಯುದ್ಧವಿಮಾನಗಳು, ಹಾಗೂ ಐಎಲ್ 78 ವಿಮಾನಗಳು, ಮತ್ತು ಇದರ ಜೊತೆಗೆ INS ಕೊಚ್ಚಿ ಮತ್ತು INS ತೇಗ್ ಯುದ್ಧನೌಕೆಗಳನ್ನು ನಿಯೋಜನೆ ಮಾಡಲಾಗಿದೆ ಎಂದು ಭಾರತ ತಿಳಿಸಿದೆ.

* ಈ ಜಂಟಿ ಸಮರಾಭ್ಯಾಸವು ಕನ್ಯಾಕುಮಾರಿಯಿಂದ ಅಂದರೆ ಸುಮಾರು 300 KM ದೂರದ ಚೀನಾದ ಪೋರ್ಟ್ ಸಿಟಿ ಪ್ರದೇಶದವರೆಗೆ ನಡೆಯಲಿದೆ.

* ಈ ಜಂಟಿ ಸಮಾರಾಭ್ಯಾಸದ ಉದ್ದೇಶ ಏನೇಂದರೆ ಉಭಯ ರಾಷ್ಟ್ರಗಳ ದ್ವಿಪಕ್ಷೀಯ ಸಂಬಂಧವನ್ನು ಬಲಪಡಿಸುವದಾಗಿದೆ.

## ರಾನಿಲ್ ವಿಕ್ರಮಸಿಂಘೆ 9 ನೇ ಬಾರಿ ಸಂಸದರಾಗಿ ಪ್ರಮಾಣ ವಚನ ಸ್ವೀಕಾರ



* ದ್ವೀಪ ರಾಷ್ಟ್ರವಾಗಿರುವ ಶ್ರೀಲಂಕಾದ ಮಾಜಿ ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರು 9 ನೇ ಬಾರಿ ಸಂಸದರಾಗಿ ಪ್ರಮಾಣ ವಚನ ಸ್ವೀಕಾರ ಹಾಗೂ ದಾಖಲೆ ಸೃಷ್ಟಿ.

* ರಾನಿಲ್ ವಿಕ್ರಮಸಿಂಘೆ ಅವರು ಸಂಸತ್'ನಲ್ಲಿ 1977 ರಿಂದ ನಡೆದ ಎಲ್ಲ ಚುನಾವಣೆಗಳಲ್ಲಿ ಗೆಲುವು ಸಾಧಿಸಿದ ಏಕೈಕ ರಾಜಕಾರಣಿ ಇವರಾಗಿದ್ದಾರೆ.

* 1994 ರಿಂದ ರಾನಿಲ್ ವಿಕ್ರಮಸಿಂಘೆ ಅವರು ಯುನೈಟೆಡ್ ನ್ಯಾಷನಲ್ ಪಾರ್ಟಿಯ ಸಾರಥಿಯಾಗಿದ್ದಾರೆ.

## ಕಿರಣ್ ಅಹುಜಾ OPM ಮುಖ್ಯಸ್ಥೆಯಾಗಿ ಆಯ್ಕೆ



* ಪ್ರಸ್ತುತ ಭಾರತೀಯ ಅಮೆರಿಕನ್ ಕಿರಣ್ ಅಹುಜಾ ಅವರು ಅಮೆರಿಕದ 20 ಲಕ್ಷ ಸರ್ಕಾರಿ ನೌಕರರನ್ನು ನಿರ್ವಹಿಸುವ ಸರ್ಕಾರದ ಸಿಬ್ಬಂದಿ ನಿರ್ವಹಣಾ ಕಚೇರಿ (ಆಫೀಸ್ ಆಫ್ ಪರ್ಸನಲ್ ಮ್ಯಾನೇಜ್ ಮೆಂಟ್ OPM) ಮುಖ್ಯಸ್ಥರಾಗಿ ಆಯ್ಕೆಯಾಗಿದ್ದಾರೆ.

* ಅಮೆರಿಕನ್ ಸೆನೆಟ್‌ನಲ್ಲಿ ನಡೆದ ಚುನಾವಣೆಯ ಟೈ ಬ್ರೇಕಿಂಗ್ (50 50 ಮತಗಳು) ಹಂತ ತಲುಪಿತು ಆ ಸಮಯದಲ್ಲಿ ಅಮೇರಿಕದ ಉಪಾಧ್ಯಕ್ಷೆಯಾಗಿರುವ ಕಮಲಾ ಹ್ಯಾರಿಸ್ ರವರು ಮತ ಚಲಾಯಿಸಿ ಕಿರಣ್ ಅಹುಜಾ ಅವರನ್ನು ಆಯ್ಕೆ ಮಾಡಿದರು.

* ಅಹುಜಾ ಅವರು ಬರಾಕ್ ಒಬಾಮ ಅಧ್ಯಕ್ಷರಾಗಿದ್ದಾಗ OPM ವಿಭಾಗದಲ್ಲಿ ಉತ್ತಮ ಕಾರ್ಯ ನಿರ್ವಹಿಸಿದ್ದರು, ಇದಲ್ಲದೇ 2 ದಶಕಗಳ ಕಾಲ ಸಾರ್ವಜನಿಕ ಕಾರ್ಯಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

## ವಿಶ್ವಸಂಸ್ಥೆಯ ಸಾರ್ವಜನಿಕ ಸೇವಾ ದಿನ ಆಚರಣೆ




* ವಿಶ್ವಸಂಸ್ಥೆಯ ಜೂನ್. 23 ರಂದು ಸಾರ್ವಜನಿಕ ಸೇವಾ ದಿನವನ್ನು ಆಚರಿಸುತ್ತದೆ.

* ಈ ದಿನದಂದು ಸಮುದಾಯಗಳಿಗೆ ಸಾರ್ವಜನಿಕ ಸೇವೆಯ ಮೌಲ್ಯ ತಿಳಿಸಲಾಗುತ್ತದೆ ಮತ್ತು ಯುವಜನರಿಗೆ ಸಾರ್ವಜನಿಕ ವಲಯದಲ್ಲಿ ವೃತ್ತಿಜೀವನವನ್ನು ಉತ್ತಮಗೊಳಿಸಲು ಸಹಾಯ ಮಾಡುತ್ತದೆ.

* ವಿಶ್ವಸಂಸ್ಥೆಯ ಸಾರ್ವಜನಿಕ ಸೇವಾ ದಿನವನ್ನು ಸಾರ್ವಜನಿಕ ಸೇವಾ ಪ್ರಶಸ್ತಿಗಳನ್ನು ನೀಡಲಾಗುತ್ತದೆ, ವಿಶ್ವಸಂಸ್ಥೆಯ 2003 ರಲ್ಲಿ ಸಾರ್ವಜನಿಕ ಸೇವಾ ಪ್ರಶಸ್ತಿಗಳನ್ನು ಸ್ಥಾಪಿಸಿದೆ, ಮತ್ತೇ 2030 ರ ಸುಸ್ಥಿರ ಅಭಿವೃದ್ಧಿ ಕಾರ್ಯಸೂಚಿಗೆ ಅನುಗುಣವಾಗಿ 2016 ರಲ್ಲಿ ಈ ಪ್ರಶಸ್ತಿ ವಿತರಣಾ ಕಾರ್ಯಕ್ರಮವನ್ನು ಮರುನವೀಕರಿಸಲಾಗಿದೆ, ವಿಶ್ವಾದ್ಯಂತದ ಎಲ್ಲಾ ನಾಗರಿಕ ಸೇವಕರ ಕೆಲಸದ ಪರಿಸ್ಥಿತಿಗಳನ್ನು ಈ ಸಮಾರಂಭವು ನಿರ್ಧರಿಸಲಿದೆ ಎಂದು ತಿಳಿಸಿದ್ದಾರೆ.

* ಸಾರ್ವಜನಿಕ ಸೇವಾ ದಿನವನ್ನು 2021 ರಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ತಲುಪಲು ಹೊಸ ಯುಗಕ್ಕೆ ಹೊಸ ಸರ್ಕಾರಿ ಮಾದರಿಗಳು ಎಂಬ ವಿಷಯದ ಅಡಿಯಲ್ಲಿ ಆಚರಿಸಲಾಗಿದೆ.

# 25-06-2021

## ಸುಪ್ರೀಂ ನಿರ್ದೇಶನವನ್ನು ಆಧರಿಸಿ 10, 12 ನೇ ಪರೀಕ್ಷೆ ರದ್ದುಮಾಡಲು ತೀರ್ಮಾನ



* ಪ್ರಸ್ತುತ ಕೋವಿಡ್ 19 ಸಾಂಕ್ರಾಮಿಕ ರೋಗದ ಪರಿಸ್ಥಿತಿಯ ನಡುವೆಯೇ ವಾರ್ಷಿಕ ಪರೀಕ್ಷೆಯನ್ನು ಆಯೋಜಿಸಲು ಸಿದ್ಧತೆಗಳ ಬಗ್ಗೆ ಆಂಧ್ರಪ್ರದೇಶ ಸರಕಾರವನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ, ಇದರ ಬೆನ್ನಲೇ ಪ್ರಸಕ್ತ ಶೈಕ್ಷಣಿಕ ವರ್ಷದ 10 ಮತ್ತು 12 ನೇ ತರಗತಿಯ ಪರೀಕ್ಷೆಗಳನ್ನು ರದ್ದುಪಡಿಸಲು ಆಂಧ್ರಪ್ರದೇಶ ಸರ್ಕಾರವು ತೀರ್ಮಾನ ಕೈಗೊಂಡಿದೆ ಎಂದು ತಿಳಿದು ಬಂದಿದೆ.

* ಪ್ರಸ್ತುತ ಕೋವಿಡ್ 19 ಸೋಂಕಿನ ಕಾರಣದಿಂದ ಎಲ್ಲ ಮಂಡಳಿಗಳು ಪರೀಕ್ಷೆ ರದ್ದುಪಡಿಸಿ ಆಂತರಿಕ ಮೌಲ್ಯಮಾಪನಕ್ಕೆ ಮುಂದಾಗಿವೆ, ಇದರ ಮಧ್ಯೆ ಆಂಧ್ರ ಸರ್ಕಾರ ಹೇಗೆ ಪರೀಕ್ಷೆ ನಡೆಸಲು ತೀರ್ಮಾನ ಕೈಗೊಂಡಿದೆ ಎಂದು ಸುಪ್ರೀಂ ಕೋರ್ಟ್ ಪ್ರಶ್ನೆ ಮಾಡಿದೆ.

## 2021 ರ ಟಾಯ್ಕಥಾನ್'ನಲ್ಲಿ ಪ್ರಧಾನಿ ಮೋದಿ ಹೇಳಿಕೆ



* ಪ್ರಸ್ತುತ 2021 ರ ಜೂನ್. 24 ರಂದು ಹೊಸದಿಲ್ಲಿ ಆಯೋಜಿಸಲಾಗಿದ್ದ ಟಾಯ್ಕಥಾನ್'ನಲ್ಲಿ ಭಾಗವಹಿಸಿದ ಜನಗಳ ಜತೆ ಸಂವಾದವನ್ನು ನಡೆಸಿದರು ಹಾಗೂ ಸ್ಥಳೀಯ ಆಟಿಕೆಗಳಿಗೆ ಪ್ರೋತ್ಸಾಹ ದೊರಕಿಸುವಂತೆ ಪ್ರಧಾನಿ ಮೋದಿ ಅವರು ಆಟಿಕೆ ಉದ್ಯಮಕ್ಕೆ ಕರೆ ನೀಡಿದರು.

* ಪ್ರಸ್ತುತ ಭಾರತ ದೇಶವು 80% ಆಟಿಕೆಗಳನ್ನು ಆಮದು ಮಾಡಿಕೊಳ್ಳುತ್ತಿದೆ, ಈ ಕಾರಣದಿಂದಾಗಿ ಭಾರತದ ಕೋಟ್ಯಾಂತರ ರೂ. ಹಣ ವಿದೇಶಕ್ಕೆ ಹೊರಹೋಗುತ್ತಿದೆ, ಪ್ರಸ್ತುತ ಜಾಗತಿಕ ಆಟಿಕೆ ಮಾರುಕಟ್ಟೆಯಲ್ಲಿ ಭಾರತದ ಪಾಲು ಕೇವಲ 1.5 ಬಿಲಿಯನ್ ಡಾಲರ್'ಆಗಿದೆ.

* ಭಾರತದ ಸಾಮರ್ಥ್ಯ, ಕಲೆ, ಸಂಸ್ಕೃತಿ, ಸಮಾಜವನ್ನು ಇನ್ನಷ್ಟು ಉತ್ತಮ ರೀತಿಯಲ್ಲಿ ಅರಿತುಕೊಳ್ಳಲು ಜಗತ್ತು ಬಯಸುತ್ತಿದೆ, ಇದರ ಜೊತೆ ಸ್ಥಳೀಯ ಆಟಿಕೆಗಳ ಮೂಲಕ ಪಾರಂಪರಿಕ ಜ್ಞಾನವನ್ನು ಇಡೀ ವಿಶ್ವಕ್ಕೆ ಪರಿಚಯಿಸಲು ಪ್ರೋತ್ಸಾಹ ನೀಡಬೇಕಾಗಿದೆ ಎಂದು ಪ್ರಧಾನಿ ಮೋದಿ ತಿಳಿಸಿದರು.

* 2021 ಕ್ಕೆ ಜನವರಿ 5 ರಂದು ಶಿಕ್ಷಣ, ಜವಳಿ, MSME, ಮಾಹಿತಿ ಮತ್ತು ಪ್ರಸಾರ ಇಲಾಖೆಗಳು ಹಾಗೂ ಹಲವು ಸಂಘಟನೆಗಳ ಜೊತೆಯಾಗಿ ಟಾಯ್ಕಥಾನ್ ಚಾಲನೆ ನೀಡಿದ್ದಾರೆ.

## ಶೀಘ್ರವೇ ಜಮ್ಮು ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನ



* ಜಮ್ಮು ಮತ್ತು ಕಾಶ್ಮೀರದಲ್ಲಿ ವಿಧಾನಸಭಾ ಚುನಾವಣೆ ನಡೆಸಲು ಕೇಂದ್ರ ಸರ್ಕಾರವು ಸಿದ್ಧವಾಗುತ್ತಿದೆ, ಪ್ರಸ್ತುತ ಜಮ್ಮು ಮತ್ತು ಕಾಶ್ಮೀರದಲ್ಲಿ ಡಿಲಿಮಿಟೇಶನ್ ಪ್ರಕ್ರಿಯೆ ಮುಕ್ತಾಯವಾದ ನಂತರ ಚುನಾವಣಾ ಪ್ರಕ್ರಿಯೆ ಆರಂಭವಾಗಲಿದೆ ಹಾಗೂ ರಾಜ್ಯತ್ವವನ್ನು ಪುನಃಸ್ಥಾಪಿಸಲಾಗುತ್ತದೆ ಎಂದು ಮುಖಂಡರಿಗೆ ಪ್ರಧಾನಿ ಮೋದಿ ಭರವಸೆಯನ್ನು ನೀಡಿದರು.

* ಪ್ರಧಾನಿ ಮೋದಿ ಅವರು J&K;'ಯ 14 ನಾಯಕರನ್ನು ಒಳಗೊಂಡ ಸರ್ವಪಕ್ಷ ಸಭೆಯಲ್ಲಿ ಮಾತನಾಡಿದ್ದರು, ಈ ಹಿಂದೆ ಕೇಂದ್ರವು 370 ನೇ ವಿಧಿಯನ್ನು 2019 ರ ಆಗಸ್ಟ್ ತಿಂಗಳಿನಲ್ಲಿ ರದ್ದುಪಡಿಸಿದ್ದಾರೆ.

* ವಿಧಾನಸಭಾ ಚುನಾವಣೆ ನಡೆಸುವ ಮೊದಲು ಜಮ್ಮು ಕಾಶ್ಮೀರಕ್ಕೆ ರಾಜ್ಯತ್ವವನ್ನು ಪುನಃಸ್ಥಾಪಿಸಬೇಕೆಂದು ನ್ಯಾಷನಲ್ ಕಾನ್ಫರೆನ್ಸ್ ಮುಖ್ಯಸ್ಥ ಹಾಗೂ ಮಾಜಿ ಸಿಎಂ ಫಾರೂಕ್ ಅಬ್ದುಲ್ಲಾ ಅವರು ಒತ್ತಡವನ್ನು ಹೇರಿದರು ಎಂದು ತಿಳಿದು ಬಂದಿದೆ.

## ಎಚ್ 1ಬಿ ವೀಸಾ ಮರು ಅರ್ಜಿ ಸಲ್ಲಿಕೆಗೆ ಅವಕಾಶ




* ಅಮೇರಿಕಾದಲ್ಲಿ ಉದ್ಯೋಗದ ನಿರೀಕ್ಷೆಯಲ್ಲಿರುವ ವಿದೇಶಗಳ ನೌಕರರಿಗೆ ಎಚ್ 1ಬಿ ವೀಸಾಗಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ ಎಂದು ಅಮೇರಿಕದ ಫೆಡರಲ್ ಏಜೆನ್ಸಿ ಮಾಹಿತಿ ನೀಡಿದೆ.

* ಭಾರತೀಯ IT ವೃತ್ತಿಪರ ವ್ಯಕ್ತಿಗಳಿಂದ ಎಚ್ 1ಬಿ ವೀಸಾಗೆ ಬೇಡಿಕೆ ಇದೆ ಎಂದು ತಿಳಿಸಲಾಗುತ್ತಿದೆ,

* ಪ್ರಸ್ತುತ 2020 ರ ಅಕ್ಟೋಬರ್. 1ರಂದು ಎಚ್ 1ಬಿ ಅರ್ಜಿಗಳು ತಿರಸ್ಕೃತಗೊಂಡಿದ್ದವು ಇದೀಗ ಈ ಅರ್ಜಿದಾರರಿಗೆ ಮರು ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುತ್ತಿದೆ ಎಂದು ತಿಳಿಸಿದೆ.

## ಕರ್ಣಂ ಮಲ್ಲೇಶ್ವರಿ ದೆಹಲಿ ಕ್ರೀಡಾ ವಿವಿ ಉಪಕುಲಪತಿಯಾಗಿ ಆಯ್ಕೆ



* ಒಲಿಂಪಿಕ್ಸ್ ಪದಕ ವಿಜೇತೆ ಮಹಿಳಾ ವೇಟ್ ಲಿಫ್ಟರ್ ಕರ್ಣಂ ಮಲ್ಲೇಶ್ವರಿ ಅವರು ದೆಹಲಿ ಕ್ರೀಡಾ ವಿಶ್ವವಿದ್ಯಾಲಯ ಉಪಕುಲಪತಿಯಾಗಿ ಆಯ್ಕೆಯಾಗಿದ್ದಾರೆ, ಆಂಧ್ರಪ್ರದೇಶ ರಾಜ್ಯಪಾಲರಾಗಿರುವ ಬಿಸ್ವ ಭೂಷಣ್ ಹರಿಚಂದನ್ ಅವರು ಕರ್ಣಂ ಮಲ್ಲೇಶ್ವರಿ ಅವರಿಗೆ ಅಭಿನಂದನೆ ತಿಳಿಸಿದ್ದಾರೆ.

* ಭಾರತದ ಮೊದಲ ಮಹಿಳಾ ಒಲಿಂಪಿಕ್ ಪದಕ ವಿಜೇತೆಯಾದ ಮಲ್ಲೇಶ್ವರಿ ಅವರು12 ವರ್ಷ ವಯಸ್ಸಿನಲ್ಲಿ ಎಸ್‌ಎಪಿ ತರಬೇತುದಾರ ನೀಲಾಮ್‌ಸೆಟ್ಟಿ ಅಪ್ಪಣ್ಣ ಅವರ ಮಾರ್ಗದರ್ಶನದಲ್ಲಿ ವೇಟ್‌ಲಿಫ್ಟಿಂಗ್ 'ನಲ್ಲಿ ತರಬೇತಿ ಪಡೆಯುತ್ತಿದ್ದರು.

* ಕರ್ಣಂ ಮಲ್ಲೇಶ್ವರಿ ಅವರು 1993, 1994, 1995 ಹಾಗೂ 1996 ರಲ್ಲಿ ನಡೆದ ವಿಶ್ವ ಚಾಂಪಿಯನ್‌ಶಿಪ್'ನಲ್ಲಿ 2 ಚಿನ್ನ ಹಾಗೂ 2 ಬೆಳ್ಳಿ ಹೀಗೆ ಹಲವು ಅಂತರರಾಷ್ಟ್ರೀಯ ಪದಕಗಳನ್ನು ಪಡೆದುಕೊಂಡಿದ್ದರು.

* ಕರ್ಣಂ ಮಲ್ಲೇಶ್ವರಿ ಅವರು ವೇಟ್‌ಲಿಫ್ಟರ್ ರಾಜೇಶ್ ತ್ಯಾಗಿ ಅವರು 1997ರಲ್ಲಿ ಮದುವೆಯಾಗಿದ್ದರು, ನಂತರ 2004ರ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವಲ್ಲಿ ವಿಫಲವಾದರು ನಂತರ ನಿವೃತ್ತಿಯನ್ನು ಘೋಷಣೆ ಮಾಡಿದರು.

* ಕರ್ಣಂ ಮಲ್ಲೇಶ್ವರಿ ಅವರು ಒಟ್ಟಾರೆ ಏಷ್ಯಾ ವೇಟ್ ಲಿಫ್ಟಿಂಗ್ ಚಾಂಪಿಯನ್'ನಲ್ಲಿ 11 ಪದಕ ಹಾಗೂ 29 ಅಂತಾರಾಷ್ಟ್ರೀಯ ಪದಕಗಳನ್ನು ಜಯಿಸಿದ್ದಾರೆ, ಇದರ ಜೊತೆ ಅರ್ಜುನ ಪ್ರಶಸ್ತಿ, ಪದ್ಮಶ್ರೀ ಮತ್ತು ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿಯನ್ನು ಕೂಡ ಪಡೆದುಕೊಂಡಿದ್ದಾರೆ.

## ಶೀಘ್ರವೇ ಟಿಬೆಟ್'ನಲ್ಲಿ ಪ್ರಥಮ ವಿದ್ಯುತ್ ಚಾಲಿತ ರೈಲು ಸೇವೆ ಆರಂಭ



* ಚೀನಾ ರಾಷ್ಟ್ರವು ಇದೀಗ ಟಿಬೆಟ್'ನಲ್ಲಿ ಪ್ರಥಮ ವಿದ್ಯುತ್ ಚಾಲಿತ ರೈಲು ಸೇವೆಯನ್ನು ಆರಂಭಿಸಲಿದೆ, ಚೀನಾದ ಈ ರೈಲು ಲಾಸಾ ಮತ್ತು ಗಡಿ ಭಾಗದ ನಿಯಿಂಗ್ಚಿ ಮಧ್ಯೆ ಸಂಚಾರ ಆರಂಭಿಸಲಿದೆ ಎಂದು ತಿಳಿಸಿದ್ದಾರೆ.

* ಈ ವಿದ್ಯುತ್ ಚಾಲಿತ ರೈಲು ಒಟ್ಟಾರೆ 435.5 ಕಿ.ಮೀ ಚಲಿಸಲಿದೆ, ಈ ರೈಲು ಮಾರ್ಗವು ಸಿಚುನ್ ಟಿಬೆಟ್ ರೈಲ್ವೆ ವಲಯದಲ್ಲಿ ಬರಲಿದೆ.

* ಟಿಬೆಟ್'ನಲ್ಲಿ ಈ ರೈಲು ಸೇವೆಯು ಪ್ರಸ್ತುತ ಚೀನಾ ದೇಶದಲ್ಲಿ ಆಡಳಿತದಲ್ಲಿರುವ ಕಮ್ಯುನಿಸ್ಟ್ ಪಾರ್ಟಿ ಆಫ್ ಚೀನಾದ ಶತಮಾನೋತ್ಸವದ ಅಂಗವಾಗಿ ಜುಲೈ. 1 ರಿಂದ ಸಂಚರಿಸುವ ಸಾಧ್ಯತೆಗಳಿವೆ ಎಂದಿದ್ದಾರೆ.

## ಕೇರಳದಲ್ಲಿ ಕವಲ್ ಪ್ಲಸ್ ಕಾರ್ಯಕ್ರಮ ಯಶಸ್ವಿ



* ಕೇರಳ ರಾಜ್ಯದ 2 ಜಿಲ್ಲೆಗಳಲ್ಲಿ ಈ ಯೋಜನೆ ಯಶಸ್ವಿಯಾದ ಬಳಿಕ ಕೇವಲ್'ನ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆಯು ಕವಲ್ ಪ್ಲಸ್ ಕಾರ್ಯಕ್ರಮವನ್ನು ಮತ್ತೇ 5 ಜಿಲ್ಲೆಗಳಿಗೆ ವಿಸ್ತರಿಸಲು ನಿರ್ಧಾರವನ್ನು ಕೈಗೊಂಡಿದೆ.

* ಕೇರಳ ರಾಜ್ಯದ ಈ ಕವಲ್ ಪ್ಲಸ್ ಕಾರ್ಯಕ್ರಮವು ಆರೈಕೆ ಹಾಗೂ ರಕ್ಷಣೆಯ ಬೇಕಾಗಿರುವ ಮಕ್ಕಳಿಗೆ, ಹಾಗೂ ಲೈಂಗಿಕ ಕಿರುಕುಳದಿಂದ ಬದುಕುಳಿದಿರುವಂತವರಿಗೆ ಉತ್ತಮ ಬೆಂಬಲ ನೀಡುವದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ತಿಳಿಸಿದ್ದಾರೆ.

* ರಾಜ್ಯದ ತಿರುವನಂತಪುರಂ ಜಿಲ್ಲೆಯ ಸರಿ ಸುಮಾರು 300 ಮಕ್ಕಳು ಹಾಗೂ ಪಾಲಕ್ಕಾಡ್ ಜಿಲ್ಲೆಯ 150 ಮಕ್ಕಳಿಗೆ ಈ ಯೋಜನೆಯಿಂದ ಉಪಯೋಗವಾಗಿದೆ.

* 2020 ರ ಡಿಸೆಂಬರ್ ತಿಂಗಳಿನಲ್ಲಿ ಕೇರಳದ ಎರಡು ಜಿಲ್ಲೆಗಳಾಗಿರುವ ತಿರುವನಂತಪುರಂ ಹಾಗೂ ಪಾಲಕ್ಕಾಡ್'ನಲ್ಲಿ ಈ ಕಾರ್ಯಕ್ರಮವನ್ನು ಆರಂಭಿಸಲಾಗಿದೆ.

* ಈ ಯೋಜನೆಯನ್ನು ಮಕ್ಕಳೊಂದಿಗೆ ಕೆಲಸ ಮಾಡುವ ಪರಿಣಿತಿಯನ್ನು ಹೊಂದಿರುವ NGO ಗಳ ಸಹಾಯದೊಂದಿಗೆ ಜಾರಿತರಲಾಗುತ್ತದೆಎಂದು ತಿಳಿಸಲಾಗಿದೆ.

## ಅಂತರರಾಷ್ಟ್ರೀಯ ವಿಧವೆಯರ ದಿನ




* ಅಂತರರಾಷ್ಟ್ರೀಯ ವಿಧವೆಯರ ದಿನವನ್ನು ಜೂನ್. 23 ರಂದು ಆಚರಣೆ ಮಾಡುತ್ತಾರೆ, ಈ ದಿನವನ್ನು ವಿಧವೆಯರ ಧ್ವನಿಯನ್ನು ಗಮನಕ್ಕೆ ತರಲು ಮತ್ತು ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿಸಲು ಆಚರಣೆ ಮಾಡಲಾಗುತ್ತದೆ.

* ಜಗತ್ತಿನಾದ್ಯಂತ ಅಂದಾಜು 258 ಮಿಲಿಯನ್ ವಿಧವೆಯರಿದ್ದಾರೆ ಎಂದು ತಿಳಿದು ಬಂದಿದೆ.

* ಅಂತರರಾಷ್ಟ್ರೀಯ ವಿಧವೆಯರ ದಿನವನ್ನು ದಿ ಲೂಂಬಾ ಫೌಂಡೇಶನ್ ಸ್ಥಾಪಿಸಿದೆ, ಈ ದಿನದಂದು ದೇಶಾದ್ಯಂತ ಇರುವಂತಹ ಲಕ್ಷಾಂತರ ವಿಧವೆಯರು ಹಾಗೂ ಅವರ ಎದುರಿಸುತ್ತಿರುವ ಬಡತನ, ಅನ್ಯಾಯವನ್ನು ಪರಿಹರಿಸುವುದು ಮತ್ತು ವಿಧವೆಯರ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ.

* 1954 ರಲ್ಲಿ ಲಾರ್ಡ್ ಲೂಂಬಾ ಅವರ ತಾಯಿ ಶ್ರೀಮತಿ ಪುಷ್ಪಾ ವಾಟಿ ಲೂಂಬಾ ಅವರು ವಿಧವೆಯಾದ ಹಿನ್ನಲೆಯಿಂದಾಗಿ ಈ ದಿನವನ್ನು ಆಯ್ಕೆ ಮಾಡಿಕೊಂಡು 2005 ರಲ್ಲಿ ಮೊದಲ ಅಂತರರಾಷ್ಟ್ರೀಯ ವಿಧವೆಯರ ದಿನವನ್ನು ಆಚರಣೆ ಮಾಡಲಾಯಿತು.

## ಮಿಜೋರಾಂ ಹೆಲ್ತ್ ಸಿಸ್ಟಮ್ಸ್ ಬಲಪಡಿಸುವ ಯೋಜನೆ



* ಕೇಂದ್ರ ಮತ್ತು ಮಿಜೋರಾಂ ರಾಜ್ಯ ಸರ್ಕಾರಗಳು ವಿಶ್ವಬ್ಯಾಂಕ್ ಜೊತೆಗೆ '32' ಮಿಲಿಯನ್ ಮೌಲ್ಯದ ಸಾಲ ಒಪ್ಪಂದಕ್ಕೆ ಸಹಿ ಹಾಕಿವೆ.

* ಮಿಜೋರಾಂ'ನ ಹೆಲ್ತ್ ಸಿಸ್ಟಮ್ಸ್'ನ್ನು ಬಲಪಡಿಸುವ ಯೋಜನೆ ಉದ್ದೇಶದಿಂದಾಗಿ ಈ ಸಾಲ ಒಪ್ಪಂದಕ್ಕೆ ಸಹಿ ಹಾಕಲಾಗಿದೆ, ಪ್ರಸ್ತುತ ಈ ಒಪ್ಪಂದದಿಂದ ಮಿಜೋರಾಂ ರಾಜ್ಯದಲ್ಲಿನ ಆರೋಗ್ಯ ಸೇವೆಗಳ ಗುಣಮಟ್ಟವು ಸುಧಾರಿಸಲಿದೆ ಎಂದು ತಿಳಿಸಲಾಗಿದೆ.

* ಮಿಜೋರಾಂ ಹೆಲ್ತ್ ಸಿಸ್ಟಮ್ಸ್ ಯೋಜನೆಯು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳ ಜೊತೆಗೆ ಅಂಗಸಂಸ್ಥೆಗಳ ಆಡಳಿತ ಮತ್ತು ನಿರ್ವಹಣಾ ಕಾರ್ಯವನ್ನು ಉತ್ತಮಗೊಳಿಸಲಿದೆ, ಹಾಗೂ ಪ್ರಧಾನ್ ಮಂತ್ರಿ ಜನ ಆರೋಗ್ಯ ಯೋಜನೆ ಇದರ ಜೊತೆಯಲ್ಲಿ ಆಸ್ಪತ್ರೆಯ ಸೇವೆಗಳಿಗೆ ಹಣಕಾಸಿನ ಕೊರತೆಗಳನ್ನು ನಿವಾರಿಸುವ ಉದ್ದೇಶವಾಗಿದೆ.

* ಪ್ರಸ್ತುತ ಈ ಮಿಜೋರಾಂ ರಾಜ್ಯದ ಹೆಲ್ತ್ ಸಿಸ್ಟಮ್ಸ್ ಯೋಜನೆಯು 8 ಜಿಲ್ಲೆಗಳ ಜನರಿಗೆ ಪ್ರಯೋಜನ ನೀಡಲಿದೆ.

## ವಿದ್ಯಾರ್ಥಿ ಕ್ರೆಡಿಟ್ ಕಾರ್ಡ್ ಯೋಜನೆಗೆ ಅನುಮೋದನೆ ನೀಡಿದ ಪಶ್ಚಿಮ ಬಂಗಾಳ ರಾಜ್ಯ



* ವಿದ್ಯಾರ್ಥಿ ಕ್ರೆಡಿಟ್ ಕಾರ್ಡ್ ಯೋಜನೆಗೆ ಪಶ್ಚಿಮ ಬಂಗಾಳ ಕ್ಯಾಬಿನೆಟ್ ಜೂನ್. 24 ರಂದು ಅನುಮೋದನೆ ನೀಡಿದೆ. ಈ ಹಿಂದೆ ಪಶ್ಚಿಮ ಬಂಗಾಳ ರಾಜ್ಯದ ತೃಣಮೂಲ ಕಾಂಗ್ರೆಸ್ ಪಕ್ಷವು ಚುನಾವಣಾ ಪ್ರಣಾಳಿಕೆಯಲ್ಲಿ ಈ ಯೋಜನೆಯನ್ನು ಆರಂಭಿಸುವದಾಗಿ ತಿಳಿಸಿತ್ತು.

* ವಿದ್ಯಾರ್ಥಿಗಳ ಕ್ರೆಡಿಟ್ ಕಾರ್ಡ್ ಯೋಜನೆಯ 2021ರ ಜೂನ್. 30 ಜಾರಿಗೆ ತಂದು ಆರಂಭ ಮಾಡಲಿದ್ದಾರೆ.

* ಪ್ರಸ್ತುತ ವಿದ್ಯಾರ್ಥಿ ಉನ್ನತ ಶಿಕ್ಷಣಕ್ಕೆ ಸೇರಲು ಕ್ರೆಡಿಟ್ ಕಾರ್ಡ್ ಯೋಜನೆಯ ಅಡಿಯಲ್ಲಿ ಭಾರತದಲ್ಲಿ ಹಾಗೂ ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕಾಗಿ 10 ಲಕ್ಷ ರೂ. ಮೃದು ಸಾಲ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

* ಪಶ್ಚಿಮ ಬಂಗಾಳ ರಾಜ್ಯದ ಯಾವದೇ ಒಬ್ಬ ವ್ಯಕ್ತಿಯು 40 ವರ್ಷ ವಯಸ್ಸಿನವರೆಗೆ ಯೋಜನೆ ಅಡಿಯಲ್ಲಿ ಸಾಲ ಪಡೆಯಬಹುದಾಗಿದೆ, ಈ ಸಾಲವನ್ನು ಮರುಪಾವತಿಸಲು ಸಾಲ ಪಡೆದ ವಿದ್ಯಾರ್ಥಿಗಳಿಗೆ 15 ವರ್ಷಗಳವರೆಗೆ ಅವಕಾಶ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

# 26-06-2021

## ಕರ್ನಾಟಕ ರಾಜ್ಯದ 2 ಸ್ಮಾರ್ಟ್ ಸಿಟಿ ಯೋಜನೆಗಳಿಗೆ ಪುರಸ್ಕಾರ



* ಭಾರತದ ಸ್ಮಾರ್ಟ್ ಸಿಟಿ ಯೋಜನೆಗಳ 6 ನೇ ವಾರ್ಷಿಕೋತ್ಸವದ ಅಂಗವಾಗಿ ಅಂತರ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಕರ್ನಾಟಕ ರಾಜ್ಯದ 2 ಸ್ಮಾರ್ಟ್ ಸಿಟಿ ಯೋಜನೆಗಳಿಗೆ ಕೇಂದ್ರ ಸರ್ಕಾರದ ಪುರಸ್ಕಾರ ಲಭಿಸಿದೆ.

* ಸ್ಮಾರ್ಟ್ ಸಿಟಿ ಯೋಜನೆಯ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ತುಮಕೂರು ನಗರದ ಸ್ಮಾರ್ಟ್ ಸಿಟಿಯ ಡಿಜಿಟಲ್ ಗ್ರಂಥಾಲಯ ಯೋಜನೆಗೆ ರಾಷ್ಟ್ರ ಮಟ್ಟದಲ್ಲಿ 3 ನೇ ಸ್ಥಾನವನ್ನು ಪಡೆದಿದೆ, ಈ ಸ್ಮಾರ್ಟ್ ಸಿಟಿ ರಾಜ್ಯ ಮಟ್ಟದ ಸ್ಪರ್ಧೆಯನ್ನು ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆಯೋಜಿಸಿತ್ತು.

* ಬೆಂಗಳೂರು ಸ್ಮಾರ್ಟ್ ಸಿಟಿಗೆ ಕೋವಿಡ್ 19 ತುರ್ತು ಪರಿಸ್ಥಿತಿಯ ನಿರ್ವಹಣೆ ಕಾರ್ಯಕ್ಕಾಗಿ ನೀಡುವ ಪುರಸ್ಕಾರ ಲಭಿಸಿದೆ ಇದರ ಜೊತೆಗೆ ಇಂಟರ್ನ್ ಶಿಪ್ ನೀಡುವ ಕಾಮಗಾರಿ ಯೋಜನೆಗೆ ಪದವೀಧರರಿಗೆ ಕೆಲಸ ನೀಡಿದ್ದಕ್ಕಾಗಿ ಬೆಂಗಳೂರು ಸ್ಮಾರ್ಟ್ ಸಿಟಿಯನ್ನು ರನ್ನರ್ ಅಪ್ ಎಂದು ಘೋಷಣೆ ಮಾಡಲಾಗಿದೆ.

* ಬೆಂಗಳೂರು ಹಾಗೂ ತುಮಕೂರು ನಗರದ ಈ ಸ್ಮಾರ್ಟ್ ಸಿಟಿ ಯೋಜನೆಗಳಿಗೆ ನೀಡಲಾಗಿರುವ ಪುರಸ್ಕಾರಗಳನ್ನು ಗಮನಿಸಿದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರು ಈ ಸ್ಮಾರ್ಟ್ ಸಿಟಿ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳನ್ನು ತಿಳಿಸಿದ್ದಾರೆ.

## ಪಿಎಂ ಕೇರ್'ನಿಂದ ರಾಜ್ಯಕ್ಕೆ 50 ಆಮ್ಲಜನಕ ಉತ್ಪಾದನ ಘಟಕ



* ಪ್ರಸ್ತುತ ಕೋವಿಡ್ 19'ನ 3 ನೇ ಅಲೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಿದ್ಧತೆಗಳನ್ನು ನಡೆಸಿದೆ, ಇದೆ ಸಂಧರ್ಭದಲ್ಲಿ ಕೇಂದ್ರ ಸರ್ಕಾರವು ಪಿಎಂ ಕೇರ್'ನ ಅಡಿಯಲ್ಲಿ ಕರ್ನಾಟಕ ರಾಜ್ಯಕ್ಕೆ 50 ಆಮ್ಲಜನಕ ಉತ್ಪಾದನ ಘಟಕಗಳನ್ನು ನೀಡಿದೆ.

* ಈ ಹಿಂದೆ ಕೋವಿಡ್ 19'ನ 2 ನೇ ಅಲೆಯ ಸಂಧರ್ಭದಲ್ಲಿ ಎಲ್ಲ ರಾಜ್ಯಗಳಲ್ಲಿ ಆಮ್ಲಜನಕದ ಕೊರತೆ ಉಂಟಾಗಿತ್ತು ಇದನ್ನು ಗಮನಿಸಿದ ಕೇಂದ್ರ ಸರ್ಕಾರವು ಇದೀಗ ಎಲ್ಲ ರಾಜ್ಯಗಳಿಗೆ ಆಮ್ಲಜನಕದ ಘಟಕಗಳನ್ನು ಮಂಜೂರು ಮಾಡಲು ಆರಂಭಿಸಿದೆ.

* ಪಿಎಂ ಕೇರ್'ನಿಂದ ಮಂಜೂರು ಆದ ಆಮ್ಲಜನಕದ ಘಟಕಗಳ ವಿವರ: ಬೆಂಗಳೂರು ನಗರ ಹಾಗೂ ಗ್ರಾಮೀಣ ಸೇರಿ 6 ಘಟಕ, ಮೈಸೂರು ಮತ್ತು ಕಲಬುರಗಿ ಜಿಲ್ಲೆಗಳಿಗೆ ತಲಾ 3 ಘಟಕ, ಬೀದರ್, ಗದಗ, ದಾವಣಗೆರೆ, ಕೊಡಗು, ಕೊಪ್ಪಳ, ಮಂಡ್ಯ, ಶಿವಮೊಗ್ಗ, ದಕ್ಷಿಣ ಕನ್ನಡ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಉತ್ತರ ಕನ್ನಡ ಈ ಎಲ್ಲ ಜಿಲ್ಲೆಗಳಲ್ಲಿ ತಲಾ 2 ರಂತೆ ಆಮ್ಲಜನಕ ಘಟಕ, ಮತ್ತೇ ಇನ್ನುಳಿದ ಎಲ್ಲ ಜಿಲ್ಲೆಗಳಲ್ಲಿ ತಲಾ ಒಂದು ಆಮ್ಲಜನಕ ಘಟಕ ಮಂಜೂರು ಮಾಡಿದ್ದಾರೆ.

* ಈ ರಾಜ್ಯಕ್ಕೆ ಮಂಜೂರು ಆಗಿರುವ ಈ ಘಟಕಗಳ ನಿರ್ಮಾಣಕ್ಕೆ DRDO, ಸೆಂಟ್ರಲ್ ಮೆಡಿಕಲ್ ಸರ್ವೀಸ್ ಸೊಸೈಟಿ, ಮತ್ತು ಎಚ್ ಎಲ್ಎಲ್ ಇನ್ಫ್ರಾಟೆಕ್ ಸರ್ವಿಸ್ ಲಿ. ಸಂಸ್ಥೆಗಳಿಗೆ ನಿರ್ವಹಣದ ಹೊಣೆಯನ್ನು ಹೊರಿಸಲಾಗಿದೆ.

## DRDO ಅಭಿವೃದ್ಧಿಪಡಿಸಿರುವ "ಪಿನಾಕಾ" ರಾಕೆಟ್ ಪರೀಕ್ಷಾರ್ಥ ಪ್ರಯೋಗ ಯಶಸ್ವಿ



* ಭಾರತೀಯ DRDO ಸಂಸ್ಥೆಯು ಸ್ವದೇಶಿಯವಾಗಿ ಅಭಿವೃದ್ಧಿಪಡಿಸಿರುವ "ಪಿನಾಕಾ" ರಾಕೆಟ್'ನ ಪರೀಕ್ಷಾರ್ಥ ಪ್ರಯೋಗವನ್ನು ಒಡಿಶಾ ರಾಜ್ಯದ ಕರಾವಳಿ ತೀರದ ಚಾಂದಿಪುರ್ ಪ್ರದೇಶದಲ್ಲಿ ಯಶಸ್ವಿಯಾಗಿ ನಡೆಸಿದೆ.

* DRDO ಸಂಸ್ಥೆಯು ಒಟ್ಟಾರೆ 25 ಪಿನಾಕಾ ರಾಕೆಟ್'ಗಳ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಿದೆ.

* ಬಹುಹಂತದ ರಾಕೆಟ್ ಉಡಾವಣಾ ವಾಹಕದಿಂದ 122 MM ಕ್ಯಾಲಿಬರ್ ರಾಕೆಟ್'ಗಳನ್ನು ಪ್ರಯೋಗಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿಯನ್ನು ನೀಡಿದ್ದಾರೆ.

* DRDO ಸಂಸ್ಥೆಯು ನಿರ್ಮಾಣಮಾಡಿರುವ ಈ "ಪಿನಾಕಾ" ರಾಕೆಟ್'ಗಳು 45 ಕಿ.ಮೀ ದೂರದ ನಿಗದಿತ ಗುರಿಯನ್ನು ನಾಶಪಡಿಸುವ ಸಾಮರ್ಥ್ಯವನ್ನು ಹೊಂದಿವೆ ಎಂದು ತಿಳಿಸಿದ್ದಾರೆ.

## ಪ್ರಥಮ ಏಕದಿನ ವಿಶ್ವಕಪ್ ಟ್ರೋಫಿಗೆ 38 ನೇ ವರ್ಷದ ಸಂಭ್ರಮ



* ಭಾರತೀಯ ಕ್ರಿಕೆಟ್ ತಂಡವು ಪ್ರಪ್ರಥಮ (ಮೊದಲ) ಏಕದಿನ ವಿಶ್ವಕಪ್ ಜಯಿಸಿ ಸುಮಾರು '38' ವರ್ಷಗಳನ್ನು ಪೂರೈಸಿದೆ. ಅಂದರೆ 1983 ರ ಜೂನ್ 25 ರಂದು ಲಾರ್ಡ್ಸ್‌ನಲ್ಲಿ ಭಾರತ ತಂಡವು, ವೆಸ್ಟ್ ಇಂಡೀಸ್ ತಂಡದ ವಿರುದ್ಧ ನಡೆದ ಫೈನಲ್ ಪಂದ್ಯದಲ್ಲಿ ಮೊದಲ ಬಾರಿಗೆ ಚಾಂಪಿಯನ್ ಹೊರ ಹೊಮ್ಮಿದೆ, ಆ ಸಮಯದಲ್ಲಿ ಕಪಿಲ್ ದೇವ್ ಅವರು ಭಾರತ ತಂಡದ ನಾಯಕರಾಗಿದ್ದರು.

* 1983 ರ ಜೂನ್ 25 ರಂದು ಭಾರತ ತಂಡವು ಫೈನಲ್ ಪಂದ್ಯದಲ್ಲಿ 43 ರನ್'ಗಳಿಂದ ವೆಸ್ಟ್ ಇಂಡೀಸ್ ತಂಡದ ವಿರುದ್ಧ ಜಯ ಗಳಿಸಿದೆ.

## ಅಂತರರಾಷ್ಟ್ರೀಯ ಕಡಲತೀರದ ದಿನ ಆಚರಣೆ




* ಅಂತರರಾಷ್ಟ್ರೀಯ ಕಡಲತೀರದ ದಿನವನ್ನು ಪ್ರತಿ ವರ್ಷ ಜೂನ್. 25 ರಂದು ಆಚರಣೆ ಮಾಡಲಾಗುತ್ತದೆ, ಪ್ರಸ್ತುತ ಈ ದಿನವನ್ನು ಜಾಗತಿಕ ಅರ್ಥಶಾಸ್ತ್ರ ಹಾಗೂ ವಾಣಿಜ್ಯವನ್ನು ಹೆಚ್ಚಿಸುವಲ್ಲಿ ಸಮುದ್ರಯಾನ ಮಾಡುವವರ ಪ್ರಯತ್ನಕ್ಕೆ ಅಭಿನಂದನೆಗಳನ್ನೂ ತಿಳಿಸಲು ಈ ದಿನ ಆಚರಿಸಲಾಗುತ್ತದೆ.

* ಈ ಅಂತರರಾಷ್ಟ್ರೀಯ ಕಡಲತೀರದ ದಿನವನ್ನು ಮೊದಲ ಬಾರಿ 2011 ರಲ್ಲಿ ಅಂತರರಾಷ್ಟ್ರೀಯ ಕಡಲ ಸಂಸ್ಥೆ ಆಚರಿಸಿದೆ, ಈ ದಿನವನ್ನು ತರಬೇತಿ, ಪ್ರಮಾಣೀಕರಣ, ಹಾಗೂ ಕಡಲತಡಿಯವರಿಗೆ ವಾಚ್‌ಕೀಪಿಂಗ್ ಮಾನದಂಡಗಳ ಬಗ್ಗೆ ಅಂತರರಾಷ್ಟ್ರೀಯ ಸಮಾವೇಶಕ್ಕೆ ಪಕ್ಷಗಳ ಸಮ್ಮೇಳನ ಅಂಗೀಕರಿಸಿದ ನಿರ್ಣಯದಿಂದ ಈ ದಿನವನ್ನು ಗುರುತಿಸಲಾಗಿದೆ.

* 1978 ರಲ್ಲಿ ಈ ಅಂತರರಾಷ್ಟ್ರೀಯ ಸಮಾವೇಶಕ್ಕೆ ಪಕ್ಷಗಳ ಸಮ್ಮೇಳನವನ್ನು ಫಿಲಿಪೈನ್ಸ್‌ನಲ್ಲಿ ನಡೆಸಲಾಗಿದೆ.

* ಈ ದಿನವು ಆರ್ಥಿಕತೆ ಮತ್ತು ವಾಣಿಜ್ಯಕ್ಕೆ ಉತ್ತಮವಾಗಿದೆ, ವ್ಯಾಪಾರವನ್ನು ಸುಗಮಗೊಳಿಸುವಲ್ಲಿ ಹಾಗೂ ವಿಶ್ವಾದ್ಯಂತ ವಾಣಿಜ್ಯವನ್ನು ಹೆಚ್ಚಿಸಲು ನಾವಿಕರು ವಹಿಸುವಂತಹ ಪಾತ್ರದ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ.

* 2021 ನೇ ವರ್ಷದ ಧ್ಯೇಯವಾಕ್ಯ 'ಕಡಲತೀರಗಳು ಹಡಗು ಭವಿಷ್ಯದ ಕೇಂದ್ರದಲ್ಲಿ' ಎಂಬ ವಿಷಯದಡಿಯಲ್ಲಿ ಆಚರಣೆ ಮಾಡಲಾಗಿದೆ.

## ಹೊಸ ಮಾನವ ಜಾತಿ ಕಂಡುಹಿಡಿದ ಇಸ್ರೇಲ್



* ಪುರಾತತ್ತ್ವಜ್ಞರ ಅಂತರರಾಷ್ಟ್ರೀಯ ಗುಂಪೊಂದು ಹೊಸ ಮಾನವ ಪ್ರಭೇದಗಳನ್ನು ಇಸ್ರೇಲ್‌ನಲ್ಲಿ ಕಂಡುಹಿಡಿಯಲಾಗಿದೆ.

* ಇಸ್ರೇಲಿ ನೆಶರ್ ರಾಮ್ಲಾ ಅವರ ಸ್ಥಳದಲ್ಲಿ ಪುರಾತತ್ತ್ವಜ್ಞರು ತಲೆಬುರುಡೆಯನ್ನು ಸಂಗ್ರಹಿಸಿದ್ದಾರೆ, ವಿಶಿಷ್ಟವಾದ ಹೋಮೋ ಜನಸಂಖ್ಯೆಯ ತಡವಾಗಿ ಉಳಿದಿರುವ ಉದಾಹರಣೆಯಾಗಿದೆ ಎಂದಿದ್ದಾರೆ, ಇವರುಗಳು ಸರಿ ಸುಮಾರು 420,000 ರಿಂದ 120,000 ವರ್ಷಗಳ ಹಿಂದೆ ವಾಸಿಸುತ್ತಿದ್ದರು ಎಂದು ಅಂದಾಜಿಸಲಾಗಿದೆ.

* ಪುರಾತತ್ತ್ವಜ್ಞರು ತಲೆಬುರುಡೆಯ ತುಣುಕು ಹಾಗೂ ದವಡೆಯನ್ನು ಕಂಡುಹಿಡಿದಿದ್ದಾರೆ, ಈ ದವಡೆಯು ಸಂಪೂರ್ಣವಾಗಿ ಹೋಮೋ

ಸೇಪಿಯನ್ಸ್ ಅಥವಾ ನಿಯಾಂಡರ್ತಲ್ ಅಲ್ಲದ ವ್ಯಕ್ತಿಗೆ ಸೇರಿದೆ ಎಂದು ವಿಶ್ಲೇಷಣೆಯನ್ನು ನೀಡಿದ್ದಾರೆ.

* ಈ ಹಿಂದೆ 1932 ರಲ್ಲಿ ಪ್ರವರ್ತಕ ಪುರಾತತ್ವಶಾಸ್ತ್ರಜ್ಞ ಯುಸ್ರಾ ಅವರು 'ಲೇಡಿ ಆಫ್ ಟಬನ್'ನ್ನು ಕಂಡುಹಿಡಿದಿದ್ದರು, ಪ್ರಸ್ತುತ ಈಗಿನ ಸಂಶೋಧಕರು ನೀಡಿರುವ ಮಾಹಿತಿಯ ಪ್ರಕಾರ ಇವುಗಳು ಇಸ್ರೇಲಿ ತಾಣಗಳಲ್ಲಿ ಕಂಡುಬಂದಿರುವ ಪ್ರಸಿದ್ಧ ಲೇಡಿ ಆಫ್ ಟಬೂನ್‌ನಂತಹ ಪಳೆಯುಳಿಕೆಗಳು ಭಾಗವಾಗಿರಬಹುದು ಎಂದು ಅಂದಾಜಿಸಿದ್ದಾರೆ.

## COVID 19 ಗಾಗಿ ರಾಪಿಡ್ ಆಂಟಿಜೆನ್ ಟೆಸ್ಟ್ ಕಿಟ್ ಅಭಿವೃದ್ಧಿಪಡಿಸಿದ ಐಐಟಿ ದೆಹಲಿ




* ಪ್ರಸ್ತುತ COVID 19 ಗಾಗಿ ರಾಪಿಡ್ ಆಂಟಿಜೆನ್ ಟೆಸ್ಟ್ ಕಿಟ್'ನ್ನು ಐಐಟಿ ದೆಹಲಿ ಅಭಿವೃದ್ಧಿಪಡಿಸಿದೆ, ಈ ಕಿಟ್ಟನ್ನು ಶಿಕ್ಷಣ ಸಚಿವ ಶ್ರೀ ಸಂಜಯ್ ಧೋತ್ರೆ ಬಿಡುಗಡೆಗೊಳಿಸಿದರು.

* ಈ COVID 19 ಗಾಗಿ ರಾಪಿಡ್ ಆಂಟಿಜೆನ್ ಟೆಸ್ಟ್ ಕಿಟ್'ನ್ನು ಡಾ.ಹರ್ಪಾಲ್ ಸಿಂಗ್ ನೇತೃತ್ವದ ಐಐಟಿ ದೆಹಲಿ ಸಂಶೋಧಕರು ಅಭಿವೃದ್ಧಿಪಡಿಸಿದ್ದಾರೆ, ಈ ಕಿಟ್ಟಿಗೆ SENSIT Rapid COVID 19 Ag Testing Kit ಎಂದು ಹೆಸರಿಟ್ಟಿದ್ದಾರೆ.

* ಕ್ಷಿಪ್ರ ಇಮ್ಯುನೊಕ್ರೊಮ್ಯಾಟೋಗ್ರಾಫಿಕ್ ವಿಧಾನವನ್ನು ಬಳಸಿ ಕೊರೊನಾವೈರಸ್ ಪ್ರತಿಜನಕಕ್ಕೆ ನಿರ್ದಿಷ್ಟವಾದ ಮೊನೊಕ್ಲೋನಲ್ ಪ್ರತಿಕಾಯಗಳ ಆಧಾರದ ಮೇಲೆ ವೈರಸ್'ನ್ನು ಪತ್ತೆಹಚ್ಚಲಾಗುತ್ತದೆ.

## ಮೀನುಗಾರರ ಸುರಕ್ಷತೆಗಾಗಿ ಸಮಿತಿ ರಚಿಸಿದ ಕೇರಳ



* ಕೇರಳದ ಮೀನುಗಾರಿಕಾ ಇಲಾಖೆಯು ಸಮುದ್ರದಲ್ಲಿನ ಸಮಸ್ಯೆಗಳನ್ನು ಬಗೆಹರಿಸುವ ವಿಷಯಗಳ ಬಗ್ಗೆ ಅಧ್ಯಯನ ಹಾಗೂ ವರದಿಯನ್ನು ನೀಡಲು 7 ಸದಸ್ಯರ ಸಮಿತಿಯನ್ನು ರಚಿಸಿದೆ.

* ಮಾಜಿ ಮೀನುಗಾರಿಕಾ ನಿರ್ದೇಶಕರಾಗಿದ್ದ ಪಿ. ಸಹದೇವನ್ ಅವರು ಸಮಿತಿಯ ನೇತೃತ್ವವನ್ನು ವಹಿಸಿಕೊಂಡಿದ್ದಾರೆ.

* ಕೇರಳದ ಮೀನುಗಾರಿಕಾ ಇಲಾಖೆಯು ಈ ಸಮಿತಿಯಿಂದ ವಿಶೇಷವಾಗಿ ಮಾನ್ಸೂನ್ ಸಂಧರ್ಭದಲ್ಲಿ ಮೀನುಗಾರಿಕೆಗೆ ಸಂಬಂಧಪಟ್ಟ ಅಪಘಾತಗಳಿಗೆ ದೀರ್ಘಕಾಲೀನ ಪರಿಹಾರ ನೀಡಲು ರಚಿಸಲಾಗಿದೆ.

* ಕೇರಳ ರಾಜ್ಯದಲ್ಲಿನ ಹಡಗು ಮೇಲ್ವಿಚಾರಣೆ ಮತ್ತು ಕಣ್ಗಾವಲು ವ್ಯವಸ್ಥೆಯು ಸಮಸ್ಯೆಗಳನ್ನು ಪರಿಹರಿಸಲು ಈ ಸಮಿತಿಯನ್ನು ರಚಿಸಲಾಗಿದೆ.

## ಭಾರತ ಲಸಿಕೆ ಕೋಲ್ಡ್ ಚೈನ್ ಸೌಲಭ್ಯಗಳನ್ನು ನಿರ್ಮಿಸಲು ಜಪಾನ್ ಸಹಾಯ



* ಭಾರತದಲ್ಲಿ ಕೋವಿಡ್ 19 ಗೆ ಸಂಬಂಧಿಸಿದೆ ಲಸಿಕೆಗಳನ್ನು ಸುರಕ್ಷಿತವಾಗಿ ಸಂಗ್ರಹಿಸಲು ಕೋಲ್ಡ್ ಚೈನ್ ಸೌಲಭ್ಯಗಳನ್ನು ನಿರ್ಮಿಸಲು ಜಪಾನ್ ರಾಷ್ಟ್ರವು ಭಾರತಕ್ಕೆ '10' ಮಿಲಿಯನ್ ನೆರವು ನೀಡಲು ಸಿದ್ಧವಾಗಿದೆ.

* ಪ್ರತಿ ದೇಶದಲ್ಲಿ ಯುನೈಟೆಡ್ ನೇಷನ್ಸ್ ಚಿಲ್ಡ್ರನ್ಸ್ ಫಂಡ್ ಮೂಲಕ ವ್ಯಾಕ್ಸಿನೇಷನ್ ಖಚಿತಪಡಿಸಲು ಈ ಕೋಲ್ಡ್ ಚೈನ್ ಸೌಲಭ್ಯಗಳನ್ನು ನಿರ್ಮಿಸಲಾಗುತ್ತಿದೆ.

* ದೇಶಗಳು ಕೋವಿಡ್ 19 ನ್ನು ಪರಿಸ್ಥಿತಿಯನ್ನು ಎದುರಿಸುತ್ತಿರುವ ಸವಾಲುಗಳು ಲಸಿಕೆಗಳಿಗೆ ಸಮಾನ ಪ್ರವೇಶವನ್ನು ಖಚಿತಪಡಿಸುವದು ಹಾಗೂ ವ್ಯಾಕ್ಸಿನೇಷನ್'ನ್ನು ವೇಗಗೊಳಿಸಲಾಗುವದು, ಈ ಎಲ್ಲ ಸವಾಲನ್ನು ಎದುರಿಸಲು ಜಪಾನ್ ರಾಷ್ಟ್ರಗಳು ಲಸಿಕೆಗಳನ್ನು ಸಂಗ್ರಹಕ್ಕಾಗಿ ಕೋವಾಕ್ಸ್ ಸೌಲಭ್ಯವನ್ನು ಆರಂಭಿಸಿದೆ.

* ಯುಎಸ್ ರಾಷ್ಟ್ರವು 70 ದಶಲಕ್ಷಕ್ಕೂ ಹೆಚ್ಚಿನ ಪ್ರಮಾಣದ ಕೋವಿಡ್ 19 ಲಸಿಕೆಗಳನ್ನು ಭಾರತ ಹಾಗೂ ಬೇರೆ ಬೇರೆ ದೇಶಗಳಿಗೆ ನೀಡಲು ದಾಸ್ತಾನು ಮಾಡುವುದಾಗಿ ಘೋಷಣೆ ಮಾಡಿದೆ.

* ಕೋವಿಡ್ 19 ನ ಲಸಿಕೆಗಳುನ್ನು ತಯಾರಿಸಿದ ಸಮಯದಿಂದ ವ್ಯಾಕ್ಸಿನೇಷನ್ ಮಾಡುವ ತನಕ ಸೀಮಿತ ತಾಪಮಾನದ ವ್ಯಾಪ್ತಿಯಲ್ಲಿ ನಿರಂತರವಾಗಿ ಸಂಗ್ರಹಿಸಿ ಇಡಬೇಕಾಗುತ್ತದೆ, ಇಲ್ಲವಾದರೆ ಹೆಚ್ಚು ಅಥವಾ ಕಡಿಮೆ ತಾಪಮಾನವು ಈ ಲಸಿಕೆಗಳ ಶಕ್ತಿಯನ್ನು ಹಾಳು ಮಾಡಲು ಕಾರಣವಾಗುತ್ತವೆ.

# 28-06-2021

## ಅಮೆರಿಕದಿಂದ ಇರಾಕ್, ಸಿರಿಯಾ ಮೇಲೆ ವಾಯುದಾಳಿ



* ಅಮೇರಿಕದ ವಾಯುಪಡೆಯು ಇರಾಕ್ ಮತ್ತು ಸಿರಿಯಾದಲ್ಲಿನ ಇರಾನ್ ಬೆಂಬಲಿತ ಉಗ್ರರ ಶಸ್ತ್ರಾಸ್ತ್ರ ಸಂಗ್ರಹ ವ್ಯವಸ್ಥೆಯ ಮೇಲೆ ವಾಯುದಾಳಿಯನ್ನು ಮಾಡಿದೆ.

* ಅಮೇರಿಕದ ಅಧ್ಯಕ್ಷ ಜೋ ಬೈಡೆನ್ ರವರ ನಿರ್ದೇಶನದ ಮೇರೆಗೆ ಅಮೆರಿಕ ಮಿಲಿಟರಿ ವಾಯು ಪಡೆಗಳು ಇರಾಕ್ ಸಿರಿಯಾ ಗಡಿ ಪ್ರದೇಶದಲ್ಲಿ ಇಯುವಂತಹ ಇರಾನ್ ಬೆಂಬಲಿತ ಉಗ್ರ ಗುಂಪು ಹೊಂದಿರುವ ಸೌಲಭ್ಯಗಳ ಮೇಲೆ ವಾಯುದಾಳಿ ನಡೆಸಲಾಗಿದೆ ಎಂದು ಪೆಂಟಗಾನ್ ವಕ್ತಾರು ಆಗಿರುವ ಜಾನ್ ಎಫ್.ಕಿರ್ಬಿ ಅವರು ತಿಳಿಸಿದ್ದಾರೆ.

* ಇರಾನ್ ಬೆಂಬಲಿತ ಉಗ್ರಗಾಮಿ ಗುಂಪುಗಳಾಗಿರುವ ಕತೈಬ್ ಹಿಝ್ಬುಲ್ಲಾ ಮತ್ತು ಕತೈಬ್ ಸೈಯಿದ್ ಅಲ್ ಶುಹದಾಗಳು ಅಮೇರಿಕ ಪ್ರಜೆಗಳು ವಾಸವಿರುವ ಪ್ರದೇಶದ ಮೇಲೆ ಡ್ರೋನ್ ದಾಳಿ ನಡೆಸಲು ಬಳಸುವ ಸೌಲಭ್ಯಗಳ ಮೇಲೆ ಅಮೇರಿಕ ವಾಯುದಾಳಿ ನಡೆಸಿದೆ ಎಂದು ಕಿರ್ಬಿ ಅವರು ತಿಳಿಸಿದ್ದಾರೆ.

* ಈ ಹಿಂದೆ ಅಮೆರಿಕ ರಾಷ್ಟ್ರವು ಫೆಬ್ರವರಿ ತಿಂಗಳಿನಲ್ಲಿ ಪೂರ್ವ ಸಿರಿಯಾದ ಮೇಲೆ ವಾಯುದಾಳಿ ನಡೆಸಿತ್ತು.

## ಲಸಿಕೆ ವಿತರಣೆಯಲ್ಲಿ ಅಮೆರಿಕವನ್ನು ಹಿಂದಿಕ್ಕಿದ ಭಾರತ, 32 ಕೋಟಿ ಅಧಿಕ ಡೋಸ್ ಲಸಿಕೆ ವಿತರಣೆ




* ಕೇಂದ್ರ ಆರೋಗ್ಯ ಇಲಾಖೆ ನೀಡಿರುವ ಮಾಹಿತಿ ಪ್ರಕಾರ ಭಾರತ 32,36,63,297 ಡೋಸ್‌ಗಳನ್ನು ನೀಡಿದ್ದರೆ, ಅಮೆರಿಕ 32,33,27,328 ಡೋಸ್ ಲಸಿಕೆಗಳನ್ನು ನೀಡಿದೆ. ಈ ಮಾಹಿತಿಯನ್ನು ವೀಕ್ಷಿಸಿದಾಗ ಭಾರತವು ಹೆಚ್ಚಿನ ಪ್ರಮಾಣದ ಲಸಿಕೆ ವಿತರಣೆ ಮಾಡಿದ್ದು, ಆ ಮೂಲಕ ಅಮೆರಿಕದ ಸಾಧನೆಯನ್ನು ಹಿಂದಿಕ್ಕಿದೆ.

* ಜನವರಿ 16, 2021 ರಿಂದ ಭಾರತದಲ್ಲಿ ವ್ಯಾಕ್ಸಿನೇಷನ್ ಪ್ರಕ್ರಿಯೆ ಪ್ರಾರಂಭವಾಗಿದ್ದರೆ, ಅಮೆರಿಕವು 2020 ಡಿಸೆಂಬರ್ 14 ರಿಂದಲೇ ಲಸಿಕೆ ನೀಡಿಕೆ ಶುರುವಾಗಿತ್ತು.

* ವ್ಯಾಕ್ಸಿನೇಷನ್ ಕಾರ್ಯಕ್ರಮದ 163 ನೇ ದಿನದಂದು ಅಂದರೆ ಜೂನ್ 27 ರಂದು 13.9 ಲಕ್ಷ ಫಲಾನುಭವಿಗಳು ತಮ್ಮ ಮೊದಲ ಡೋಸ್ ಮತ್ತು 3.3 ಲಕ್ಷ ಜನರಿಗೆ ಎರಡನೇ ಡೋಸ್ ಲಸಿಕೆ ನೀಡಲಾಗಿತ್ತು ಎಂದು ವರದಿ ಹೇಳಲಾಗಿದೆ.

## ಪ್ರಧಾನಿ ಮೋದಿಯವರಿಂದ ಪಿ.ವಿ ನರಸಿಂಹ ರಾವ್ ಅವರ 100 ನೇ ಜನ್ಮದಿನಾಚರಣೆಗೆ ಗೌರವ ನಮನ



* ಮಾಜಿ ಪ್ರಧಾನಿ ಪಿ.ವಿ ನರಸಿಂಹರಾವ್ ಅವರ 100 ನೇ ಜನ್ಮ ದಿನಾಚರಣೆಯ ಅಂಗವಾಗಿ ಗೌರವ ನಮನ ಸಲ್ಲಿಸಿದ ಪ್ರಧಾನಿ ಮೋದಿ ಅವರು, 'ಭಾರತವು ಮಾಜಿ ಪ್ರಧಾನಿ ಪಿ.ವಿ ನರಸಿಂಹರಾವ್ ಅವರ ಕೊಡುಗೆಯನ್ನು ಸದಾ ಸ್ಮರಿಸಲಿದೆ. ಪಿ.ವಿ ನರಸಿಂಹರಾವ್ ಅವರು ಅಪಾರ ಜ್ಞಾನ ಮತ್ತು ಬುದ್ಧಿಶಕ್ತಿಯನ್ನು ಹೊಂದಿದ್ದರು' ಎಂದು ಟ್ವೀಟ್ ಮಾಡಿದ್ದಾರೆ.

* ಪಿ.ವಿ ನರಸಿಂಹರಾವ್ ಅವರು ಕಾಂಗ್ರೆಸ್‌ನ ಹಿರಿಯ ನಾಯಕರಾಗಿದ್ದರು. 1991 1996 ರ ವರೆಗೆ ಭಾರತ ದೇಶದ ಪ್ರಧಾನಿಯಾಗಿ ಕಾರ್ಯ ನಿರ್ವಹಿಸಿದ್ದರು.

* ಭಾರತ ದೇಶದ ಆರ್ಥಿಕತೆಯನ್ನು ಉದಾರೀಕರಣಗೊಳಿಸಿದ ಕೀರ್ತಿಗೆ ಮಾಜಿ ಪ್ರಧಾನಿ ಪಿ.ವಿ ನರಸಿಂಹರಾವ್ ಅವರು ಪಾತ್ರರಾಗಿದ್ದಾರೆ.

## ಅತ್ಯಾಧುನಿಕ ರೂಪಾಂತರಿ ಕ್ಷಿಪಣಿ ಅಗ್ನಿ ಪ್ರೈಮ್ ಯಶಸ್ವಿ ಉಡಾವಣೆ



* ನವ ಪೀಳಿಗೆಗಳ ಅತ್ಯಾಧುನಿಕ ರೂಪಾಂತರಿ ಕ್ಷಿಪಣಿ ಎಂದೇ ಹೇಳಲಾಗುತ್ತಿರುವ ಅಗ್ನಿ ಪ್ರೈಮ್ ಕ್ಷಿಪಣಿಯನ್ನು ಇಂದು ಯಶಸ್ವಿಯಾಗಿ ಉಡಾವಣೆ ಮಾಡಲಾಗಿದೆ.

* ನವ ಪೀಳಿಗೆಯ ಅತ್ಯಾಧುನಿಕ ರೂಪಾಂತರಿ ಕ್ಷಿಪಣಿ ಅಗ್ನಿ ಪ್ರೈಮ್ ಕ್ಷಿಪಣಿಯನ್ನು ಸೋಮವಾರ ಯಶಸ್ವಿಯಾಗಿ ಉಡಾವಣೆ ಮಾಡಲಾಗಿದ್ದು, ಬೆಳಿಗ್ಗೆ 10.55 ಕ್ಕೆ ಒಡಿಶಾ ತೀರದಲ್ಲಿ ಅಗ್ನಿ ಪ್ರೈಮ್ ಹೊಸ ಕ್ಷಿಪಣಿಯ ಪರೀಕ್ಷಾರ್ಥ ಉಡಾವಣೆಯನ್ನು ಯಶಸ್ವಿಯಾಗಿ ನಡೆಸಿದೆ ಎಂದು ಡಿಆರ್ ಡಿಒ (DRDO) ಮೂಲಗಳು ಮಾಹಿತಿ ನೀಡಿವೆ.

* ರೂಪಾಂತರಿ ಅಗ್ನಿ ಪ್ರೈಮ್ ಕ್ಷಿಪಣಿಯು ಅಗ್ನಿ ಸರಣಿಯ ಕ್ಷಿಪಣಿಗಳ ನವ ಪೀಳಿಗೆಯ ಸುಧಾರಿತ ರೂಪಾಂತರವಾಗಿದೆ. ಇದು 1000 ರಿಂದ 2000 ಕಿ.ಮೀ ನಡುವಿನ ವ್ಯಾಪ್ತಿಯ ಸಾಮರ್ಥ್ಯವನ್ನು ಹೊಂದಿರುವ ಕ್ಷಿಪಣಿಯಾಗಿದೆ ಎಂದು ಡಿಆರ್‌ಡಿಒ(DRDO) ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

## ಮ್ಯಾನ್ಮಾರ್'ನ 700 ಕ್ಕೂ ಹೆಚ್ಚು ನಿರಾಶ್ರಿತರಿಗೆ ಮಿಜೋರಾಂ ಆಶ್ರಯ



* ಮ್ಯಾನ್ಮಾರ್‌ನ ಸೇನಾದಂಗೆಯ ಕಾರಣದಿಂದಾಗಿ 700 ಕ್ಕೂ ಹೆಚ್ಚು ನಿರಾಶ್ರಿತರಿಗೆ ಮಿಜೋರಾಂ ರಾಜ್ಯದಲ್ಲಿ ಆಶ್ರಯ ನೀಡಲಾಗಿದೆ ಎಂದು ಅಲ್ಲಿನ ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

* ಮ್ಯಾನ್ಮಾರ್'ನ ಸೇನಾ ದಂಗೆಯ ಬಳಿಕ ಅಲ್ಲಿನ ಒಟ್ಟು 10,025 ಜನ ಪ್ರತಿನಿಧಿಗಳು ಮಿಜೋರಾಂಗೆ ವಲಸೆ ಬಂದಿದ್ದಾರೆ, ಇವರಲ್ಲಿ ಕನಿಷ್ಠ 22 ಮಂದಿ ಮ್ಯಾನ್ಮಾರ್'ನ ಸಂಸತ್ ಸದಸ್ಯರನ್ನು ಒಳಗೊಂಡಿದ್ದಾರೆ.

* ಮ್ಯಾನ್ಮಾರ್'ನ ಚಿನ್ ರಾಜ್ಯದ ಮುಖ್ಯಮಂತ್ರಿಯಾಗಿರುವ ಸಲಾಯ್ ಲಿಯಾನ್ ಲುವಾಯಿ ಇದೇ ಜೂನ್. 14 ರಂದು ಮಿಜೋರಾಂಗೆ ಬಂದಿದ್ದಾರೆ ಎಂದೂ ತಿಳಿಸಿದ್ದಾರೆ.

* ಮಿಜೋರಾಂನ ರಾಜ್ಯ ಪೊಲೀಸ್ ಇಲಾಖೆಯ ನೀಡಿರುವ ಮಾಹಿತಿಯ ಪ್ರಕಾರ ಇದೇ ಜೂನ್.15 ರಿಂದ 26 ರ ಸಮಯದಲ್ಲಿ ಮ್ಯಾನ್ಮಾರ್'ನ ಅತೀ ಹೆಚ್ಚು ನಿರಾಶ್ರಿತರು ಮಿಜೋರಾಂನ ಚಂಪಾಯಿ ಜಿಲ್ಲೆಯಲ್ಲಿ ವಾಸವಾಗಿದ್ದಾರೆ ಎಂದು ತಿಳಿದು ಬಂದಿದೆ.

## ಬಿಲ್ಲುಗಾರಿಕೆ ವಿಶ್ವಕಪ್‌ನಲ್ಲಿ ಒಂದೇ ದಿನ ಮೂರು ಚಿನ್ನದ ಪದಕ ಗಳಿಸಿ ಸಾಧನೆ ಮಾಡಿದ ಭಾರತದ ಕುವರಿ ದೀಪಿಕಾ ಕುಮಾರಿ



* ಬಿಲ್ಲುಗಾರಿಕೆ ವಿಶ್ವಕಪ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿ ಒಂದೇ ದಿನ ಮೂರು ಚಿನ್ನದ ಪದಕ ಗಳಿಸಿ ಸಾಧನೆ ಮಾಡಿದ್ದಾರೆ

* ಆರ್ಚರಿ ಆಟಗಾರ್ತಿ ದೀಪಿಕಾ ಕುಮಾರಿ ಒಂದೇ ದಿನ ಮೂರು ಚಿನ್ನದ ಪದಕಗಳನ್ನು ಗಳಿಸುವ ಮೂಲಕ ಗ್ಲೋಬಲ್ ರ್ಯಾಂಕಿಂಗ್‌ನಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ.

* 2012 ರಿಂದ ಇದೇ ಮೊದಲ ಬಾರಿ ಆರ್ಚರಿ ಆಟಗಾರ್ತಿ ದೀಪಿಕಾ ಕುಮಾರಿ ಗ್ಲೋಬಲ್ ರ್ಯಾಂಕಿಂಗ್‌ನಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ. ಮಹಿಳೆಯರ ವೈಯಕ್ತಿಕ ಸ್ಪರ್ಧೆ, ಮಹಿಳಾ ತಂಡ ಹಾಗೂ ಮಿಶ್ರ ಫೈನಲ್‌ಗಳಲ್ಲಿ ಗೆದ್ದು ಬೀಗಿದ ದೀಪಿಕಾ ಕುಮಾರಿ ಮೂರು ಚಿನ್ನದ ಪದಕಗಳನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.

* ದೀಪಿಕಾರ ಸಾಧನೆಯ ಕುರಿತು ವಿಶ್ವ ಅರ್ಚರಿ ಅಧಿಕೃತ ಟ್ವಿಟರ್ ಖಾತೆಯಲ್ಲಿ ಬರೆದುಕೊಂಡಿದೆ.

## ಅಸ್ಸಾಂ ಸರ್ಕಾರವು ಕೋವಿಡ್ 19 ನಿಂದ ಪತಿ ಕಳೆದುಕೊಂಡ ಮಹಿಳೆಯರಿಗೆ 2.5 ಲಕ್ಷ ರೂ.ಘೋಷಣೆ



* ಅಸ್ಸಾಂ ರಾಜ್ಯದಲ್ಲಿನ 5 ಲಕ್ಷಕ್ಕಿಂತ ಕಡಿಮೆ ಆದಾಯ ಹೊಂದಿರುವ ಕುಟುಂಬಗಳಲ್ಲಿ ಕೋವಿಡ್ 19 ಸಾಂಕ್ರಾಮಿಕ ರೋಗದಿಂದ ಪತಿಯನ್ನು ಕಳೆದುಕೊಂಡಿರುವ ವಿಧವೆಯರಿಗೆ ತಲಾ 2.5 ಲಕ್ಷ ರೂ. ಪರಿಹಾರವನ್ನು ನೀಡಲಾಗುತ್ತದೆ ಎಂದು ಅಸ್ಸಾಂ ಸರ್ಕಾರ ಪ್ರಕಟಣೆಯಲ್ಲಿ ತಿಳಿಸಿದೆ.

* ಪ್ರಸ್ತುತ ಮುಖ್ಯಮಂತ್ರಿಯವರ ಕೋವಿಡ್ 19 ವಿಧವೆಯರ ಬೆಂಬಲ ಯೋಜನೆಯ ಪರಿಹಾರದ ಅಡಿಯಲ್ಲಿ "ವಿಧವಾ ಮಾಸಾಶನ" ಯೋಜನೆಗಳ ಫಲಾನುಭವಿಗಳು ಕೂಡ ಒಂದು ಸಾರಿ ಈ ಸಹಾಯ ಧನವನ್ನು ಪಡೆಯಬಹುದಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಟ್ವೀಟ್ ಮೂಲಕ ಮಾಹಿತಿ ನೀಡಿದ್ದಾರೆ.

* ಪ್ರಸ್ತುತ ಅಸ್ಸಾಂ ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳು ಕೋವಿಡ್ 19 ಸಂತ್ರಸ್ತರ ಮಾಹಿತಿಯನ್ನು ಎನ್‌ಎಚ್‌ಎಂ ಡೇಟಾ ಬೇಸ್‌ನಿಂದ ಪಡೆದುಕೊಂಡ ಅರ್ಹ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿ, ನಂತರ ಅರ್ಹತಾ ಮಾನದಂಡಗಳನ್ನು ಪರಿಗಣಿಸಿ ನಂತರ ಹಣವನ್ನು ಫಲಾನುಭವಿಗಳ ಖಾತೆಗಳಿಗೆ ಜಮೆ ಮಾಡಲಾಗುತ್ತದೆ ಎಂದು ಯೋಜನೆಯಲ್ಲಿ ತಿಳಿಸಿದ್ದಾರೆ.

* ಅಸ್ಸಾಂ ರಾಜ್ಯದಲ್ಲಿ ಕೋವಿಡ್ 19 ನಿಂದ ಒಟ್ಟಾರೆ 4,403 ಜನ ಸಾವನ್ನಪ್ಪಿದ್ದಾರೆ ಎಂದು ರಾಷ್ಟ್ರೀಯ ಆರೋಗ್ಯ ಮಿಷನ್ (NHM) ಬುಲೆಟಿನ್ ಮಾಹಿತಿ ನೀಡಿದೆ.

## ಸಾಜಿದ್ ಜಾವಿದ್ ಬ್ರಿಟನ್ ಆರೋಗ್ಯ ಸಚಿವರಾಗಿ ನೇಮಕ



* ಪ್ರಸ್ತುತ ಸಾಜಿದ್ ಜಾವಿದ್ ಅವರು ಬ್ರಿಟನ್'ನ ನೂತನ ಆರೋಗ್ಯ ಸಚಿವರಾಗಿ ನೇಮಕಗೊಂಡಿದ್ದಾರೆ, ಇತ್ತೀಚಿಗೆ ರಾಜೀನಾಮೆ ನೀಡಿರುವ ಮ್ಯಾಟ್ಹ್ಯಾನ್ ಕಾಕ್ ಅವರ ಸ್ಥಾನವನ್ನು ಸಾಜಿದ್ ಅವರು ವಹಿಸಿಕೊಳ್ಳಲಿದ್ದಾರೆ ಎಂಬ ಈ ಮಾಹಿತಿಯನ್ನು ಬ್ರಿಟನ್ ಪ್ರಧಾನಿ ಬೊರಿಸ್ ಜಾನ್ಸನ್ ಸಚಿವಾಲಯದಲ್ಲಿ ಹೇಳಿದ್ದಾರೆ.

* ಇತ್ತೀಚಿಗೆ ಆರೋಗ್ಯ ಸಚಿವರಾಗಿರುವ ಮ್ಯಾಟ್ಹ್ಯಾನ್ಕಾಕ್ ಅವರು ಕೋವಿಡ್ 19 ನೀತಿ ನಿಯಮಗಳನ್ನು ಉಲ್ಲಂಘಿಸಿ ತನ್ನ ಕಚೇರಿಯಲ್ಲಿರುವ ಸಹಾಯಕಿಯನ್ನು ಚುಂಬಿಸಿದ (ಕಿಸ್)ರು ಈ ಘಟನೆಯು ವಿವಾದಕ್ಕೆ ಕಾರಣವಾಗಿದ್ದರಿಂದ, ಇವರು ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆಯನ್ನು ನೀಡಿದ್ದಾರೆ ಎಂದು ತಿಳಿಸಲಾಗಿದೆ.

## ದೆಹಲಿ ಮೆಟ್ರೋಗೆ ಜಪಾನ್ ಸೊಸೈಟಿ ಆಫ್ ಸಿವಿಲ್ ಎಂಜಿನಿಯರ್ಸ್ ಪ್ರಶಸ್ತಿ



* ಪ್ರಸ್ತುತ ದೆಹಲಿ ಮೆಟ್ರೋ ಉತ್ತಮ ಗುಣಮಟ್ಟದ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನೂ ಹೊಂದಿರುವ ಕಾರಣದಿಂದಾಗಿ ಜಪಾನ್ ಸೊಸೈಟಿ ಆಫ್ ಸಿವಿಲ್ ಎಂಜಿನಿಯರ್'ಗಳಿಂದ ಪ್ರಶಸ್ತಿಯನ್ನು ಪಡೆದುಕೊಂಡಿದೆ ಎಂದು ಮೆಟ್ರೋ ಅಧಿಕಾರಿಗಳು ಮಾಹಿತಿಯನ್ನು ನೀಡಿದ್ದಾರೆ.

* 2020 ರ ಅತ್ಯುತ್ತಮ ಸಿವಿಲ್ ಎಂಜಿನಿಯರಿಂಗ್ ಸಾಧನೆಯ ಪ್ರಶಸ್ತಿಯನ್ನು ದೆಹಲಿ ಮೆಟ್ರೋ ಗಿಟ್ಟಿಸಿಕೊಂಡಿದೆ, ಇಡೀ ವಿಶ್ವದಾದ್ಯಂತ ಸಿವಿಲ್ ಎಂಜಿನಿಯರಿಂಗ್ ತಂತ್ರಜ್ಞಾನದ ಅಭಿವೃದ್ಧಿ ಪ್ರದರ್ಶನ ಯೋಜನೆಗಳಲ್ಲಿ ದೆಹಲಿ ಮೆಟ್ರೋ ಈ ಪ್ರಶಸ್ತಿಯನ್ನು ಪಡೆದುಕೊಂಡಿದೆ ಎಂದು ತಿಳಿದು ಬಂದಿದೆ.

* ಪ್ರಸ್ತುತ ದೆಹಲಿ ಮೆಟ್ರೋ ಯೋಜನೆಯ ನಿರ್ಮಾಣ ಸ್ಥಳಗಳಲ್ಲಿ ಸುರಕ್ಷತೆ ಮತ್ತು ದಕ್ಷತೆಯ ವಿಷಯಗಳ ಬಗ್ಗೆ ಜಾಗೃತಿ ಮೂಡಿಸಿದರಿಂದ ಹಾಗೂ ನಿವಾಸಿಗಳಿಗೆ ಸುರಕ್ಷಿತ ಮತ್ತು ಆರಾಮದಾಯಕ ಸಾರಿಗೆಯನ್ನು ನೀಡಿವೆ ಎಂದು ಉಲ್ಲೇಖಿಸಲಾಗಿದೆ.

## ತಮಿಳುನಾಡಿನ ಕ್ರೀಡಾಪಟುಗಳು ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದರೆ 3 ಕೋಟಿ ರೂ.



* ಪ್ರಸ್ತುತ ತಮಿಳುನಾಡಿನ ಕ್ರೀಡಾಪಟುಗಳು ಟೋಕಿಯೊ ಒಲಿಂಪಿಕ್ಸ್ ನಲ್ಲಿ ಚಿನ್ನದ ಪದಕ ಗೆದ್ದರೆ ಆ ಕ್ರೀಡಾ ಪಟುಗಳಿಗೆ 3 ಕೋಟಿ ನೀಡಲಾಗುವುದು, ಬೆಳ್ಳಿ ಪದಕ ಗೆದ್ದವರಿಗೆ 2 ಕೋಟಿ ಹಾಗೂ ಕಂಚಿನ ಪದಕ ಜಯಿಸಿದವರಿಗೆ 1 ಕೋಟಿ ನೀಡಲಾಗುತ್ತದೆ ಎಂದು ತಮಿಳನಾಡು ಮುಖ್ಯಮಂತ್ರಿ ಎಂ.ಕೆ.ಸ್ಟ್ಯಾಲಿನ್ ಅವರು ತಿಳಿಸಿದ್ದಾರೆ.

* ಕ್ರೀಡಾಪಟುಗಳಿಗೆ ಕ್ರೀಡೆಗೆ ಉತ್ತೇಜನ ನೀಡಲು ಹಾಗೂ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ಸಾಧನೆ ಮಾಡುವವರನ್ನು ಗೌರವ ನೀಡಲಾಗುತ್ತದೆ, ಪ್ರಸ್ತುತ ಈ ಟೋಕಿಯೋ ಒಲಿಂಪಿಕ್ಸ್'ನಲ್ಲಿ ಪದಕ ಗೆದ್ದವರಿಗೆ ಸರ್ಕಾರದಿಂದಲೇ ಘೋಷಣೆ ಮಾಡಿರುವ ಹಣವನ್ನು ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

* ತಮಿಳುನಾಡು ರಾಜ್ಯದಿಂದ ಒಲಿಂಪಿಕ್ಸ್'ಗೆ ಆಯ್ಕೆಯಾಗಿರುವ ಕ್ರೀಡಾ ಪಟುಗಳಿಗೆ ತಲಾ 5 ಲಕ್ಷ ರೂ. ನೀಡಲಾಗಿದೆ, ಹಾಗೂ ಭಾರತದ ಮೊದಲ ಮಹಿಳಾ ಕ್ರೀಡಾಪಟು ಸಿ.ಎ.ಭವಾನಿ ಅವರು ಫೆನ್ಸಿಂಗ್‌ನಲ್ಲಿ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವದರಿಂದ ಇವರಿಗೆ ತಮಿಳುನಾಡು ಸರ್ಕಾರವು 5 ಲಕ್ಷ ರೂ. ನೀಡಿದೆ ಎಂದು ತಿಳಿಸಿದ್ದಾರೆ.

## ಕತಾರ್ ಅಥ್ಲೀಟ್ ಅಬ್ದಲೇಲ ಅಪಘಾತದಲ್ಲಿ ವಿಧಿವಶ




* ಕತಾರ್'ನ ಅಥ್ಲೆಟಿಕ್ ಓಟಗಾರ ಅಬ್ದಲೇಲ ಹಾರೋನ್ ಅವರು ತಮ್ಮ 24 ನೇ ವಯಸ್ಸಿನಲ್ಲಿ ಅಪಘಾತದಿಂದಾಗಿ ಮೃತಪಟ್ಟಿದ್ದಾರೆ ಎಂದು ಕತಾರ್ ಅಥ್ಲೆಟಿಕ್ ಫೆಡರೇಷನ್ ಮಾಹಿತಿ ನೀಡಿದೆ, ಅಥ್ಲೆಟಿಕ್ ಅಬ್ದಲೇಲ ಹಾರೋನ್ ಅವರು ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್'ನಲ್ಲಿ ಕಂಚಿನ ಪದಕ ಜಯಿಸಿದ್ದರು.

* 2017 ರ ವಿಶ್ವ ಚಾಂಪಿಯನ್‌ಷಿಪ್'ನಲ್ಲಿ ಅಥ್ಲೆಟಿಕ್ ಅಬ್ದಲೇಲ ಹಾರೋನ್ ಅವರು 44.48 ಸೆಕೆಂಡುಗಳಲ್ಲಿ 400 ಮೀ. ಓಟವನ್ನು ಓಡಿ ಕಂಚಿನ ಪದಕ ಜಯಿಸಿದ್ದರು.

* 2016 ರಲ್ಲಿ ಪೋರ್ಟ್‌ಲ್ಯಾಂಡ್'ನಲ್ಲಿ ನಡೆದಿರುವ ವಿಶ್ವ ಒಳಾಂಗಣ ಚಾಂಪಿಯನ್‌ಷಿಪ್'ನಲ್ಲಿ ಬೆಳ್ಳಿ ಪದಕವನ್ನು ಪಡೆದಿದ್ದರು, ಮತ್ತೇ 2018 ರ ಜಕಾರ್ತದಲ್ಲಿ ನಡೆದಿರುವ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನವನ್ನು ಜಯಿಸಿದ್ದರು.

## ತಾಜ್ ವಿಶ್ವದ ಪ್ರಬಲ ಹೋಟೆಲ್ ಬ್ರಾಂಡ್



* ಇಂಡಿಯನ್ ಹೊಟೇಲ್ ಕಂಪನಿ ಪ್ರಕಾರ ದಕ್ಷಿಣ ಏಷ್ಯಾದ ಅತಿದೊಡ್ಡ ಆತಿಥ್ಯ ಕಂಪನಿ ಹಾಗೂ ಸಾಂಪ್ರದಾಯಿಕ ಬ್ರಾಂಡ್ ತಾಜ್'ನ್ನು ಬ್ರಾಂಡ್ ಫೈನಾನ್ಸ್ ವಿಶ್ವದಾದ್ಯಂತ ಪ್ರಬಲ ಹೋಟೆಲ್ ಬ್ರಾಂಡ್ ಎಂದು ರೇಟ್ ಮಾಡಿದೆ.

* ಪ್ರಸ್ತುತ ವಿಶ್ವದ ಪ್ರಮುಖ ಬ್ರಾಂಡ್ ಮೌಲ್ಯಮಾಪನ ಸಲಹಾ ಸಂಸ್ಥೆಯಾಗಿರುವ ಬ್ರಾಂಡ್ ಫೈನಾನ್ಸ್ ತನ್ನ ವಾರ್ಷಿಕ "ಹೊಟೇಲ್ 50 2021" ವರದಿಯಲ್ಲಿ ಈ ಘೋಷಣೆಯನ್ನು ಪ್ರಕಟಿಸಿದೆ, ಪ್ರಸ್ತುತ ಈ ವರದಿಯು ವಿಶ್ವಾದ್ಯಂತ ಇರುವ ಅತ್ಯಂತ ಮೌಲ್ಯಯುತ ಹಾಗೂ ಪ್ರಬಲ ಹೋಟೆಲ್ ಬ್ರಾಂಡ್‌ಗಳನ್ನು ಗುರುತಿಸುತ್ತದೆ.

* ವಿಶ್ವ ದರ್ಜೆಯ ಗ್ರಾಹಕ ಸೇವೆಗಾಗಿ ತಾಜ್ ಹೋಟೆಲ್ ಎಎಎ ರೇಟಿಂಗ್ ಪಡೆದುಕೊಂಡಿದೆ, ಅಂದರೆ 100 ರಲ್ಲಿ 89.3 ಬ್ರಾಂಡ್ ಸಾಮರ್ಥ್ಯದ ಸೂಚ್ಯಂಕ ಪಡೆದುಕೊಂಡಿದೆ.

* ಪ್ರಸ್ತುತ ತಾಜ್ ಹೋಟೆಲ್'ನ್ನು 1903 ರಲ್ಲಿ ಟಾಟಾ ಗ್ರೂಪ್‌ನ ಸಂಸ್ಥಾಪಕರಾಗಿದ್ದ ಜಮ್‌ಸೆಟ್ಜಿ ಟಾಟಾ ಅವರು ಈ ಹೋಟೆಲ್'ನ್ನು ಆರಂಭಿಸಿದರು, ಇದು ಇಂಡಿಯನ್ ಹೊಟೇಲ್ ಕಂಪನಿ ಲಿಮಿಟೆಡ್‌ನ ಅಂಗಸಂಸ್ಥೆಯಾಗಿದೆ ಹಾಗೂ ಇದು ತನ್ನ ಪ್ರಧಾನ ಕಚೇರಿಯ ಮುಂಬೈನ ನಾರಿಮನ್ ಪಾಯಿಂಟ್‌ನ ಎಕ್ಸ್‌ಪ್ರೆಸ್ ಟವರ್ಸ್ ಹೊಂದಿದೆ.

* ಪ್ರಸ್ತುತ ತಾಜ್ ಹೋಟೆಲ್ ಕಂಪನಿಯು 100 ಕ್ಕೂ ಹೆಚ್ಚು ಹೋಟೆಲ್ ಗಳು ಮತ್ತು ರೆಸಾರ್ಟ್‌ಗಳ ಕಾರ್ಯವನ್ನು ನಿರ್ವಹಿಸುತ್ತಿದೆ, ಭಾರತದಲ್ಲಿ 84 ಹೋಟೆಲ್'ಗಳು ಮಲೇಷ್ಯಾ, ಮಾಲ್ಡೀವ್ಸ್, ಭೂತಾನ್, ನೇಪಾಳ, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ಯುಕೆ, ಯುಎಇ, ಯುಎಸ್ಎ ಮತ್ತು ಜಾಂಬಿಯಾದ ಹೀಗೆ ಹಲವು ದೇಶಗಳಲ್ಲಿ ಒಟ್ಟು 16 ಹೋಟೆಲ್'ಗಳ ಕಾರ್ಯನಿರ್ವಹಿಸುತ್ತಿದೆ.

## ಮಹಾರಾಷ್ಟ್ರದ ಡ್ರ್ಯಾಗನ್ ಹಣ್ಣು ದುಬೈಗೆ ರಫ್ತು



* ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ತಡಾಸರ್ ಗ್ರಾಮದ ರೈತರು ಬೆಳೆದಿರುವ ಡ್ರ್ಯಾಗನ್ ಹಣ್ಣು'ನ್ನು ದುಬೈಗೆ ರಫ್ತು ಮಾಡಲಾಗಿದೆ.

* ಡ್ರ್ಯಾಗನ್ ಹಣ್ಣನ್ನು 'ಕಮಲಂ' ಎಂದು ಕರೆಯುತ್ತಾರೆ, ಒಡಿಶಾ, ಕರ್ನಾಟಕ, ಕೇರಳ, ತಮಿಳುನಾಡು, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಗುಜರಾತ್, ಆಂಧ್ರಪ್ರದೇಶ, ರಾಜ್ಯಗಳು ಹಾಗೂ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಅತೀ ಹೆಚ್ಚಾಗಿ ಬೆಳೆಯುತ್ತಾರೆ.

* ಡ್ರ್ಯಾಗನ್ ಹಣ್ಣಿನಲ್ಲಿ 3 ಪ್ರಮುಖ ಪ್ರಭೇದಗಳಿವೆ: ಗುಲಾಬಿ ಚರ್ಮದೊಂದಿಗೆ ಬಿಳಿ ಮಾಂಸ, ಗುಲಾಬಿ ಚರ್ಮದೊಂದಿಗೆ ಕೆಂಪು ಮಾಂಸ, ಹಾಗೂ ಹಳದಿ ಚರ್ಮದೊಂದಿಗೆಬಿಳಿ ಮಾಂಸ.

* ಈ ಡ್ರ್ಯಾಗನ್ ಹಣ್ಣಿನಲ್ಲಿ ಫೈಬರ್, ಜೀವಸತ್ವಗಳು, ಖನಿಜಗಳು ಮತ್ತು ಉತ್ಕರ್ಷಣ ನಿರೋಧಕ ಶಕ್ತಿಯನ್ನು ಹೊಂದಿದೆ, ಈ ಹಣ್ಣು'ನ್ನು ಭಾರತದಲ್ಲಿ ಅಂದರೆ 1990 ರ ದಶಕದ ಆರಂಭದಲ್ಲಿ ಬೆಳೆಯಲು ಆರಂಭಿಸಿದರು.

* ಈ ಹಿಂದೆ 2020 ರ ಜುಲೈ ತಿಂಗಳಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಗುಜರಾತ್‌ನ ಶುಷ್ಕ ಕಚ್ ಪ್ರದೇಶದಲ್ಲಿ ಡ್ರ್ಯಾಗನ್ ಹಣ್ಣು ಸಾಕಾಣಿಕೆ ಬಗ್ಗೆ ಮಾಹಿತಿಯನ್ನು ನೀಡಿದ್ದರು.

* 2021 ರ ಜನವರಿ ತಿಂಗಳಿನಲ್ಲಿ ಗುಜರಾತ್ ಸರ್ಕಾರವು ಡ್ರ್ಯಾಗನ್ ಹಣ್ಣನ್ನು 'ಕಮಲಂ' ಎಂದು ನಾಮಕರಣ ಮಾಡಲಾಗಿದೆ.

# 29-06-2021

## ಭಾರತದ ಪಾವತಿಗಳ ಮುಖ್ಯಸ್ಥರನ್ನಾಗಿ ಮನೇಶ್ ಮಹಾತ್ಮೆ ಅವರನ್ನು ನೇಮಿಸಿದ ವಾಟ್ಸಾಪ್



* ಪ್ರಸ್ತುತ ಭಾರತದ ಪಾವತಿಗಳ ಮುಖ್ಯಸ್ಥರನ್ನಾಗಿ ಮನೇಶ್ ಮಹಾತ್ಮೆ ಅವರನ್ನು ನೇಮಿಸಿದೆ, ಇವರು ಫೇಸ್‌ಬುಕ್ ಒಡೆತನದ ಮೆಸೇಜಿಂಗ್ ಪ್ಲ್ಯಾಟ್ ಫಾರ್ಮ್ ಆಗಿರುವ ವಾಟ್ಸಾಪ್, ಅಮೆಜಾನ್ ಪೇ ಕಾರ್ಯನಿರ್ವಾಹಕರಾಗಿದ್ದಾರೆ.

* ಮನೇಶ್ ಮಹಾತ್ಮೆ ಅವರ ನೇಮಕದಿಂದ ಬಳಕೆದಾರರಿಗೆ ಪಾವತಿ ಅನುಭವವನ್ನು ಸುಗಮರೀತಿಯಲ್ಲಿ ಉತ್ತಮಗೊಳಿಸುವದು ಹಾಗೂ ಸೇವಾ ಕೊಡುಗೆಗಳನ್ನು ಹೆಚ್ಚಿಸಲು ಇವರು ಕೇಂದ್ರೀಕರಿಸಲಿದ್ದಾರೆ ಎಂದು ವಾಟ್ಸಾಪ್ ಕಂಪನಿ ಪ್ರಕಟಣೆಯಲ್ಲಿ ಮಾಹಿತಿಯನ್ನು ನೀಡಿದೆ.

* ಮನೇಶ್ ಮಹಾತ್ಮೆ ಅವರು ಈ ಮೊದಲು ಅಮೆಜಾನ್ ಪೇನಲ್ಲಿ 7 ವರ್ಷಗಳ ಕಾಲ ಕಾರ್ಯ ನಿರ್ವಹಿಸಿದ್ದಾರೆ, ಸಿಟಿಬ್ಯಾಂಕ್, ಏರ್‌ಟೆಲ್ ಮನಿ ಹಾಗೂ ಅಮೆಜಾನ್‌ನಾದ್ಯಂತ ಡಿಜಿಟಲ್ ಹಣಕಾಸು ಸೇವೆಗಳು ಹಾಗೂ ಪಾವತಿಗಳಲ್ಲಿ ವಿಷಯಗಳಲ್ಲಿ ಒಟ್ಟಾರೆ 17 ವರ್ಷದ ಅನುಭವ ಹೊಂದಿದ್ದಾರೆ, ಹಾಗೂ ಅಮೆಜಾನ್ ಪೇ ಇಂಡಿಯಾದ ನಿರ್ದೇಶಕರು ಮತ್ತು ಮಂಡಳಿಯ ಸದಸ್ಯರು ಆಗಿದ್ದರು.

## ಕೋವಿಡ್ ಪ್ಯಾಕೇಜ್ ಘೋಷಿಸಿದ ಕೇಂದ್ರ ಸರ್ಕಾರ



* ಪ್ರಸ್ತುತ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕೋವಿಡ್ 19 ನ ಪರಿಸ್ಥಿತಿಯಲ್ಲಿ ಹೊಸ ಚೈತನ್ಯ ವೃದ್ಧಿಸುವ

ಉದ್ದೇಶದಿಂದ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ (MSME) ಉದ್ಯಮಗಳಿಗೆ ಸಾಲ ನೀಡುವ ಸಲುವಾಗಿ ಹೆಚ್ಚುವರಿಯಾಗಿ 1.5 ಲಕ್ಷ ಕೋಟಿ ರೂ. ನಿಗದಿ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ, ಇದರ ಜೊತೆಯಲ್ಲಿ ಆರೋಗ್ಯ ಕ್ಷೇತ್ರಕ್ಕೆ ಹಣಕಾಸಿನ ನೆರವು ನೀಡಲಾಗುತ್ತದೆ ಮತ್ತು ಪ್ರವಾಸೋದ್ಯಮಕ್ಕೆ ಇಲಾಖೆಗೆ ಸಾಲದ ರೂಪದಲ್ಲಿ ಹಣ ಸಹಾಯ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

* ಈ ಹಿಂದೆ ಘೋಷಣೆ ಮಾಡಿರುವಹಾಗೆ ಗರೀಬ ಕಲ್ಯಾಣ ಯೋಜನೆ ಅಡಿಯಲ್ಲಿ ಬಡವರಿಗೆ ನವೆಂಬರ್ ತಿಂಗಳಿಂತನಕ ಉಚಿತವಾಗಿ ಆಹಾರ ಧಾನ್ಯ ನೀಡಲು 93 ಸಾವಿರ ಕೋಟಿ, ಇದೀಗ ಆಹಾರ ಧಾನ್ಯ ವಿತರಣೆ ಮಾಡಲು ಹೆಚ್ಚುವರಿಯಾಗಿ 14,775 ಕೋಟಿ ರೂ. ನೀಡಲಾಗುವದು.

* ಕೇಂದ್ರವು ತುರ್ತು ಸಾಲ ಖಾತರಿ ಯೋಜನೆಯ ಮೊತ್ತವನ್ನು 4.5 ಲಕ್ಷ ಕೋಟಿಗೆ ಏರಿಕೆ ಮಾಡಿದೆ, ಇದರ ಒಟ್ಟು ಮೊತ್ತ 3 ಲಕ್ಷ ಕೋಟಿ ರೂ. ಈ ತುರ್ತು ಸಾಲ ಖಾತರಿ ಯೋಜನೆಯ ಅಡಿಯಲ್ಲಿ ಸಣ್ಣ ಉದ್ದಿಮೆಗಳಿಗೆ ಯಾವುದೇ ಅಡಮಾನಗಳಿಲ್ಲದೆ ಸಾಲ ನೀಡಿಕೆ.

* ಆರೋಗ್ಯ ಸೇವಾ ವಲಯಕ್ಕಾಗಿ 50 ಸಾವಿರ ಕೋಟಿ ರೂ. ನಿಗದಿ ಮಾಡಿದ್ದಾರೆ.

* ಭಾರತ್‌ನೆಟ್ ಯೋಜನೆಯ ಅಡಿಯಲ್ಲಿ ದೇಶದ ಎಲ್ಲ ಹಳ್ಳಿಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕ ನೀಡಲು 19,041 ಕೋಟಿ ರೂ. ನಿಗದಿ, ಹಾಗೂ ಹೆಚ್ಚುವರಿ ಮೊತ್ತ 61,109 ಕೋಟಿಗೆ ಏರಿಕೆಯಾಗಲಿದೆ.

* ಆಸ್ಪತ್ರೆಗಳಲ್ಲಿ ಮಕ್ಕಳಿಗೆ ಅರೋಗ್ಯ ಸೌಲಭ್ಯಗಳನ್ನು ಸಿದ್ಧಪಡಿಸಲು 23,220 ಕೋಟಿ ರೂ. ಘೋಷಣೆ.

* ರೈತ ವರ್ಗಕ್ಕೆ ರಸಗೊಬ್ಬರ ಖರೀದಿಸಲು 14,775 ಕೋಟಿ ರೂ. ಸಬ್ಸಿಡಿಗೆ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

* ಪ್ರವಾಸೋದ್ಯಮ ಕ್ಷೇತ್ರದ ಏಜೆನ್ಸಿಗಳಿಗೆ 10 ಲಕ್ಷ ರೂ. ಸಾಲ ಹಾಗೂ ಪ್ರವಾಸಿ ಗೈಡ್ ಆಗಿ ಕಾರ್ಯ ನಿರ್ವಹಿಸುವವರಿಗೆ 1 ಲಕ್ಷ ರೂ. ನೀಡಲಾಗುವದು ಎಂದು ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

## ಕೋವಿನ್ ಪೋರ್ಟಲ್ ವಿಶ್ವದೆಲ್ಲೆಡೆ




* ಲಸಿಕೆ ನೋಂದಣಿ ಮಾಡುವ ಕೋವಿನ್ ಆಪ್ ಇದೀಗ ವಿಶ್ವದಾದ್ಯಂತ ಪಸರಿಸುತ್ತಿದೆ, ಈ ಕೋವಿನ್ ಆಪ್'ನ ತಂತ್ರಜ್ಞಾನವನ್ನು ಕೋವಿಡ್ ಲಸಿಕಾ ಅಭಿಯಾನದಲ್ಲಿ ಬಳಸಿಕೊಳ್ಳಲು ವಿಶ್ವದ ಸುಮಾರು 50 ಕ್ಕೂ ಹೆಚ್ಚು ರಾಷ್ಟ್ರಗಳು ಮುಂದಾಗಿವೆ.

* ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ CEO ಮತ್ತು ಕೋವಿನ್ ಪೋರ್ಟಲ್ ನ ಮುಖ್ಯಸ್ಥರಾಗಿರುವ ಆರ್. ಎಸ್. ಶರ್ಮಾ ಅವರು ಈ ಮಾಹಿತಿಯನ್ನು ತಮ್ಮಅಧಿಕೃತ ಟ್ವಿಟರ್ ಖಾತೆಯ ಮೂಲಕ ಹಚ್ಚಿಕೊಂಡಿದ್ದಾರೆ.

* ಪ್ರಸ್ತುತ ಮಧ್ಯ ಏಷ್ಯಾ, ಲ್ಯಾಟಿನ್ ಅಮೆರಿಕ ಮತ್ತು ಆಫ್ರಿಕಾದ 50 ಕ್ಕೂ ಹೆಚ್ಚು ದೇಶಗಳು ಈ ಕೋವಿನ ತಂತ್ರಜ್ಞಾನ ಬಳಸಲು ಆಸಕ್ತಿ ತೋರಿವೆ ಎಂದಿದ್ದಾರೆ.

* ಭಾರತವು ಈ ಕೋವಿನ್ ಪ್ಲಾಟ್ ಫಾರ್ಮ್'ನನ್ನು ವಿಶ್ವದಾದ್ಯಂತದ ದೇಶಗಳಿಗೆ ನೀಡುತ್ತಿದೆ ಎಂದು ಘೋಷಣೆ ಮಾಡಿದ್ದಾರೆ, ಇದೇ ಜುಲೈ. 5 ರಂದು "ಕೋವಿನ್ ಗ್ಲೋಬಲ್ ಕಾನ್ಕ್ಲೇವ್"ನಲ್ಲಿ ಪ್ರದರ್ಶನವಾಗಲಿದೆ.

## 'ಅಗ್ನಿ ಪ್ರೈಂ' ಕ್ಷಿಪಣಿ ಪರೀಕ್ಷಾರ್ಥ ಪ್ರಯೋಗ ಯಶಸ್ವಿ



* ಒಡಿಶಾ ರಾಜ್ಯದ ಬಾಲಸೋರ್'ನ ಕರಾವಳಿಯ ಸೇನಾ ನೆಲೆಯಲ್ಲಿ ಅತ್ಯಾಧುನಿಕ ರೂಪಾಂತರಿ ಕ್ಷಿಪಣಿಯಾಗಿರುವ "ಅಗ್ನಿ ಪ್ರೈಮ್" ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಗಿ ನಡೆಸಿದ್ದಾರೆ.

* ಈ "ಅಗ್ನಿ ಪ್ರೈಮ್" ಕ್ಷಿಪಣಿಯು 2 ಸಾವಿರ ಕಿ.ಮೀ ದೂರ ಕ್ರಮಿಸುವ ಸಾಮರ್ಥ್ಯವನ್ನು ಹೊಂದಿದೆ, ಇದೀಗ ಒಡಿಶಾ ಕರಾವಳಿ ತೀರದಲ್ಲಿರುವ ಅಬ್ದುಲ್ ಕಲಾಂ ದ್ವೀಪದ ಸಂಚಾರಿ ಉಡಾವಣಾ ಕೇಂದ್ರದಿಂದ ಯಶಸ್ವಿಯಾಗಿ ಪರೀಕ್ಷೆ ನಡೆಸಲಾಗಿದೆ ಎಂದು DRDO ಮಾಹಿತಿ ನೀಡಿದೆ.

* ಈ "ಅಗ್ನಿ ಪ್ರೈಮ್" ಕ್ಷಿಪಣಿಯನ್ನು ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆ ಅಭಿವೃದ್ಧಿಪಡಿಸಿದೆ.

## ಕೇಂದ್ರ ಸರ್ಕಾರವು ಅಟಾರ್ನಿ ಜನರಲ್ ಕೆ. ವೇಣುಗೋಪಾಲ್ ಅಧಿಕಾರವಧಿ ಒಂದು ವರ್ಷಕ್ಕೆ ವಿಸ್ತರಿಸಿದೆ



* ಪ್ರಸ್ತುತ ಕೇಂದ್ರ ಸರ್ಕಾರವು ಅಟಾರ್ನಿ ಜನರಲ್ ಆಗಿರುವ ಕೆ. ವೇಣುಗೋಪಾಲ್ ಅವರ ಅಧಿಕಾರ ಅವಧಿಯನ್ನು ಒಂದು ವರ್ಷ ವಿಸ್ತರಿಸಲು ನಿರ್ಧರಿಸಿದೆ.

* ಸಾಮಾನ್ಯವಾಗಿ ಅಟಾರ್ನಿ ಜನರಲ್ ಅವರ 3 ವರ್ಷಗಳ ಅಧಿಕಾರ ಅವಧಿಯನ್ನು ಹೊಂದಿರುತ್ತದೆ, ಕೆ. ವೇಣುಗೋಪಾಲ್ ಅವರ ಮೊದಲ

ಅವಧಿ ಕಳೆದ ವರ್ಷ ಮುಕ್ತಾಯವಾಗುತ್ತಿರುವ ಹಿನ್ನಲೆಯಿಂದ ಒಂದು ವರ್ಷದ ಅಧಿಕಾರ ಅವಧಿಯನ್ನು ಹೆಚ್ಚಿಸುವಂತೆ ಸರ್ಕಾರವನ್ನು ಕೇಳಿಕೊಂಡಿದ್ದರು, ಇವರು ಸುಪ್ರೀಂ ಕೋರ್ಟ್‌ನಲ್ಲಿ ನಿರ್ವಹಿಸುತ್ತಿರುವ ಉನ್ನತ ಮಟ್ಟದ ಪ್ರಕರಣಗಳ ಅನುಭವವನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರವು ಇವರ ಅಧಿಕಾರ ಅವಧಿಯನ್ನು ಒಂದು ವರ್ಷ ವಿಸ್ತರಿಸಲು ತೀರ್ಮಾನಿಸಿದೆ.

* ಕೆ. ವೇಣುಗೋಪಾಲ್ ಅವರು ಅಟಾರ್ನಿ ಜನರಲ್ ಆಗಿ 2017 ರ ಜುಲೈ 1 ರಂದು ಅಧಿಕಾರ ಸ್ವೀಕಾರ ಮಾಡಿದ್ದಾರೆ.

## ಸರ್ನೋಬತ್'ಗೆ ಶೂಟಿಂಗ್ ವಿಶ್ವಕಪ್'ನಲ್ಲಿ ಚಿನ್ನ



* ಇಂಟರ್‌ನ್ಯಾಶನಲ್ ಶೂಟಿಂಗ್ ಸ್ಪೋರ್ಟ್ಸ್ ವಿಶ್ವಕಪ್ ಟೂರ್ನಿಯಲ್ಲಿ ಶೂಟರ್ ರಾಹಿ ಸರ್ನೋಬತ್ ಅವರು ಚಿನ್ನದ ಪದಕವನ್ನು ಪಡೆದುಕೊಂಡಿದ್ದಾರೆ.

* ಸರ್ನೋಬತ್ ಅವರು ಮಹಿಳೆಯರ ವಿಭಾಗದ 25 ಮೀ. ಏರ್ ಪಿಸ್ತೂಲ್ ಫೈನಲ್'ನಲ್ಲಿ 39 ಅಂಕಗಳನ್ನೂ ಪಡೆದು ಚಿನ್ನದ ಪದಕವನ್ನು ಜಯಿಸಿದ್ದಾರೆ.

## ಮೆಕ್ ಲಾಫ್ಲಿನ್ ಅವರು ಹರ್ಡಲ್ಸ್ ನಲ್ಲಿ ದಾಖಲೆ



* ಪ್ರಸ್ತುತ ಅಮೆರಿಕದ ಮೆಕ್ ಲಾಫ್ಲಿನ್ ಅವರು ಮಹಿಳೆ ವಿಭಾಗದ 400 ಮೀ. ಹರ್ಡಲ್ಸ್ ನಲ್ಲಿ ವಿಶ್ವ ದಾಖಲೆಯನ್ನು ಮಾಡಿ ಚಿನ್ನದ ಪದಕವನ್ನು ಜಯಿಸಿದ್ದಾರೆ, ಇವರು ಒಲಿಂಪಿಕ್ಸ್ ಅರ್ಹತೆಗಾಗಿ ನಡೆದ ರಾಷ್ಟ್ರೀಯ ಟ್ರಯಲ್ಸ್'ನಲ್ಲಿ ಸಾಧನೆಯನ್ನು ಮಾಡಿದ್ದಾರೆ.

* ಮೆಕ್ ಲಾಫ್ಲಿನ್ ಅವರು ಹರ್ಡಲ್ಸ್‌ನಲ್ಲಿ ಕೇವಲ 51.90 ಸೆಕೆಂಡುಗಳಲ್ಲಿ ಗುರಿ ಪಾಲುಪಿದ್ದಾರೆ.

* ಈ ಹಿಂದೆ ದಲಿಲಾ ಮುಹಮ್ಮದ್ ಅವರು 2019 ರ ದೋಹಾದಲ್ಲಿ ನಡೆದಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮೆಕ್ ಲಾಫ್ಲಿನ್ ಅವರನ್ನು ಸೋಲಿಸಿ ವಿಶ್ವ ದಾಖಲೆ ಬರೆದಿದ್ದರು.

## ರಾಷ್ಟ್ರೀಯ ಅಂಕಿಅಂಶ ದಿನ




* ಪ್ರಸ್ತುತ ದಿವಂಗತ ಪ್ರೊಫೆಸರ್ ಪ್ರಸಂತ ಚಂದ್ರ ಮಹಾಲನೋಬಿಸ್ ಅವರ ಜನ್ಮ ದಿನದ ಸ್ಮರಣಾರ್ಥವಾಗಿ ಜೂನ್. 29ರಂದು ರಾಷ್ಟ್ರೀಯ ಅಂಕಿಅಂಶ ದಿನವನ್ನು ಆಚರಣೆ ಮಾಡಲಾಗುತ್ತದೆ.

* 2021 ರ ರಾಷ್ಟ್ರೀಯ ಅಂಕಿಅಂಶ ದಿನದ ವಿಷಯವು ಯುಎನ್ ಸುಸ್ಥಿರ ಅಭಿವೃದ್ಧಿ ಗುರಿ 2 ರಿಂದ ಹಸಿವನ್ನು ಮುಕ್ತಗೊಳಿಸಿ ಆಹಾರ ಭದ್ರತೆ ಹಾಗೂ ಸುಧಾರಿತ ಪೋಷಣೆಯನ್ನು ಸಾಧಿಸಿ ಜೊತೆಗೆ ಸುಸ್ಥಿರ ಕೃಷಿಯನ್ನು ಉತ್ತೇಜಿಸಿ' ಇದು ಈ 2021 ನೇ ವರ್ಷದ ಥಿಮ್ ಆಗಿದೆ.

* ಸಾಮಾನ್ಯವಾಗಿ ಪ್ರಸಂತ ಚಂದ್ರ ಮಹಾಲನೋಬಿಸ್ ಅವರನ್ನು ಭಾರತೀಯ ಅಂಕಿಅಂಶಗಳ ಪಿತಾಮಹ ಎಂದು ಕರೆಯುತ್ತಾರೆ, ಹಾಗೂ ಇವರು 1893 ರ ಜೂನ್. 29 ರಂದು ಕಲ್ಕತ್ತಾ ನಗರದಲ್ಲಿ ಜನಿಸಿದ್ದಾರೆ, ಹಾಗೂ ಇವರು ಭಾರತದ ಮೊದಲ ಯೋಜನಾ ಆಯೋಗದ ಸದಸ್ಯರಾಗಿದ್ದರು.

* ಮಹಾಲನೋಬಿಸ್ ದೂರ ಎಂಬುವದು ಸೂತ್ರವಾಗಿದೆ, ಇದನ್ನು ಒಂದು ಬಿಂದು ಮತ್ತು ವಿತರಣೆಯ ನಡುವಿನ ಅಂತರವನ್ನು ಕಂಡುಹಿಡಿಯಲು ಬಳಸುತ್ತಾರೆ, ಮತ್ತು ಕ್ಲಸ್ಟರ್ ವಿಶ್ಲೇಷಣೆ ಹಾಗೂ ವರ್ಗೀಕರಣದ ಕ್ಷೇತ್ರದಲ್ಲಿ ವ್ಯಾಪಕವಾಗಿ ಈ ಸೂತ್ರವನ್ನು ಬಳಸುತ್ತಾರೆ.

## ಮೊಬೈಲ್ ವರ್ಲ್ಡ್ ಕಾಂಗ್ರೆಸ್




* 2021 ರ ಮೊಬೈಲ್ ವರ್ಲ್ಡ್ ಕಾಂಗ್ರೆಸ್ (MWC) ವಿಶ್ವದ ಅತಿದೊಡ್ಡ ಮೊಬೈಲ್ ಈವೆಂಟ್ ಆಗಿದೆ, ಈ ಈವೆಂಟ್'ನ್ನು ಜೂನ್. 28 ರಂದು ಬಾರ್ಸಿಲೋನಾದಲ್ಲಿ ಆರಂಭವಾಗಿದೆ.

* ಕೋವಿಡ್ 19 ಸಾಂಕ್ರಾಮಿಕ ರೋಗದ ನಡುವೆ ಹೈಬ್ರಿಡ್ ರೂಪದಲ್ಲಿ ಆಯೋಜಿಸಲಾಗುತ್ತಿರುವ ಅತಿದೊಡ್ಡ ವ್ಯಾಪಾರ ಪ್ರದರ್ಶನ ಇದಾಗಿದೆ, ಈ ಈವೆಂಟ್'ನಲ್ಲಿ ನೋಕಿಯಾ, ಗೋಗಲ್, ಫೇಸ್ ಬುಕ್, ಶಿಯೋಮಿ, ಮತ್ತು ಸೋನಿ ಬ್ರಾಂಡ್‌ಗಳು ಪಾಲ್ಗೊಳ್ಳುತ್ತಿವೆ.

* MWC ಬಾರ್ಸಿಲೋನಾ ಟೆಲಿಕಾಂ ಉದ್ಯಮದಲ್ಲಿನ ಆವಿಷ್ಕಾರಗಳನ್ನು ಕೇಂದ್ರೀಕರಿಸಿದ ವಾರ್ಷಿಕ ಕಾರ್ಯಕ್ರಮವಾಗಿದೆ, ಈ ಕಾರ್ಯಕ್ರಮದಲ್ಲಿ ಪ್ರಮುಖ ಟೆಲಿಕಾಂ ಆಪರೇಟರ್‌ಗಳು, ಸ್ಮಾರ್ಟ್‌ಫೋನ್ ಕಂಪನಿಗಳು, ಹಾಗೂ ವಿಶ್ವದಾದ್ಯಂತ ಇರುವ ಟೆಲಿಕಾಂ ಸಚಿವಾಲಯಗಳ ಪ್ರತಿನಿಧಿಗಳು ಪಾಲ್ಗೊಳ್ಳುತ್ತಾರೆ.

* ಪ್ರಸ್ತುತ 2006 ರಿಂದ ಬಾರ್ಸಿಲೋನಾ MWC'ಗೆ ಆತಿಥ್ಯ ನೀಡುತ್ತಿದೆ, 2021 ನೇ ವರ್ಷದ MWC'ನ್ನು ಇದೇ ಜೂನ್. 28 ರಿಂದ ಜುಲೈ. 1 ರವರೆಗೆ ನಡೆಸಲಾಗುತ್ತದೆ, ಈ ಹಿಂದೆ 2020 ರಲ್ಲಿ ಈ ಕಾರ್ಯಕ್ರಮವನ್ನು ಕೋವಿಡ್ 19 ಕಾರಣದಿಂದಾಗಿ ರದ್ದುಪಡಿಸಲಾಯಿತು.

## 2021 ರ ಫುಕುಯೋಕಾ ಪ್ರಶಸ್ತಿಗೆ ಆಯ್ಕೆಯಾದ ಪಿ.ಸೈನಾಥ್



* 2021 ರ ಫುಕುಯೋಕಾ ಪ್ರಶಸ್ತಿಯನ್ನು ಖ್ಯಾತ ಪತ್ರಕರ್ತ ಪಿ.ಸೈನಾಥ್ ಅವರನ್ನು ಆಯ್ಕೆ ಮಾಡಲಾಗಿದೆ

* ಫುಕುಯೋಕಾ ಬಹುಮಾನದ 'ಗ್ರ್ಯಾಂಡ್ ಪ್ರಶಸ್ತಿ' ಸೈನಾಥ್ ಅವರು ಸ್ವೀಕಾರ ಮಾಡಲಿದ್ದಾರೆ, ಹಾಗೂ ಜಪಾನ್'ನ ಪ್ರೊ. ಕಿಶಿಮೊಟೊ ಮಿಯೊ ಅವರಿಗೆ ಶೈಕ್ಷಣಿಕ ಪ್ರಶಸ್ತಿ, ಹಾಗೂ ಥೈಲ್ಯಾಂಡ್'ನ ಚಲನಚಿತ್ರ ನಿರ್ಮಾಪಕ ಪ್ರಬ್ದಾ ಯೂನ್'ಗೆ ಕಲೆ ಮತ್ತು ಸಂಸ್ಕೃತಿಗೆ ಈ ಬಹುಮಾನವನ್ನು ನೀಡಲಾಗುತ್ತದೆ ಎಂದು ತಿಳಿಸಲಾಗಿದೆ.

* ಸೈನಾಥ್ ಅವರ ಗ್ರಾಮೀಣ ಭಾರತದ ಬಗೆಗಿನ ಬರಹಗಳು ಹಾಗೂ ನಾಗರಿಕ ಸಹಕಾರವನ್ನು ಉತ್ತೇಜಿಸುವದರ ಜೊತೆಗೆ ಹೊಸ ರೀತಿಯ ಜ್ಞಾನವನ್ನು ರಚಿಸುವ ಕಾರ್ಯಕ್ಕಾಗಿ ಈ ಪ್ರಶಸ್ತಿ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

* ಈ ಫುಕುಯೋಕಾ ಪ್ರಶಸ್ತಿಯನ್ನು ಫುಕುಯೋಕಾ ಸಿಟಿ ಇಂಟರ್ನ್ಯಾಷನಲ್ ಫೌಂಡೇಶನ್ ಸ್ಥಾಪಿಸಿದೆ, ಪ್ರಸ್ತುತ ಈ ಪ್ರಶಸ್ತಿಯನ್ನು ಏಷ್ಯನ್ ಸಂಸ್ಕೃತಿ ಸಂರಕ್ಷಿಸುವ ವ್ಯಕ್ತಿಗಳು ಅಥವಾ ಸಂಸ್ಥೆಗಳ ಗೌರವವನ್ನು ಗೌರವಿಸಲು ನೀಡಲಾಗುತ್ತದೆ.

* ಫುಕುಯೋಕಾ ಪ್ರಶಸ್ತಿಯು 3ಬಹುಮಾನ ವಿಭಾಗಗಳನ್ನು ಒಳಗೊಂಡಿದೆ ಅವುಗಳು: ಗ್ರ್ಯಾಂಡ್ ಪ್ರಶಸ್ತಿ, ಶೈಕ್ಷಣಿಕ ಪ್ರಶಸ್ತಿ ಹಾಗೂ ಕಲೆ ಮತ್ತು ಸಂಸ್ಕೃತಿ ಪ್ರಶಸ್ತಿಗಳಾಗಿವೆ.

* ಒಟ್ಟಾರೆ '11' ಭಾರತೀಯರು ಫುಕುಯೋಕಾ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ, ಕಳೆದ 30 ವರ್ಷಗಳಲ್ಲಿ 28 ದೇಶಗಳಿಂದ ಸುಮಾರು 115 ಜನರು ಈ ಬಹುಮಾನವನ್ನು ಪಡೆದುಕೊಂಡಿದ್ದಾರೆ.

# 30-06-2021

## ಕೋವ್ಯಾಕ್ಸಿನ್ ಲಸಿಕೆ ಆಲ್ಫಾ, ಡೆಲ್ಟಾ ರೂಪಾಂತರಗಳ ವಿರುದ್ಧ ಪರಿಣಾಮಕಾರಿ




* ಭಾರತ್ ಬಯೋಟೆಕ್ ಸಂಸ್ಥೆಯು ಕೋವಿಡ್ 19 ಸಕ್ರಾಮಿಕ ರೋಗದ ವಿರುದ್ಧ ಹೋರಾಡಲು ಕೋವ್ಯಾಕ್ಸಿನ್ ಕೊರೊನಾ ಲಸಿಕೆ ಅಭಿವೃದ್ಧಿಪಡಿಸಿದೆ, ಇದೀಗ ಈ ಲಸಿಕೆಯು ಆಲ್ಫಾ, ಡೆಲ್ಟಾ ಕರೋನ ರೂಪಾಂತರ ವೈರಸ್'ಗಳ ವಿರುದ್ಧ ಹೋರಾಡಲು ಪರಿಣಾಮಕಾರಿಯಾಗಿದೆ ಅಲ್ಲದೆ ತಟಸ್ಥಗೊಳಿಸುವ ಸಾಮರ್ಥ್ಯವನ್ನು ಈ ಲಸಿಕೆ ಹೊಂದಿದೆ ಎಂದು ಅಮೆರಿಕ ರಾಷ್ಟ್ರೀಯ ಆರೋಗ್ಯ (NIH) ಸಂಸ್ಥೆ ತಿಳಿಸಿದೆ.

* ಕೋವಿಡ್ 19 ನ ಆಲ್ಫಾ ಅಥವಾ B.1.1.7 ರೂಪಾಂತರ ವೈರಸ್ ಮೊದಲ ಬಾರಿ ಬ್ರಿಟನ್‌ನಲ್ಲಿ ಪತ್ತೆಯಾಗಿದೆ, ಹಾಗೂ ಡೆಲ್ಟಾ ರೂಪಾಂತರ ವೈರಸ್ ಮೊದಲು ಬಾರಿ ಭಾರತದಲ್ಲಿ ಪತ್ತೆಯಾಗಿದೆ ಇದೀಗ ಈ ರೂಪತರಗಳ ವಿರುದ್ಧ ಹೋರಾಡಲು ಈ ಕೋವ್ಯಾಕ್ಸಿನ್ ಸಮರ್ಥವಾಗಿದೆ NIH ತಿಳಿಸಿದೆ.

* ಪ್ರಸ್ತುತ ಈ 'ಕೋವ್ಯಾಕ್ಸಿನ್' ಲಸಿಕೆ 3 ನೇ ಹಂತದ ಪ್ರಯೋಗದ ವರದಿ ಪ್ರಕಾರ ಈ ಲಸಿಕೆಯು ಕೋವಿಡ್ ಸೋಂಕಿನ ವಿರುದ್ಧ ಹೋರಾಡಲು 78% ಪರಿಣಾಮಕಾರಿ ಎಂದು ತಿಳಿಸಿದ್ದಾರೆ.

* ಸುಮಾರು 2.5 ಕೋಟಿಗೂ ಅಧಿಕ ಕೋವ್ಯಾಕ್ಸಿನ್ ಲಸಿಕೆಯ ಡೋಸ'ನ್ನು ಭಾರತ ಹಾಗೂ ಇತರೆ ದೇಶಗಳು ಜನರಿಗೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

## 'ವೈ' ಶ್ರೇಣಿಯ ಭದ್ರತೆ ಭಾರತ್ ಬಯೋಟೆಕ್ ಅಧ್ಯಕ್ಷರಿಗೆ




* ಕೇಂದ್ರ ಸರ್ಕಾರವು ಕೋವಿಡ್ 19 ನ ಕೊವ್ಯಾಕ್ಸಿನ್ ಲಸಿಕೆ ತಯಾರಿಕಾ ಕಂಪನಿ ಭಾರತ್ ಬಯೋಟೆಕ್'ನ ಅಧ್ಯಕ್ಷ ಕೃಷ್ಣ ಅವರಿಗೆ 'ವೈ' ಶ್ರೇಣಿಯ ಭದ್ರತೆಯನ್ನು ನೀಡುತ್ತಿದೆ.

* ಶ್ರೀಯುತ ಕೃಷ್ಣ ಅವರು ಭಾರತ್ ಬಯೋಟೆಕ್'ನ ಸಂಸ್ಥಾಪಕರಾಗಿದ್ದಾರೆ, ಅಲ್ಲದೆ ಔಷಧ ಕಂಡುಹಿಡಿಯುವಿಕೆ ಹಾಗೂ

ಅಭಿವೃದ್ಧಿಪಡಿಸುವುದು ಹೀಗೆ ಅನೇಕ ಆರೋಗ್ಯ ಉತ್ಪನ್ನಗಳ ತಯಾರಿಕೆಯಲ್ಲಿ ಭಾರತ್ ಬಯೋಟೆಕ್ ಕಂಪನಿ ತೊಡಗಿಸಿಕೊಂಡಿದೆ.

* ಭಾರತ್ ಬಯೋಟೆಕ್ ಕಂಪನಿ ಅಧ್ಯಕ್ಷ ಕೃಷ್ಣಾ ಅವರಿಗೆ ಕೇಂದ್ರ ಕೈಗಾರಿಕಾ ಭದ್ರತಾ ಪಡೆಯ (CISF) ಸಶಸ್ತ್ರ ಕಮಾಂಡೊಗಳು ಭದ್ರತೆಯನ್ನು ನೀಡುತ್ತಿದ್ದಾರೆ.

* ಈ ಭಾರತ್ ಬಯೋಟೆಕ್ ಕಂಪನಿ ತೆಲಂಗಾಣ ರಾಜ್ಯದ ಶಮೀರ್ ಪೇಟ್ ಪ್ರದೇಶದಲ್ಲಿದೆ.

## ದಕ್ಷಿಣ ಆಫ್ರಿಕದ ಮಾಜಿ ಅಧ್ಯಕ್ಷ ಜಾಕೋಬ್ ಜುಮಾಗೆ ಜೈಲು ಶಿಕ್ಷೆ



* ಪ್ರಸ್ತುತ ದಕ್ಷಿಣ ಆಫ್ರಿಕದ ಮಾಜಿ ಅಧ್ಯಕ್ಷ ಜಾಕೋಬ್ ಜುಮಾ ಅವರ ಭ್ರಷ್ಟಾಚಾರ ಪ್ರಕರಣದ ವಿಚಾರಣಾ ಆಯೋಗದ ವಿಚಾರಣೆಯಿಂದ ಹೊರನಡೆದ ಕಾರಣದಿಂದಾಗಿ ನ್ಯಾಯಾಂಗ ನಿಂದನೆ ಮಾಡಿದ್ದಾರೆ ಎಂದು ಅವರಿಗೆ ದೇಶದ ಉನ್ನತ ನ್ಯಾಯಾಲಯವು ಇವರಿಗೆ 15 ತಿಂಗಳ ಕಾಲ ಜೈಲು ಶಿಕ್ಷೆಯನ್ನು ವಿಧಿಸಿ ಈ ಶಿಕ್ಷೆಯನ್ನು ಅಮಾನತು ಮಾಡಲಾಗುವದಿಲ್ಲ ಎಂದು ನ್ಯಾಯಾಲಯ ತಿಳಿಸಿದೆ.

* ಮಾಜಿ ಅಧ್ಯಕ್ಷ ಜಾಕೋಬ್ ಜುಮಾ ಅವರು ರಾಜ್ಯ ಹಾಗೂ ಪ್ಯಾರಾಸ್ಟಾಟಲ್ ಸಂಸ್ಥೆಗಳಲ್ಲಿ ಭ್ರಷ್ಟಾಚಾರ ಗೈದು ಲಂಚ ಪಡೆದ ಪ್ರಕರಣದ ವಿಚಾರಣೆಯನ್ನು ವಿಚಾರಣಾ ಆಯೋಗವು ನಡೆಸಿ ಇವರನ್ನು 2 ವರ್ಷಗಳ ಕಾಲ ಜೈಲಿಗೆ ಹಾಕಿ ಎಂದು ಆದೇಶ ಹೊರಡಿಸಿದೆ.

## ವಾಹನ ಸಾಮರ್ಥ್ಯ ಪರೀಕ್ಷೆಗೆ ಬೃಹತ್ ಪರೀಕ್ಷಾ ಟ್ರ್ಯಾಕ್ ಉದ್ಘಾಟನೆ



* ಕೇಂದ್ರ ಭಾರೀ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರಾಗಿರುವ ಪ್ರಕಾಶ್ ಜಾಬ್ಡೇಕರ್ ಅವರು ವಾಹನ ಸಾಮರ್ಥ್ಯ ಪರೀಕ್ಷೆಗೆ ಬೃಹತ್ ಪರೀಕ್ಷಾ ಟ್ರ್ಯಾಕ್'ನ್ನು ಉದ್ಘಾಟಣೆ ಮಾಡಿದ್ದಾರೆ.

* ಈ ಟ್ರ್ಯಾಕ್ ಮಧ್ಯ ಪ್ರದೇಶದ ಇಂದೋರ್'ನ ಪೀಠಂಪುರದಲ್ಲಿದೆ, ರಸ್ತೆಯ ಉದ್ದವು 11.3 ಕಿ.ಮೀ. ಮತ್ತು 52 ಅಡಿ ಅಗಲವಿದೆ, ಈ ಟ್ರ್ಯಾಕ್'ನಲ್ಲಿ ನಾಲ್ಕು ಪಥಗಳಿವೆ.

* ಏಷ್ಯಾದಲ್ಲೇ ಅತೀ ಉದ್ದದ ಪರೀಕ್ಷಾ ಟ್ರ್ಯಾಕ್ ಆಗಿದೆ ಎಂದು ತಿಳಿಸಿದ್ದಾರೆ.

* ಈ ಟ್ರ್ಯಾಕ್'ನಲ್ಲಿ ಹೊಸದಾಗಿ ತಯಾರಿಸಲಾಗಿರುವ ವಾಹನಗಳನ್ನು ಚಲಾಯಿಸಿ ಪರೀಕ್ಷಿಸಬಹುದಾಗಿದೆ, ಪ್ರಕಾಶ್ ಜಾಬ್ಡೇಕರ್ ಅವರು ನ್ಯಾಶನಲ್ ಆಟೋಮೊಟಿವ್ ಟೆಸ್ಟ್ ಟ್ರ್ಯಾಕ್ಸ್' ಕಾರ್ಯಕ್ಕೆ ಅಭಿನಂದನೆಗಳನ್ನು ತಿಳಿಸಿದ್ದಾರೆ.

* ಈ ಟ್ರ್ಯಾಕ್'ನಲ್ಲಿ ವಾಹನಗಳ ಗರಿಷ್ಠ ವೇಗ, ಸಾಮರ್ಥ್ಯ, ಇಂಧನ ಕ್ಷಮತೆ, ಅತಿ ವೇಗ ನಿರ್ವಹಣೆ, ಪರೀಕ್ಷೆಗಳನ್ನೂ ಮಾಡಬಹುದಾಗಿದೆ ಎಂದು ತಿಳಿಸಿದ್ದಾರೆ.

## ಸೀಮಾ ಪೂನಿಯಾ ನಾಲ್ಕನೇ ಬಾರಿ ಒಲಿಂಪಿಕ್ಸ್‌ಗೆ ಪಾದಾರ್ಪಣೆ




* ಡಿಸ್ಕಸ್ ಥ್ರೋ ಅಥ್ಲೀಟ್ಯಾಗಿರುವ ಸೀಮಾ ಪೂನಿಯಾ 4 ನೇ ಬಾರಿ ಸ್ಪರ್ಧಿಸಲಿದ್ದಾರೆ, ಪ್ರಸ್ತುತ ಇವರು ಮಹಿಳಾ ವಿಭಾಗದ ಡಿಸ್ಕಸ್ ಥ್ರೋ'ನ ರಾಷ್ಟ್ರೀಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್'ನಲ್ಲಿ ಚಿನ್ನವನ್ನು ಪಡೆದುಕೊಂಡು, ಈ ಬಾರಿಯ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆಯನ್ನೂ ಪಡೆದುಕೊಂಡಿದ್ದಾರೆ.

* ಸೀಮಾ ಪೂನಿಯಾ ಅವರು ಈ ಮೊದಲು 2004, 2012 & 2016 ರ ಒಲಿಂಪಿಕ್'ನಲ್ಲಿ ಮಹಿಳಾ ವಿಭಾಗದ ಡಿಸ್ಕಸ್ ಥ್ರೋ'ನ ಕೂಟಗಳಲ್ಲಿ ಭಾಗಿಯಾಗಿದ್ದರು.

* 2018 ನೇ ವರ್ಷದ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಹಾಗೂ ಅದೇ ಏಷ್ಯನ್ ಗೇಮ್ಸ್‌ನಲ್ಲಿ ಕಂಚಿನ ಪದಕ ಪಡೆದುಕೊಂಡಿದ್ದರು.

## ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರಿಂದ ಕಿಸಾನ್ ರೈಲಿಗೆ ಚಾಲನೆ



* ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರಿಂದ ಕಿಸಾನ್ ರೈಲಿಗೆ ಚಾಲನೆ ನೀಡಿದ್ದಾರೆ, ಈ ಕಿಸಾನ್ ರೈಲು ಕೋಲಾರ ಜಿಲ್ಲೆಯ ಚಿಂತಾಮಣಿಯಿಂದ ನವದೆಹಲಿಗೆ 250 ಟನ್ ಮಾವು ಸಾಗಿಸುವ ಕಿಸಾನ್ ರೈಲಿ ಇದಾಗಿದೆ.

* ರಾಜ್ಯದ ರೈತರು ಬೆಳೆದಿರುವ ಬೆಳೆಗಳಿಗೆ ಉತ್ತಮ ಮೌಲ್ಯ ನೀಡುವಲ್ಲಿ ಈ ಕಿಸಾನ್ ರೈಲು ಮಹತ್ವದ ಹೆಜ್ಜೆಯನ್ನು ನಿರ್ವಹಿಸಲಿದೆ,

ಈ ಕಿಸಾನ್ ರೈಲು ರೈತರು ಬೆಳೆದ ಹಣ್ಣು, ತರಕಾರಿ ಮತ್ತು ಡೇರಿ ಉತ್ಪನ್ನಗಳನ್ನು ಅತೀಬೇಗನೆ ಮಾರುಕಟ್ಟೆಗೆ ತಲುಪಿಸಲು ಸಹಾಯವಾಗಲಿದೆ.

* ಈ ಕಿಸಾನ್ ರೈಲು ಯೋಜನೆ ಅಡಿಯಲ್ಲಿ ರೈತರು, ರೈತ ವರ್ತಕರು ರೈಲ್ವೆ ಸಾಗಣೆ ದರದಲ್ಲಿ ಶೇ 50 ರಷ್ಟು ರಿಯಾಯಿತಿ ಪಡೆಯಬಹುದಾಗಿದೆ.

* 2020 ರ ಆಗಸ್ಟ್'ನಲ್ಲಿ ಈ ಕಿಸಾನ್ ರೈಲು ಪ್ರಾರಂಭವಾಗಿದೆ.

## ಅಮೆರಿಕ ಸೇನೆ 2 ದಶಕಗಳ ನಂತರ ಬಗ್ರಾಮ್ ತೊರೆಯಲಿದೆ



* ಅಮೆರಿಕದ ಅತ್ಯುನ್ನತ ಕಟ್ಟಡಗಳಾಗಿರುವ ಪೆಂಟಗನ್ ಮತ್ತು ಡಬ್ಲೂಟಿಒ(WTO)ಗಳ ಮೇಲೆ 2001 ರಲ್ಲಿ ಅಲ್‌ಖೈದಾ ಉಗ್ರರ ಆತ್ಮಾಹುತಿ ದಾಳಿಯನ್ನು ನಡೆಸಿದರು, ಈ ದಾಳಿಯಿಂದ ಕಟ್ಟಡಗಳು ಹಾನಿಗೊಳಗಾಗಿದ್ದವು, ಆ ಸಮಯದಿಂದ ಅಫ್ಘಾನಿಸ್ತಾನದ ತಾಲಿಬಾನ್ ಉಗ್ರರ ಸ್ಥಿತಿ ಗಂಭೀರವಾಯಿತು, ಅಫ್ಘಾನಿಸ್ತಾನ ದೇಶಾದ್ಯಂತ ಅಮೇರಿಕ ತನ್ನ ಸೇನಾನೆಲೆಗಳನ್ನು ಸ್ಥಾಪನೆ ಮಾಡಿತು ಸುಮಾರು 2 ದಶಕ (20 ವರ್ಷ)ಗಳ ಕಾಲ ಆ ದೇಶವನ್ನು ತಮ್ಮ ಹಿಡಿತಕ್ಕೆ ಪಡೆದುಕೊಂಡಿತ್ತು, ಆದರೆ ಇದೀಗ ಅಮೆರಿಕ ಸೇನೆಯು ಸಂಪೂರ್ಣವಾಗಿ ಅಫ್ಘಾನಿಸ್ತಾನವನ್ನು ಜು.4 ರಂದು ತೊರೆದು ವಾಪಸ್ ಹೋರಾಡಲಿದೆ ಎಂದು ತಿಳಿದುಬಂದಿದೆ.

* ಇಲ್ಲಿಯವರೆಗೆ ಅಮೆರಿಕ ಸೇನೆಗೆ ಆಶ್ರಯ ನೀಡಿದ ಅಫ್ಘಾನಿಸ್ತಾನ ಪ್ರಮುಖ ನೆಲೆ ಬಗ್ರಾಮ್'ನ್ನು ಬಗ್ರಾಮ್ ಏರ್‌ಫೀಲ್ಡ್ ಎಂದೇ ಪ್ರಖ್ಯಾತಿ ಪಡೆದಿದೆ.

## ರಾಷ್ಟ್ರಪತಿ ಅವರಿಂದ ಡಾ.ಅಂಬೇಡ್ಕರ್ ಸ್ಮಾರಕಕ್ಕೆ ಶಂಕುಸ್ಥಾಪನೆ



* ಭಾರತ ರತ್ನ ಡಾ.ಅಂಬೇಡ್ಕರ್ ಸ್ಮಾರಕ ಮತ್ತು ಸಾಂಸ್ಕೃತಿಕ ಕೇಂದ್ರದ ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಚಾಲನೆ ನೀಡಿದರು.

* ರಾಷ್ಟ್ರಪತಿ ಅವರು ಉತ್ತರ ಪ್ರದೇಶದ ರಾಜ್ಯದ ಲೋಕಭವನದಲ್ಲಿ ನಡೆದ ಸಭಾರಂಭದಲ್ಲಿ ಈ ಸ್ಮಾರಕದ ಶಂಕುಸ್ಥಾಪನೆಯನ್ನು ಮಾಡಿದರು, ಹಾಗೂ ಈ ಕಾರ್ಯಕ್ರಮದಲ್ಲಿ ಉತ್ತರ ಪ್ರದೇಶದ ರಾಜ್ಯಪಾಲರಾಗಿರುವ ಆನಂದಿಬೆನ್ ಪಟೇಲ್ , ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಉಪ ಮುಖ್ಯಮಂತ್ರಿಗಳಾದ ಕೇಶವ್ ಪ್ರಸಾದ್ ಮೌರ್ಯ, ಪಾಲ್ಗೊಂಡಿದ್ದರು.

* ಇತ್ತೀಚಿಗೆ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಉತ್ತರ ಪ್ರದೇಶ ರಾಜ್ಯದ ಲಖನೌಗೆ 2 ದಿನ ಪ್ರವಾಸ ಕೈಗೊಂಡಿದ್ದರು.

* ಉತ್ತರ ಪ್ರದೇಶ ರಾಜ್ಯದ ಲಖನೌ'ನ ಐಶ್‌ಬಾಗ್ ಈದ್ಗಾನಲ್ಲಿ 5493.52 ಚದರ ಮೀ. ಪ್ರದೇಶದಲ್ಲಿ ಈ ಸ್ಮಾರಕವನ್ನು ನಿರ್ಮಾಣ ಮಾಡಲಾಗುವದು ಇದರಲ್ಲಿ 25 ಅಡಿ ಎತ್ತರದ ಡಾ.ಅಂಬೇಡ್ಕರ್ ಅವರ ಪ್ರತಿಮೆಯನ್ನು ನಿರ್ಮಾಣಮಾಡಲಾಗುತ್ತದೆ, ಒಟ್ಟಾರೆ 45.04 ಕೋಟಿ ರೂ. ವೆಚ್ಚ ಈ ಸ್ಮಾರಕಕ್ಕೆ ತಗುಲಲಿದೆ ಎಂದು ತಿಳಿಸಿದ್ದಾರೆ.

* ಈ ಸ್ಮಾರಕದಲ್ಲಿ ಒಟ್ಟು 750 ಜನರ ಸಾಮರ್ಥ್ಯವಿರುವ ಸಭಾಂಗಣವಿರಲಿದೆ, ಹಾಗೂ ಗ್ರಂಥಾಲಯ, ಸಂಶೋಧನಾ ಕೇಂದ್ರ, ಚಿತ್ರ ಗ್ಯಾಲರಿ, ಮ್ಯೂಸಿಯಂ, ಕೆಫೆಟೇರಿಯಾ, ವಸತಿ ನಿಲಯ ಹೀಗೆ ಹಲವು ಸೌಲಭ್ಯಗಳನ್ನೂ ಒಳಗೊಂಡಿರಲಿದೆ ಎಂದು ತಿಳಿಸಿದ್ದಾರೆ.

## ಸೈಬರ್ ಸೆಕ್ಯುರಿಟಿ ಸೂಚ್ಯಂಕದಲ್ಲಿ ಭಾರತ 10 ನೇ ಸ್ಥಾನದಲ್ಲಿದೆ




* ಭಾರತ ದೇಶವು ಯುನೈಟೆಡ್ ನೇಷನ್'ನ ಐಟಿಯು ಗ್ಲೋಬಲ್ ಸೈಬರ್ ಸೆಕ್ಯುರಿಟಿ ಸೂಚ್ಯಂಕದ ಶ್ರೇಯಾಂಕವನ್ನು 47 ರಿಂದ 10 ಕ್ಕೆ ಸುಧಾರಿಸಿದೆ ಎಂದು ತಿಳಿದು ಬಂದಿದೆ.

* ಪ್ರಸ್ತುತ ದೇಶಗಳ ಜಾಗತಿಕ ಸೈಬರ್ ಸೆಕ್ಯುರಿಟಿ ಶ್ರೇಯಾಂಕದಲ್ಲಿ ಚೀನಾ 33 ಹಾಗೂ ಪಾಕಿಸ್ತಾನ 79 ನೇ ಶ್ರೇಯಾಂಕದಲ್ಲಿವೆ.

* ಯುನೈಟೆಡ್ ಸ್ಟೇಟ್ಸ್ ಪ್ರಥಮ್ ಸ್ಥಾನ ಹಾಗೂ ಯುನೈಟೆಡ್ ಕಿಂಗ್ಡಮ್ ಅದರ ನಂತರದ ಸ್ಥಾನದಲ್ಲಿದೆ.

* ಈ ಸೈಬರ್ ಸೆಕ್ಯುರಿಟಿ ಸೂಚ್ಯಂಕದ ಶ್ರೇಯಾಂಕವನ್ನು ಗಡಿಯಲ್ಲಿನ ಸೈಬರ್ ದಾಳಿಯ ನಿದರ್ಶನಗಳೊಂದಿಗೆ ಸರ್ಕಾರ ವ್ಯವಹರಿಸುತ್ತಿರುವ ಸಂಧರ್ಭದಲ್ಲಿ ಘೋಷಣೆ ಮಾಡಿದೆ.

* ಜಾಗತಿಕ ಸೈಬರ್ ಸುರಕ್ಷತೆ ಸೂಚ್ಯಂಕ ಎನ್ನುವುದು ಇದೊಂದು ಅಂತರರಾಷ್ಟ್ರೀಯ ದೂರಸಂಪರ್ಕ ಒಕ್ಕೂಟದ ಯೋಜನೆಯಾಗಿದೆ, ಈ ಯೋಜನೆಯು ವಿಶ್ವ ಮಟ್ಟದಲ್ಲಿ ಸೈಬರ್ ಸುರಕ್ಷತೆಗೆ ರಾಷ್ಟ್ರಗಳ ಬದ್ಧತೆಯನ್ನು ಅಳೆಯುವ ಸಾಧನವಾಗಿದೆ.

* ಕಾನೂನು ಕ್ರಮಗಳು, ತಾಂತ್ರಿಕ ಕ್ರಮಗಳು, ಸಾಂಸ್ಥಿಕ ಕ್ರಮಗಳು, ಸಾಮರ್ಥ್ಯ ಅಭಿವೃದ್ಧಿ ಮತ್ತು ಸಹಕಾರದ ಎಲ್ಲ ಡೇಟಾವನ್ನು ಒಟ್ಟಾರೆ ಸ್ಕೋರ್‌ಗೆ ಒಗೂಡಿಸಲಾಗುತ್ತದೆ, ಐಟಿಯು ಗ್ಲೋಬಲ್ ಸೈಬರ್

ಸೆಕ್ಯೂರಿಟಿ ಅಜೆಂಡಾದ ಉಪಕ್ರಮಕ್ಕೆ ಸಾಮಾನ್ಯ ಅಡಿಪಾಯವನ್ನು ನೀಡುತ್ತದೆ.

* 1865 ರಲ್ಲಿ ಅಂತರರಾಷ್ಟ್ರೀಯ ದೂರಸಂಪರ್ಕ ಒಕ್ಕೂಟ ಸ್ಥಾಪನೆ ಮಾಡಲಾಗಿದೆ, ಹಾಗೂ ಇದೊಂದು ವಿಶ್ವಸಂಸ್ಥೆಯ 1947 ರ ಅವಿಭಾಜ್ಯ ಅಂಗವಾಗಿದೆ.

## ಕಚ್ಚಾ ಪಾಮ್ ಆಯಿಲ್ ಆಮದು ತೆರಿಗೆಯನ್ನು ಕಡಿತಗೊಳಿಸಿದ ಭಾರತ



* ಭಾರತವು ಇದೀಗ ಕಚ್ಚಾ ತಾಳೆ ಎಣ್ಣೆಯ ಮೇಲಿನ ಆಮದು ತೆರಿಗೆಯನ್ನು(ಸುಂಕ) '3' ತಿಂಗಳಲ್ಲಿ 15% ರಿಂದ 10% ಕ್ಕೆ ಕಡಿತಗೊಳಿಸಿದೆ.

* ಪ್ರಸ್ತುತ ಭಾರತವು ಖಾದ್ಯ ತೈಲಗಳ ಬೆಲೆಯನ್ನು ಕಡಿಮೆಗೊಳಿಸಲು ಹರಸಾಹಸ ಪಡುತ್ತಿದೆ, ಇದರಿಂದಾಗಿ ತೈಲಗಳ ಆಮದು ಸುಂಕವನ್ನು ಕಡಿಮೆ ಮಾಡುವ ನಿರ್ಧಾರ ಕೈಗೊಂಡಿದೆ.

* ಈ ಆಮದು ತೆರಿಗೆ ಕಡಿತದಿಂದ ಪಾಮ್ ಎಣ್ಣೆಯನ್ನು ಸೋಯಾ ಎಣ್ಣೆ ಹಾಗೂ ಸೂರ್ಯಕಾಂತಿ ಎಣ್ಣೆಗಿಂತ ಹೆಚ್ಚು ಬೇಡಿಕೆಯಾಗುತ್ತದೆ, ಹಾಗೂ ಮುಂಬರುವ 3 ತಿಂಗಳಲ್ಲಿ ಉಷ್ಣವಲಯದ ತೈಲದ ಆಮದನ್ನು ಹೆಚ್ಚಿಸುವದರ ಜೊತೆಗೆ ಮಲೇಷಿಯಾದ ಬೆಂಚ್‌ಮಾರ್ಕ್'ಗೆ ಬೆಂಬಲ ನೀಡಲಿದೆ.

* ಪ್ರಸ್ತುತ ಭಾರತ ದೇಶವು ತಾಳೆ ಎಣ್ಣೆಯನ್ನು ಪ್ರಮುಖವಾಗಿ ಇಂಡೋನೇಷ್ಯಾ ಹಾಗೂ ಮಲೇಷ್ಯಾ ದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ, ಭಾರತವು 3 ತಿಂಗಳಲ್ಲಿ ಭಾರತ 500,000 ಟನ್ನಿಂತಲೂ ಅಧಿಕ ತಾಳೆ ಎಣ್ಣೆಯನ್ನು ಆಮದುಮಾಡಿಕೊಳ್ಳಲಿದೆ, ಭಾರತದ ಸರಾಸರಿ ಮಾಸಿಕ ಆಮದು ಸುಮಾರು 850,000 ಟನ್ ಆಗಿರಲಿದೆ ಎಂದು ತಿಳಿದುಬಂದಿದೆ.

ಪ್ರತಿ ದಿನದ ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ **KPSC VAANI APP** ಡೌನ್ಲೋಡ್ ಮಾಡಿಕೊಳ್ಳಿ



ರಿಯಾಯಿತಿ ದರದಲ್ಲಿ ಸ್ಪರ್ಧಾತ್ಮಕ ಪುಸ್ತಕಗಳನ್ನು ಖರೀದಿಸಲು ಖರೀದಿಸಲು ಇಲ್ಲಿ ಕ್ಲಿಕ್ ಮಾಡಿ

ಪ್ರತಿದಿನದ ಉದ್ಯೋಗ ಮಾಹಿತಿ, ಪ್ರಚಲಿತ ಘಟನೆಗಳು, ಪ್ರಶ್ನೆ ಪತ್ರಿಕೆಗಳು, ಕಟ್ ಆಫ್ ಅಂಕಗಳು, Daily Quiz ಸೇರಿ ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಳು ಒಂದೇ ವೇದಿಕೆಯಲ್ಲಿ ನಿಮಗಾಗಿ

ನಮ್ಮ ಗುಂಪುಗಳನ್ನು ಸೇರಿಕೊಳ್ಳಿ

Click here To Join

To Download Our App

Follow Us on Facebook

Follow Us on Instagram

Scan QR Code To Download KPSC Vaani App